ನೀನೆಂಬ ನಾನು

....ಸೂಫಿಯ ಚೆಲುವನ್ನು ಎದೆಯಲ್ಲಿ ತುಂಬಿಕೊಂಡವರು ಅದನ್ನು ಹಂಚುವ ಆನಂದ ಮತ್ತು ಸುಖಕ್ಕಾಗಿ ತವಕಿಸುತ್ತಾರೆ. ಅಂತಹ ಆನಂದದ ತವಕ, ಶ್ರದ್ಧೆಗಳೇ ಈ ಪುಸ್ತಕವನ್ನು ಇಷ್ಟು ಚೆಂದವಾಗಿಸಿವೆ.

ಝೆನ್ ಮತ್ತು ಸೂಫಿ ತತ್ವಗಳು ಈ ಭೂಮಿಯ ಒಂದೇ ಹೃದಯದರಿವಿನ ಎರಡು ಕಣ್ಣುಗಳು. ಕಾಲ, ದೇಶಾತೀತವಾದ ಉನ್ನತ ತಿಳಿವಳಿಕೆಯ ಸೋಪಾನಗಳು. ಇಹದ ಆಳವಾದ ತಿಳಿವನ್ನು ಒಳಗೊಂಡರೂ ಈ ಕತೆಗಳು ಪೂರ್ತಿ ಇಹದವಲ್ಲ. ಲೋಕೋತ್ತರ ಅನುಭಾವದ ಅರಿವಿದ್ದರೂ ಅವು ಪೂರ್ತಿ ಪರದವಲ್ಲ. ಇವನ್ನು ಖುಷಿಗಾಗಿ ಓದಬಹುದು, ಲೋಕಾನುಭವ ಹಾಗೂ ನೀತಿಗಳನ್ನು ಮನನ ಮಾಡಬಹುದು, ಮನೋಜಿಜ್ಞಾಸೆಗಳನ್ನು ಬಿಡಿಸಲು ಬಳಸಬಹುದು ಅಥವಾ ಇನ್ನೂ ಹೆಚ್ಚಿನ ಪ್ರಯೋಜನವನ್ನೂ ಇವುಗಳಿಂದ ಪಡೆಯಬಹುದು. ಈ ಅನರ್ಘ್ಯ ಕತೆಗಳನ್ನು ಆಯಾ ಓದುಗರು ತಮಗೆ ಹೇಗೆ ಬೇಕೋ ಹಾಗೆ ಓದಬಹುದು. ಒಟ್ಟಾರೆ ಈ ಕತೆಗಳು 'ಸಟೋರಿ'ಯ (Satori = Sudden enlightenment) ಹಾಗೆ ಎಟುಕದ ಸತ್ಯಗಳನ್ನು ಮಿಂಚಿನಂತೆ ಹೊಳೆಯಿಸಿ ಬದುಕನ್ನಿಡೀ ಮಾಗಿದ ಹೃದಯದಿಂದ ನೋಡುವಂತೆ ಮಾಡಬಲ್ಲವು.

'ನಿನ್ನ ನೀನು ಅರಿತ ಮೇಲೆ ಇನ್ನೇನಿನ್ನೇನು?' ಎಂಬ ಶರೀಫರ ಮಾತು ಸೂಫಿ ತತ್ವವನ್ನು ಕಡೆದು ತೆಗೆದ ನವನೀತವಾಗಿದೆ. ಸೂಫಿಯ ಪ್ರೇಮಾನುಭವದ ಒಳಹೋಗಲು ಅಗತ್ಯ ಪರಿಕರಗಳನ್ನೆಲ್ಲ ಗೆಳೆಯ ಬಾಲು ತಮ್ಮ ಪರಿಶ್ರಮದ ಮೂಲಕ ಎಲ್ಲ ಓದುಗರಿಗೂ ಎಟುಕುವಂತೆ ಇಲ್ಲಿ ಕಂಡರಿಸುವುದರ ಮೂಲಕ ಕನ್ನಡ ಸಾರಸ್ವತ ಲೋಕಕ್ಕೇ ಉಪಕಾರ ಮಾಡಿದ್ದಾರೆ. ನಾನು ಇತ್ತೀಚಿನ ದಿನಗಳಲ್ಲಿ ಓದಿದ ಅತ್ಯುತ್ತಮ ಪುಸ್ತಕಗಳಲ್ಲೊಂದು ಈ 'ನೀನೆಂಬ ನಾನು.'

— ಲಕ್ಷ್ಮೀಪತಿ ಕೋಲಾರ

Cover Design: JB.

ಅಸೀಮ ಅಕ್ಷರ

₹ 100

Scanned with CamScanner

ನೀನೆಂಬ ನಾನು

ಸೂಫಿ ಎಂಬ ಮಾನಸಿಕ ಅವಸ್ಥೆ ಹಾಗೂ ಸೂಫಿ ಕತೆಗಳು

ಡಾ. ಜೆ.ಬಾಲಕೃಷ್ಣ

Scanned with CamScanner

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಕೃಷಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯದ ಅಧ್ಯಯನಕ್ಕಾಗಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿರುವ ಡಾ. ಜೆ.ಬಾಲಕೃಷ್ಣರವರ ಹುಟ್ಟೂರು ಕೋಲಾರ. ಇಂಡಿಯನ್ ಬ್ಯಾಂಕ್‌ನಲ್ಲಿ ಒಂದೂವರೆ ದಶಕ ಕೃಷಿ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವ ಅವರು 1998ರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕನ್ನಡ ಜನತೆಗೆ ಜಪಾನಿನ ಕೃಷಿ ಋಷಿ ಫುಕುವೋಕಾನನ್ನು ಮೊದಲಬಾರಿಗೆ ಪರಿಚಯಿಸಿದವರು. ವಿಜ್ಞಾನ ಸಾಹಿತ್ಯದಲ್ಲಿ ಆಸಕ್ತಿ ಇರುವ ಅವರು **ಕನಸೆಂಬ ಮಾಯಾಲೋಕ, ಮಿಥುನ, ಮಳೆಬಿಲ್ಲ ನೆರಳು** ಎಂಬ ವಿಜ್ಞಾನ ಲೇಖನಗಳ ಕೃತಿಗಳನ್ನು, **ನೆನಪುಗಳಿಗೇಕೆ ಸಾವಿಲ್ಲ** ಎಂಬ ಕಥಾಸಂಕಲನವನ್ನು ಹಾಗೂ ಇನ್ನೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ ಮತ್ತು ಅನುವಾದಿಸಿದ್ದಾರೆ. ಅವರ **ಮಳೆಬಿಲ್ಲ ನೆರಳು** ಕೃತಿಗೆ 2011–12ರ ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅತ್ಯುತ್ತಮ ವಿಜ್ಞಾನ ಕೃತಿ ಪ್ರಶಸ್ತಿ ಲಭಿಸಿದೆ.

ಸೂಫಿ ಪರಂಪರೆಯ ಬಗೆಗೆ ಸಂಕ್ಷಿಪ್ತವಾಗಿ ಆದರೆ ಅಷ್ಟೇ ಮನಸ್ಸಿಗೆ ತಟ್ಟುವಂತೆ ಪರಿಚಯ ಮಾಡಿಕೊಡುವ ಡಾ.ಜೆ.ಬಾಲಕೃಷ್ಣರವರ ಈ **ನೀನೆಂಬ ನಾನು** ಕೃತಿ ಅತ್ಯಂತ ಜನಪ್ರಿಯ ಕೃತಿಗಳಲ್ಲೊಂದಾಗಿದೆ. ಹನ್ನೊಂದು ವರ್ಷಗಳ ಹಿಂದೆ ಮೊದಲ ಮುದ್ರಣ ಕಂಡಿದ್ದ ಈ ಕೃತಿಯ ಪ್ರತಿಗಳು ತೀರಿಹೋಗಿದ್ದುದರಿಂದ ಸಹಜವಾಗಿ ಈ ಕೃತಿಗೆ ಬೇಡಿಕೆಯಿತ್ತು. ಇದು ಮರುಮುದ್ರಿತ ಕೃತಿಯಷ್ಟೇ ಅಲ್ಲ ಲೇಖಕರು ಇದರಲ್ಲಿ ಕನ್ನಡದ ಸಾರಸ್ವತ ಲೋಕಕ್ಕೆ ಅಪರಿಚಿತವಾಗಿದ್ದ ಕಾಶ್ಮೀರದ ಋಷಿ ಸೂಫಿ ಪರಂಪರೆಯ ಬಗೆಗಿನ ಸುದೀರ್ಘ ಬರಹವನ್ನು ಸೇರಿಸಿ ಈ ಕೃತಿಯನ್ನು ಪರಿಷ್ಕರಿಸಿದ್ದಾರೆ. ಮರು ಮುದ್ರಿಸಲು ಅಸೀಮ ಅಕ್ಷರಕ್ಕೆ ಅವಕಾಶ ಕೊಟ್ಟ ಲೇಖಕರಿಗೆ ಧನ್ಯವಾದಗಳು. ಈ 'ನೀನೆಂಬ ನಾನು' ಕೃತಿಯನ್ನು ಕನ್ನಡದ ಓದುಗರ ಮುಂದಿಡಲು ಅಸೀಮ ಅಕ್ಷರಕ್ಕೆ ಹೆಮ್ಮೆಯೆನ್ನಿಸುತ್ತದೆ.

ಪ್ರಕಾಶಕರು

ಅಸೀಮ ಅಕ್ಷರದ ಪ್ರಕಟಣೆಗಳು

1. **ಬಯಲು ಸೀಮೆಯ ಬಾಯಾರಿಕೆ ಹಿಂಗೀತೆ?**
   – ಡಾ. ಮಧು ಸೀತಪ್ಪ
2. **ಜೀವನ ಸಂಧ್ಯೆಯಲ್ಲಿ ನೆನಪು ಮೊಗೆದಾಗ**
   – ಎಚ್.ಎಸ್.ಶಂಕರನಾರಾಯಣ
3. **ನೀನೆಂಬ ನಾನು**
   – ಡಾ. ಜೆ.ಬಾಲಕೃಷ್ಣ
4. **ನಮ್ಮ ನಿಮ್ಮೊಳಗೊಬ್ಬ ನಸ್ರುದ್ದೀನ್**
   – ಡಾ. ಜೆ.ಬಾಲಕೃಷ್ಣ

3\. **ಪುಟ್ಟ ರಾಜಕುಮಾರ** (ಮಕ್ಕಳ ನಾಟಕ)
   – ಡಾ. ಜೆ.ಬಾಲಕೃಷ್ಣ

ನೀನೆಂಬ ನಾನು

ಸೂಫಿ ಎಂಬ ಮಾನಸಿಕ ಅವಸ್ಥೆ ಹಾಗೂ ಸೂಫಿ ಕತೆಗಳು

ಡಾ. ಜೆ.ಬಾಲಕೃಷ್ಣ

ಅಸೀಮ ಅಕ್ಷರ

NEENEMBA NAANU- A state of mind called Sufi and Sufi Stories
By Dr. J. Balakrishna, Professor& Head, Dept. of Kannada Studies, University of Agril. Sciences, GKVK, Bangalore-560065.
E-mail: j.balakrishna@gmail.com

Published by Aseema Akshara, #36, 3rd Cross, A Sector, Amruthanagar, Sahakaranagar PO, Bangalore-560092.
E-mail: aseemaakshara@gmail.com

First Published by Nalanda Mantapa in 2001
Second Revised Publication by Aseema Akshara in 2012
Copyright: Author

Price: Rs.100/-
Pages: xii +114
Paper: 70 GSM Maplitho

ISBN: 978-81-925246-0-3

ನೀನೆಂಬ ನಾನು–ಸೂಫಿ ಎಂಬ ಮಾನಸಿಕ ಅವಸ್ಥೆ ಹಾಗೂ ಸೂಫಿ ಕತೆಗಳು
ಲೇಖಕರು: ಡಾ. ಜೆ. ಬಾಲಕೃಷ್ಣ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ. ಬೆಂಗಳೂರು–560065.
ಇ–ಮೇಲ್: j.balakrishna@gmail.com

ಪ್ರಕಾಶಕರು: ಅಸೀಮ ಅಕ್ಷರ, #36, 3ನೇ ಕ್ರಾಸ್, 'ಎ' ಸೆಕ್ಟರ್, ಅಮೃತನಗರ, ಸಹಕಾರನಗರ ಅಂಚೆ, ಬೆಂಗಳೂರು–560092.

ಮೊದಲ ಮುದ್ರಣ (ನಳಂದ ಮಂಟಪ): 2001
ದ್ವಿತೀಯ ಪರಿಷ್ಕೃತ ಮುದ್ರಣ (ಅಸೀಮ ಅಕ್ಷರ): 2012
ಹಕ್ಕುಗಳು: ಲೇಖಕರವು

ಬೆಲೆ: ರೂ.100/–
ಮುಖಪುಟ ವಿನ್ಯಾಸ: ಜೆ.ಬಿ

Printed @ Raghu Print Systems:

ಮುನ್ನುಡಿ

ಕಥೆಗಳನ್ನು ಕಟ್ಟುವ ಕಲ್ಪಕತೆ ಮತ್ತು ಕಥೆಗಳನ್ನ ಕೇಳುವ ಭಾವತನ್ಮಯತೆ ಮನುಷ್ಯನ ಆದಿಮ ಪ್ರವೃತ್ತಿಗಳಲ್ಲಿ ಒಂದು. ಜೀವನದ ಅನುಭವಗಳನ್ನ ಹಾಗೂ ತನ್ನ ಭಯ ಮತ್ತು ನಂಬಿಕೆಗಳನ್ನ ಕಥಾನಕಗಳನ್ನಾಗಿ ರೂಪಿಸಿ ಇತರರೊಂದಿಗೆ ಅವನ್ನು ಹಂಚಿಕೊಳ್ಳುವ ಬಯಕೆ ಮನುಷ್ಯನ ಪ್ರಜ್ಞಾಪೂರ್ವಕ ಇರುವಿಕೆಯೊಂದಿಗೆ ಬೆಳೆದುಬಂದಿದೆ. ಪ್ರಾಚೀನರು ತಮ್ಮ ಆತಂಕ, ಶ್ರದ್ಧೆಗಳನ್ನೆಲ್ಲಾ ಕಥೆಗಳ ಮೂಲಕ ಅಭಿವ್ಯಕ್ತಿಸಲು ಯತ್ನಿಸಿದ್ದಾರೆ. ಇಂತಹ ಪ್ರಯತ್ನಗಳು ಅವರಿಗೆ ಬದುಕಿನ ಶೋಧನ ಕ್ರಿಯೆಗೆ, ಸತ್ಯದ ಆವಿಷ್ಕಾರಕ್ಕೆ ಒಂದು ತೆರನ ಮಾಂತ್ರಿಕ ಆಚರಣೆಯೆಂಬಂತೆಯೂ ಬಳಕೆಯಾಗಿದೆ. ನಿರಂತರ ಚಲನಶೀಲ ಬದುಕಿನಲ್ಲಿ ಒಂದು ಇಡೀ ಸಮುದಾಯದ ಸೃಷ್ಟಿಯಾಗಿ ಬಾಯಿಂದ ಬಾಯಿಗೆ ತಲತಲಾಂತರಗಳಿಂದ ವರ್ಗಾವಣೆಗೊಳ್ಳುತ್ತಾ ಉಳಿದು ಬಂದಿರುವ ಇಂತಹ ಪುರಾತನ ಕಥಾನಕಗಳು ಮಾನವ ಪ್ರಜ್ಞೆ ಮತ್ತು ನಾಗರಿಕತೆಯ ವಿಕಸನದ ಹೆಜ್ಜೆ ಗುರುತುಗಳಾಗಿ ಉಳಿದಿವೆ.

ಪ್ರಾಚೀನ ಸಂಸ್ಕೃತಿಯ ಕಥಾನಕಗಳು ಪುರಾಣ ಐತಿಹೆಗಳು ಪ್ರಮುಖವಾಗಿ ಜಗತ್ತು ಮತ್ತು ಮನುಷ್ಯನ ಹುಟ್ಟು, ಪ್ರಕೃತಿ ಮತ್ತು ಮನುಷ್ಯರ ಸಂಬಂಧ ಅರಿವಿನಾಚೆಯ ಅನುಭಾವಗಳು, ಮಾನವ ಸಂಬಂಧಗಳು, ಅವನ ಆಶಯ ಮತ್ತು ಹೋರಾಟಗಳನ್ನೆಲ್ಲ ತನ್ನ ವಸ್ತುವಾಗಿಸಿಕೊಂಡಿವೆ. ಇಂತಹ ಕಥಾನಕಗಳು ಏಕವ್ಯಕ್ತಿ ರಚಿತವಲ್ಲದಿರುವುದರಿಂದ ಇಡೀ ಸಮುದಾಯದ ನಂಬಿಕೆಗಳು ಮತ್ತು ಆಶಯಗಳಿಗೆ ಧ್ವನಿಪೂರ್ಣ ರೂಪಕಗಳಾಗುತ್ತವೆ ಎಂಬುದು ಇಲ್ಲಿನ ಮಹತ್ವದ ಅಂಶ. ಮೇಲುನೋಟಕ್ಕೆ ಕೆಲವೊಮ್ಮೆ ತಮಾಷೆಯಾಗಿ ಕಾಣುವಾಗಲೂ ಆಂತರ್ಯದ ಆಳದಲ್ಲಿ ಅವು ತೀವ್ರ ಆಸೆಗಳನ್ನ ಮತ್ತು ಗಂಭೀರ ಉದ್ದಿಶ್ಯಗಳನ್ನ ಹುದುಗಿಸಿಕೊಂಡಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಇಂದಿನ ಆಧುನಿಕ ಸಂದರ್ಭಗಳಲ್ಲಿಯೂ ಕೂಡ ಅಂಥ ಹಳೆಯ ಕತೆಗಳು ನಮಗೆ ಆತ್ಮೀಯ ವಾಗುವುದು ಪ್ರಾಯಶಃ ಇವೇ ಕಾರಣದಿಂದಾಗಿ. ಅವುಗಳನ್ನ ಓದುವಾಗ ನಾವು ಈಗ ಕಳೆದುಹೋಗಿರುವಂತಹುದೇನನ್ನೋ ಮರಳಿ ಪಡೆದಂತೆ ಸಡಗರಿಸುವ ಶ್ರದ್ಧಾಪೂರ್ವಕ ಆತ್ಮೀಯ ಸಂಬಂಧವನ್ನ ಹೊಂದಿ ಸವಿಯನ್ನ ಕಾಣುತ್ತೇವೆ. ಪ್ರಾಚೀನ ಗ್ರೀಕ್, ರೋಮನ್ ಮಿಥಿಕಗಳಾಗಲಿ, ನಮ್ಮ ಪೌರಾಣಿಕ ಜಾನಪದ ಕಥೆಗಳಾಗಲಿ, ಬೈಬಲ್ಲಿನ ಹಳೆಯ ಒಡಂಬಡಿಕೆಯ ಕಥೆಗಳಾಗಲಿ ನಮ್ಮನ್ನ ಸೆಳೆಯುವುದು ಪ್ರಾಯಶಃ ಇದೇ ಕಾರಣಕ್ಕೆಂದು ಅನ್ನಿಸುತ್ತದೆ.

ಇದೇ ಪರಂಪರೆಯಲ್ಲಿ ಯಾವೊಬ್ಬನ ಅಂಕಿತದ ಮಿತಿಗೂ ಒಳಪಡದ ಒಂದು ಸಾಮೂಹಿಕ ಸೃಷ್ಟಿ ಮಾತ್ರ ಆಗಿ ಉಳಿದು ಬಂದಿರುವ ಪಾರಂಪರಿಕ ಝೆನ್, ಸೂಫಿ

ಕಥೆಗಳು ಈ ಎಲ್ಲ ಪ್ರಾಚೀನ ಕಥಾನಕಗಳ ಹಿರಿಮೆಯೊಂದಿಗೆ ಮನುಷ್ಯನನ್ನು ತಮ್ಮ ತೀವ್ರತರ ಅನುಭವದ ಕಾಣಿಕೆಯ ಮೂಲಕ ತಲ್ಲಣಗೊಳ್ಳುವಂತೆ ಮಾಡಿ ಶೋಧಕ್ಕೆ ಹಚ್ಚುತ್ತವೆ.

ಸೂಫಿ ಹಾಗೂ ಝೆನ್ ಕಥಾ ಪರಂಪರೆಗಳು ಬಹಳಷ್ಟು ಸಾಮ್ಯವನ್ನು ಕೂಡ ಹೊಂದಿವೆ. ಎರಡೂ ಪರಂಪರೆಗಳು ಯಾವುದೇ ಧಾರ್ಮಿಕ ಕಟ್ಟುಪಾಡುಗಳಿಗಾಗಿ ಸೃಷ್ಟಿಯಾದುವಲ್ಲ. ಅವುಗಳ ಕೇಂದ್ರ ಮನುಷ್ಯ, ಗುರಿ ದೈವತ್ವ. ಪ್ರಾಯಶಃ ಇಸ್ಲಾಂ ಧರ್ಮಗುರು ಮಹಮದ್ ಪೈಗಂಬರರಿಗೂ ಹಿಂದಿನಿಂದಲೂ ಒಂದು ಪರಂಪರೆಯಾಗಿ ಬೆಳೆದು ಬಂದಿರಬಹುದಾದ ಸೂಫಿ ಪರಂಪರೆ ಮುಂದೆಯೂ ತನ್ನದೇ ಆದ ವಿಶಿಷ್ಟತೆಗಳನ್ನೊಳಗೊಂಡು ಮುಂದುವರಿಯಿತು. ಅನೇಕ ಸೂಫಿ ಸಂತರು ತಮ್ಮ ಬದುಕು ಮತ್ತು ವಿಚಾರಗಳ ಮೂಲಕ ಈ ಪರಂಪರೆಯನ್ನು ಉಳಿಸಿ ಬೆಳೆಸಿದರು. ಅದನ್ನು ಚರ್ಚಿಸಹೊರಟರೆ ಅದೇ ಒಂದು ದೊಡ್ಡ ಚರಿತ್ರೆಯಾಗುತ್ತದೆ. ಈ ಸೂಫಿ ಪರಂಪರೆ ಮನರಂಜಿಸುವ ಕಥೆಗಳ ಮೂಲಕ ಪರ್ಯಾಯವಾಗಿ ನೀತಿ ಬೋಧನೆ ಮಾಡಲು ಹಾಗೂ ಸತ್ಯದ ದರ್ಶನ ಮಾಡಿಸಲು ಪ್ರಯತ್ನಿಸಿದವು.

ಗೆಳೆಯ ಶ್ರೀಯುತ ಜೆ. ಬಾಲಕೃಷ್ಣ ಅವರು ಕನ್ನಡ ಓದುಗರಿಗೆ ತಮ್ಮ **‘ನೀನೆಂಬ ನಾನು’** ಕೃತಿಯ ಮೂಲಕವಾಗಿ ಒಂದು ಮಹತ್ ಪರಂಪರೆಯನ್ನೇ ಪರಿಚಯಿಸುವ ಉತ್ತಮವಾದ ಕಾರ್ಯ ಮಾಡಿದ್ದಾರೆ. ಕರ್ನಾಟಕದ ಚರಿತ್ರೆಗೆ ಮತ್ತು ಸಾಂಸ್ಕೃತಿಕ ಪರಂಪರೆಗೆ ಸೂಫಿ ಪರಂಪರೆ ಹೊಸತಲ್ಲವಾದರೂ ಕನ್ನಡದ ಓದುಗರಿಗೆ ಇವತ್ತಿಗೂ ಇಂಥ ಅಮೂಲ್ಯ ಖನಿ ಅಲಭ್ಯವೇ ಆಗಿ ಉಳಿದುಬಿಟ್ಟಿತು. ಹೆಸರಿಸಬಹುದಾದ ಒಂದೆರಡು ಕನ್ನಡ ಕೃತಿಗಳನ್ನು ಬಿಟ್ಟರೆ ಸೂಫಿ ಪರಂಪರೆಗೆ ಸಂಬಂಧಿಸಿದ ಹೆಚ್ಚು ಕೃತಿಗಳು ಕನ್ನಡದಲ್ಲಿ ಬಂದೇ ಇಲ್ಲ. ಕಥಾ ಸಾಹಿತ್ಯವಂತೂ ಅಲ್ಲಿ ಇಲ್ಲಿ ಉಲ್ಲೇಖಿತ ವಾಗಿರುವ ಮತ್ತು ಬಿಡಿ ಬಿಡಿಯಾಗಿ ಪ್ರಕಟವಾಗಿರುವ ಕೆಲವನ್ನ ಬಿಟ್ಟರೆ ಇಡಿಯಾಗಿ ಕನ್ನಡದಲ್ಲಿ ಬಂದಿರಲಿಲ್ಲ. ಈ ಕೆಲಸವನ್ನ ಗೆಳೆಯ ಬಾಲಕೃಷ್ಣ ಅವರು ತುಂಬಾ ಶ್ರದ್ಧೆಯಿಂದ ಮತ್ತು ಪ್ರೀತಿಯಿಂದ ಮಾಡಿದ್ದಾರೆ. ಕತೆಗಳನ್ನ ಅನುವಾದಿಸುವುದರ ಜೊತೆಗೆ ಸೂಫಿ ಪರಂಪರೆ ಮತ್ತು ವಿಚಾರಗಳ ಬಗ್ಗೆ ಅತ್ಯಂತ ವಿವರವಾದ ಮತ್ತು ಆಳವಾದ ಅಧ್ಯಯನ ನಡೆಸಿ ಅದರ ಫಲಿತವಾಗಿ ಉತ್ತಮವಾದ ಹಾಗೂ ಉಪಯುಕ್ತವಾದ ದೀರ್ಘಲೇಖನವನ್ನು ಕತೆಗಳಿಗೆ ಪೂರ್ವ ಪೀಠಿಕೆಯಾಗಿ ನೀಡಿದ್ದಾರೆ. ಇವರ ಈ ಲೇಖನ ಓದುಗನಿಗೆ ಉಪಯುಕ್ತವಾಗುವುದರಲ್ಲಿ ಸಂಶಯವಿಲ್ಲ. ಈಗಾಗಲೇ ಸೂಫಿ ಕತೆಗಳ ಜತೆಗೆ ಸೂಫಿ ಕಾವ್ಯದ ಪರಂಪರೆಯ ಬಗೆಗೆ ಅಭ್ಯಸಿಸಿರುವ ಲೇಖಕರು ಬಹಳಷ್ಟು ಬೇಗನೆ ಸೂಫಿ ಕಾವ್ಯವನ್ನು ಕೂಡ ಕನ್ನಡದ ಓದುಗರಿಗೆ ಪರಿಚಯಿಸ ಬಹುದೆಂಬ ಆಶಾಪೂರ್ಣ ನಿರೀಕ್ಷೆ ನನ್ನದು.

ಹಲವು ಹತ್ತು ಮೂಲಗಳಿಂದ ಸೂಫಿ ಕತೆಗಳನ್ನು ಸಂಗ್ರಹಿಸಿ ಇಲ್ಲಿ ಅನುವಾದಿಸಲಾಗಿದೆ. ಸೂಫಿ ಕತೆಗಳಲ್ಲಿ ನಮಗೆ ಅತ್ಯಂತ ಪ್ರಖರವಾಗಿ ಅನುಭವಕ್ಕೆ ಬರುವ ಮೌಲ್ಯ

ಎಂದರೆ ಶ್ರದ್ಧೆ ಬುದ್ಧಿಗಿಂತ ಅಥವಾ ಬುದ್ಧಿಯಷ್ಟೇ ಪ್ರಾಮುಖ್ಯತೆಯನ್ನ ಹೃದಯಕ್ಕೂ ನೀಡುವ ಸೂಫಿಗಳು ಶ್ರದ್ಧೆಯನ್ನು ಅತ್ಯಂತ ಮೌಲಿಕವೆಂದು ಭಾವಿಸುತ್ತಾರೆ. ಇಲ್ಲಿನ ಒಂದು ಕತೆಯಲ್ಲಿ ಏನೂ ಅರಿಯದ ಒಬ್ಬ ಮುಗ್ಧ ನದಿಯನ್ನ ದಾಟಲಿಕ್ಕೆಂದು ಒಬ್ಬ ಜ್ಞಾನಿ ಮೌಲ್ವಿಯನ್ನ ಮಾರ್ಗದರ್ಶನಕ್ಕಾಗಿ ಬೇಡುತ್ತಾರೆ. ಮುಜುಗರ ಪಡುವ ಮೌಲ್ವಿ 'ದೇವರ ಹೆಸರು ಹೇಳಿದಲ್ಲಿ ಏನು ಬೇಕಾದರೂ ಮಾಡಬಹುದೆಂದು' ಹೇಳಿ ಅವನನ್ನ ಸಾಗಹಾಕಿದ್ದಾನೆ. ಹಲವು ದಿನಗಳ ನಂತರ ಮತ್ತೆ ಅವರಿಬ್ಬರ ಭೇಟಿಯಾದಾಗ ಆ ಮನುಷ್ಯ ಮೌಲ್ವಿಯನ್ನು ಕಂಡು ಅಚ್ಚರಿಗೊಳ್ಳುತ್ತಾನೆ. ಏಕೆಂದರೆ ಇವರ ಉಪದೇಶವನ್ನು ನಂಬಿ ದೇವರನ್ನು ನೆನೆದ ಆ ಮುಗ್ಧ ನದಿಯನ್ನ ದಾಟುವ ದಾರಿ ತಾನೇ ಕಂಡುಕೊಂಡಿದ್ದಾನೆ. ಇಂತಹ ಅನೇಕ ಕತೆಗಳು ಇಲ್ಲಿ ಬರುತ್ತವೆ. 'ಜ್ಞಾನದ ಅನ್ವೇಷಣೆಗೆ ಎಷ್ಟು ಮನುಷ್ಯರ ಹೃದಯಗಳಿದೆಯೋ ಅಷ್ಟು ಹಾದಿಗಳು ಇರುತ್ತವೆ' ಎಂಬ ಮಾತು ಇಲ್ಲಿನ ಕತೆಯೊಂದರಲ್ಲಿ ಬರುತ್ತದೆ. ಇದು ಸೂಫಿಗಳು ನಂಬಿದ ಸತ್ಯವೂ ಹೌದು. ನಿರ್ದಿಷ್ಟವಾಗಿ ಯಾವುದೇ ಧರ್ಮ, ಮತ, ದೇವರು ಮತ್ತು ಆಕೃತಿಗಳಿಗೆ ತಮ್ಮನ್ನ ಅಂಟಿಸಿಕೊಳ್ಳದ ಸೂಫಿಗಳು ತಮ್ಮನ್ನು ದರವೇಶಿಗಳೆಂದು ಕರೆದುಕೊಳ್ಳುತ್ತಾರೆ. ಯಾರಿಂದಲೂ ಏನನ್ನೂ ಕೇಳದ ಎಂದಿಗೂ ಯಾವುದನ್ನೂ ಪಡೆಯಲೆಳಸದ ಇವರು ಇತರರಿಗೆ ಕೊಡಬಹುದಾದದ್ದು ಏನನ್ನೂ ತಮ್ಮ ಬಳಿ ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲ.

ದಿನ ನಿತ್ಯ ದೇವರು, ಧರ್ಮದ ಹೆಸರಿನಲ್ಲಿ ಮಾರಣಹೋಮ ನಡೆಸಲು ತವಕಿಸುವ ಆಧುನಿಕರಿಗೆ ಸೂಫಿಗಳಿಂದ ತಿಳಿಯಬೇಕಾದ್ದು ಬಹಳಷ್ಟು ಇವೆ. ಇಂದಿನ ಯುಗದಲ್ಲಿ ಕೆಲವು ಚಿಂತಕರು ಸೂಚಿಸುವ ಹಾಗೆ ದೇವರು ಮತ್ತು ಧರ್ಮಗಳು ವೈಯಕ್ತಿಕವಾಗಿ ಮಾತ್ರ ಇರಬೇಕೆಂಬ ಭಾವನೆಯನ್ನು ಯಾವುದೇ ಸದ್ದುಗದ್ದಲವಿಲ್ಲದೆ ಆಚರಣೆಗೆ ತಂದವರು ಸೂಫಿಗಳು. ಅಂತಹ ಶ್ರೇಷ್ಠ ಪರಂಪರೆಯ ಅರಿವು ನಮಗೆ ಇಂದು ಅತ್ಯಗತ್ಯವಾಗಿದೆ.

ಈ ನಿಟ್ಟಿನಲ್ಲಿ ಡಾ. ಜೆ.ಬಾಲಕೃಷ್ಣ ಅವರ ಕಾರ್ಯ ನನಗೆ ಅತ್ಯಂತ ಮಹತ್ವದ್ದಾಗಿ ತೋರುತ್ತೆ. ಇದೇ ರೀತಿಯಲ್ಲಿ ಅವರು ಮುಂದುವರೆದು ಸೂಫಿ ಕಾವ್ಯ ಪರಂಪರೆಯನ್ನು ನಮಗೆ ಬಹಳ ಬೇಗನೆ ಪರಿಚಯಿಸುತ್ತಾರೆಂಬ ಹಾರೈಕೆ ನನ್ನದು.

ಬೆಂಗಳೂರು **ಪ್ರೊ. ಎನ್. ಬಿ. ಚಂದ್ರಮೋಹನ್**

page 8
blank

ಮನಸ್ಸಿಗೆ ಎಷ್ಟೊಂದು ಕಿಟಕಿಗಳು!

'ಎಲ್ಲ ಧರ್ಮಗಳ ಧಾರ್ಮಿಕ ಮೌಲ್ಯಗಳು ಕೇವಲ ಸಾಪೇಕ್ಷ ಅಸ್ತಿತ್ವವನ್ನು ಹೊಂದಿವೆ; ಆಯಾ ಧರ್ಮಗಳ ಹಿರಿಮೆ ಪ್ರೀತಿ ಪ್ರೇಮವನ್ನು ಉತ್ತೇಜಿಸುವುದರಲ್ಲಿದೆ' ಎನ್ನುತ್ತಾರೆ ಸೂಫಿಗಳು. ಬಹುಪಾಲು ಜನರಿಗೆ ದೇವರು ಸಾಮಾಜಿಕ ಅಥವಾ ಧಾರ್ಮಿಕ ಅವಶ್ಯಕತೆಗಿಂತ ಹೆಚ್ಚಾಗಿ ಮಾನಸಿಕ ಅವಶ್ಯಕತೆಯಾಗಿದೆ. ತಮ್ಮ ಬದುಕಿನ ನೋವು ನಲಿವುಗಳಿಗೆ ಯಾವುದೇ ವೈಜ್ಞಾನಿಕ ವಿಚಾರಗಳ ಮೊರೆ ಹೋಗದೆ 'ದೇವರ' ಮೊರೆ ಹೋಗುವುದು ಅವರಿಗೆ ಸಾಂತ್ವನ ಕೊಡುತ್ತದೆ. ಮನೋವಿಜ್ಞಾನಿಯೊಬ್ಬರು ಹೇಳಿರುವಂತೆ ಮನುಷ್ಯನ ಮನಸ್ಸಿಗೆ ಒಂದು ಆಸರೆ ಬೇಕು. ಕೆಲವರಿಗೆ ಆಸರೆಯಾಗಿ ವಿಜ್ಞಾನ, ವಿಚಾರವಿದ್ದರೆ ಬಹುಪಾಲು ಜನರಿಗೆ 'ದೇವ'ರಿದ್ದಾನೆ.

ಆದರೆ ಈಗಿನ ಜಗತ್ತು ಅಷ್ಟಕ್ಕೇ ನಿಂತಿಲ್ಲ. ಇಂದು ಧರ್ಮ, ಮತಗಳ ಶ್ರೇಷ್ಠತೆ, ಜ್ಯೇಷ್ಠತೆಗಳ ಆಧಾರದ ಮತಾಂಧತೆ 'ದೇವರ' ಮೂಲಭೂತ ಮಾನಸಿಕ ಅವಶ್ಯಕತೆಯನ್ನು ಮೀರಿ ಅಗಾಧವಾಗಿ ಬೆಳೆದು ಕ್ರೌರ್ಯದ ಅಟ್ಟಹಾಸ ಮಾಡುತ್ತಿದೆ. ಇಲ್ಲಿ ಯಾವುದೇ ಧರ್ಮದ, ತತ್ವಜ್ಞಾನದ, ಪ್ರೀತಿ ಪ್ರೇಮಗಳ ಹಾಗೂ ಶಾಂತಿ ಸೌಹಾರ್ದತೆಯ ತಂಗಾಳಿಯೂ ಸುಳಿಯುವುದಿಲ್ಲ. ನೊಂದವರ ನೆರವಿಗೆ ಯಾವ 'ದೇವ'ರೂ ಬರುವುದಿಲ್ಲ.

ಪ್ರೀತಿ ಪ್ರೇಮ ಸಹಬಾಳ್ವೆ ಬೋಧಿಸುವ ಯಾವುದೇ ಧರ್ಮವಾದರೂ ಸಹನೀಯ, ಆಗ ಆ ಧರ್ಮಗಳ ಕೇಂದ್ರು ಬಿಂದುವಾದ 'ದೇವರು' ಒಂದು ನೆಪಮಾತ್ರವಾಗುತ್ತದೆ; ಗೌಣವಾಗುತ್ತದೆ.

ನಾನು ಈ ಪುಸ್ತಕದಲ್ಲಿ ಹೇಳಲೆತ್ನಿಸುವುದು ಯಾವುದೇ ಧರ್ಮ, ಇಸಂ ಅಥವಾ 'ದೇವರ'ಬಗೆಗಲ್ಲ. ನನ್ನ ಪ್ರಯತ್ನ ಒಂದು ಸ್ವಸ್ಥ ಮನಃಸ್ಥಿತಿಯನ್ನು ಚಿತ್ರಿಸುವುದಾಗಿದೆ. ಈ ಬದುಕನ್ನು ಮಗುವಿನ ನಿಷ್ಕಲ್ಮಶ ಮುಗ್ಧತೆಯಿಂದ ನೋಡಿದಲ್ಲಿ ಪ್ರಪಂಚದಲ್ಲಿ ಸಮಸ್ಯೆಗಳೇ ಇರುವುದಿಲ್ಲ. ಯಾರೂ ಧರ್ಮ, ತತ್ವಜ್ಞಾನಗಳ ಹೊರೆ ಹೊರಬೇಕಾಗುವುದಿಲ್ಲ. ಸುಮಾರು ಹದಿಮೂರು ವರ್ಷಗಳ ಹಿಂದೆ ನನ್ನ ಏಳು ವರ್ಷದ ಮಗ, 'ಸತ್ತವರನ್ನು ಹೂಳುವುದೇಕೆ?' ಎಂದು ಕೇಳಿದ. 'ಸತ್ತ ನಂತರ ದೇಹ ಕೊಳೆಯುತ್ತದೆ. ಹಲವಾರು ರೋಗಾಣುಗಳು ಬೆಳೆಯುತ್ತವೆ. ಕೊಳೆತ ದೇಹ ಕೆಟ್ಟವಾಸನೆ ಬೀರುತ್ತದೆ. ಅದನ್ನು ಮಣ್ಣಿನಲ್ಲಿ ಹೂತಲ್ಲಿ ದೇಹ ಅಲ್ಲೇ ಕೊಳೆತು ಮಣ್ಣಿನಲ್ಲಿ ಮಣ್ಣಾಗುತ್ತದೆ. ಕೆಲವು ಸುಡುತ್ತಾರೆ. ಸುಟ್ಟ ನಂತರ ಉಳಿಯುವ ಬೂದಿಯೂ ಸಹ ಮಣ್ಣಿನಲ್ಲಿ ಬೆರೆತು ಹೋಗುತ್ತದೆ' ಎಂದು ಹೇಳಿ, ತತ್ವಜ್ಞಾನಿಯಂತೆ, 'ಪ್ರಪಂಚದಲ್ಲಿ ಎಲ್ಲವೂ ಮಣ್ಣಿನಿಂದ ಹುಟ್ಟುತ್ತದೆ, ಕೊನೆಗೆ ಮಣ್ಣಿನಲ್ಲೇ ಸೇರುತ್ತದೆ. ನಾನು ಅಷ್ಟೆ ನೀನೂ ಅಷ್ಟೆ, ಎಲ್ಲ ಗಿಡಮರ ಪ್ರಾಣಿಗಳೂ ಅಷ್ಟೆ' ಎಂದೂ ಹೇಳಿದೆ. ಬಹಳ ತಾಳ್ಮೆಯಿಂದ ಕೇಳಿಸಿಕೊಳ್ಳುತ್ತಿದ್ದ ಅವನ ಮೇಲೆ ನನ್ನ ತತ್ವಜ್ಞಾನ ಎಂತಹ ಪ್ರಭಾವ ಬೀರಬಹುದು ಎಂದು ನಾನು ಪ್ರತಿಕ್ರಿಯೆಗಾಗಿ ಅವನ ಮುಖವನ್ನೇ ನೋಡುತ್ತಿದ್ದೆ. ಏನೋ ಯೋಚಿಸುತ್ತಿದ್ದ ಅವನು, 'ನಾವೆಲ್ಲಾ ಮಣ್ಣಿಂದ ಹುಟ್ಟಿದ್ದು ಅಂತೀರಾ, ಹಾಗಾದರೆ ನಾನು ಮಣ್ಣಲ್ಲಿ ಆಡಿದರೆ ಬಯ್ಯೋದು ಏಕೆ?' ಎಂದು ಕೇಳಿದ!

ಸೂಫಿ ಮತ್ತು ಝೆನ್ ಕತೆಗಳಲ್ಲಿ ಅವರ್ಣನೀಯ ಮಾಯಾ ಚಮತ್ಕಾರವಿದೆ. ಓದಿದ ಕತೆಯನ್ನೇ ಪುನಃ ಪುನಃ ಓದಿದಂತೆ ಮನಸ್ಸೆಂಬ ಗೂಡಿನ ಕಿಟಕಿಗಳು ಒಂದೊಂದಾಗಿ ತೆರೆಯುತ್ತಾ ಹೋಗುತ್ತವೆ. ಮನಸ್ಸಿಗೆ ಇಷ್ಟೊಂದು ಕಿಟಕಿಗಳಿವೆಯೆ ಎಂದು ದಿಗ್ಭ್ರಮೆಯಾಗುತ್ತದೆ. ಆ ಕಿಟಕಿಗಳಿಂದ ಎಂದೂ ಕಂಡಿರದ ಹೊಸಲೋಕ ಕಾಣತೊಡಗುತ್ತದೆ. ಅಂತಹ ಸೂಫಿ ಕತೆಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಅನುವಾದಿಸುವ ಪ್ರಯತ್ನ ಮಾಡಿದ್ದೇನೆ. ಈ ಮರುಮುದ್ರಿತ ಕೃತಿಯಲ್ಲಿ ಕಾಶ್ಮೀರದ ಋಷಿ ಸೂಫಿಗಳನ್ನು ಪರಿಚಯಿಸುವ ಲೇಖನ ಸೇರಿಸಿ ಪರಿಷ್ಕರಿಸಿದ್ದೇನೆ.

ಈ ಪುಸ್ತಕಕ್ಕೆ ಒಪ್ಪವಾದ ಮುನ್ನುಡಿಯನ್ನು ಪ್ರೀತಿಯಿಂದ ಬರೆದುಕೊಟ್ಟ ಹಿರಿಯರಾದ ಪ್ರೊ.ಎನ್.ಬಿ.ಚಂದ್ರಮೋಹನ್‌ರವರಿಗೆ, ಬೆನ್ನುಡಿಯನ್ನು ಬರೆದಿರುವ ಮತ್ತು ನನ್ನ ವಿಚಾರ–ಚಿಂತನೆಗಳನ್ನು ಸದಾ ಪೋಷಿಸುವ ಅತ್ಮೀಯ ಗೆಳೆಯ ಲಕ್ಷ್ಮೀಪತಿ ಕೋಲಾರ ಇವರಿಗೆ ಹಾಗೂ ಕಥೆಗಳಿಗೆ ಸ್ವತಃ ಕತೆ ಹೇಳಬಲ್ಲವಂತಹ ರೇಖಾಚಿತ್ರಗಳನ್ನು ರಚಿಸಿಕೊಟ್ಟಿರುವ ಬಡಿಗೇರ್‌ರವರಿಗೆ, ಮರುಮುದ್ರಿಸಲು ಉತ್ಸಾಹ ತೋರಿರುವ ಅಸೀಮ ಅಕ್ಷರದವರಿಗೆ, ಡಿಟಿಪಿ ಮಾಡಿದ ದೊಡ್ಡರಂಗಯ್ಯನವರಿಗೆ ಮತ್ತು ಅಂದವಾಗಿ ಮುದ್ರಿಸಿದ ಗೆಳೆಯ ರಘೂಗೆ ನನ್ನ ಎದೆಯಾಳದ ಕೃತಜ್ಞತೆಗಳು.

ಮಗಳು ಅನನ್ಯ, ಮಗ ಶಶಾಂಕ್ ಹಾಗೂ 'ನಾನೆಂಬ ನೀನು' ಎಂದು ಆಗಾಗ ನೆನಪಿಸುವ ಪತ್ನಿ ರೇಣುಕಾ ಇವರೆಲ್ಲರ ಪ್ರೀತಿ, ಸಹನೆಯೇ ನನ್ನ ಬದುಕಿನ ಚಾಲನ ಶಕ್ತಿ.

ಡಾ. ಜೆ. ಬಾಲಕೃಷ್ಣ
j.balakrishna@gmail.com

ಅಪ್ಪ
ಸಿ.ಎಂ.ಜನಾರ್ದನರವರ
ನೆನಪಿಗಾಗಿ

ಪ್ರೇಮದ ಹಾದಿಯ ಪಥಿಕ ನಾನು
ಈ ಪ್ರೇಮದ ಕಾರವಾನ್ ಎಲ್ಲಿಗೆ ಕರೆದೊಯ್ಯುವುದೋ
ಅಲ್ಲಿದೆ ನನ್ನ ಧರ್ಮ, ನನ್ನ ಶ್ರದ್ಧೆ.

–ಇಬ್ ಅಲ್–ಅರಾಬಿ

ನೀನೆಂಬ ನಾನು

ಆತ್ಮದೆಡೆಗೆ ಪಯಣ

ಇತರ ಎಲ್ಲದರಿಂದ ಭಿನ್ನ
ಈ ಪ್ರೇಮಿಗಳ ಪಂಗಡ
ಅವರಿಗೆ ಅವರದೇ ಧರ್ಮವಿದೆ
ಅವರದ್ದೇ ಆದ ಶ್ರದ್ಧೆಯಿದೆ.
–ರೂಮಿ

ಸೂಫಿಸಂ ಬದುಕಿನ ಒಂದು ರೀತಿ ಅಥವಾ ಬದುಕನ್ನು ಸ್ವಸ್ಥ ದೃಷ್ಟಿಯಿಂದ ನೋಡುವ ಒಂದು ಮಾನಸಿಕ ಅವಸ್ಥೆ. ಸೂಫಿಸಂ ಯಾವುದೇ ಚೌಕಟ್ಟಿನೊಳಗಣ ಧರ್ಮವಲ್ಲ. ಬದಲಿಗೆ ಅದು ಪ್ರೇಮ ಮತ್ತು ಸತ್ಯಾನ್ವೇಷಣೆಯ ಬದುಕಿನ ಅನುಭಾವದ ಖಾಸಗಿ ಅನುಭವಗಳ ಖಜಾನೆ.

ನಿಜವಾದ ಸೂಫಿಯಾದವ ಯಾವ ಧರ್ಮದ ಹಿಂಬಾಲಕನೂ ಅಲ್ಲ, ಯಾವುದೇ ಧರ್ಮದ ಕಟ್ಟುಪಾಡುಗಳಿಗೂ ಒಳಪಟ್ಟಿರುವುದಿಲ್ಲ. ಕನ್ನಡದ ಪ್ರಖ್ಯಾತ ಮುಸಲ್ಮಾನ ಲೇಖಕರೊಬ್ಬರು ಗುಲಬರ್ಗಾದ ಬಂದೇನವಾಝ್ ದರ್ಗಾದಲ್ಲಿನ ಒಬ್ಬ ಸೂಫಿಯನ್ನು 'ನೀವು ಸುನ್ನಿ ಅಥವಾ ಷಿಯಾ, ಯಾವ ಪಂಗಡಕ್ಕೆ ಸೇರಿದವರು?' ಎಂಬ ಪ್ರಶ್ನೆಗೆ ಆತ, ' ನಾವು ಹಿಂದೂಗಳೂ ಅಲ್ಲ, ಮುಸಲ್ಮಾನರೂ ಅಲ್ಲ, ಸೂಫಿಗಳು ಹೀಗಿರುವಾಗ ಸುನ್ನಿ ಅಥವಾ ಷಿಯಾ ಆಗುವುದು ಹೇಗೆ ಸಾಧ್ಯ? ಎಂದು ಕೇಳಿದನಂತೆ. ಸೂಫಿ ಲಿಯಾಕತ್ ಹುಸೇನ್ ಶಾ ತಮ್ಮನ್ನು 'ನಾನು ಮುಸಲ್ಮಾನನಲ್ಲ, ನಾನೊಬ್ಬ ಸೂಫಿ' ಎಂದು ಹೇಳಿಕೊಂಡಿದ್ದಾರೆ.

ಸೂಫಿಸಂ ಎನ್ನುವುದು ಪ್ರೇಮದ ಅನುಭಾವದ ಹಾದಿ. ಆ ಹಾದಿಯ ಪಯಣ ಬೇರೆ ಎಲ್ಲಿಗೂ ಅಲ್ಲ, ಬದಲಿಗೆ ತನ್ನದೇ ಆತ್ಮದೆಡೆಗೆ. ಆ ಹಾದಿಯಲ್ಲಿ ಹೊರಟವನು ತನ್ನ ಹೃದಯದಲ್ಲೇ ಸತ್ಯ ಅಥವಾ ದೇವರನ್ನು ಕಂಡುಕೊಳ್ಳುತ್ತಾನೆ. ಆ ಸತ್ಯ ಅಥವಾ ದೇವರು ಬೇರೆ ಯಾರೂ ಅಲ್ಲ, ಅದು 'ನೀನೇ ಎಂಬ ನಾನು', 'ದೇವರು ಎಲ್ಲೂ ಇಲ್ಲ, ನಾನು ಧರಿಸಿರುವ ನನ್ನ ಧಿರಿಸಿನೊಳಗೇ ಇದ್ದಾನೆ, ನನಗೆ ಅಭಿನಂದನೆಯಿರಲಿ, ನೋಡಿ ಹೇಗಿದೆ ನನ್ನ ವೈಭವತೆ!' ಎಂದು ಸೂಫಿ ಬಯಾಜಿದ್ ಬಸ್ತಮಿ ಹೇಳಿದ್ದಾರೆ. 'ನಿನ್ನ ಹೊರಗಿನದ್ಯಾವುದನ್ನೂ ನೀನು ಅರಿಯಲಾರೆ, ಏಕೆಂದರೆ ಯಾವುದನ್ನಾದರೂ ಸಂಪೂರ್ಣ ಅರಿಯಬೇಕಾದಲ್ಲಿ, ಅರಿಯಬೇಕಾದ ವಸ್ತು ನೀನೇ ಆಗಿರಬೇಕು. ಹಾಗಾಗಿ ನಿನ್ನ ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನು ನಿನ್ನೊಳಗಿನ ಅಸೀಮ ವಾಸ್ತವದಲ್ಲೇ

ಅರಸಬೇಕು' ಎಂಬುದು ಸೂಫಿಸಂನ ಮೂಲಭೂತ ತತ್ವ. ಸೂಫಿಗಳ ಪ್ರಕಾರ ಸತ್ಯವನ್ನು ಕಂಡುಕೊಳ್ಳಲು ಎಷ್ಟು ಮನುಷ್ಯರಿದ್ದಾರೋ ಅಷ್ಟು ಹಾದಿಗಳಿವೆ.

ಸೂಫಿಸಂಅನ್ನು ಇಸ್ಲಾಂನೊಂದಿಗೆ ಗುರುತಿಸಲಾಗಿದ್ದರೂ, ಸೂಫಿಸಂ ಇಸ್ಲಾಂಗಿಂತಲೂ ಹಾಗೂ ಈಗಿನ ಪ್ರಮುಖ ಧರ್ಮಗಳಿಗಿಂತಲೂ ಪ್ರಾಚೀನವಾದುದೆಂದು ಹೇಳಲಾಗುತ್ತದೆ. ಅದು ಆತ್ಮಕ್ಕೆ ಸಂಬಂಧಿಸಿದ ಒಂದು ಪ್ರಾಚೀನ ವಿದ್ವತ್ತು. ಅವರನ್ನು ಬಹಳ ಹಿಂದೆ ಸೂಫಿಗಳೆಂದು ಕರೆಯುತ್ತಿರಲಿಲ್ಲ, 'ಕಂಬಲ್ ಪೋಷ್'ಗಳೆನ್ನುತ್ತಿದ್ದರು. ಅಂದರೆ 'ಕಂಬಳಿ ಹೊದ್ದವರು' ಎಂದು. ತಮ್ಮ ಹಲವಾರು ಸಂಶಯಗಳ ನಿವಾರಣೆಗೆ ಕಂಡ ಕಂಡ ಸಾಧುಸಂತರ ಬಳಿ ಹೋದರು. ಯಾರೂ ಅವರಿಗೆ ತೃಪ್ತಿಕರ ಉತ್ತರ ಕೊಡಲಿಲ್ಲ. ಅವರು ಯೇಸುವಿನ ಬಳಿಯೂ ಹೋಗಿದ್ದರಂತೆ. ಒಂದುದಿನ ಪ್ರವಾದಿ ಮಹಮ್ಮದ್, ತಮ್ಮ ಬಳಿಗೆ ಹಲವಾರು 'ಕಂಬಲ್ ಪೋಷ್'ಗಳು ಒಂದು ಸೂಚಿತ ದಿನದಂದು ಬರುತ್ತಾರೆಂದೂ, ಈಗವರು ಇಂತಹ ಸ್ಥಳದಲ್ಲಿದ್ದಾರೆಂದೂ ತಮ್ಮ ಶಿಷ್ಯರಿಗೆ ಹೇಳಿದರು. ಆ ದಿನ ಕಂಬಲ್ ಪೋಷ್‌ಗಳು ಬಂದರು. ಪ್ರವಾದಿ ಏನೂ ಮಾತನಾಡಲಿಲ್ಲ ಅವರ ಕಡೆ ನೋಡಿದರಷ್ಟೆ, ಕಂಬಲ್ ಪೋಷ್‌ಗಳ ಎಲ್ಲ ಸಂಶಯಗಳೂ ನಿವಾರಣೆಯಾದವು ಹಾಗೂ ಅವರಿಗೆ ಸಂಪೂರ್ಣ ತೃಪ್ತಿಯಾಯಿತು.

ಅದು ಹೇಗೆ ಸಾಧ್ಯವಾಯಿತು? ಹೇಗೆಂದರೆ, ಆತ ಅವರ ಹೃದಯಗಳಲ್ಲಿ ಪ್ರೀತಿಪ್ರೇಮ ಸೃಷ್ಟಿಸಿದ. 'ಪ್ರೇಮ ಅಂಕುರಿಸಿದಾಗ, ಅತೃಪ್ತಿ ಹೇಗಿರಲು ಸಾಧ್ಯ?' ಕಂಬಲ್ ಪೋಷ್‌ಗಳು ಇಸ್ಲಾಂನಲ್ಲಿ ಬೆರೆತು ಹೋದರು. ಝೆನ್ ಬೌದ್ಧಧರ್ಮದ ರೀತಿ ಸೂಫಿ ಅನುಭಾವವೂ ಒಂದು ರೀತಿಯಲ್ಲಿ ಹಲವಾರು ಧಾರ್ಮಿಕ ಸಂದೇಹಗಳಿಗೆ ಸಾಂಪ್ರದಾಯಕ ಉತ್ತರಗಳು ಸಮಾಧಾನಕರವಾಗಿ ಕಾಣದಿದ್ದುದರಿಂದ ಉಗಮವಾಯಿತೆನ್ನಬಹುದು.

ಪ್ರವಾದಿಯ ಮರಣದ ಸುಮಾರು ಒಂದು ಶತಮಾನದ ನಂತರ 'ಅನುಭಾವದ ಹಾದಿಯ ಪಯಣಿಗರು' ತಮ್ಮ ಚಿಂತನೆಗಳಿಗೆ ಒಂದು ಸ್ಪಷ್ಟ ರೂಪ ಕೊಡತೊಡಗಿದರು. ಅವರು ಪಯಣಿಗರು ಏಕೆಂದರೆ, 'ಈ ಜಗತ್ತಿನಲ್ಲಿ ನಿನ್ನ ಧೂಳು ತುಂಬಿದ ಬೂಟುಗಳಿಂದ ಹಾಗೂ ಬಟ್ಟೆಗಳಿಂದ ಪಯಣಿಗನ ಹಾಗೆ, ಹಾದಿಹೋಕನ ಹಾಗಿರು. ಆಗಾಗ ಮರದ ನೆರಳಿನಲ್ಲಿ ಕೂಡು, ಸುಡುವ ಮರುಭೂಮಿಯಲ್ಲಿ ಅಲೆದಾಡು, ಆದರೆ ಯಾವಾಗಲೂ ಹಾದಿಹೋಕನಾಗಿರು, ಏಕೆಂದರೆ ಇದು ನಿನ್ನ ಮನೆಯಲ್ಲ.'

ಪ್ರವಾದಿ ತೀರಿಕೊಂಡ ನಂತರ ಅಂತಹವರನ್ನು ಸೂಫಿಗಳೆಂದು ಕರೆಯಲಾಯಿತು. ಬಹುಶಃ ಅವರು ತೊಡುತ್ತಿದ್ದ ಉಣ್ಣೆಯ ಬಿಳಿಯ ಬಟ್ಟೆ(ಸೂಫ್)ಯಿಂದಿರಬಹುದು. ಅಥವಾ ಅವರ ಆತ್ಮದ ಪರಿಶುದ್ಧತೆ(ಸಫಾ)ಯಿಂದಿರಬಹುದು. ಇಸ್ಲಾಂನ ಮೊದಲ ಶತಮಾನದಲ್ಲಿ ನಿರಂತರ ಆಂತರಿಕ ದಂಗೆ, ರಕ್ತಪಾತ, ರಾಜಕೀಯ ಗುಂಪುಗಳ ಸ್ವಾರ್ಥ, ಅರಾಜಕತೆ, ನೈತಿಕ ಮೌಲ್ಯಗಳ ಅಧಃಪತನಗಳಿಂದಾಗಿ ವಿರಕ್ತತೆ ಬೆಳೆಯಲು ಹೆಚ್ಚು ಅನುಕೂಲಕರವಾಗಿತ್ತು. ಇಸ್ಲಾಂನಲ್ಲಿನ ಅನುಭಾವದ ಉಗಮ ಪ್ರಾಚೀನ ಯೂರೋಪ್ ಮತ್ತು ಭಾರತದಲ್ಲಿ ಮೊದಲೇ ಆರಂಭಗೊಂಡು ಆದಿ ಇಸ್ಲಾಂನ ಅವಧಿಯಲ್ಲಿ ವಿರಾಗಿಗಳ ರೂಪದಲ್ಲಿ ನೆಲೆಯೂರತೊಡಗಿ ಕ್ರಮೇಣ ಪ್ರವಾದಿಯ ನಂತರದ ಆದಿ ಉಮಯ್ಯಾದ್

ಅವಧಿಯಲ್ಲಿ (ಕ್ರಿ.ಶ. 661–750) ಪ್ರವಾದಿಯ ಹಿಂಬಾಲಕರ ಪ್ರಾಪಂಚಿಕ ಆಸ್ಥೆಗಳಿಗೆ ವಿರುದ್ಧವಾಗಿ, ಪ್ರತಿಭಟನೆಯಾಗಿ ಬೆಳೆಯತೊಡಗಿತು. ಪ್ರವಾದಿಯ ನಂತರದ ಅವರ ಉತ್ತರಾಧಿಕಾರಿಗಳ ಸುಖ, ವೈಭೋಗ, ಪ್ರಾಪಂಚಿಕ ಮನೋಭಾವ ಅವರ ಎಲ್ಲೆ ಮೀರಿದ ಬದುಕಿನ ರೀತಿಗಳ ವಿರುದ್ಧದ ಮೌನ ಪ್ರತಿಭಟನೆ ಸೂಫಿಸಂನ ಆರಂಭವಾಗಿತ್ತು.

ಒಂದು ರೀತಿಯಲ್ಲಿ ಸೂಫಿ ಬದುಕು ಸರ್ಕಾರದ ದಬ್ಬಾಳಿಕೆಯ ವಿರುದ್ಧ, ಸಂಪ್ರದಾಯಬದ್ಧ ಧಾರ್ಮಿಕ ಗುರುಗಳ ವಿರುದ್ಧ ಹಾಗೂ ಪಾರಮಾರ್ಥಿಕತೆಗಿಂತ ಇಹಲೋಕದ ಸುಖಸಂಪತ್ತುಗಳ ಬಗೆಗೆ ಹೆಚ್ಚು ಆಸ್ಥೆ ಇರುವ ಮುಸಲ್ಮಾನರ ಯಾಂತ್ರಿಕವಾದ ಧಾರ್ಮಿಕ ರೀತಿ ರಿವಾಜುಗಳ ವಿರುದ್ಧದ ಪ್ರತಿಭಟನೆಯಾಗಿತ್ತು. ಯಾವುದೇ ರೀತಿಯ ವಿವೇಚನೆಯಿಂದಾಗಲಿ ಅಥವಾ ಧಾರ್ಮಿಕ ರೀತಿ ರಿವಾಜುಗಳಿಂದಾಗಲೀ ಸಂತೃಪ್ತರಾಗದ ಸೂಫಿಗಳು ತಮ್ಮ ಆಂತರಿಕ ಪಾರಮಾರ್ಥಿಕ ಬದುಕನ್ನು ಉನ್ನತ ಮಟ್ಟಕ್ಕೆ ಒಯ್ಯುವುದರ ಬಗೆಗೆ ಹಾಗೂ ಅದರ ಮೂಲಕ ದೇವರೊಂದಿಗೆ ಸಮ್ಮಿಳಿತಗೊಂಡು, ದೇವರನ್ನು ನೇರವಾಗಿ, ಭಾವುಕವಾಗಿ ಅನುಭವಿಸುವ ಪ್ರಯತ್ನ ನಡೆಸಿದರು. ಸೂಫಿಗಳು ಮಸೀದಿಗಳನ್ನು ಕಟ್ಟಲಿಲ್ಲ. ಬದಲಿಗೆ ತಮ್ಮದೇ ಆದ ಶಿಷ್ಯ ಪರಂಪರೆಯನ್ನು ಹಾಗೂ ತತ್ವ ಪರಂಪರೆಯನ್ನು ಬೆಳೆಸಿದರು. ಉತ್ತರ ಕರ್ನಾಟಕದ ಸೂಫಿ ಸಾಹಿಬಣ್ಣನನ್ನು ಒಮ್ಮೆ ಒಬ್ಬ ಮುಲ್ಲಾ, 'ನೀನು ಮಸೂತಿಗೆ ಯಾಕೆ ಬರುವುದಿಲ್ಲ.?' ಎಂದು ಕೇಳಿದುದಕ್ಕೆ 'ನನ್ನ ಒಳಗೇ ಮಸೂತಿ ಇರುವಾಗ ನಾನೆಲ್ಲಿ ನಮಾಜು ಮಾಡಬೇಕು?' ಎಂದುತ್ತರಿಸಿದನಂತೆ. ಯಾವುದು ಸಾಂಪ್ರದಾಯಕ ಇಸ್ಲಾಂ ಆಗಿತ್ತೋ ಆ ಪರಿಕಲ್ಪನೆಗೆ ಬದಲಾಗಿ, ಪರ್ಯಾಯವಾಗಿ ಚಿಂತಿಸುತ್ತಾ, ಬದುಕುತ್ತಾ ಸೂಫಿಗಳು ಬಂದಿದ್ದಾರೆ.

ಗಲ್ಲಿಯಲ್ಲಿ ಬೊಗಳುವ ನಾಯಿ

'ನಾಯಿಯ ಹಾಗೆ ನಿನ್ನ ಮನೆಯ ಗಲ್ಲಿಯಲ್ಲಿ
ದಿನ ನಿತ್ಯ ನಿನಗಾಗಿ ಬೊಗಳುತ್ತಿದ್ದೇನೆ ಆದರೆ
ಯಾರ ನಾಯಿಯಿದು, ಏಕೆ ಬೊಗಳುತ್ತಿದೆಯೆಂದು
ನೀನೊಂದು ದಿನವೂ ಕೇಳಲಿಲ್ಲ'

ಸೂಫಿಗಳು ಸರಳವಾಗಿ ಹಾಗೂ ಬಡತನದಲ್ಲಿ ಬದುಕುತ್ತಿದ್ದರು. ವೈರಾಗ್ಯದ ಸಂಕೇತವಾಗಿ ಬಣ್ಣ ಹಾಕದ ಉಣ್ಣೆ ಬಟ್ಟೆಯನ್ನವರು ತೊಡುತ್ತಿದ್ದರು. 'ದಾರಿದ್ರ್ಯವೇ ನನ್ನ ಹಿರಿಮೆ' ಎಂದು ಹೇಳಿಕೊಳ್ಳುತ್ತಿದ್ದರು. 'ದೇವರೇ, ಬಡವನಾಗಿ ಬದುಕಲು ನನ್ನನ್ನು ಬಿಡು, ಬಡವನಾಗೇ ಸಾಯಲು ಬಿಡು. ನನ್ನ ಮುಂದಿನ ಜನ್ಮದಲ್ಲೂ ಬಡವರಲ್ಲೇ ಹುಟ್ಟುವಂತೆ ಮಾಡು' ಎಂದು ಪ್ರಾರ್ಥಿಸುತ್ತಿದ್ದರು. ಬಡತನವೆಂದರೆ ಹೇಗಿರಬೇಕು ಎಂಬುದನ್ನು ಸಾರಿ ಅಸ್–ಸಖಾತಿ ಹೀಗೆ ಹೇಳುತ್ತಾನೆ: 'ಯಾರಿಂದಲೂ ಏನನ್ನೂ ಕೇಳಬೇಡ, ಏನನ್ನೂ ಪಡೆಯಬೇಡ, ಇತರರಿಗೆ ಕೊಡಬಹುದಾದಂತಹುದನ್ನೂ ನೀನು ಇಟ್ಟುಕೊಳ್ಳಬೇಡ', ಸೂಫಿಸಂ ಎಂದರೆ ಏನೆಂದು ಸೂಫಿ ಅಬು ಸೈಯದ್ ಇಬನ್ ಅಬಿ'ಲ್ ಖಯರ್‌ನನ್ನು ಕೇಳಿದಾಗ ಆತ, 'ನಿನ್ನ ಮನಸ್ಸಿನಲ್ಲಿರುವುದನ್ನೆಲ್ಲಾ ಮರೆತುಬಿಡು;

ನಿನ್ನ ಕೈಯಲ್ಲಿರುವುದನ್ನೆಲ್ಲಾ ಕೊಟ್ಟುಬಿಡು; ನಿನ್ನ ಕರ್ಮವೇನೋ ಅದನ್ನು ಎದುರಿಸು' ಎಂದನಂತೆ.

ಪ್ರೇಮದ ಅಂತಃಸತ್ಯವೆಂದರೆ
ಕೊಡುತ್ತಾ ಹೋಗು ನಿನ್ನಲ್ಲಿರುವುದನ್ನೆಲ್ಲಾ
ಬರಿದಾಗುವವರೆಗೆ
ನಿನ್ನ ಚೀಲ.

ಒಮ್ಮೆ ಪರ್ಷಿಯಾದ ರಾಜ ಅದಮ್ ಶಾನ ಪ್ರಖ್ಯಾತ ಆಸ್ಥಾನ ಕವಿ ಅಬ್ದುಲ್ ಸಿನಾಯ್ ಸೂಫಿಯಾಗಿ ರಾಜನ ಆಸ್ಥಾನ ಬಿಟ್ಟು ಕಾಡಿನಲ್ಲಿ ಒಂಟಿಯಾಗಿ ಜೀವಿಸುತ್ತಿದ್ದ. ಆತನನ್ನು ಬಿಟ್ಟುಕೊಡಲು ತಯಾರಿಲ್ಲದ ರಾಜ ಆತನನ್ನು ಕರೆಸಿ ಆತನಿಗೆ ತನ್ನ ರಾಜ್ಯದಲ್ಲಿನ ಪಾಲು ಕೊಡುವುದಾಗಿ ಹಾಗೂ ತನ್ನ ತಂಗಿಯನ್ನು ಮದುವೆ ಮಾಡಿಕೊಡುವುದಾಗಿ ಹೇಳುತ್ತಾನೆ. ಅದಕ್ಕೆ ಸಿನಾಯ್ 'ನಾನು ಸೂಫಿಯಾದ ದಿನದಿಂದ ಬಡತನವೇ ನನ್ನ ಪತ್ನಿಯಾಗಿದ್ದಾಳೆ' ಎಂದು ರಾಜನ ಕೊಡುಗೆಯನ್ನು ನಿರಾಕರಿಸುತ್ತಾನೆ.

ಸೂಫಿಗಳಾದವರಲ್ಲಿ ಜನಸಾಮಾನ್ಯರ ಜೊತೆಗೆ ಸಂತರೂ, ಕವಿಗಳೂ, ರಾಜರೂ ಇದ್ದರು. ಕೆಲವರು ಅಲೆಮಾರಿಗಳಾಗಿ ಊರೂರು ಅಲೆಯುತ್ತ ಭಿಕ್ಷೆ ಬೇಡುವ 'ದರ್ವೇಶ್'ಗಳಾಗಿ ತಮ್ಮ 'ಉನ್ಮಾದ'ದ ಉಪದೇಶಗಳಿಂದ ಕೇಳುಗರನ್ನು ರೊಚ್ಚಿಗೆಬ್ಬಿಸುತ್ತಿದ್ದರು. ಇನ್ನು ಕೆಲವರು ಊರಿಂದ, ಜನರಿಂದ ದೂರವಾಗಿ ಅಡವಿ, ಬೆಟ್ಟ ಗುಡ್ಡಗಳನ್ನು ಸೇರಿ, ಗುಹೆಗಳಲ್ಲಿ ವಾಸಿಸುತ್ತ ಸ್ಮಶಾನ, ಮರಳುಗಾಡುಗಳಲ್ಲಿ ಅಲೆದಾಡುತ್ತ ಏಕಾಂತದಲ್ಲಿ ಆತ್ಮದಂಡನೆಯಿಂದ ಅಂತರಂಗ ಧ್ಯಾನದಿಂದ ಬದುಕು ನಡೆಸುತ್ತಿದ್ದರು. ಬಾಲ್ಕ್‌ನ ರಾಜಕುಮಾರ ಇಬ್ರಾಹಿಂ ಅದಮ್ (ಕ್ರಿ.ಶ. 776) ಸೂಫಿಯಾಗಿ ತನ್ನ ರಾಜ್ಯ ತೊರೆದು ಹರಕಲು ಉಣ್ಣೆ ಬಟ್ಟೆ ತೊಟ್ಟು ಸಿರಿಯಾದಲ್ಲೆಲ್ಲಾ ಅಲೆದಾಡುತ್ತ ಅಲ್ಲಲ್ಲಿ ತೋಟಗಳಲ್ಲಿ ಮಾಲಿಯಾಗಿ ಕೆಲಸ ಮಾಡುತ್ತ ಅಥವಾ ಕೂಲಿ ಕೆಲಸ ಮಾಡುತ್ತಿದ್ದನಂತೆ. ಆತನನ್ನು ಗುರುತು ಹಿಡಿದವರ್‍ಯಾರಾದರೂ 'ರಾಜಕುಮಾರನಾಗಿ ಏಕೆ ಈ ರೀತಿಯ ಕೆಲಸ ಮಾಡುತೀಯೆ?' ಎಂದು ಕೇಳಿದಾಗ, 'ನನ್ನನ್ನು ಜನ ಜಮ್ಮಾಲಿ (ಒಂಟೆ ಮೇಯಿಸುವವ) ಎಂದುಕೊಳ್ಳಲ್ಲಿ ಅಥವಾ ಹುಚ್ಚನೆಂದುಕೊಳ್ಳಲ್ಲಿ, ನಾನು ನನ್ನ ಧರ್ಮವನ್ನು ಸೈತಾನನಿಂದ ರಕ್ಷಿಸಬೇಕು' ಎನ್ನುತ್ತಿದನಂತೆ.

ಮಾಲಾಮತಿಗಳೆಂಬ ಸೂಫಿಗಳು ಜನರ ಮೆಚ್ಚುಗೆಯ ಹೆದರಿಕೆಯಿಂದ ಬೇಕೆಂತಲೇ ಜನ ತಮ್ಮ ಮೇಲೆ ಸಿಟ್ಟಿಗೇಳುವ ಹಾಗೆ, ಅಸಹ್ಯ ಪಡುವ ಹಾಗೆ ನಡೆದುಕೊಳ್ಳುತ್ತಿದ್ದರು.

ನನ್ನ ಮತ್ತು ಈ ಪ್ರಪಂಚದ ನಡುವೆ ದ್ವೇಷದ ಕೊಳ್ಳಿ ಹೊತ್ತಿಸು
ಈ ಪ್ರಾಪಂಚಿಕ ಸಖ್ಯ ನನ್ನಲ್ಲಿ ಹೇಸಿಗೆ ಬರುವಂತೆ ಮಾಡು
ಇತರ ಎಲ್ಲಾ ವಸ್ತುಗಳಿಗೆ ಬೆನ್ನು ತೋರುವಂತೆ ನನ್ನ
ಹೃದಯವನ್ನು ಮಾಡು
ಏಕೆಂದರೆ ಅದರಲ್ಲಿ ಪ್ರೀತಿ ಪ್ರೇಮ ಮಾತ್ರ ಉಳಿದಿರಲಿ.

–ನೂರದ್–ದಿನ್ ಜಾಮಿ

ಮಾಲಾಮತಿಗಳ ಪಂಗಡ 8ನೇ ಶತಮಾನದಲ್ಲಿ ಇರಾನಿನ ಸಮನಿದ್ ಪ್ರದೇಶದಲ್ಲಿ ಹೆಚ್ಚು ಪ್ರಚಲಿತದಲ್ಲಿತ್ತು. ಮಾಲಾಮತಿಯ ಪದದ ವ್ಯುತ್ಪತ್ತಿ ಅರಾಬಿಕ್ ಪದ 'ಲಾ ಮಾ'ದಿಂದ (ನೀಚ, ದುಷ್ಟ) ಆಗಿದೆ. ಮಾಲಾಮತಿಗಳ ಸಿದ್ಧಾಂತ ಆತ್ಮದ ವಿಷಯಲೋಲುಪತೆಯ ತಿರಸ್ಕಾರ ಹಾಗೂ ಅದನ್ನು ಪ್ರಾಪಂಚಿಕ ಆಸೆಗಳಿಗೆ ಬಲಿಯಾಗದಂತೆ ಕಾಯಬೇಕೆಂಬ ನಂಬಿಕೆಯ ಮೇಲೆ ನಿರ್ಮಿತವಾಗಿತ್ತು. ಮಾಲಾಮತಿಗಳು ಆತ್ಮನಿಂದನೆ ಹಾಗೂ ಆತ್ಮದಂಡನೆ ಮಾಡಿಕೊಳ್ಳುತ್ತಿದ್ದರು. ಇದರಿಂದಾಗಿ ಪ್ರಾಪಂಚಿಕ ವಿಷಯಗಳಿಂದ ತಾವು ದೂರಾಗಬಹುದು ಹಾಗೂ ಅದರ ಮೂಲಕ ದೇವರಿಗೆ ಹತ್ತಿರಾಗಬಹುದೆಂದು ನಂಬಿದ್ದರು. ಇತರರ ಹೊಗಳಿಕೆ, ಗೌರವ ಆದರಳಿಗೆ ಹೆದರುತ್ತಿದ್ದರು. 'ಭಕ್ತಿಯೆಂದರೆ ದೇವರು ಹಾಗೂ ತನ್ನ ನಡುವಿನ ಖಾಸಗಿ ವಿಷಯ' ಎಂದು ಮಾಲಾಮತಿಗಳು ಹೇಳುತ್ತಿದ್ದರು. ತನಗೆ ಕೀರ್ತಿ ದೊರಕಬಹುದೆಂದು ಹೆದರಿ ಮುನ್ನೆಚ್ಚರಿಕೆಯಾಗಿ ಮಾಲಾಮತಿ ತನ್ನ ಜ್ಞಾನವನ್ನೂ ಪ್ರದರ್ಶಿಸದೆ ದಡ್ಡನಂತೆ ವರ್ತಿಸುತ್ತಿದ್ದ ಹಾಗೂ ತನ್ನ ದಡ್ಡತನವನ್ನು, ತಪ್ಪುಗಳನ್ನು ಇತರರು ತಿದ್ದುವಂತೆ ಮಾಡುತ್ತಿದ್ದ. ತಮ್ಮ ಮೇಲೆ ಎಷ್ಟು ನಿಷ್ಠುರ ಹಾಗೂ ನಿರ್ದಯವಾಗಿರುತ್ತಿದ್ದರೋ, ಇತರರ ಬಗ್ಗೆ ಅಷ್ಟೇ ತಾಳ್ಮೆ ಹಾಗೂ ಕ್ಷಮಾ ಮನೋಭಾವ ಹೊಂದಿರುತ್ತಿದ್ದರು. ಇತರ ಸೂಫಿಗಳು ತಮ್ಮ ದೈವಭಕ್ತಿ, ಸಾಧನೆಗಳನ್ನು ಹಾಡಿ ಕುಣಿದು ಆಚರಿಸುತ್ತಿದ್ದರೆ, ಮಾಲಾಮತಿಗಳು ತಮ್ಮ ಸಾಧನೆಗಳನ್ನು, ತಮ್ಮ ಭಕ್ತಿ ಭಾವನೆಗಳನ್ನು ಅವಿತಿಟ್ಟುಕೊಳ್ಳುತ್ತಿದ್ದರು. ತಾವು ಸೂಫಿಗಳೆಂದೂ ಸಹ ತೋರಿಸಿಕೊಳ್ಳುತ್ತಿರಲಿಲ್ಲ. ಹೊರಗಿನ ಪ್ರಪಂಚಲ್ಲಿ ಮಾಲಾಮತಿಗಳು ಯಾವ ನಿಯಮವನ್ನೂ ಪಾಲಿಸದೆ ಹೇಗೆ ಜನರ ನಿಂದನೆ ಗಳಿಸುತ್ತಿದ್ದರೋ ಹಾಗೆಯೇ ಖಾಸಗಿ ಬದುಕಿನಲ್ಲಿ ದೈವಭಕ್ತಿ ಹಾಗೂ ಆರಾಧನೆಯನ್ನು ಅಷ್ಟೇ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಇವರ ಈ ನಡವಳಿಕೆಗಳಿಂದ ಇತರ ವಿದ್ವಾಂಸರು ಇವರನ್ನು ಸೂಫಿಗಳೆಂದೂ ಸಹ ಗುರುತಿಸುತ್ತಿರಲಿಲ್ಲ.

ನಿಶ್ಯಬ್ದ ಶೂನ್ಯದ ಜೊತೆ ಮೌನದ ಮಾತು

ಹನ್ನೆರಡನೇ ಶತಮಾನದಿಂದೀಚಿಗೆ ಸೂಫಿಗಳು ವಿವಿಧ ಗುಂಪುಗಳಾಗಿ ರೂಪುಗೊಂಡರು. ಆ ಗುಂಪುಗಳಿಗೆ ಸಾಮಾನ್ಯವಾಗಿ ಅವುಗಳನ್ನು ರೂಪಿಸಿದವರ ಹೆಸರಿನಿಂದಲೇ ಕರೆಯುತ್ತಾರೆ. ಅಂಥವುಗಳಲ್ಲಿ ಬಹಾ ಅದ್-ದೀನ್ ನಕ್ಷ್‌ಬಂದ್ ರೂಪಿಸಿದ 'ನಕ್ಷ್ ಬಂದಿಯ್ಯಾ' ಸಹ ಒಂದು. ಇತರ ಗುಂಪುಗಳು ದೇವರ ಧ್ಯಾನ(ದಿಕ್ರ್)ವನ್ನು ಸಂಗೀತ, ಹಾಡು, ನೃತ್ಯಗಳಿಂದ ಮಾಡಿದರೆ ಇವರು ಮೌನದಿಂದ ಮಾಡುತ್ತಾರೆ. ಏಕೆಂದರೆ ಅವರ ಪ್ರಕಾರ ದೇವರೆಂದರೆ ನಿಶ್ಯಬ್ದಶೂನ್ಯ. ಆತನನ್ನು ಮೌನದಿಂದಲೇ ಮಾತನಾಡಿಸುವುದು ಸುಲಭ. ನಕ್ಷ್‌ಬಂದಿಗಳ ಮತ್ತೊಂದು ಆಚರಣೆಯೆಂದರೆ, ಜನಜಂಗುಳಿಯಲ್ಲಿ 'ಒಂಟಿ'ಯಾಗಿರುವುದು ತಮ್ಮ ದಿನನಿತ್ಯದ ಪ್ರಾಪಂಚಿಕ ಕರ್ತವ್ಯಗಳನ್ನು ತಿರಸ್ಕರಿಸಿ ಸಂನ್ಯಾಸಿಯಾಗುವ ಬದಲು ಬದುಕಿನ ಮೌಲ್ಯಗಳಿಗೆ ಅಂಟಿಕೊಳ್ಳದೆ ಬದುಕಿನಲ್ಲಿ ತೊಡಗಿಸಿಕೊಳ್ಳಲು ನಕ್ಷ್‌ಬಂದಿ ಗುರುಗಳು ತಮ್ಮ ಶಿಷ್ಯರಿಗೆ ಬೋಧಿಸುತ್ತಾರೆ. ಹಾಗಾಗಿ ಈ ಗುಂಪಿನಲ್ಲಿ 'ಪಥಿಕರು' ಸಮಾಜದೊಂದಿಗೆ

ಬೆರೆತು, ಎಲ್ಲರಂತೆ ಮದುವೆಯಾಗಿ, ಕುಟುಂಬಗಳನ್ನು ಹೊಂದಿ ಉದ್ಯೋಗ ಮಾಡುತ್ತಿರುತ್ತಾರೆ. ನಕ್ಷ್‌ಬಂದಿಗಳು ಮೊದಲು ಕುಶಲಕರ್ಮಿಗಳು, ಚಮ್ಮಾರರು, ದರ್ಜಿಗಳು ಮತ್ತು ನೇಕಾರರಾಗಿದ್ದರು. ಬಹಾ ಅದ್-ದೀನ್ ನಕ್ಷ್‌ಬಂದ್ ಕುಂಬಾರನಾಗಿದ್ದನಂತೆ. ನಕ್ಷ್‌ಬಂದಿಗಳು ತಮ್ಮ ಸಮಾಜದ ಹಾಗೂ ಧರ್ಮದ ಚೌಕಟ್ಟಿನಲ್ಲಿಯೇ ಕೆಲಸ ಮಾಡುತ್ತಿರುತ್ತಾರೆ. ಹಾಗಾಗಿ ಕ್ರಿಶ್ಚಿಯನ್, ಹಿಂದೂ ಹಾಗೂ ಬೌದ್ಧರಲ್ಲೂ ಸಹ ಸೂಫಿಗಳಿದ್ದಾರೆ. ಇವರೆಲ್ಲಾ ತಮ್ಮ ದಿನನಿತ್ಯದ 'ಸಾಧಾರಣ' ಬದುಕಿನ ಜಂಜಾಟದಲ್ಲಿದ್ದರೂ ಸಹ ಸೂಕ್ಷ್ಮ ಆದರೆ ಅಷ್ಟೇ ಪ್ರಬಲವಾದ ತಮ್ಮ ಆಂತರಿಕ ಅನುಭಾವದ ಹಾದಿಯಲ್ಲಿ ಪಯಣಿಸುತ್ತಿರುತ್ತಾರೆ.

ಸೂಫ್ ಅಥವಾ ಸಫಾ?

'ಸೂಫಿ' ಪದದ ವ್ಯುತ್ಪತ್ತಿಯ ಮೂಲ ಹಿಂದಿನಿಂದಲೂ ಚರ್ಚಾಸ್ಪದ ವಿಷಯವಾಗಿದೆ. ಬಹಳಷ್ಟು ಜನ ಸೂಫಿಗಳು ಹೇಳುವಂತೆ ಸೂಫಿ, 'ಸಫಾ'- ಪರಿಶುದ್ಧತೆ ಎನ್ನುವ ಪದದಿಂದ ವ್ಯುತ್ಪತ್ತಿ ಹೊಂದಿದೆ. ಸೂಫಿ ಪ್ರಾಪಂಚಿಕ ಹೊಲಸುಗಳಿಂದ ಮುಕ್ತನಾಗಿ ಪರಿಶುದ್ಧನಾಗಿರುವವ ಎಂದು ಅವರು ಹೇಳುತ್ತಾರೆ. ಇನ್ನು ಕೆಲವರು ಅದು 'ಸಫ್'- ಶ್ರೇಣಿ/ದರ್ಜೆಯಿಂದ ಬಂದಿದೆ ಎನ್ನುತ್ತಾರೆ. ಅಂದರೆ ಸೂಫಿಗಳು ಧಾರ್ಮಿಕವಾಗಿ ಮೊದಲ ದರ್ಜೆಯಲ್ಲಿ ಇರುವವರು ಎಂದು. ಇನ್ನು ಕೆಲವರು ಹೇಳುವಂತೆ ಆ ಪದದ ಮೂಲ 'ಸುಫಾ'- ಬೆಂಚು. ಅಂದರೆ ಸೂಫಿ ಬದುಕು ಆರಂಭವಾದದ್ದು 'ಅಹಲ್ ಅಲ್-ಸುಫಾ'- ಬೆಂಚುಗಳ ಜನರಿಂದ. ಅಹಲ್ ಅಲ್-ಸುಫಾಗಳು ಬಡ ಮುಸ್ಲಿಮರು ಹಾಗೂ ತಲೆಯ ಮೇಲೆ ಸೂರಿಲ್ಲದಿದ್ದವರು. ಅವರು ಮದೀನಾದಲ್ಲಿ ಪ್ರವಾದಿ ಕಟ್ಟಿಸಿದ ಮಸೀದಿಯ ಮುಂದಿನ ಬೆಂಚುಗಳ ಮೇಲೆ ಆಶ್ರಯ ಪಡೆಯುತ್ತಿದ್ದುದರಿಂದ ಸೂಫಿ ಪದ ಬಂದಿತೆನ್ನುತ್ತಾರೆ. ಅಧ್ಯಯನಕಾರರ ಪ್ರಕಾರ ಈ ವ್ಯುತ್ಪತ್ತಿಗಳೆಲ್ಲಾ ಶಬ್ದ ರಚನೆಯ ಭಾಷಾಶಾಸ್ತ್ರದ ಪ್ರಕಾರ ಸರಿಯೆಂದು ಹೇಳಲಾಗುವುದಿಲ್ಲ. ಬಹಳಷ್ಟು ಜನ ಸೂಫಿಗಳು ನಂಬುವಂತೆ ಹಾಗೂ ಹೆಚ್ಚು ಪ್ರಚಲಿತದಲ್ಲಿರುವ ನಂಬಿಕೆಯ ಪ್ರಕಾರ 'ಸೂಫಿ' ಪದದ ಮೂಲ 'ಸೂಫ್'- ಉಣ್ಣೆ ಎನ್ನುವುದು. ಸೂಫಿಗಳು ಬಣ್ಣ ಹಾಕದ ಉಣ್ಣೆಯ ಉದ್ದನೆಯ ಗೌನಿನಂತಹ ಉಡುಪು ಧರಿಸುತ್ತಿದ್ದುದರಿಂದ ಸೂಫಿ ಪದ ಬಂದಿತೆಂದು ಹೇಳುತ್ತಾರೆ. ಸೂಫಿಗಳು ಈ ರೀತಿಯ ಉದ್ದನೆಯ ಉಣ್ಣೆಯ ಉಡುಪು ಧರಿಸುವುದನ್ನು ಆಗಿನ ಕ್ರಿಶ್ಚಿಯನ್ ಸಂನ್ಯಾಸಿಗಳಿಂದ ಕಲಿತರೆಂದು ಹೇಳಲಾಗುತ್ತದೆ. ಈ ರೀತಿ ಬಣ್ಣವಿರದ ಉಣ್ಣೆಯ ಉದ್ದನೆ ಉಡುಪು ಧರಿಸುತ್ತಿದ್ದುದು ಸರಳತೆ ಹಾಗೂ ವಿರಕ್ತತೆಯ ಸಂಕೇತವಾಗಿತ್ತು.

ಸತ್ಯದ ಪಥವನ್ನು ಆಯ್ದುಕೊಂಡವನಿಗೆ ಆತನ ಗುರುಗಳು '*ಖಿರ್ಕಾ*' (ಚಿಂದಿ, ಹರಕು ಬಟ್ಟೆ) ಹೊದಿಸುತ್ತಿದ್ದರು. *ಖಿರ್ಕಾ* 'ಫಕ್ರ್'ನ (ದಾರಿದ್ರ್ಯ, ಬಡತನ) ಸಂಕೇತವಾಗಿರುತ್ತಿತ್ತು. '*ಖಿರ್ಕಾ*'ಗೆ ಅರ್ಹನಾಗಬೇಕಾದಲ್ಲಿ *ಶೇಖ್*‌ರವರ (ಸೂಫಿ ಗುರು) ಮಾರ್ಗದರ್ಶನದಲ್ಲಿ ಹಲವಾರು ವರ್ಷಗಳು ಸಾಧನೆ ಮಾಡಬೇಕಾಗುತ್ತಿತ್ತು. ಆದರೆ

ಬಹಳಷ್ಟು ಸೂಫಿಗಳು ಈ ರೀತಿಯ ಧಿರಿಸಿನ ಅವಶ್ಯಕತೆಯನ್ನು ತಿರಸ್ಕರಿಸಿದ್ದರು. '*ಖಿರ್ಖಾ*' ಕೇವಲ ಬಾಹ್ಯ ಸಂಕೇತವಷ್ಟೆ. ಆದರೆ ನಿಜವಾದ ಸತ್ಯಾನ್ವೇಷಕನನ್ನು ಗುರುತಿಸುವುದು '*ಖಿರ್ಖಾ*'ದಿಂದಲ್ಲ, ಬದಲಿಗೆ ಆತನ '*ಹರ್ಖಾ*'(ಆಂತರಿಕ ಜ್ವಾಲೆ)ದಿಂದ ಎನ್ನುತ್ತಿದ್ದರು.

ಅನಲ್ ಹಖ್–ನಾನೇ ಪರಮ ಸತ್ಯ

ಅರಸುತ್ತಾ ಹೊರಟೆ
ಆತನನ್ನು ನಾನು
ಆತ ಶಿಲುಬೆಯ ಮೇಲಿರಲಿಲ್ಲ
ವಿಗ್ರಹಗಳಿದ್ದ ದೇವಾಲಯಗಳಲ್ಲೂ ಇರಲಿಲ್ಲ
ಪುರಾತನ ಪಗೋಡಾಗಳಲ್ಲಿಯೂ ಆತನ ಸುಳಿವಿರಲಿಲ್ಲ
ಕಾಬಾದ ನರನಾಡಿಗಳಲ್ಲಿ ಆತ ಕಾಣಲಿಲ್ಲ
ಶಿಶುವಿಹಾರಗಳಲ್ಲಾಗಲಿ, ವೃದ್ಧಾಶ್ರಮಗಳಲ್ಲಾಗಲಿ
ಆತ ಇರಲೇ ಇಲ್ಲ
ಇಬನ್ ಸಿನಾನನ್ನು ಕೇಳಿದೆ
ಆತನ ರಾಜ್ಯದಲ್ಲಿರುವವನೇ ಎಂದು
ಅಲ್ಲಿಯೂ ಸಿಗಲಿಲ್ಲ
ಬಳಲಿದ ನಾನು
ತಡಕಾಡಿದೆ ನನ್ನ ಎದೆಯೊಳಗೆ
ಆತ ಮತ್ತೆಲ್ಲೂ ಇರಲಿಲ್ಲ, ನನ್ನಲ್ಲೇ ಇದ್ದ.

–ರೂಮಿ

ಗುಲಾಮನೇ ದೊರೆ
ದೊರೆಯೇ ಗುಲಾಮ
ಇವರಲ್ಲಿ ಸಾಲಗಾರನ್ಯಾರೆಂದು
ಹೇಳುವುದು ಹೇಗೆ?

–ಇಬನ್ ಅಲ್–ಅರಾಬಿ

ಸೂಫಿ ಚರಿತ್ರೆಯಲ್ಲಿ ಬಾಗ್ದಾದಿನ ಮನ್ಸೂರ್ ಅಲ್–ಹಲ್ಲಾಜ್‌ನ (ಕ್ರಿ.ಶ. 858–922) ಬದುಕು ಒಂದು ಕ್ರಾಂತಿಕಾರಿ ಅಧ್ಯಾಯ. ಆತ '*ಅನಲ್ ಹಖ್*' ತತ್ವವನ್ನು ಮಂಡಿಸಿದ. ಅಂದರೆ 'ನಾನೇ ಪರಮ ಸತ್ಯ' ಎಂಬುದು. ಇದನ್ನು ಡಾ. ರಹಮತ್ ತರೀಕೆರೆ '*ಅಹಂ ಬ್ರಹ್ಮಾಸ್ಮಿ*' ಎಂಬ ಅದ್ವೈತ ತತ್ವಕ್ಕೆ ಸಮೀಕರಿಸುತ್ತಾರೆ. 'ಒಬ್ಬ ದೇವರಿಂದ ಮತ್ತೊಬ್ಬ ದೇವರನ್ನು ಹರಸುತ್ತಾ ಹೋದೆ. ಒಳಗಿನಂದ ನೀನೇ ನಾನು ಎಂಬ ದನಿ ಬಂದಿತು' ಎಂದು ಸೂಫಿಗಳು ಅ ಅನಲ್ ಹಖ್ ಅವಸ್ಥೆಯನ್ನು ವರ್ಣಿಸುತ್ತಾರೆ. ಅದನ್ನು ಹಲ್ಲಾಜ್ ಈ ರೀತಿ ಹೇಳುತ್ತಾನೆ:

ನಾನು ಪ್ರೀತಿಸುವ ಆತನು ನಾನೆ
ಒಂದೇ ದೇಹದ ಮನೆಯ ಎರಡು ಆತ್ಮಗಳು ನಾವು
ನನ್ನನ್ನು ನೋಡುವವರು ಆತನನ್ನೂ ಕಾಣುತ್ತಾರೆ
ಆತನನ್ನು ನೋಡುವವರು ನಮ್ಮಿಬ್ಬರನ್ನೂ ಕಾಣುತ್ತಾರೆ.

'ಎಲ್ಲ ಮಾನವರೂ ಆತ್ಮ ರೂಪಿಗಳು, ದೇವರು ಎಲ್ಲೂ ಇಲ್ಲ, ನಮ್ಮಲ್ಲೇ ಇದ್ದಾನೆ. ಆತನನ್ನು ಕಾಣಲು ಹಾಗೂ ಆತನೊಂದಿಗೆ ಬೆರೆಯಲು ನಮಾಜೆಂಬ ರಿವಾಜು ಬೇಕಿಲ್ಲ, ಒಳ್ಳೆಯ ಕೆಲಸ ಮಾಡುತ್ತ ದುಡಿದು ಜೀವಿಸಿದರೆ ಸಾಕು' ಎನ್ನುತ್ತಾನೆ ಹಲ್ಲಾಜ್. ನಿಜವಾದ ಮುಸಲ್ಮಾನನು ತನ್ನ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಮೆಕ್ಕಾಗೆ ಹೋಗಿಬರಬೇಕು ಎಂಬ ನಂಬಿಕೆಯನ್ನೂ ಸಹ ಹಲ್ಲಾಜ್ ತಿರಸ್ಕರಿಸಿದ. 'ದೇವರು ನಮ್ಮಲ್ಲೇ ಇರುವಾಗ ಆತನನ್ನು ಅರಸಿ ಮೆಕ್ಕಾಗೆ ಏಕೆ ಹೋಗಬೇಕು? ನಿಜವಾದ ಪ್ರೇಮಿಯ ಪ್ರಾರ್ಥನೆ ಒಂದು ಅಧಾರ್ಮಿಕ ಆಚರಣೆ' ಎಂದು ಹೇಳಿದ. ಹಲ್ಲಾಜ್‌ನ ಮಾತುಗಳು ಸಾಂಪ್ರದಾಯಕ ಮುಸಲ್ಮಾನರನ್ನು ರೊಚ್ಚಿಗೆಬ್ಬಿಸಿದವು. 922ರಲ್ಲಿ ವಿಚಾರಣೆ ನಡೆಸಿ ಆತನನ್ನು ಚಿತ್ರಹಿಂಸೆ ಕೊಟ್ಟು ಕೊಲ್ಲಲಾಯಿತು. ಸಾಯುವ ಸಮಯದಲ್ಲೂ ಸಹ ಹಲ್ಲಾಜನು ಧೃತಿಗೆಡಲಿಲ್ಲವಂತೆ. ಆತನ ದೇಹವನ್ನು ಸುಟ್ಟು ಬೂದಿಯನ್ನು ಟೈಗ್ರಿಸ್ ನದಿಗೆ ಚೆಲ್ಲಿ, ಆತನ ರುಂಡವನ್ನು ಆತನ ಅನುಯಾಯಿಗಳಿಗೆ ತೋರಿಸಲಾಯಿತು.

ಸುಕ್ರ್ ಮೂಲಕ ಫನಾ

ಸೂಫಿ ಅನುಭಾವಕ್ಕೆ ಆಗ ತುರ್ಕಿಸ್ಥಾನ ಮತ್ತು ಸುತ್ತಮುತ್ತಲಿ ಪ್ರದೇಶಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಬೌದ್ಧಧರ್ಮ ಪ್ರಭಾವ ಬೀರಿರಬಹುದೆಂದು ನಂಬಲಾಗಿದೆ. ತಮ್ಮ ಅಸ್ತಿತ್ವವನ್ನೇ ಕಡೆಗಾಣಿಸಿ, ತಮ್ಮ ಎಲ್ಲಾ ಆಸೆ ಆಕಾಂಕ್ಷೆಗಳನ್ನು ದೂರವಾಗಿಸಿಕೊಂಡು ಎಲ್ಲಾ ಪ್ರಾಪಂಚಿಕ ವಸ್ತು ವಿಷಯಗಳಿಂದ ದೂರವಾಗಿ ತಲುಪುವ ಅತ್ಯುನ್ನತ ನೈತಿಕ ಅವಸ್ಥೆಯನ್ನು ಸೂಫಿಗಳು '*ಫನಾ*' ಎನ್ನುತಾರೆ. ಅರಾಬಿಕ್ ಪದ '*ಫನಾ*' ಎಂದರೆ ನಶಿಸಿಹೋಗು ಅಥವಾ ಅಸ್ತಿತ್ವದಲ್ಲಿಲ್ಲದಂತಾಗು ಎಂದರ್ಥ. ಈ ಅವಸ್ಥೆ ಬೌದ್ಧರ '*ನಿರ್ವಾಣ*' ಸ್ಥಿತಿಯನ್ನು ಹೋಲುತ್ತದೆ. ಅಲ್ಲದೆ ಸೂಫಿ ಬದುಕಿನ ಮೇಲೆ ಪ್ಲಾಟೋನ ಆಧ್ಯಾತ್ಮಿಕ ಪ್ರೇಮ ಹಾಗೂ ದಾರ್ಶನಿಕ ತತ್ವಗಳ ಪ್ರಭಾವ, ಗ್ರೀಕರ ಮದ್ಯದೇವತೆ ಡೈಒನಿಸಸ್ಸಿನ ಆರಾಧನೆಯ ಬಗೆಗಿನ ಬರಹಗಳ ಪ್ರಭಾವವೂ ಇದೆಯೆನ್ನುತ್ತಾರೆ.

ಸಾಂಪ್ರದಾಯಕ ಇಸ್ಲಾಮಿನ ಮೂಲಭೂತ ಅವಶ್ಯಕತೆಗಳಾದ ನಮಾಜು, ಉಪವಾಸ, ಹಜ್ ಇವನ್ನು ಸೂಫಿಗಳು ಬೇರೆ ದೃಷ್ಟಿಯಿಂದ ನೋಡಿದರು. ಇವೆಲ್ಲಕ್ಕಿಂತ ಹೆಚ್ಚಾಗಿ ಹೃದಯದ ಭಾವನೆಗಳಿಗೆ ಅವರು ಪ್ರಾಮುಖ್ಯತೆ ಕೊಟ್ಟರು. ಪ್ರೀತಿ ಪ್ರೇಮಗಳಿಂದ ಮಾತ್ರ ದೇವರನ್ನು ಹತ್ತಿರದಿಂದ ಕಾಣಲು ಸಾಧ್ಯ ಎಂಬುದು ಅವರ ಗ್ರಹಿಕೆಯಾಗಿತ್ತು.

ಪ್ರೇಮ *(ಹಬ್)* ಎನ್ನುವುದು ನಮಗೆ ಸುಖ ಸಂತೋಷ ಕೊಡುವ ನಮ್ಮ ಒಡಹುಟ್ಟಿದ ಆಸೆ. ಈ ಆಸೆ ಅತಿಯಾದಾಗ ಭಾವೋನ್ಮಾದ(ಇಷ್ಕ್)ವಾಗುತ್ತದೆ. ನಮ್ಮ ದೇಹದ ವಿವಿಧ ಜ್ಞಾನೇಂದ್ರಿಯಗಳು ವಿವಿಧ ಅಂಗಗಳ ಮೂಲಕ ಸುಖ ಪಡೆಯುತ್ತವೆ.

ಆದರೆ ದೈಹಿಕತೆಯ ದೃಷ್ಟಿಯಲ್ಲಿ ನಮಗೆ ಸುಖ ಕೊಡುವ ಅಂಗ ಹೃದಯ(*ಖಲ್ಬ್*), ಈ ಅಂಗದ ಮೂಲಕ ಯಾವುದೇ ಜ್ಞಾನೇಂದ್ರಿಯದ ಮೂಲಕವೂ ಸಿಗದ ದೈವ ಪ್ರೇಮದ ಅವರ್ಣನೀಯ ಆನಂದ ಸಿಗುತ್ತದೆ ಹಾಗೂ ಅದೇ ಜ್ಞಾನದ ಮೂಲಸೆಲೆ ಎನ್ನುತ್ತಾರೆ ಸೂಫಿಗಳು.

ಪ್ರೇಮದ ಹಾದಿಯ ಪಥಿಕ ನಾನು
ಈ ಪ್ರೇಮದ 'ಕಾರವಾನ್' ಎಲ್ಲಿಗೆ ಕರೆದೊಯ್ಯುವುದೋ
ಅಲ್ಲಿದೆ ನನ್ನ ಧರ್ಮ, ನನ್ನ ಶ್ರದ್ಧೆ,

–ಇಬನ್ ಅಲ್–ಅರಾಬಿ

ಅಲ್ಲದೆ ಈ ಪ್ರೇಮದ ಉನ್ಮಾದದ (ಸುಕ್ರ್) ಮೂಲಕ ತಮ್ಮನ್ನು ತಾವೇ ಕಳೆದುಕೊಂಡು '*ಫನಾ*' ಅವಸ್ಥೆ ತಲುಪುತ್ತಾರೆ. ಈ ಮುಂದಿನ ಪದ್ಯ '*ಫನಾ*' ಹಾಗೂ '*ಬಖಾ*' (ವಿಶ್ವ ಪ್ರಜ್ಞೆ) ಅವಸ್ಥೆಗಳನ್ನು ಸ್ಫುಟವಾಗಿ ಚಿತ್ರಿಸುತ್ತದೆ:

ನನಗೆ ನಾನೇ ಅಪರಿಚಿತ
ಈಗ ದೇವರ ಹೆಸರಲ್ಲಿ ನಾನೇನು ಮಾಡಲಿ?
ಶಿಲುಬೆಯನ್ನು ಹೊಗಳುವುದಿಲ್ಲ
ಅರ್ಧಚಂದಿರರನ್ನೂ ಮೆಚ್ಚುವುದಿಲ್ಲ
ನಾನೂ ಕ್ರೈಸ್ತನೂ ಅಲ್ಲ, ಯೆಹೂದಿಯೂ ಅಲ್ಲ
ನನಗೆ ಪೂರ್ವವಿಲ್ಲ ಪಶ್ಚಿಮವಿಲ್ಲ
ಭೂಮಿಯಾಗಲಿ ಸಾಗರವಾಗಲಿ ನನ್ನ ಮನೆಯಲ್ಲ
ನನಗೆ ಕುಟುಂಬವಿಲ್ಲ
ದೇವತೆಗಳಾಗಲಿ ಭೂತ ಪಿಶಾಚಿಗಳಾಗಲಿ ನನ್ನವರಲ್ಲ
ಬೆಂಕಿಯಿಂದ ನನ್ನನ್ನು ರೂಪಿಸಲಾಗಿಲ್ಲ
ಸಾಗರದ ನೊರೆಯಿಂದಲೂ ಅಲ್ಲ
ನನ್ನ ರೂಪಕ್ಕೆ ಧೂಳು ಕಾರಣವಲ್ಲ
ಮುಂಜಾನೆಯ ಮಂಜಿನ ಹನಿಯೂ ಅಲ್ಲ
ಚೀನಾ ನನ್ನ ತವರು ಮನೆಯಲ್ಲ
ಬುಲ್ಗಾರ್ ಅಥವಾ ಸಕ್‌ಸೀನ್ ಸಹ ಅಲ್ಲ
ಪಂಚನದಿಗಳು ಹರಿಯುವ ಇಂಡಿಯಾದಲ್ಲಿ ನಾನು ಬೆಳೆಯಲಿಲ್ಲ
ಇರಾಖ್ ಅಥವಾ ಕೊರಸಾನ್‌ನಲ್ಲೂ ಅಲ್ಲ
ಈ ಪ್ರಪಂಚವೇ ನನ್ನ ನೆಲೆಯಲ್ಲ, ಸ್ವರ್ಗ ನರಕಗಳೂ ಅಲ್ಲ
ಈಡನ್ ಅಥವಾ ರಿಜ್ವಾನ್‌ನಿಂದ ನಾನು ಉದುರಿ ಬೀಳಲಿಲ್ಲ
ಅದಮ್‌ನ ವಂಶಸ್ಥನೂ ನಾನಲ್ಲ
ಎಲ್ಲ ಜಾಗಗಳನ್ನೂ ಮೀರಿದ ಜಾಗದಲ್ಲಿ

ಯಾವ ಕುರುಹಿನ ನೆರಳೂ ಬೀಳದ ಜಾಡಿನಲ್ಲಿ
ನನ್ನ ದೇಹ ಹಾಗೂ ಆತ್ಮಗಳು
ಅತೀತವಾಗಿ ಜೀವಿಸುತ್ತಿವೆ
ನನ್ನ ಪ್ರಿಯತಮನ ಆತ್ಮದಲ್ಲಿ.

ದೇವರೊಂದಿಗೆ ಸಂಪೂರ್ಣ ಸಮ್ಮಿಳಿತವಾಗುವುದಕ್ಕೆ ತಮ್ಮ ಅಸ್ತಿತ್ವವನ್ನು ಸಂಪೂರ್ಣ ಇಲ್ಲದಂತಾಗಿಸಿಕೊಳ್ಳಬೇಕೆಂದು ಸೂಫಿಗಳು ಹೇಳುತ್ತಿದ್ದರು. ಸೂಫಿಯೊಬ್ಬ 'ಪ್ರಾಪಂಚಿಕ ವಿಷಯಗಳನ್ನು ದೂರವಾಗಿಸಿಕೊಂಡು, ಸಂಪೂರ್ಣ 'ಕಾಯಾ ವಾಚಾ ಮನಸಾ' ಪರಿಶುದ್ಧನಾಗಿ ದೇವರ ಪ್ರೇಮ ಸಾಗರದಲ್ಲಿ ತನ್ನನ್ನು ತಾನೇ ಕಳೆದುಕೊಂಡಾಗ ಆ ಸೂಫಿಯ ಸ್ವಂತ ಅಸ್ತಿತ್ವ ಇಲ್ಲವಾಗಿದೆ ಅಥವಾ ಆತ '*ಫನಾ*' ತಲುಪಿದ್ದಾನೆ ಎನ್ನಲಾಗುತ್ತಿತ್ತು.

ಕೆಲವು ಸೂಫಿಗಳ ಪ್ರಕಾರ '*ಫನಾ*' ಒಂದು ನಕಾರಾತ್ಮಕ ಅವಸ್ಥೆ. ಪ್ರಾಪಂಚಿಕ ಇಚ್ಛೆಗಳನ್ನು ತ್ಯಜಿಸಿ ಮಾನವ ಗುಣದ ನ್ಯೂನತೆಗಳನ್ನು ತಿರಸ್ಕರಿಸುವುದು ಒಬ್ಬ ವಿರಾಗಿಗೆ ಅತ್ಯವಶ್ಯಕವಾದರೂ, ಸೂಫಿ ಸತ್ಯಾನ್ವೇಷಣೆಯ ಪಥದಲ್ಲಿ ಹಾದುಹೋಗಲು ಅಷ್ಟು ಮಾತ್ರ ಸಾಲದು. ಸೂಫಿ ಪಥವನ್ನು ಆಯ್ದುಕೊಂಡವನು ತನ್ನ ಸ್ವಂತ ಅಸ್ತಿತ್ವ ಇಲ್ಲವಾಗಿಸಿಕೊಳ್ಳುವ ಮಾನಸಿಕ ಅವಸ್ಥೆಯನ್ನೇ ಇಲ್ಲವಾಗಿಸಿಕೊಳ್ಳಬೇಕು (ಫನಾ 'ಅನ್ ಅಲ್–ಫನಾ). ಈ ರೀತಿ ಎಲ್ಲಾ ಮಾನವ ವಿಶೇಷಣಗಳನ್ನು ತ್ಯಜಿಸಿ, ಪ್ರಾಪಂಚಿಕ ಅಸ್ತಿತ್ವದ ಅರಿವನ್ನೇ ಇಲ್ಲವಾಗಿಸಿಕೊಳ್ಳುವ ಮಾನಸಿಕ ಅವಸ್ಥೆಯನ್ನು ತಲುಪಿದಾಗ ದೇವರ ದಯೆಯಿಂದ ಅವನ ಆತ್ಮ ಬೇರೊಂದು ಆಯಾಮದಲ್ಲೇ ಎಚ್ಚೆತ್ತುಕೊಳ್ಳುತ್ತದೆ ಹಾಗೂ ಆಗ ಅಂಥವನಿಗೆ ದೈವಾಂಶ ರಹಸ್ಯ ವಿಶೇಷಣಗಳು ತನ್ನಂತಾನೆ ತೆರೆದುಕೊಳ್ಳುತ್ತವೆ ಎನ್ನುತ್ತಾರೆ. ಈ '*ಬಖಾ*' ಅವಸ್ಥೆ ತಲುಪಿದ ನಂತ ಸೂಫಿ ದೈವದೊಂದಿಗಿನ ನೇರ ಸಮ್ಮಿಳಿತಕ್ಕೆ ತಯಾರಾಗುತ್ತಾನೆ.

ಪ್ರೇಮದ ಹಾದಿಯ ಪಥಿಕರು

ನಾನು ನಿನ್ನನ್ನು ಚುಂಬಿಸಬೇಕು
ಆ ಚುಂಬನದ ಬೆಲೆ ನನ್ನ ಸಾವೆಂದು ನನಗೆ ಗೊತ್ತಿದೆ
ನೋಡಿಲ್ಲಿ, ನನ್ನ ಪ್ರೇಮ
ನನ್ನ ಬದುಕಿನೆಡೆಗೆ ಸಂತೋಷದಿಂದ ಓಡಿ ಬರುತ್ತಿದೆ
ಕೂಗುತ್ತಿದೆ, ನಡೆ ಆ ಸಾವು ಪಡೆ

–ರೂಮಿ

ಧಾರ್ಮಿಕ ಚರಿತ್ರೆಯ ಆರಂಭದಿಂದಲೂ ಕಾಮ ಮತ್ತು ಧರ್ಮಗಳು ಒಂದರಲ್ಲೊಂದು ಹಾಸುಹೊಕ್ಕಾಗಿ ಹರಿದುಬಂದಿದೆ. ಧರ್ಮದ ತಿರುಳಿನಲ್ಲಿ ಕಾಮ ಅಡಗಿರಬಹುದು ಅಥವಾ ಅದಕ್ಕೆ ಮಡಿವಂತಿಕೆಯ ಮುಸುಕು ಹೊದಿಸಿರಬಹುದು, ಆದರೆ ಧರ್ಮ ಮತ್ತು ಆಧ್ಯಾತ್ಮದ ಅಂತರಂಗದ ಭಾಗವಾಗಿ ಕಾಮವಿರುವುದು ಸತ್ಯ. ಆ 'ಕಾಮ' ದೈಹಿಕ ಕಾಮವನ್ನು ಮೀರಿದುದು. ಅದಕ್ಕೆ ಅಶ್ಲೀಲದ ಯಾವುದೇ

ಸೋಂಕಿರುವುದಿಲ್ಲ, ಬದಲಿಗೆ ಕಾಮದ ಆಧ್ಯಾತ್ಮೀಕರಣದ ಹಾದಿಯಲ್ಲಿ ಸೌಂದರ್ಯಪ್ರಜ್ಞೆಯ ಬೆಳಕು ಬೀರುವ ದಾರಿದೀಪವಾಗುತ್ತದೆ. ಇಲ್ಲಿ ಕಾಮದ ಮೂಲಭೂತ ವಾಸನೆಗಳು ಭಕ್ತಿ, ಕಾವ್ಯ, ಸಂಗೀತ ಹಾಗೂ ಪ್ರೀತಿ ಪ್ರೇಮಗಳ ಹೂವಾಗಿ ಅರಳುತ್ತವೆ. ಕಾಮ, ದೇವರೊಂದಿಗಿನ ಮಿಲನದ ಭಕ್ತಿಯ ಪರಾಕಾಷ್ಠೆಯನ್ನು ಸಂಕೇತಿಸುತ್ತದೆ.

ಪವಿತ್ರ ಕುರಾನಿನ ಕೇಂದ್ರಬಿಂದುವೂ ಸಹ ಪ್ರೀತಿ ಪ್ರೇಮವಾಗಿದೆ. ಇಸ್ಲಾಂನ ಆರಂಭದ ಸಮಯದಲ್ಲಿಯೇ ಸೂಫಿಗಳು ತಮ್ಮ ಅನುಭಾವದ ಅನುಭವಗಳಿಗೆ 'ಕಾಮ'ವನ್ನು ನವಿರಾಗಿ ಮಿಶ್ರಮಾಡತೊಡಗಿದರು. ಸೂಫಿಗಳು ತಮ್ಮ ಪರಿಶುದ್ಧ ಹಾಗೂ ಆಧ್ಯಾತ್ಮಿಕ ಅನುಭಾವದ ಅನುಭವಗಳನ್ನು ವರ್ಣಿಸಲು ಶೃಂಗಾರದ/ಪ್ರಣಯದ ಸಂಕೇತಗಳನ್ನು ಅವಿಚ್ಛಿನ್ನವಾಗಿ ಬಳಸುತ್ತಾರೆ. ನಿಜವಾದ ಪ್ರೇಮಿ ಹೇಗೆ ತನ್ನ ಪ್ರಿಯಕರ ಅಥವಾ ಪ್ರಿಯತಮೆಯನ್ನು ಧ್ಯಾನಿಸುತ್ತಿರುತ್ತಾನೆಯೋ, ಅದೇ ರೀತಿ ನಿಜವಾದ ಅನುಭಾವಿ ದೇವರನ್ನು ಬಿಟ್ಟು ಮತ್ತೇನನ್ನೂ ಧ್ಯಾನಿಸುವುದಿಲ್ಲ ಎನ್ನುತ್ತಾರೆ. ಸ್ತ್ರೀ ಪ್ರೇಮದ ಪರಿಭಾಷೆಯನ್ನು ಬಳಸಿ ಅನುಭಾವ ತತ್ವವನ್ನು ಸೂಫಿ ಕವಿಗಳು ಬೆಳೆಸುತ್ತಾ ಹೋದರು. 'ಹೆಣ್ಣನ್ನು ಪ್ರೇಮಿಸದೆ ದೈವವನ್ನು ಪ್ರೇಮಿಸಲು ಸಾಧ್ಯವಿಲ್ಲ' ಎಂದು ಜಲಾಲ್ ಅಲ್–ದಿನ್ ರೂಮಿ ಹೇಳಿದ.

ಸೂಫಿ ತತ್ವಕ್ಕೆ ಪ್ರೀತಿಪ್ರೇಮದ ಛಾಪು ಕೊಟ್ಟ ಹಿರಿಮೆ ರಾಬಿಯ ಅಲ್ ಅದವಿಯ್ಯಳಿಗೆ (ಕ್ರಿ.ಶ.717–801) ಸಲ್ಲುತ್ತದೆ. ಆಕೆಯ ಪ್ರೇಮ ಬರೇ ಭಕ್ತಿಪೂರ್ವಕ ಪ್ರೇಮವಷ್ಟೇ ಆಗಿರಲಿಲ್ಲ. ಅದರ ಗುರಿ ದೇವರೊಂದಿಗೆ ಸಂಪೂರ್ಣ ಒಂದಾಗುವ ರಾಗೋದ್ರೇಕದ ಅಭಿಲಾಷೆಯಾಗಿತ್ತು. ಆಕೆ ದೇವನೊಬ್ಬನ ಪ್ರಿಯತಮೆಯಾಗಿದ್ದಳು ಮಾತ್ರ ಹಾಗೂ ತನ್ನ ಪ್ರೇಮವನ್ನು ಯಾರೊಂದಿಗೂ ಹಂಚಿಕೊಳ್ಳಲು ತಯಾರಿರಲಿಲ್ಲ, ಪ್ರವಾದಿಯೊಂದಿಗೂ ಸಹ. ಹಸನ್ ಅಲ್ ಬಸ್ರಿ ಎಂಬಾತ ಆಕೆಯನ್ನು ಮದುವೆಯಾಗಲು ಪ್ರಸ್ತಾಪ ತಂದಾಗ, 'ನಾನು ಸೇರಿರುವುದು ದೇವನೊಬ್ಬನಿಗೆ ಮಾತ್ರ' ಎಂದು ಆತನ ಪ್ರಸ್ತಾಪವನ್ನು ತಿರಸ್ಕರಿಸಿದಳು. ಆಕೆಯ ಕಾಲದ ಧಾರ್ಮಿಕ ಕಟ್ಟಳೆಗಳನ್ನು ಮೀರಿದ ಆಕೆಯ ಪ್ರಾರ್ಥನೆ ಹೀಗಿತ್ತು. 'ಹೋ, ದೇವರೇ, ನಾನು ನರಕದ ಹೆದರಿಕೆಯಿಂದ ನಿನ್ನನ್ನು ಪೂಜಿಸಿದರೆ ನನ್ನನ್ನು ನರಕದಲ್ಲಿ ಸುಡು; ಸ್ವರ್ಗ ಪಡೆಯುವ ಆಸೆಯಿಂದ ನಿನ್ನನ್ನು ಪೂಜಿಸಿದರೆ ಸ್ವರ್ಗಕ್ಕೇ ನನ್ನನ್ನು ಸೇರಿಸಬೇಡ; ಆದರೆ ನಾನು ನಿನ್ನನ್ನು ನಿನಗಾಗಿ ಮಾತ್ರ ಪೂಜಿಸಿದರೆ ನಿನ್ನ ಅಸೀಮ ಸೌಂದರ್ಯವನ್ನು ನನ್ನಿಂದ ಅವಿತಿಡಬೇಡ'.

ರಾಬಿಯ ಸಣ್ಣ ಹುಡುಗಿಯಾಗಿರುವಾಗಲೇ ಅವಳನ್ನು ಕದ್ದು ಗುಲಾಮಳನ್ನಾಗಿ ಮಾರಾಟ ಮಾಡಿದ್ದರು. ಅವಳು ದೊಡ್ಡವಳಾದ ನಂತರ ಅವಳ ಆತ್ಮಶುದ್ಧತೆ ಹಾಗೂ ದೇವರ ಮೇಲಿನ ನಿಸ್ವಾರ್ಥ ಪ್ರೇಮದಿಂದಾಗಿ ಅವಳನ್ನು ಕೊಂಡಾತ ಆಕೆಯನ್ನು ಗುಲಾಮಗಿರಿಯಿಂದ ಮುಕ್ತಳನ್ನಾಗಿ ಮಾಡಿದ್ದ. ಆಕೆ ಮದುವೆಯಾಗದೆ ಆತ್ಮದಂಡನೆಯಿಂದ, ಭಿಕ್ಷೆಯಿಂದ ಬದುಕುತ್ತಿದ್ದಳು. ಆಕೆ ದೇವರನ್ನು 'ಹೋ ದೇವರೇ, ನನಗೆ ಕೊಡಬೇಕೆಂದಿರುವ ಸುಖಸಂತೋಷಗಳನ್ನೆಲ್ಲಾ ನಿನ್ನನ್ನು ದ್ವೇಷಿಸುವವರಿಗೆ ಕೊಟ್ಟುಬಿಡು, ನನಗೆ ಮುಂದಿನ ಜನ್ಮಗಳಲ್ಲಿ ಕೊಡಬೇಕೆಂದಿರುವ ಸುಖಸಂತೋಷಗಳನ್ನು ನಿನ್ನನ್ನು ಪ್ರೀತಿಸುವವರಿಗೆ

ಕೊಟ್ಟುಬಿಡು, ನೀನೇ ನನಗಿರುವಾಗ ನನಗೆ ಮತ್ತೇನೂ ಬೇಡ' ಎಂದು ಪ್ರಾರ್ಥಿಸುತ್ತಿದ್ದಳಂತೆ.

ಸೂಫಿ ತತ್ವದಲ್ಲಿ ಪ್ರೇಮರಾಗಗಳ ಮಧುರತೆಯನ್ನು ನವಿರಾಗಿ ಬೆರೆಸುವುದನ್ನು ರಾಬಿಯ ಆರಂಭಿಸಿದ್ದರೂ ಸಹ ಅದರ ಅವಿಚ್ಛಿನ್ನ ಬಳಕೆಯಾದದ್ದು ಮನ್ಸೂರ್ ಹಲ್ಲಾಜ್‌ನಿಂದ. ಆತ ಆಗಿನ ಸಾಂಪ್ರದಾಯಕತೆ, ಮಡಿವಂತಿಕೆಯನ್ನು ಬದಿಗೊತ್ತಿ ದೇವರೊಂದಿಗಿನ ಮಿಲನದ ಬಗೆಗೆ ನೇರವಾಗಿ ಮಾತನಾಡತೊಡಗಿದ. ತನ್ನನ್ನು ಸೃಷ್ಟಿಸಿದ, ತನಗಿಂತ ವಿಭಿನ್ನವಾಗಿರುವ ಮತ್ತೊಂದು ಚೈತನ್ಯವನ್ನು ರಾಬಿಯ ಪ್ರೀತಿಸತೊಡಗಿದರೆ, ಹಲ್ಲಾಜ್ ತನ್ನದೇ ಪ್ರತಿರೂಪವಾದ ದೇವರನ್ನು ಪ್ರೀತಿಸಿದ– 'ಒಂದೇ ದೇಹದ ಎರಡು ಆತ್ಮಗಳು ನಾವು' ಎಂದ. ಆಗ ಕಣ್ಣೆದುರಿಗಿನ ಮಾನವ ಸೌಂದರ್ಯ ದೈವಿಕ ಸೌಂದರ್ಯ ಪ್ರಜ್ಞೆಯನ್ನು ನವಿರಾಗಿ ಎಚ್ಚರಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ನಂಬಲಾಗಿತ್ತು. ಹಲ್ಲಾಜ್ ಹಲವಾರು ಬಾರಿ ಅನುಭಾವಿ ಮತ್ತು ದೇವರ ನಡುವಿನ ಸಂಬಂಧ ಪ್ರೇಮಿಗಳ ನಡುವಿನ ಸಂಬಂಧ ಎಂದು ಹೇಳುತ್ತಿದ್ದ. ಇಬ್ಬರು ಪ್ರೇಮಿಗಳ ಸಂಪೂರ್ಣ ಸಮಾಗಮದ ಪ್ರಜ್ಞೆ (ತಮಹಿದ್) ಹಲ್ಲಾಜ್‌ನನ್ನು ದೇವರ ಕುರಿತು ಹೆಚ್ಚು ಮೋಹಪರವಶತೆಯಿಂದ ಮಾತನಾಡಿಸತೊಡಗಿತು. ಹಲ್ಲಾಜ್‌ನ ಹೇಳಿಕೆಗಳಿಂದ ಆಗಿನ ಸಂಪ್ರದಾಯವಾದಿಗಳು ರೊಚ್ಚಿಗೆದ್ದು ಆತನನ್ನು ಕೊಂದುಹಾಕಿದರೆಂದು ಈಗಾಗಲೇ ಹೇಳಲಾಗಿದೆ.

ನಂತರ ಬಂದ ಅಲ್–ಗಜಾಲಿ, 'ಹಲ್ಲಾಜ್ ಹೇಳಿದುದರಲ್ಲಿ ತಪ್ಪಿಲ್ಲ, ಆದರೆ ಅನುಭಾವದ ನಿರಂತರ ಸತ್ಯವನ್ನು ಅದನ್ನು ಅರಿತುಕೊಳ್ಳುವ ಮನಃಸ್ಥಿತಿ ತಲುಪಿಲ್ಲದ ಜನರಿಗೆ ಆತ ಬೋಧಿಸಿದುದರಿಂದ ಅವರು ಅದನ್ನು ತಪ್ಪಾಗಿ ಗ್ರಹಿಸಿದರು' ಎಂದು ಹೇಳಿದ.

ಎಲ್ಲ ಧರ್ಮಗಳ ರೀತಿ ರಿವಾಜುಗಳ ಪೂಜೆ ಪುನಸ್ಕಾರಗಳಿಗಿಂತ ಪರಸ್ಪರ ಪ್ರೇಮವೇ ಅತ್ಯುತ್ತಮ ಪೂಜೆ; ಎಲ್ಲ ಧರ್ಮಗಳ ಅಂತರಾಳ ಚೈತನ್ಯವೇ ಪ್ರೇಮ ಎಂದರು ಸೂಫಿಗಳು. ಪರಸ್ಪರ ದೂರ ಸರಿದಿರುವ ಎಲ್ಲ ಧರ್ಮಗಳನ್ನು ಪ್ರೀತಿಪ್ರೇಮಗಳು ಒಂದುಗೂಡಿಸಬಲ್ಲವು ಎನ್ನುವುದನ್ನು ರೂಮಿ ತನ್ನ ಪದ್ಯದಲ್ಲಿ ಹೀಗೆ ಹೇಳುತ್ತಾನೆ.

ಎಲ್ಲರೂ ಪೂಜಿಸುವುದು ನಿನ್ನೊಬ್ಬನನ್ನು ಮಾತ್ರ
ಏಕೆಂದರೆ ನೀನಿರುವುದು ಒಬ್ಬನೆ
ಹಾಗಿರುವಾಗ ಎಲ್ಲ ಧರ್ಮಗಳೂ
ಒಂದೇ ಧರ್ಮವಲ್ಲವೆ?

'ಇಸ್ಲಾಂ ಸೇರಿದಂತೆ ಎಲ್ಲ ಧರ್ಮಗಳ ಧಾರ್ಮಿಕ ಮೌಲ್ಯಗಳು ಕೇವಲ ಸಾಪೇಕ್ಷ ಅಸ್ತಿತ್ವವನ್ನು ಹೊಂದಿವೆ; ಆಯಾ ಧರ್ಮಗಳ ಹಿರಿಮೆ, ಪ್ರೀತಿ ಪ್ರೇಮವನ್ನು ಉತ್ತೇಜಿಸುವುದರಲ್ಲಿದೆ' ಎನ್ನುತ್ತಾರೆ ಸೂಫಿಗಳು

ಸೂಫಿ ಕಾವ್ಯ ಹಾಗೂ ಬಖಾ

ಇಸ್ಲಾಂನ ಚರಿತ್ರೆಯಲ್ಲಿ ಸೂಫಿ ಸಾಹಿತ್ಯದ ಪ್ರಾಮುಖ್ಯತೆಯನ್ನು ಅಂದಾಜು ಮಾಡುವುದು ಸಾಧ್ಯವಿಲ್ಲ. ಸೂಫಿ ಸಾಹಿತ್ಯ, ಅದರಲ್ಲೂ ಅನುಭಾವದ ಪ್ರೇಮ ಕಾವ್ಯ ಅರಾಬಿಕ್, ಪರ್ಷಿಯನ್, ಟರ್ಕಿಷ್ ಮತ್ತು ಉರ್ದು ಭಾಷೆಗಳಲ್ಲಿ ತನ್ನ ಪದ ಲಾಲಿತ್ಯ ಅರಳಿಸಿದ್ದು ಆ ಭಾಷೆಗಳ ಸುವರ್ಣ ಕಾಲವೆಂದು ಹೇಳಬಹುದು. ಸೂಫಿಗಳು ಕಾವ್ಯ ಹಾಗೂ ಸಂಗೀತದಂತಹ ಸೃಜನಶೀಲ ಕಲೆಯನ್ನು ಮನದಲ್ಲಿ ಧಾರ್ಮಿಕ ಭಾವನೆಗಳನ್ನು ನವಿರಾಗಿ ಎಬ್ಬಿಸಲು ಬಳಸುತ್ತಿದ್ದರು. ಅದಕ್ಕಾಗಿ 'ಸಮಾ'ಗಳೆಂಬ ಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. ಕಾವ್ಯ ಹಾಗೂ ಸಂಗೀತ ಕೇಳುತ್ತಾ ಉನ್ಮಾದಗೊಂಡು ಹುಚ್ಚೆದ್ದು ಕುಣಿಯುತ್ತಿದ್ದರು. ಅವರ ಕಾವ್ಯ ಸಾಮಾನ್ಯವಾಗಿ ಪ್ರಣಯ/ಶೃಂಗಾರಮಯವಾಗಿರುತ್ತಿದ್ದವು. ಸೂಫಿ ಕಾವ್ಯದ ಓದುಗನಿಗೆ ಅಥವಾ ಕೇಳುವವನಿಗೆ ರಚನಾಕಾರನ ಉದ್ದೇಶ ತಿಳಿದಿರದಿದ್ದಲ್ಲಿ ತಾವು ಓದುತ್ತಿರುವುದು/ಕೇಳುತ್ತಿರುವುದು ದೈವಪ್ರೇಮದ ಕಾವ್ಯವೋ ಅಥವಾ ಪ್ರಣಯ ಕಾವ್ಯವೋ ಎಂಬುದು ತಿಳಿಯಲಾರದಂತಿರುತ್ತದೆ. ಆದರೆ ಸೂಫಿಯೊಬ್ಬ ಅದರಲ್ಲಿನ ಅಗಲಿಕೆಯ ನೋವು ಅಥವಾ ಮಿಲನದ ಉನ್ಮಾದವನ್ನು ದೈವದೊಂದಿಗಿನ ಅಗಲಿಕೆ ಅಥವಾ ಮಿಲನಕ್ಕೆ ಸಮೀಕರಿಸಿಕೊಳುತ್ತಾನೆ. ಸಂಗೀತ ಮತ್ತು ನೃತ್ಯ ಹೃದಯದಲ್ಲಿ ಸುಪ್ತವಾಗಿರುವ ಪ್ರೀತಿಪ್ರೇಮವನ್ನು – ಅದು ಪ್ರಾಪಂಚಿಕ, ದೈಹಿಕ ಸುಖದ ಪ್ರೇಮವಾಗಿರ ಬಹುದು ಅಥವಾ ದೈವಿಕ, ಅಧ್ಯಾತ್ಮದ ಪ್ರೇಮವಾಗಿರಬಹುದು– ಅವುಗಳನ್ನು ಕೆರಳಿಸುತ್ತದೆಂದು ಅಲ್–ಗಜಾಲಿ ಹೇಳಿದ. ಸೂಫಿಗಳು ಹೇಳುವಂತೆ ದೇವರ ಮೇಲಿನ ಪ್ರೇಮವನ್ನು ವ್ಯಕ್ತಪಡಿಸಲು ಅವರಿಗೆ ಪ್ರಣಯದಂತಹ ಉನ್ಮಾದದ ಸಂಕೇತ ಮತ್ತೊಂದು ಸಿಗುವುದಿಲ್ಲ.

ಮದಿರೆ, ಹಿಲಾಲು* ಹಾಗೂ ಸೌಂದರ್ಯ
ವಾಸ್ತವದ ರೂಪಗಳು
ಎಲ್ಲ ರೂಪಗಳ ಅಭಿವ್ಯಕ್ತತೆಯೂ ಅವೇ
ಮದಿರೆ ನಿನ್ನ ಪಯಣದ ಹಾದಿ
ಹಿಲಾಲು ನಿನಗೆ ದಾರಿದೀಪ
ಸೌಂದರ್ಯವನ್ನು ಅಪ್ಪಿಕೋ ಬಿಡಬೇಡ
ಯಾರಿಂದಲೂ ಅದನ್ನು ಅವಿತಿಟ್ಟಿಲ್ಲ
(*ಹಿಲಾಲು=ದೊಡ್ಡ ದೀವಟಿಗೆ)

*   *   *

ಮದಿರೆ, ಹಿಲಾಲು ಮತ್ತು ಸೌಂದರ್ಯ
ಎಲ್ಲವೂ ನಿನ್ನೆದುರಿಗಿದೆ
ಸೌಂದರ್ಯವನ್ನು ಅಪ್ಪಿಕೊಳ್ಳಲು ಉದಾಸೀನ ಬೇಡ
ಸಾವಿನ ಮದಿರೆಯನ್ನು
ನಿನ್ನ ಆತ್ಮಕ್ಕಾಗಿ ಗಟಗಟನೆ ಕುಡಿದುಬಿಡು

ನಿನ್ನ ಆತ್ಮದ ಒಡೆತನದಿಂದ
ಬಿಡುಗಡೆ ಹೊಂದುವೆ
ಮದಿರೆಯನ್ನು ಚಪ್ಪರಿಸು
ಏಕೆಂದರೆ ಅದರ ಬಟ್ಟಲು ಗೆಳೆಯನ ಮುಖ
ಅದರ ಹಿಡಿ ಅಮಲೇರಿದ ಅವನ ಕಣ್ಣು.

*   *   *

ಗೆಳೆಯಾ
ಎಲ್ಲೆಲ್ಲಿ ನಿನ್ನನ್ನು ಅರಸಿದೆ
ಕೇಳಿದೆ ಕಂಡಕಂಡವರನ್ನೆಲ್ಲಾ
ಕೊನೆಗೆ
ನನ್ನ ಮನದ ಕನ್ನಡಿಯಲ್ಲಿನ ಬಿಂಬ ನೋಡಿದಾಗ
ನೀನೆಂಬುವವನು ನಾನೋ
ಅಥವಾ ನಾನೆಂಬುವವನು ನೀನೋ?
ನಿನ್ನನ್ನು ಹುಡುಕಿದೆನೆಂದು ನೆನಪಾದಗಲೆಲ್ಲಾ
ನಾಚಿಕೆಯಾಗುತ್ತದೆ.

–ಫಕ್ರುದ್ದೀನ್ ಅರಾಬಿ

*   *   *

ತನ್ನ ಪ್ರಿಯತಮೆಯ ಮನೆಯ ಬಾಗಿಲು ತಟ್ಟಿದ ಆತ
'ಯಾರದು?' ಒಳಗಿನಿಂದ ದನಿ ಕೇಳಿತು
'ನಾನು' ಎಂದನಾತ
'ಈ ಮನೆಯಲ್ಲಿ ಇಬ್ಬರಿಗೆ ಸ್ಥಳವಿಲ್ಲ'
ಬಾಗಿಲು ತೆರೆಯಲೇ ಇಲ್ಲ.
ಹತಾಶ ಪ್ರಿಯಕರ ಮರುಭೂಮಿಗೆ ಹೋದ
ಏಕಾಂತದಲ್ಲಿ ಉಪವಾಸ, ತಪಸ್ಸು
ಪ್ರಿಯತಮೆಯನ್ನು ಪಡೆಯಲೇಬೇಕೆಂಬ ಹಠ
ಒಂದು ವರ್ಷದ ನಂತರ ಹಿಂದಿರುಗಿದ
ಪ್ರಿಯತಮೆಯ ಮನೆಯ ಬಾಗಿಲು ತಟ್ಟಿದ
'ಯಾರದು?' ಮತ್ತೆ ಕೇಳಿತು ದನಿ
'ನೀನೆ' ಹೇಳಿದ ಪ್ರಿಯಕರ
ಬಾಗಿಲು ತೆರೆಯಿತು
ಆತನಿಗಾಗಿ

–ರೂಮಿ

ಸಾಂಪ್ರದಾಯಕ ಮುಸಲ್ಮಾನರು ಸೂಫಿಗಳ ಸಂಗೀತ, ಹಾಡುಗಾರಿಕೆ ಮತ್ತು ಕುಣಿತವನ್ನು ಅನೈತಿಕ ಎಂದರು. ಆದರೆ ಸೂಫಿಗಳು ಅಂತಹ ಹೇಳಿಕೆಗಳನ್ನು ನಿರಾಕರಿಸಿ ಸಂಗೀತದ ಪ್ರಾಪಂಚಿಕ ಅಂಶಗಳಿಗೆ ನಿಜವಾದ ಸೂಫಿ ಮಾರುಹೋಗುವುದಿಲ್ಲ. ಬದಲಿಗೆ 'ಸಮಾ'ಗಳಲ್ಲಿನ ರಾಗ, ಲಯಗಳು ದೈಹಿಕ ಸೌಂದರ್ಯವನ್ನು ಅರಿಯಲು ಮತ್ತು ಅನಂತಾಕಾಶದಲ್ಲಿನ ನಿರಂತರ ದೈವ ಸಂಗೀತವನ್ನು ಆನಂದಿಸಲು ಆತನ ಆತ್ಮವನ್ನು ಸಜ್ಜುಗೊಳಿಸುತ್ತವೆ ಹಾಗೂ ಆಧ್ಯಾತ್ಮಿಕ ಉನ್ನತ ಮಜಲುಗಳಿಗೇರಲು 'ಸಮಾ'ಗಳು ಮೆಟ್ಟಿಲುಗಳಾಗುತ್ತವೆ ಎಂದರು. ಎಲ್ಲ ಸುಂದರ ವಸ್ತುಗಳ ರೀತಿ ಸಂಗೀತವೂ ಸಹ ಸೂಫಿ ಮತ್ತು ದೇವರ ನಡುವಿನ ಅಂತರವನ್ನು ಕಡಿಮೆಗೊಳಿಸುತ್ತದೆ, ಏಕೆಂದರೆ ಎಲ್ಲಾ ಸೌಂದರ್ಯದ ಸೆಲೆಯೂ ದೇವರೇ ಆಗಿದ್ದಾನೆ.

ಕೆಲವು ಸೂಫಿಗಳು ತಾವು ಸತ್ತಾಗ ಶೋಕಾಚರಣೆ ಮಾಡದೆ ಅನಂತ ವಿಶ್ವದ 'ನಿರಂತರ ಬದುಕಿಗೆ' ಕಾಲಿಡಲು ಅನುವಾದ ತಮ್ಮ ಸಾವನ್ನು ಆಚರಿಸಲು 'ಸಮಾ'ಗೋಷ್ಠಿಗಳನ್ನು ಏರ್ಪಡಿಸಬೇಕೆಂದು ಹೇಳುತ್ತಿದ್ದರು. 'ಸಮಾ'ದ ಬಗ್ಗೆ ಸೂಫಿಗಳು ಎಚ್ಚರಿಕೆಯೂ ನೀಡಿದರು. 'ಸಮಾ'ದಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಲು ಕಠಿಣ ವೈರಾಗ್ಯದ ತರಬೇತಿಯ ಅವಶ್ಯಕತೆ ಇದೆಯೆಂದೂ, ಇಲ್ಲವಾದಲ್ಲಿ ಹಾಡು ಮತ್ತು ಸಂಗೀತ ಅಧ್ಯಾತ್ಮಿಕತೆಯನ್ನು ಉತ್ತುಂಗಕ್ಕೆ ಏರಿಸುವ ಬದಲು ಮಾನವನ ಕಾಮನೆಗಳನ್ನು ಎಬ್ಬಿಸ ಬಹುದೆಂದರು.

ಸೂಫಿ ಕವಿಗಳಲ್ಲಿ ಮುಖ್ಯರಾದವರು ಅಬು ಸೈಯದ್, ಜಲಾಲ್ ಅಲ್–ದಿನ್ ರೂಮಿ, ಫರೀದುದ್ದೀನ್ ಅತ್ತಾರ್, ಜಾಮಿ, ಮಹಮ್ಮದ್ ಶಬಿಸ್ತಾರಿ, ಇಬನ್ ಅಲ್–ಫರೀದ್ ಹಾಗೂ ಇಬನ್ ಅಲ್–ಅರಾಬಿ. ಸೂಫಿಗಳಿಗೆ ದೇವರು ನಿರಂತರ ಸೌಂದರ್ಯದ ಖನಿ, ದೇವರು ಹಾಗೂ ಮನುಷ್ಯನ ನಡುವಿನ ಅಂತರವನ್ನು ಪ್ರೀತಿಪ್ರೇಮಗಳನ್ನು ಕಡಮೆ ಮಾಡುತ್ತವೆ. ಪಾರಮಾರ್ಥಿಕ ಪ್ರೇಮವೂ ಸಹ ಈ ಅಂತರವನ್ನು ಕಡಮೆ ಮಾಡಲು ಸಹಕರಿಸುತ್ತದೆ.

ಸೂಫಿ ಕವಿಗಳಲ್ಲಿ ಅತ್ಯಂತ ಪ್ರಖ್ಯಾತನಾದವನು ಜಲಾಲ್ ಅಲ್–ದಿನ್ ರೂಮಿ (1201–1273). ಆತನ ಮೇರುಕೃತಿ 'ಮಸ್ನವಿ'. ಅದನ್ನು 'ಪರ್ಷಿಯನ್ ಕುರಾನ್' ಎಂದೂ ಕರೆಯುತ್ತಾರೆ. ರೂಮಿ ಸೂಫಿಗಳ 'ಮೆವ್ಲೆವಿ' ಅಥವಾ 'ಗಿರಗಿರನೆ ತಿರುಗುವ' ದರ್ವೀಷ್‌ಗಳ ಪಂಗಡದ ನಿರ್ಮಾತ. ಮೆವ್ಲೆವಿ ದರ್ವೀಷ್‌ಗಳು ದೇವರೊಂದಿಗೆ ಬೆರೆಯಲು ಉನ್ಮಾದದಿಂದ ಗಿರಗಿರನೆ ತಿರುಗುತ್ತ ಕುಣಿಯತ್ತಾರೆ.

ಆತ ಬರುತ್ತಾನೆ
ನಿದ್ರೆಯಲ್ಲಾಗಲಿ, ಎಚ್ಚರದಲ್ಲಾಗಲಿ
ಆಕಾಶವೇ ಎಂದೂ ಕಂಡಿರದ ಚಂದಿರನ ಹಾಗೆ
ಆತನ ಕಿರೀಟ
ಯಾವ ಪ್ರವಾಹವೂ ನಂದಿಸಲಾಗದ ನಿರಂತರ ಜ್ವಾಲೆ
ಹೋ ದೇವರೆ

ನಿನ್ನ ಪ್ರೇಮದ ಬಟ್ಟಲಿನಲ್ಲಿ
ನನ್ನ ಆತ್ಮ ಈಜುತ್ತಿದೆ
ನನ್ನ ಮಣ್ಣಿನ ಮನೆಯ ದೇಹ ಕರಗುತ್ತಿದೆ.

ಕಾಶ್ಮೀರದ ಋಷಿ ಸೂಫಿಗಳು

ಹದಿನಾಲ್ಕನೇ ಶತಮಾನದ ಕೊನೆಯ ಅವಧಿ. ಕಾಶ್ಮೀರದ ಅನಂತನಾಗ್ ಜಿಲ್ಲೆಯ ಕೈಮು ಗ್ರಾಮದ ಮನೆಯೊಂದರಲ್ಲಿ ಮಗುವೊಂದು ಹುಟ್ಟಿತ್ತು. ಹುಟ್ಟಿದ ಮಗು ತಾಯಿಯ ಹಾಲೇ ಕುಡಿಯುತ್ತಿರಲಿಲ್ಲ. ತಾಯಿ ಮತ್ತು ಓರಗೆಯವರು ಎಷ್ಟು ಪ್ರಯತ್ನಿಸಿದರೂ ಮಗು ತಾಯಿಯ ಮೊಲೆಗೆ ಬಾಯಿ ಹಾಕಲೇ ಇಲ್ಲ. ಮೂರು ದಿನಗಳಾದುವು. ಮಗು ಹಸಿವೆಯಿಂದ ಬಳಲಿತ್ತು. ಆಗ ಇದ್ದಕ್ಕಿದ್ದಂತೆ ಹೆಣ್ಣೊಬ್ಬಳು ಆ ಮನೆಗೆ ಪ್ರವೇಶಿಸಿ ಆ ಮಗುವನ್ನು ತನ್ನ ಮಡಿಲಲ್ಲಿ ಮಲಗಿಸಿಕೊಂಡು, ಮಗುವನ್ನು ಚುಂಬಿಸಿ ತನ್ನ ಮೊಲೆಯನ್ನು ಮಗುವಿನ ಬಾಯಿಗಿಟ್ಟು ಆ ಮಗುವಿನ ಕಿವಿಯಲ್ಲಿ ಪಿಸುಗುಟ್ಟಿದ್ದಳು, 'ಹುಟ್ಟಿದ್ದಕ್ಕೆ ನಾಚಿಕೆ ಪಡದ ನಿನಗೆ ತಾಯಿಯ ಹಾಲುಕುಡಿಯಲು ನಾಚಿಕೆಯೆ? ಆಧ್ಯಾತ್ಮಜ್ಞಾನದ ಹಾಲು ಕುಡಿಯದೆ ಆನಂದವೆಲ್ಲಿಯದು!' ಎಂದಳಂತೆ.' ಮಗು ಆಕೆಯ ಹಾಲು ಕುಡಿಯಿತು, ನಂತರ ಎಲ್ಲ ಸಹಜ ಮಕ್ಕಳಂತೆ ತನ್ನ ತಾಯಿಯ ಹಾಲು ಕುಡಿಯಿತು.

ಆ ಮಗುವಿಗೆ ಹಾಲೂಡಿಸಿದ ಆಕೆ ಲಲ್ಲೇಶ್ವರಿ, ಒಬ್ಬ ಹಿಂದೂ ಮತ್ತು ಆ ಮಗು ಶೇಖ್ ನೂರ್–ಉದ್–ದಿನ್, ಒಬ್ಬ ಮುಸಲ್ಮಾನ. ಅವರನ್ನು ಹಿಂದು ಮತ್ತು ಮುಸಲ್ಮಾನರು ಎಂದು ಪರಿಗಣಿಸುವುದೇ ಅವರಿಗೆ ಮಾಡುವ ಬಹು ದೊಡ್ಡ ಅಪಮಾನವಾಗುತ್ತದೆ. ಏಕೆಂದರೆ ಅವರು ಧರ್ಮಗಳ ಈ ಹಣೆಪಟ್ಟಿಯನ್ನು ಮೀರಿದವರಾಗಿದ್ದರು. ಆಕೆಯನ್ನು ಹಿಂದೂಗಳು ಲಲ್ಲೇಶ್ವರಿ ಎಂದರೆ, ಮುಸಲ್ಮಾನರು ಲಲ್ಲಾ ಅರೀಫಾ ಎನ್ನುತ್ತಿದ್ದರು. ಶೇಖ್ ನೂರ್–ಉದ್–ದಿನ್ ಹಿಂದೂಗಳಿಗೆ ಸಹಜಾನಂದ ಆಗಿದ್ದರು ಹಾಗೂ ಎಲ್ಲರಿಗೂ ಆತ ನಂದಋಷಿ.

ಶೇಖ್ ನೂರ್–ಉದ್–ದಿನ್‌ಗೆ ಲಲ್ಲೇಶ್ವರಿ ಹಾಲುಕುಡಿಸಿದ ಕತೆ ಕಟ್ಟುಕತೆಯಾಗಿರಬಹುದು. ಆದರೆ ಇದು 'ಕಾಶ್ಮೀರಿಯತ್'ನ ಅಂತರಂಗವನ್ನು ಪ್ರತಿನಿಧಿಸುತ್ತದೆ; ಅಲ್ಲಿನ ಧರ್ಮ ಸಮನ್ವಯತೆಯನ್ನು ಸಂಕೇತಿಸುತ್ತದೆ. ಇದೇ ಕಾಶ್ಮೀರದ 'ಋಷಿ ಸೂಫಿ ಧರ್ಮ'ದ ಅಂತರಾಳ. ನಂದ ಋಷಿಗೆ ಹಾಲು ಕುಡಿಸಿದ ಲಲ್ಲೇಶ್ವರಿಯ ಕಾರ್ಯವನ್ನು ಆಕೆ ತನ್ನಲ್ಲಿನ ಆಧ್ಯಾತ್ಮ ಜ್ಞಾನವನ್ನು ಆತನಿಗೆ ಗುರುವಿನಂತೆ ಧಾರೆ ಎರೆದದ್ದನ್ನು ಸಾಂಕೇತಿಕವಾಗಿ ತೋರಿಸುತ್ತದೆ ಎನ್ನುತ್ತಾರೆ.

ಸೂಫಿ ಪರಂಪರೆಯ ಉಗಮದ ನಂತರ ಅದರಲ್ಲಿ ಸುಹರ್ವಾದಿ, ಕುಬ್ರವಿ, ನಕ್ಷಬಂಧಿ, ಖಾದ್ರಿಗಳಂತಹ ಹಲವಾರು ಪಂಗಡಗಳು ಹುಟ್ಟಿಕೊಂಡವು ಹಾಗೂ ಅವು ಪರ್ಷಿಯ, ಮಧ್ಯ ಏಷಿಯ, ಮಧ್ಯ ಮತ್ತು ಉತ್ತರ ಭಾರತಗಳಿಂದ ಕಾಶ್ಮೀರವನ್ನು ಪ್ರವೇಶಿಸಿದವು. ಕಾಶ್ಮೀರದ ಮುಸಲ್ಮಾನರ ಮೇಲೆ ಅತ್ಯಂತ ಹೆಚ್ಚು ಪ್ರಭಾವ ಬೀರಿರುವುದು ಋಷಿ ಸೂಫಿ 'ಧರ್ಮ'. ಆದರೆ ಸೂಫಿಸಂ ಅನ್ನು ಧರ್ಮ ಎನ್ನುವುದೇ ಸರಿಯಲ್ಲ. ಋಷಿ ಸೂಫಿ ಪರಂಪರೆ ಬೇರೆಡೆಯಿಂದ ಎರವಲು ಪಡೆದದ್ದಲ್ಲ, ಅದು ಕಾಶ್ಮೀರದಲ್ಲೇ

ಜನ್ಮ ತಳೆದದ್ದು. ಅದು ಮೇಲ್ನೋಟಕ್ಕೆ ಇಸ್ಲಾಂ ಛಾಪು ಹೊಂದಿದ್ದರೂ ಹಿಂದೂ ಋಷಿಗಳ ವೈರಾಗ್ಯತೆಯ ಹಾಗೂ ಬೌದ್ಧರ ನಿರ್ವಾಣದ ತಳಹದಿಯ ಮೇಲೆ ರೂಪು ತಳೆದಿದೆ. ಋಷಿ ಸೂಫಿ ಪದದಲ್ಲಿನ 'ಋಷಿ' ಪದ ಸಂಸ್ಕೃತದ 'ಋಷಿ'ಯಿಂದ ಪಡೆದಿದ್ದಾದರೂ, ಕೆಲವು ಮಧ್ಯಕಾಲೀನ ಮುಸಲ್ಮಾನ ವಿದ್ವಾಂಸರು ಅದು ಪರ್ಷಿಯನ್‌ನ 'ರೈಷ್' ಅಥವಾ 'ರಿಷ್'ನಿಂದ ವ್ಯುತ್ಪತ್ತಿಯಾದದ್ದು ಎನ್ನುತ್ತಾರೆ. 'ರೈಷ್' ಅಥವಾ 'ರಿಷ್' ಎಂದರೆ ಪಕ್ಷಿಯ ರೆಕ್ಕೆಪುಕ್ಕ ಎಂದರ್ಥ. ಬಾಬಾ ದಾವೂದ್ ಮಿಷ್ಕತಿ ಹೇಳುವಂತೆ ಋಷಿ ಸೂಫಿ ಒಬ್ಬ ರೆಕ್ಕೆಪುಕ್ಕವಿಲ್ಲದ ಪಕ್ಷಿಯ ಹಾಗೆ ಹಾಗೂ ಆತ 'ವಿಧಿ'ಯ ಗಾಳಿ ಬೀಸಿದೆಡೆಗೆ ಹೋಗುವಾತ. ಇನ್ನು ಕೆಲವರು ಋಷಿ ಪದ ಅರಾಬಿಕ್‌ನ 'ರಿಷಾ'ದಿಂದ ಬಂದದ್ದು ಎನ್ನುತ್ತಾರೆ. ರಿಷಾ ಎಂದರೆ 'ಬೇರು' ಎಂದರ್ಥ. ಋಷಿ ಸೂಫಿಗಳು ತಮ್ಮ ವಾಂಛೆಗಳನ್ನು ಬೇರು ಸಹಿತ ಕಿತ್ತೊಗೆದಿರುತ್ತಾರೆ, ಆದುದರಿಂದ ಈ ಹೆಸರು ಎನ್ನುತ್ತಾರೆ ಅವರು. ಫಾರ್ಸಿ ಭಾಷೆಯಲ್ಲಿ 'ರೇಷ್' ಎಂದರೆ 'ಗಾಯ' ಎಂದರ್ಥ. ಸೂಫಿಗಳ ಹೃದಯ ದೇವರ ಮೇಲಿನ ಪ್ರೇಮದಿಂದ ಗಾಯಗೊಂಡಿರುವುದರಿಂದ ಈ ಹೆಸರು ಎನ್ನುತ್ತಾರೆ ಕೆಲವು ವಿದ್ವಾಂಸರು. ಅದೇ ಫಾರ್ಸಿ ಭಾಷೆಯಲ್ಲಿ 'ರಿಷಿ' ಎಂದರೆ 'ರೆಕ್ಕೆ' ಹಾಗೂ ಅನುಭಾವದ ರೆಕ್ಕೆಗಳ ಮೂಲಕ ಸೂಫಿ ದೇವರನ್ನು ತಲುಪಬಲ್ಲ ಸಾಮರ್ಥ್ಯ ಹೊಂದಿರುತ್ತಾನೆ, ಆದುದರಿಂದ ಈ ಹೆಸರು ಎನ್ನುತ್ತಾರೆ ಮತ್ತು ಕೆಲವರು. ಆದರೆ ಕಾಶ್ಮೀರದ ಹಿಂದೂ ಮತ್ತು ಮುಸಲ್ಮಾನರು ಈ ವಿಶ್ಲೇಷಣೆಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಋಷಿ ಸೂಫಿಯೆಂದರೆ ಆತ ಒಬ್ಬ ಋಷಿಯೆಂದೇ ಭಾವಿಸಿದ್ದಾರೆ; ಅವರ ದರ್ಗಾಗಳನ್ನು ಇಬ್ಬರೂ ಪೂಜಿಸುತ್ತಾರೆ.

ಲಲ್ಲೇಶ್ವರಿ

ಹದಿನಾಲ್ಕನೇ ಶತಮಾನದ ಕಾಶ್ಮೀರದಲ್ಲಿ ತನ್ನ ಅನುಭಾವದ ಕಾವ್ಯದಿಂದ (ವಾಕ್ ಅಥವಾ ವಚನಗಳು) ಕಾಶ್ಮೀರಿ ಜನತೆಯ ಮೇಲೆ ಲಲ್ಲೇಶ್ವರಿ ಬೀರಿರುವ ಪ್ರಭಾವ ಅಚ್ಚಳಿಯದಿರುವಂತಹುದು. ಇಂದಿಗೂ ಕಾಶ್ಮೀರಿ ಭಾಷೆಯಲ್ಲಿನ ಶೇಕಡಾ ಮುವ್ವತ್ತರಷ್ಟು ನುಡಿಗಟ್ಟು ಹಾಗೂ ನಾಣ್ಣುಡಿಗಳು ಆಕೆಯ ವಚನದ ಮಾತುಗಳಾಗಿವೆ. ಆಕೆಯ ಬದುಕಿನ ಬಗೆಗಿನ ನಿಖರ ದಾಖಲೆಗಳಿಲ್ಲದೆ ಬಹಳಷ್ಟು ಘಟನೆಗಳು ದಂತಕತೆಗಳಾಗಿವೆ. ಲಭ್ಯ ಮಾಹಿತಿಯ ಪ್ರಕಾರ ಆಕೆ 1335ರಲ್ಲಿ (ಕೆಲವು ದಾಖಲೆಗಳಲ್ಲಿ 1320 ಎಂದಿದೆ) ಸಂಪೋರ ಎಂಬ ಗ್ರಾಮದಲ್ಲಿ ಕಾಶ್ಮೀರದ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿದಳು. ಆಗಿನ ಸಂಪ್ರದಾಯದಂತೆ ಆಕೆಯನ್ನು ಅತಿ ಸಣ್ಣ ವಯಸ್ಸಿನಲ್ಲಿಯೇ ಪದಮನಪುರದ (ಈಗಿನ ಪಾಂಪೋರ್) ಒಬ್ಬ ಬ್ರಾಹ್ಮಣ ಪೂಜಾರಿಯೊಂದಿಗೆ ಆಕೆಯ ವಿವಾಹ ಮಾಡಲಾಯಿತು. ಆಕೆಯ ಅತ್ತೆ ಅತ್ಯಂತ ಕ್ರೂರಿಯಾಗಿದ್ದು ಆಕೆಗೆ ಸರಿಯಾಗಿ ಊಟ ಸಹ ಹಾಕುತ್ತಿರಲಿಲ್ಲ. ಆದರೆ ಎಲ್ಲರಿಗೂ ಹೆಚ್ಚು ಅನ್ನ ಬಡಿಸಿದ್ದೇನೆಂದು ಕಾಣಲೆಂದು ಆಕೆಯ ತಟ್ಟೆಯ ತುಂಬ ಕಲ್ಲುಗಳನ್ನು ತುಂಬಿ ಅದರ ಮೇಲೆ ಅನ್ನ ಸಿಂಪಡಿಸುತ್ತಿದ್ದಳು. 'ಮನೆಯಲ್ಲಿ ಕುರಿ ದೊಡ್ಡದೇ ಕಡಿಯಲಿ ಚಿಕ್ಕದೇ ಕಡಿಯಲಿ, ಲಲ್ಲಾಳಿಗೆ ಕಲ್ಲು ತಪ್ಪಿದ್ದಲ್ಲ' ಎಂಬ ಗಾದೆ ಇಂದಿಗೂ ಕಾಶ್ಮೀರದಲ್ಲಿ ಬಳಕೆಯಲ್ಲಿದೆ.

ಆಕೆಯ ಅತ್ತೆಯ ಹಾಗೂ ಗಂಡನ ಹಿಂಸೆ ತಡೆಯಲಾರದೆ ಆಕೆ ಮನೆಬಿಟ್ಟು ಸಂಪೂರ್ಣ ನಗ್ನಳಾಗಿ ಕಾಡು ಮೇಡು ಅಲೆದಾಡುತ್ತ, ಕಠಿನ ನೇಮ, ತಪಸ್ಸುಗಳನ್ನು ಆಚರಿಸಿದಳು. ಮೊದಲಿನಿಂದಲೂ ಆಕೆಯಲ್ಲಿ ಆಧ್ಯಾತ್ಮದ ಚೇತನ ಜೀವಂತವಾಗಿತ್ತು. ಅದನ್ನು ಪೋಷಿಸಿ ಬೆಳೆಸಿದ ಗುರುವಿನ ಬಗ್ಗೆ ಈಗಲೂ ಏಕಾಭಿಪ್ರಾಯವಿಲ್ಲ. ಕೆಲವು ದಾಖಲೆಗಳ ಪ್ರಕಾರ ಆಕೆ ಆಗಿನ ಪ್ರಖ್ಯಾತ ಸೂಫಿ ಹಜ಼ರತ್ ಜಲಾಲುದ್ದೀನ್ ಬುಖಾರಿಯವರಿಂದ 'ದೀಕ್ಷೆ' ಪಡೆದು ಇಸ್ಲಾಂಗೆ ಮತಾಂತರಗೊಂಡು ಸೂಫಿ ಪಥ(ಸುಲುಕ್)ವನ್ನು ಅನುಸರಿಸಿದಳು; ಆ ನಂತರ ಆಕೆ ಮಹಾನ್ ಸೂಫಿಗಳಾದ ಹಜ಼ರತ್ ಮೀರ್ ಸಯ್ಯದ್ ಸಿಮ್ನಾನಿ ಮತ್ತು ಹಜ಼ರತ್ ಮೀರ್ ಸಯ್ಯದ್ ಆಲಿ ಹಮ್‌ದಾನಿಯವರ ಪ್ರಭಾವಕ್ಕೂ ಒಳಗಾಗಿದ್ದಳು. ಆದರೆ ಕೆಲವು ಇತ್ತೀಚಿನ ಬರಹಗಳು ಆಕೆ ಎಂದೂ ಮುಸಲ್ಮಾನರ ಪ್ರಭಾವಕ್ಕೆ ಒಳಗಾಗಿರಲಿಲ್ಲ ಹಾಗೂ ಮತಾಂತರವೂ ಹೊಂದಿರಲಿಲ್ಲ; ಅಕೆ ಮಹಾನ್ ಶಿವಭಕ್ತೆಯಾಗಿದ್ದಳು ಹಾಗೂ ಆಕೆಯ ಗುರು ಸಿದ್ಧ ಶ್ರೀಕಾಂತ ಎಂಬಾತ ಎನ್ನುತ್ತವೆ. ಈ ರೀತಿಯ ಹೇಳಿಕೆಗಳು ಇತ್ತೀಚಿನ ದಿನಗಳವು ಎಂದು ಯೋಗಿಂದರ್ ಸಿಕಂಡ್ ತಮ್ಮ ಪುಸ್ತಕ ದ ಮುಸ್ಲಿಂ ರಿಷೀಸ್ ಆಫ್ ಕಾಶ್ಮೀರ್‌ನಲ್ಲಿ ಹೇಳಿದ್ದಾರೆ. ಇಲ್ಲಿ ಕುತೂಹಲದ ವಿಷಯವೆಂದರೆ, ಮಧ್ಯಕಾಲೀನ ಕಾಶ್ಮೀರಿ ಬ್ರಾಹ್ಮಣರ ಪಂಡಿತರ ದಾಖಲೆಗಳಲ್ಲಿ ಎಲ್ಲಿಯೂ ಲಲ್ಲೇಶ್ವರಿಯ ಉಲ್ಲೇಖಗಳಿಲ್ಲ, ಬಹುಶಃ ಆಕೆಯನ್ನು ಅಬ್ರಾಹ್ಮಣಳೆಂದು ಪರಿಗಣಿಸಿದ್ದುದರಿಂದಲೋ ಅಥವಾ ಬ್ರಾಹ್ಮಣರ ಆಚರಣೆಗಳನ್ನು ವಿರೋಧಿಸುತ್ತಿದ್ದುದರಿಂದಲೂ ಇರಬಹುದು. ಹಿಂದೂ ಲೇಖಕರು ಆಕೆಯನ್ನು ಮೊಟ್ಟಮೊದಲಿಗೆ ಉಲ್ಲೇಖಿಸಿರುವುದು ಹತ್ತೊಂಬತ್ತನೇ ಶತಮಾನದಲ್ಲಿ, ಬೀರಬಲ್ ಕಚ್ರು (1819–46) ಎಂಬುವವರಿಂದ. ಆದರೆ ಮಧ್ಯಕಾಲೀನ ಕಾಶ್ಮೀರಿ ಮುಸಲ್ಮಾನ ಲೇಖಕರು ಲಲ್ಲಾಳನ್ನು ಲಲ್ಲಾ ಅರೀಫಾ (ಆಧ್ಯಾತ್ಮ ರಹಸ್ಯ ಜ್ಞಾನವುಳ್ಳ ಲಲ್ಲಾ), ಲಲ್ಲಾ ಮಜೂಬಾ (ಭಾವೋನ್ಮಾದದ ಲಲ್ಲಾ) ಮತ್ತು ರಾಬಿಯಾ–ಎ–ಸಾನಿ (ಎರಡನೇ ರಾಬಿಯ) ಎಂದೆಲ್ಲ ಕರೆದು ಆಕೆ ಸೂಫಿಗಳಾದ ಹಜ಼ರತ್ ಸಯ್ಯದ್ ಹುಸೇನ್ ಸಿಮ್ನಾನಿ ಮತ್ತು ಹಜ಼ರತ್ ಮೀರ್ ಸಯ್ಯದ್ ಆಲಿ ಹಮ್‌ದಾನಿಯವರನ್ನು ಆಧ್ಯಾತ್ಮದ ಗುರುಗಳನ್ನಾಗಿ ಸ್ವೀಕರಿಸಿರುವುದಾಗಿ ಹಲವಾರು ದಾಖಲೆಗಳಲ್ಲಿ ಉಲ್ಲೇಖಿಸಿದ್ದಾರೆ. ಆಕೆಯ ಹೆಸರನ್ನು ಮೊದಲಿಗೆ 1654ರಲ್ಲಿ ಬಾಬಾ ದಾವೂದ್ ಮುಷ್ಕತಿ ತಮ್ಮ 'ಅಬ್ರಾರುಲ್–ಅಬ್ರಾರ್'ನಲ್ಲಿ ಉಲ್ಲೇಖಿಸಿದ್ದಾರೆ. ಬಹುಪಾಲು ಎಲ್ಲಾ ಕಾಶ್ಮೀರಿ ಮುಸಲ್ಮಾನರು ಆಕೆಯನ್ನು ಒಬ್ಬ ಸೂಫಿ ಸಂತಳೆಂದೇ ಪರಿಗಣಿಸಿದ್ದಾರೆ. ಲಲ್ಲೇಶ್ವರಿಯನ್ನು ಕಾಶ್ಮೀರದ ಹಿಂದೂ ಮತ್ತು ಮುಸಲ್ಮಾನರು ಇಬ್ಬರೂ ಆಕೆಯನ್ನು ಗೌರವದಿಂದ ಲಾಲ್ ದೇಡ್ (ಲಾಲ್ ಅಜ್ಜಿ) ಎಂದು ಕರೆದು ಪೂಜಿಸುತ್ತಾರೆ. ಶ್ರೀನಗರದ ಸರ್ಕಾರಿ ಆಸ್ಪತ್ರೆಯ ಹೆಸರು ಸಹ 'ಲಲ್ಲಾ ದೇಡ್ ಸರ್ಕಾರಿ ಆಸ್ಪತ್ರೆ' ಎಂದೇ ಇದೆ.

ಮಧ್ಯಕಾಲೀನ ಅನುಭಾವಿ ಕಾವ್ಯ ಅಥವಾ ವಚನಗಳನ್ನು ಉತ್ತರ ಭಾರತದಲ್ಲಿ ಮೊಟ್ಟಮೊದಲಿಗೆ ಪ್ರಾರಂಭಿಸಿದ ಕೀರ್ತಿ ಲಲ್ಲೇಶ್ವರಿಗೆ ಸಲ್ಲುತ್ತದೆ. ಇತರ ಅನುಭಾವಿ ಸಂತರ ಪ್ರಭಾವ ಲಲ್ಲೇಶ್ವರಿಯ ಮೇಲಾಗಿರುವ ಸಾಧ್ಯತೆಗಳು ಕಡಿಮೆ ಏಕೆಂದರೆ, ಸಂತ

ರಮಾನಂದ (1400–1470), ಸಂತ ಕಬೀರ (1440–1518), ಗುರು ನಾನಕ್ (1469–1538), ಸಂತ ತುಳಸೀದಾಸ (1532–), ಮೀರಾಬಾಯಿ ಇವರೆಲ್ಲ ನಂತರ ಬಂದವರು. ಕನ್ನಡದ ವಚನ ಚಳುವಳಿ ಹನ್ನೆರಡನೇ ಶತಮಾನದಲ್ಲಿ ಪ್ರಾರಂಭವಾಗಿದ್ದರೂ ಅದು ಕಾಶ್ಮೀರ ತಲುಪಿರುವ ಸಾಧ್ಯತೆಗಳು ತೀರಾ ಕಡಿಮೆ.

ತನ್ನ ವಾಕ್‌ಗಳು ಜನಸಾಮಾನ್ಯರಿಗೆ ತಲುಪಲೆಂದು ಅನಕ್ಷರಸ್ಥಳಾದ ಆಕೆ ಜನರ ಭಾಷೆಯಾದ ಕಾಶ್ಮೀರಿಯಲ್ಲಿಯೇ ಅವುಗಳನ್ನು ಹೇಳತೊಡಗಿದಳು. ಒಮ್ಮೆ ಆಕೆ ನಗ್ನಳಾಗಿ ಅಲೆದಾಡುತ್ತಿದ್ದಾಗ ಕೆಲ ಯುವಕರು ಅಕೆಯನ್ನು ಲೇವಡಿ ಮಾಡತೊಡಗಿದರು. ಆಗ ಹತ್ತಿರದ ಬಟ್ಟೆ ವ್ಯಾಪಾರಿಯೊಬ್ಬ ಆ ಯುವಕರನ್ನು ಬೈದು ಆಕೆಯನ್ನು ಲೇವಡಿ ಮಾಡಬೇಡಿರೆಂದು ತಿಳಿಸಿದ. ಆಗ ಆಕೆ ಆ ವ್ಯಾಪಾರಿಯಿಂದ ಒಂದೇ ತರಹದ, ಒಂದೇ ಅಳತೆಯ ಎರಡು ಬಟ್ಟೆ ಪಡೆದು ತನ್ನ ಎರಡೂ ಭುಜದ ಮೇಲೆ ಹಾಕಿ ಹೊರಟಳು. ಯಾರಾದರೂ ಲೇವಡಿ ಮಾಡಿದರೆ ಒಂದು ಬಟ್ಟೆಗೆ ಒಂದು ಗಂಟು ಹಾಕುತ್ತಿದ್ದಳು. ಯಾರಾದರೂ ಆಕೆಯನ್ನು ಕಂಡು ಗೌರವಿಸಿದರೆ ಮತ್ತೊಂದು ಬಟ್ಟೆಗೆ ಒಂದು ಗಂಟು ಹಾಕುತ್ತಿದ್ದಳು. ಸಂಜೆಯ ಹೊತ್ತಿಗೆ ಎರಡೂ ಬಟ್ಟೆಯಲ್ಲಿ ಸಾಕಷ್ಟು ಗಂಟುಗಳಾಗಿದ್ದವು. ಆಕೆ ಆ ಬಟ್ಟೆ ವ್ಯಾಪಾರಿಯ ಬಳಿ ಹೋಗಿ ಆ ಎರಡೂ ಬಟ್ಟೆಗಳನ್ನು ತೂಕ ಹಾಕಿಸಿದಳು. ಹೊಗಳಿಕೆಯ ಬಟ್ಟೆಗೂ, ತೆಗಳಿಕೆಯ ಬಟ್ಟೆಗೂ ತೂಕದಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ಅದೇ ರೀತಿ ತನ್ನ ಮನಸ್ಸೂ ಸಹ ಹೊಗಳಿಕೆಗೆ ಹಾಗೂ ತೆಗಳಿಕೆಗೆ ಹಿಗ್ಗುವುದಾಗಲಿ ಕುಗ್ಗುವುದಾಗಲಿ ಇಲ್ಲ ಎಂದು ಆಕೆ ಲೇವಡಿ ಮಾಡಿದ ಯುವಕರಿಗೆ ಹಾಗೂ ಅಂಗಡಿಯಾತನಿಗೆ ತೋರಿಸಿಕೊಟ್ಟಳು.

ಕನ್ನಡದ ವಚನಕಾರರ ಸಂದರ್ಭದಲ್ಲಿ ಅಕ್ಕಮಹಾದೇವಿಯ ನಗ್ನತೆಯನ್ನು ಸಹಜವಾಗಿ ಸ್ವೀಕರಿಸಿರುವಂತೆ ಉತ್ತರ ಭಾರತದ ವಿದ್ವಾಂಸರು ಲಲ್ಲಾಳ ನಗ್ನತೆಯ ಬಗ್ಗೆ ಬಹಳಷ್ಟು ಕಸಿವಿಸಿಗೊಂಡು 'ನಾಚಿ'ಕೊಂಡಿದ್ದಾರೆ. ಆಕೆಯ 'ವಾಕ್'ನಲ್ಲಿ ಈ ರೀತಿ ಹೇಳಿದ್ದಾಳೆ:

ಗುರು ನನಗೆ ನೀಡಿದ್ದು ಒಂದೇ ಬೋಧನೆ
'ಶೂನ್ಯದಿಂದ ನಿನ್ನೊಳಕ್ಕೆ ನೀನು ಪ್ರವೇಶಿಸು'
ಈ ಲಲ್ಲಾಳಿಗೆ ಅದೇ ದೇವವಾಕ್ಯ
ನಗ್ನಳಾಗಿ ನರ್ತಿಸತೊಡಗಿದೆ ನಾನು.

ಆಕೆಯ ಕಾಶ್ಮೀರಿ ವಚನದ 'ವಾಕ್'ನಲ್ಲಿ ಆಕೆ 'ನಗ್ನಳಾಗಿ ನರ್ತಿಸಿದೆ'ಎನ್ನಲು 'ನಂಗಯ್ ನಟ್ಸುನ್' ಎಂಬ ಪದಗಳನ್ನು ಬಳಸಿದ್ದಾಳೆ. ಅದರರ್ಥ ನಗ್ನಳಾದೆ ಎಂದಿದ್ದರೂ ಕೆಲವರು, 'ನಂಗಯ್' ಎನ್ನುವುದು ಕಾಶ್ಮೀರಿ ಭಾಷೆಯಲ್ಲಿ ಹೂವೊಂದರ ಹೆಸರು. ಅದನ್ನು ಹೆಬ್ಬೆರಳು ಮತ್ತು ತೋರುಬೆರಳಿನಿಂದ ಅದುಮಿದರೆ ಹೂ 'ತೆರೆದುಕೊಂಡು ನರ್ತಿಸುತ್ತದೆ'. ಅದಕ್ಕೆ ಆಕೆ ತನ್ನನ್ನು ಹೋಲಿಸಿಕೊಂಡಿದ್ದಾಳೆಯೇ ಹೊರತು ಆಕೆ ವಿವಸ್ತ್ರಳಾಗಿ ಅಲೆದಾಡಲೇ ಇಲ್ಲ ಎನ್ನುತ್ತಾರೆ ಅವರು.

ಮಧ್ಯಕಾಲೀನ ಪರ್ಷಿಯನ್ ಸೂಫಿ ದಾಖಲೆಗಳಲ್ಲಿ ತಾನೇ 'ಹಾಲುಣಿಸಿ'ದ ಹಜ಼ರತ್ ನೂರುದ್ದೀನ್ ನೂರಾನಿಗೆ ಆಕೆಯೇ ಆಧ್ಯಾತ್ಮಿಕ ಗುರು ಎಂಬ ಉಲ್ಲೇಖಗಳಿವೆ. ಒಂದು ರೀತಿಯಲ್ಲಿ ಆಕೆಯೇ ಆತನ ಮೊದಲ ಗುರು. ಗೌಹರ್ ಹೇಳುವಂತೆ ಆಕೆ ಆತನನ್ನು ತನ್ನ ಆಧ್ಯಾತ್ಮ ಪಥದ ವಾರಸುದಾರನೆಂದು ಘೋಷಿಸಿದಳು. ಹಜ಼ರತ್ ನೂರ್–ಉದ್–ದಿನ್ ತನ್ನ ತಾಯಿಯಾದ ಸದ್ರಾ ಮೌಜ್‌ಳ ಗರ್ಭದಲ್ಲಿದ್ದಾಗಲೇ ಲಲ್ಲೇಶ್ವರಿ ಆ ಮಗುವಿನೊಂದಿಗೆ ಮಾತನಾಡುತ್ತಿದ್ದಳಂತೆ. ಹುಟ್ಟಿದ ಮಗು ತನ್ನ ತಾಯಿಯ ಹಾಲು ಕುಡಿಯಲು ನಿರಾಕರಿಸಿದಾಗ ಲಲ್ಲೇಶ್ವರಿ ತನ್ನ ಮೊಲೆಯೂಡಿಸಿದಳು. ನಾಜ್ಕಿ ಹೇಳುವಂತೆ ಆ ನಂತರ ಆತ ತನ್ನ (ಆಧ್ಯಾತ್ಮದ) ಕಣ್ಣು ತೆರೆದ.

1400ನೇ ಇಸವಿಯಲ್ಲಿ ಬಿಜ್‌ಬೆಹಾರದ ಜಾಮಿಯ ಮಸೀದಿಯ ಮುಂದೆ ಲಲ್ಲೇಶ್ವರಿಯ ದೇಹಾಂತವಾಯಿತು. ಆಗ ನೂರ್–ಉದ್–ದಿನ್‌ಗೆ ಇಪ್ಪತ್ತೆರಡು ವರ್ಷವಾಗಿತ್ತೆಂದು ಕೆಲವು ದಾಖಲೆಗಳು ಹೇಳುತ್ತವೆ. ಸ್ಥಳೀಯ ದಂತಕತೆಯಂತೆ ಆಕೆಯ ಅಂತ್ಯಕ್ರಿಯೆಗೆ ಹಿಂದೂ ಮತ್ತು ಮುಸಲ್ಮಾನರಿಬ್ಬರೂ ಮುಂದಾಗಿ ತಮ್ಮ ತಮ್ಮ ಧರ್ಮಾನುಸಾರ ನಡೆಸಬೇಕೆಂದರು. ಆಕೆಯ ಮೃತ ದೇಹದ ಹೊದಿಕೆ ತೆರೆದಾಗ ಅಲ್ಲಿ ಆಕೆಯ ದೇಹವೇ ಇರಲಿಲ್ಲ, ಬದಲಿಗೆ ಹೂವಿನ ರಾಶಿಯಿತ್ತಂತೆ. ಅದನ್ನೇ ಇಬ್ಬರೂ ಹಂಚಿಕೊಂಡು ತಮ್ಮ ತಮ್ಮ ಧರ್ಮಾನುಸಾರ ಅಂತ್ಯಕ್ರಿಯೆ ನಡೆಸಿದರಂತೆ.

ಈ ರೀತಿಯ ಹೂವಿನ ಮೆಟಾಫರ್‌ಗಳು ಸಂತ ಕಬೀರನನ್ನು ಒಳಗೊಂಡಂತೆ ಎಲ್ಲಾ ಹಿಂದೂ–ಮುಸಲ್ಮಾನ ಧರ್ಮಗಳ ಚೌಕಟ್ಟನ್ನು ಮೀರಿರುವ ಅನುಭಾವಿಗಳ ಸಾವಿನಲ್ಲೂ ಕಂಡುಬರುತ್ತದೆ. ಆದರೆ ಆ 'ಹೂವಿನ ಹಂಚಿಕೆ' ಲಲ್ಲಾಳ ಸಾವಿನಲ್ಲೇ ಮುಕ್ತಾಯಗೊಳ್ಳಲಿಲ್ಲ. ಆಕೆಯನ್ನು ತಮ್ಮೆಡೆಗೆ ಎಳೆದುಕೊಳ್ಳುವ ಪ್ರಯತ್ನಗಳು ಇಂದಿಗೂ ನಡೆಯುತ್ತಿವೆ. ಹಲವಾರು ಹಿಂದೂ ವಿದ್ವಾಂಸರು ಆಕೆಯನ್ನು ಕಾಶ್ಮೀರಿ ತ್ರಿಕಾ ಶೈವಧರ್ಮದ ಅನುಯಾಯಿ ಮತ್ತು ಆಕೆ ಶಿವಭಕ್ತೆ ಮಾತ್ರ ಆಗಿದ್ದಳು ಎನ್ನುತ್ತಿದ್ದಾರೆ. ಇನ್ನು ಕೆಲವರು ಆಕೆ ಸೂಫಿ ಅನುಭಾವಿ ಚಿಂತನೆಗಳಿಂದ ಗಾಢವಾಗಿ ಪ್ರಭಾವಿತಳಾಗಿದ್ದಳು ಎನ್ನುತ್ತಾರೆ. ಇತರರು ಆಕೆ ಶೈವಧರ್ಮ ಮತ್ತು ಸೂಫಿಸಂನ ಅದ್ವೈತ ತತ್ವಜ್ಞಾನದ ಸಾರವಾಗಿದ್ದಳು ಎನ್ನುತ್ತಿದ್ದಾರೆ. ಆದರೆ ಆಕೆ ಇವೆಲ್ಲವನ್ನೂ ಮೀರಿ 'ರಿಂಡಾ' (ಕಾಶ್ಮೀರಿ ಭಾಷೆಯಲ್ಲಿ ಯಾವುದೇ ಧಾರ್ಮಿಕ ನಂಬಿಕೆ ಹಾಗೂ ತತ್ವಗಳ ಬಂಧನದಿಂದ ಮುಕ್ತಳಾದವಳು ಎಂದರ್ಥ) ಆಗಿದ್ದಳು ಎನ್ನುವುದೇ ಸರಿ. ಈ ರೀತಿಯ 'ಬೌದ್ಧಿಕ' ಕಿತ್ತಾಟಗಳಿಗೆ ಲಲ್ಲಾಳೇ ತನ್ನ ವಾಕ್‌ನಲ್ಲಿ ಉತ್ತರ ನೀಡಿದ್ದಾಳೆ:

ಶಿವನಿಲ್ಲದ ತಾಣವಾವುದು?
ಹಿಂದು ಮತ್ತು ಮುಸಲ್ಮಾನರ ನಡುವೆ
ಗೆರೆಯೆಳೆಯುವುದು ಸಾಧ್ಯವೆ!
ಹೋ ಮನುಜನೇ!
ವಿವೇಚನೆಯುಳ್ಳವನಾದರೆ ಗುರುತಿಸಿಕೊ ಮೊದಲು
ನಿನ್ನೊಳಗಿನ ದೇವನನ್ನು ನೀನು ಮೊದಲು.

ಶೇಖ್ ನೂರ್–ಉದ್–ದಿನ್

1475ರ ಆಸುಪಾಸಿನಲ್ಲಿ ಜನಿಸಿದ ನೂರ್–ಉದ್–ದಿನ ವಲಿಯನ್ನು ಕಾಶ್ಮೀರಿ ಋಷಿ ಸೂಫಿ ಪರಂಪರೆಯ ಹರಿಕಾರನೆಂದೇ ಪರಿಗಣಿಸಲಾಗಿದೆ. ಆತನನ್ನು ಕಾಶ್ಮೀರದ 'ರಕ್ಷಕ ಸಂತ'ನೆಂದು ಕರೆಯುತ್ತಾರೆ. ಆತನ ತಂದೆ ಶೇಖ್ ಸಾಲಾರ್–ಉದ್–ದಿನ್ ಮತ್ತು ತಾಯಿ ಸದ್ರಾ ಮೌಜ್. ಹಲವಾರು ವರ್ಷಗಳಾದರೂ ಅವರಿಗೆ ಮಕ್ಕಳಿಲ್ಲದಿದ್ದುದರಿಂದ ಪ್ರಾರ್ಥನೆ, ಪೂಜೆಗಳ ಫಲವಾಗಿ ಗಂಡುಮಗನೊಬ್ಬ ಜನಿಸಿದನಂತೆ. ಆ ಮಗುವನ್ನು ನಂದಾ ಎಂದು ಕರೆದರು. ಹುಟ್ಟಿದಾಕ್ಷಣ ತನ್ನ ತಾಯಿಯ ಎದೆ ಹಾಲು ಕುಡಿಯಲು ನಿರಾಕರಿಸಿದ ಆತನಿಗೆ ತನ್ನ 'ಜ್ಞಾನ, ವಿವೇಕದ ಎದೆಹಾಲು' ಕುಡಿಸಿದವಳು ಲಲ್ಲೇಶ್ವರಿ ಎಂಬುದು ಅಲ್ಲಿನ ಜನರ ನಂಬಿಕೆ. ಚಿಕ್ಕ ವಯಸ್ಸಿನಲ್ಲಿಯೇ ತನ್ನ ತಂದೆಯನ್ನು ಕಳೆದುಕೊಂಡ ಆತ ತನ್ನ ತಾಯಿ ಮತ್ತು ಇಬ್ಬರು ಮಲಸಹೋದರರ ಜೊತೆ ಬೆಳೆದ. ಆ ಮಲಸಹೋದರರು ಕಳ್ಳರಾಗಿದ್ದು ನಂದಾನನ್ನೂ ತಮ್ಮೊಟ್ಟಿಗೆ ಸೇರಿಸಿಕೊಳ್ಳಲು ಯತ್ನಿಸಿದರೂ ಅವರು ಸಫಲರಾಗಲಿಲ್ಲ.

ಒಂದು ದಿನ ಅವನ ತಾಯಿ ತನ್ನ ಗ್ರಾಮದ ಮೌಲ್ವಿಯ ಬಳಿ ಕರೆದೊಯ್ದು ಅವನಿಗೆ ಓದು ಬರಹ ಕಲಿಸುವಂತೆ ಕೇಳಿಕೊಂಡಳು. ಆದರೆ ಆ ಹುಡುಗ ಅರಾಬಿಕ್ ಅಕ್ಷರಮಾಲೆಯ ಮೊದಲಕ್ಷರವಾದ 'ಅಲೀಫ್'ನಿಂದ ಮುಂದಕ್ಕೆ ಓದಲೂ ಇಲ್ಲ, ಕಲಿಯಲೂ ಇಲ್ಲ. ಮೌಲ್ವಿ ಒತ್ತಾಯಿಸಿದರೂ, ಹೆದರಿಸಿದರೂ ಆತ ಕಲಿಯಲಿಲ್ಲ. ಬೇಸತ್ತ ಮೌಲ್ವಿ 'ಏಕೆ ಆ ರೀತಿ ಮಾಡುತ್ತಿರುವೆ?' ಎಂದು ಕೇಳಿದ್ದಕ್ಕೆ ನಂದಾ, 'ಅಲೀಫ್ ಎಂದರೆ ದೇವರೊಬ್ಬನೆ ಎಂದರ್ಥ. ಅದೇ ಎಲ್ಲಕ್ಕಿಂತಲೂ ಉತ್ತಮ ಜ್ಞಾನ. ಆ ಜ್ಞಾನ ಪಡೆದನಂತರ ಉಳಿದದ್ದೆಲ್ಲವೂ ವ್ಯರ್ಥ, ಅವುಗಳನ್ನು ಏಕೆ ಕಲಿಯಬೇಕು?' ಎಂದನಂತೆ. ಅವನ ಮಾತಿನಿಂದ ಅವಾಕ್ಕಾದ ಮೌಲ್ವಿ ನಂದಾನಿಗೆ ತಾನು ಹೇಳಿಕೊಡುವಂಥದು ಏನು ಇಲ್ಲವೆಂದು ಹೇಳಿ ವಾಪಸ್ಸು ಕಳುಹಿಸಿದನಂತೆ. ಓದುಬರಹ ಕಲಿಯದ ನೂರ್–ಉದ್–ದಿನ್ ಅಥವಾ ನಂದಾ ಕಾಶ್ಮೀರಿ ಮತ್ತು ಸಂಸ್ಕೃತ ಎರಡೂ ಭಾಷೆಗಳನ್ನು ಕಲಿತಿದ್ದ. ಆತನ 'ಶ್ರುಕ್'ಗಳಲ್ಲಿ ಸಂಸ್ಕೃತ ಬಳಕೆ ಬಹಳಷ್ಟಿದೆ. ಓದು ಬರಹ ಕಲಿಯದ ಮಗ ಜೀವನೋಪಾಯಕ್ಕೆ ನೇಕಾರ ವೃತ್ತಿಯಾದರೂ ಕಲಿಯಲಿ ಎಂದು ಮಗನನ್ನು ನೇಕಾರನೊಬ್ಬನ ಬಳಿ ಸೇರಿಸಿದಳು. ಅಲ್ಲಿ ಆತ ನೇಯುವ ಮಗ್ಗದಲ್ಲಿಯೂ ತನ್ನನ್ನು ತೊಡಗಿಸಿಕೊಳ್ಳಲಾಗಲಿಲ್ಲ.

ಶೇಖ್ ನೂರ್–ಉದ್–ದಿನ್ ಒಂಟಿಯಾಗಿ ಬದುಕಲು ಬಯಸಿ ಗುಹೆಗಳನ್ನು ಅರಸಿ ಅವುಗಳಲ್ಲಿ ಧ್ಯಾನ ಮಾಡುತ್ತಿದ್ದ. ಸಮಾಜಸೇವೆಯಲ್ಲಿ ತೊಡಗಿ ವಿಶ್ವಭ್ರಾತೃತ್ವವನ್ನು ಬೋಧಿಸುತ್ತಿದ್ದ ಆತ ಸಸ್ಯಾಹಾರಿಯಾಗಿದ್ದ. ತನಗೆ ವಿವೇಕದ ಜ್ಞಾನದ ಹಾಲೂಡಿಸಿದ ಲಲ್ಲೇಶ್ವರಿಯನ್ನು ತನ್ನ ಆಧ್ಯಾತ್ಮ ಗುರುವೆಂದು ಪರಿಗಣಿಸಿ ತನ್ನ ಶ್ರುಕ್‌ನಲ್ಲಿ ಈ ರೀತಿ ಹೇಳಿದ್ದಾನೆ:

ಪದಮನಪುರದ ಆ ಲಲ್ಲಾ
ಅಮೃತವನ್ನು ಗುಟುಕು ಗುಟುಕು ಕುಡಿದವಳು
ಪ್ರತಿಯೊಂದರಲ್ಲೂ ಶಿವನ ಮುಖವನ್ನು ಕಂಡಳು!
ಹೋ ಶಿವನೇ!
ದಯಪಾಲಿಸು ನನಗೂ ಆ ವರವ.

ಶೇಖ್ ನೂರುದ್ದೀನ್ ಬಲವಂತದ ಮತಾಂತರವನ್ನು ವಿರೋಧಿಸುತ್ತಿದ್ದುದರಿಂದ ಸುಹಾ ಭಟ್‌ನಂತಹ ಹಲವಾರು ಮುಸಲ್ಮಾನ ದೊರೆಗಳ ಕೆಂಗಣ್ಣಿಗೆ ಬಲಿಯಾಗಬೇಕಾಯಿತು. ಆತನ ಸಮಾಧಿ ಅಥವಾ ದರ್ಗಾ ಶ್ರೀನಗರದ ಬಳಿಯ ಚರಾರ್–ಎ–ಶರೀಫ್‌ನಲ್ಲಿದೆ. ಹಿಂದೂ, ಮುಸಲ್ಮಾನ ಮತ್ತು ಸಿಖ್ಖರಿಗೆಲ್ಲ ಅದು ಒಂದು ಪವಿತ್ರ ಸ್ಥಳವಾಗಿದೆ. ಆ ದರ್ಗಾದಲ್ಲಿ ಆತನ ಹನ್ನೆರಡು ಜನ ಶಿಷ್ಯರ ಸಮಾಧಿಗಳೂ ಇವೆ. ಅವುಗಳಲ್ಲಿ ರೂಪ ಋಷಿ ಮತ್ತು ಲಕ್ಷ್ಮಣ ಋಷಿ ಎಂಬ ಶಿಷ್ಯರ ಸಮಾಧಿಗಳೂ ಇವೆ. 1995ರಲ್ಲಿ ಭಯೋತ್ಪಾದಕರು ಅದರಲ್ಲಿ ಅಡಗಿದ್ದಾಗ, ಪೋಲಿಸರ ಮತ್ತು ಅವರ ನಡುವೆ ಗುಂಡಿನ ಚಕಮಕಿ ನಡೆದು ಚರಾರ್–ಎ–ಶರೀಫ್ ಬೆಂಕಿಗೆ ಆಹುತಿಯಾಯಿತು. ಆಗ ಇಡೀ ಕಾಶ್ಮೀರದ ಹಿಂದೂ, ಮುಸಲ್ಮಾನರು ಮತ್ತು ಸಿಖ್ಖರು ತಮ್ಮದೇ ಮನೆ ಕಳಕೊಂಡವರಂತೆ ಗೋಳಾಡಿದರು.

ಕಾಶ್ಮೀರಿ ಸೂಫಿ ಪರಂಪರೆ

ಬೌದ್ಧ ಧರ್ಮ ಕಾಶ್ಮೀರದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕೆಲವು ಸಂನ್ಯಾಸಿಗಳು ಬ್ರಾಹ್ಮಣ್ಯದ ವರ್ಣಾಶ್ರಮ ಪದ್ಧತಿ, ಅರ್ಥಹೀನ ರೀತಿ ರಿವಾಜುಗಳು ಹಾಗೂ ನರಬಲಿಯಂತಹ ಕ್ರೂರ ಪದ್ಧತಿಗಳ ವಿರುದ್ಧ ತಿರುಗಿಬಿದ್ದರು. ಆದರೆ ಕಾಶ್ಮೀರದ ಬೌದ್ಧ ಧರ್ಮ ಹಾಗೂ ಎಂಟನೆಯ ಶತಮಾನದ ನಂತರ ಉಗಮವಾದ ಶೈವ ತ್ರಿಕಾ ತತ್ವಜ್ಞಾನ ಕ್ರಮೇಣ ಬ್ರಾಹ್ಮಣ್ಯದ ಬಿರುಸಿನ ಹೊಡೆತ ತಡೆಯಲಾರದೆ ತೆಪ್ಪಗಾಗಿದ್ದವು ಎಂದು ರಸೂಲ್ ಪಾಂಪೋರ್ ಬರೆದಿದ್ದಾರೆ. ಇಸ್ಲಾಂ ಕಣಿವೆಗೆ ಮೊದಲು ಕಾಲಿರಿಸಿದ ಸಮಯದ ಹೊತ್ತಿಗೆ ಬೌದ್ಧ ಧರ್ಮ ಸಂಪೂರ್ಣ ನಿರ್ಮೂಲನೆಯಾಗಿತ್ತು ಹಾಗೂ ಕಾಶ್ಮೀರ ಶೈವ ಸಿದ್ಧಾಂತ ಮೂಲೆಗುಂಪಾಗಿತ್ತು. ಈ ಎರಡೂ ಧರ್ಮಗಳು ಮುಸಲ್ಮಾನ ಋಷಿ ಸಿದ್ಧಾಂತದ ವಿಕಾಸಕ್ಕೆ ಹಾದಿಯನ್ನು ಹಸನು ಮಾಡಿಕೊಟ್ಟಿದ್ದವು. ಪೂರ್ವ ಇಸ್ಲಾಂ ಅವಧಿಯಲ್ಲಿನ ಬೌದ್ಧ ಧರ್ಮ ಮತ್ತು ಶೈವ ಸಿದ್ಧಾಂತಗಳ ರೀತಿಯೇ ಮುಸಲ್ಮಾನ ಋಷಿ ಪಂಥವೂ ಸಹ ವರ್ಣಾಶ್ರಮ ಹಾಗೂ ಧಾರ್ಮಿಕ ಸಂಪ್ರದಾಯ ವಿರೋಧಿಯಾಗಿತ್ತು. ಅದು ಎಲ್ಲ ಜಾತಿ, ಧರ್ಮ ಮತ್ತು ವರ್ಗಗಳನ್ನು ಮೀರಿದ ವಿಶ್ವ ಭ್ರಾತೃತ್ವವನ್ನು ಬೋಧಿಸುತ್ತಿತ್ತು. ಆದುದರಿಂದಲೇ ಮೊಹಮ್ಮದ್ ಯೂಸುಫ್ ತೇಂಗ್ ಅದನ್ನು 'ಮಾನವೀಯತೆಯ ಧರ್ಮ (ಮಝಬ್–ಎ–ಇನ್‌ಸಾನಿಯತ್) ಎಂದಿದ್ದಾರೆ. ಕಾಶ್ಮೀರಿ ಸೂಫಿ ಪರಂಪರೆ ಹಾಗೂ ಅಲ್ಲಿನ ಇಸ್ಲಾಂ ಸಾಂಪ್ರದಾಯಕ ಹಾಗೂ ಮೂಲಭೂತವಾದಿ ಇಸ್ಲಾಂಗಿಂತ ಭಿನ್ನವಾಗಿರುವುದಷ್ಟೇ ಅಲ್ಲ, ಇತರ ಸೂಫಿ ಪಂಗಡಗಳಿಗಿಂತಲೂ ಅದರ ತಾತ್ವಿಕ

ತಳಹದಿಯಲ್ಲಿ ಹಾಗೂ ಬದುಕಿನ ಆಚರಣೆಗಳ ರೀತಿಯಲ್ಲಿಯೂ ಭಿನ್ನವಾಗಿದೆ. ಆಧ್ಯಾತ್ಮದ ಉತ್ತುಂಗ ತಲುಪುವ ಹಾದಿ ಆಯ್ದುಕೊಂಡ ಈ ಪ್ರೇಮದ ಹಾದಿಯ ಪಥಿಕರು ಹಿಂದೂ ದಾರ್ಶನಿಕತೆಯ ಅದ್ವೈತವನ್ನು ಮತ್ತು ಇಸ್ಲಾಂನ 'ವಹದತ್-ಉಲ್-ವಾಜುದ್'(ದೇವನೊಬ್ಬನೆ)ನೊಂದಿಗೆ ಸಮೀಕರಿಸಿ ಧರ್ಮಸಮನ್ವಯವನ್ನು ಬೋಧಿಸತೊಡಗಿದರು.

ಕಾಶ್ಮೀರದ ಪೂರ್ವ-ಇಸ್ಲಾಂನ ಋಷಿ ಮತ್ತು ಮುನಿಗಳ ಹಾಗೆ, ಬೌದ್ಧ ಮತ್ತು ಜೈನ ಸಂನ್ಯಾಸಿಗಳ ಹಾಗೆ ಪ್ರಾಪಂಚಿಕವನ್ನು ಪರಿತ್ಯಾಗ ಮಾಡಿ ಋಷಿಸೂಫಿಗಳು ಬದುಕುತ್ತಿದ್ದರು, ಕಠಿನ ನೇಮಗಳನ್ನು ಆಚರಿಸುತ್ತಿದ್ದರು, ತಪಸ್ಸು ಮಾಡಲು ಗುಹೆಗಳಿಗೆ, ಪರ್ವತಗಳಿಗೆ ಹೋಗುತ್ತಿದ್ದರು, ಪ್ರಾಣಾಯಾಮದಂತಹ ಕಸರತ್ತು (ಪಾಸ್-ಎ-ಅನ್‌ಫಾಸ್) ಮಾಡುತ್ತಿದ್ದರು. ಬಹುಪಾಲು ಮುಸಲ್ಮಾನ ಋಷಿಗಳು ಮದುವೆಯಾಗುತ್ತಿರಲಿಲ್ಲ ಹಾಗೂ ಮಾಂಸಾಹಾರ ಮಾಡುತ್ತಿರಲಿಲ್ಲ. ಪ್ರಾಣಿ ಮತ್ತು ಸಸ್ಯಗಳಲ್ಲೆಲ್ಲ ದೇವನೆಂಬ 'ಸತ್ಯ' (ಹಖ್) ಇರುವುದರಿಂದ ಯಾವುದೇ ಜೀವಿಗೂ ನೋವುಂಟುಮಾಡಬಾರದೆಂದು ಅವರು ಒಣಗಿದ ಕಾಡು ಹಣ್ಣು, ತರಕಾರಿ, ಗೆಡ್ಡೆ, ಗೆಣಸು ತಿಂದು ಜೀವಿಸುತ್ತಿದ್ದರು. ಶೇಖ್ ನೂರ್-ಉದ್-ದಿನ್ ಸಹ ಕಾಡಿನಲ್ಲಿ ಹನ್ನೆರಡು ವರುಷ ಬರೇ ಹುಲ್ಲು ತಿಂದುಕೊಂಡು ತಪಸ್ಸು ಮಾಡಿಕೊಂಡಿದ್ದನಂತೆ. ಈ ರೀತಿ ಜನರಿಂದ ದೂರ ಇದ್ದುಕೊಂಡು ಮಾಡುವ ದೈವಾರಾಧನೆಯಿಂದ ಪ್ರಯೋಜನವಾದರೂ ಏನೆಂದು ಅರಿತ ಆತ ನಾಡಿಗೆ ಹಿಂದಿರುಗಿ ಆತ ಜನರಿಗಾಗಿ ದುಡಿಯತೊಡಗಿದ ಹಾಗೂ ಇತರರಿಗೆ ಸಹಾಯ ಮಾಡುವುದೇ ದೈವಭಕ್ತಿಯೆಂದು ಭಾವಿಸಿದ. ಕಾಶ್ಮೀರಕ್ಕೇ ವಿಶಿಷ್ಟವಾಗಿರುವ ಜಮಖಾನ ಮತ್ತು ಶಾಲು ನೇಯ್ಗೆಯನ್ನು ಪರಿಚಯಿಸಿದವರು ಮುಸಲ್ಮಾನ ಋಷಿಗಳೆಂದೇ ಹೇಳುತ್ತಾರೆ. ಜನರು ಸ್ವತಃ ದುಡಿದು ಸಂಪಾದಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು.

ಹದಿನಾರನೇ ಶತಮಾನದಲ್ಲಿ ಅಕ್ಬರನ ಆಸ್ಥಾನ ಚರಿತ್ರಕಾರ ಅಬುಲ್ ಫಜ಼ಲ್ ಮತ್ತು ಹದಿನೇಳನೇ ಶತಮಾನದಲ್ಲಿ ಸಾಮ್ರಾಟ ಜಹಾಂಗೀರ್ ಸಹ ಋಷಿ ಸೂಫಿಗಳ ಉತ್ತಮ ಗುಣಗಳನ್ನು ದಾಖಲಿಸಿದ್ದಾರೆ. ಋಷಿ ಸೂಫಿಗಳು ಹಿಂದೂ, ಬೌದ್ಧ ಮತ್ತು ಶೈವ ಸಿದ್ಧಾಂತಗಳ ತಳಹದಿಯ ಮೇಲೆ ತಮ್ಮ 'ವಿಶ್ವ ಭ್ರಾತೃತ್ವ'ದ ಅನುಭಾವದ 'ಧರ್ಮ'ವನ್ನು ರಚಿಸಿಕೊಂಡಿದ್ದರೂ ಸಹ ಅವರು ತಮ್ಮನ್ನು ಮುಸಲ್ಮಾನರೆಂದೇ ಭಾವಿಸಿಕೊಂಡಿದ್ದರು ಎಂದು ಮೋತಿಲಾಲ್ ಸಾಖಿ ಹೇಳಿದರೆ 1895ರಲ್ಲಿ ಡಬ್ಲ್ಯು. ಆರ್. ಲಾರೆನ್ಸ್ ಎಂಬಾತ ಕಾಶ್ಮೀರದ ಹಿಂದೂ-ಮುಸಲ್ಮಾನ ಸಮನ್ವಯತೆಯ ಬಗ್ಗೆ ಹೇಳುತ್ತ, 'ಕಾಶ್ಮೀರದ ಮುಸಲ್ಮಾನರು ಹಿಂದೂ ಧರ್ಮವನ್ನು ತ್ಯಜಿಸಿಯೇ ಇರಲಿಲ್ಲ' ಎಂದಿದ್ದಾನೆ. 'ಕಾಶ್ಮೀರದ ಮುಸಲ್ಮಾನರ ಆಚರಣೆಗಳು ಬಹುಪಾಲು ಸಾಂಪ್ರದಾಯಕ ಇಸ್ಲಾಮಿಗೆ ವಿರುದ್ಧವಾಗಿವೆ. ಶಕುನ ಹಾಗೂ ಮಂತ್ರತಂತ್ರಗಳನ್ನು ಕುರಾನ್ ನಿಷೇಧಿಸಿದ್ದರೂ ಸಹ ಜನ ಅವುಗಳನ್ನು ನಂಬುತ್ತಾರೆ. ಕಾಶ್ಮೀರದ ಹಲವಾರು ಮಸೀದಿಗಳಲ್ಲಿ ಇಂದಿಗೂ ನಮಾಜ಼ಿಗೆ ಮೊದಲು ಗಂಟೆ ಬಾರಿಸುತ್ತಾರೆ' ಎಂದು ಕಾಶ್ಮೀರದ ಇಸ್ಲಾಂ ಚರಿತ್ರಕಾರ ಜಿ.ಎಮ್.ಡಿ. ಸೂಫಿ ತಮ್ಮ ಇಸ್ಲಾಮಿಕ್ ಕಲ್ಚರ್ ಇನ್ ಕಾಶ್ಮೀರ್ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಈ ಬದುಕಿನ ರೀತಿಯನ್ನು ಹಲವಾರು ಉಲೇಮಾಗಳು ಟೀಕಿಸಿ ಋಷಿ ಸೂಫಿಗಳ ಬದುಕಿನ ಈ ರೀತಿ ಪ್ರವಾದಿ ತೋರಿಸಿಕೊಟ್ಟ ಹಾದಿಗಿಂತ (ಸುನ್ನತ್) ವಿರುದ್ಧವಾದುದು ಎಂದರು. ವಿಶಾಲ ಮನೋಭಾವದ, ಧರ್ಮ ಸಾಮರಸ್ಯ ಬೋಧಿಸುವ ಸೂಫಿ ಅನುಭಾವಿಗಳ ಹಾಗೂ ಸಾಂಪ್ರದಾಯಕ ಉಲೇಮಾಗಳ ನಡುವಿನ ಸಂಬಂಧ ಯಾವುದೇ ಮುಸಲ್ಮಾನ ಸಮಾಜದಲ್ಲಿಯೂ ಸುಗಮವಾಗಿರಲಿಲ್ಲ. ಅವರನ್ನು ಹೊರಗಟ್ಟಿ ಸಮಾಜದ ಅಂಚುಗಳಲ್ಲಿಡುತ್ತಿದ್ದರು ಹಾಗೂ ಇಡೀ ಸಮಾಜದ ಮೇಲೆ ಅವರ ಪ್ರಭಾವ ಬೀಳದಂತೆ ನೋಡಿಕೊಳ್ಳುತ್ತಿದ್ದರು. ಆದರೆ ಕಾಶ್ಮೀರದಲ್ಲಿ ಇದಕ್ಕೆ ತದ್ವಿರುದ್ಧವಾಗಿ ಇಡೀ ಸಮಾಜದ ಮೇಲೆ ಹೆಚ್ಚಿನ ಪ್ರಭಾವ ಇವರದೇ ಆಗಿತ್ತು. ಆದುದರಿಂದಲೇ ಕಾಶ್ಮೀರದ ಸಮಾಜ ಎಲ್ಲ ಇತರ ಮುಸಲ್ಮಾನ ಸಮಾಜಗಳಿಗಿಂತ ವಿಭಿನ್ನವಾಗಿದೆ. ಇಲ್ಲಿ ಸೂಫಿಗಳೇ ಮುಲ್ಲ ಮತ್ತು ಉಲೇಮಾಗಳನ್ನು ಛೇಡಿಸುವ ಸ್ವಾತಂತ್ರ್ಯ ಪಡೆದಿದ್ದರು. ಧರ್ಮದ ಹೆಸರಿನಲ್ಲಿ ಹಣ ಮಾಡುವ ಮುಲ್ಲಾಗಳನ್ನು ಖಂಡಿಸುತ್ತಿದ್ದರು.

ಅವರು ಅನುಭಾವದ ಕಾವ್ಯದ (ಶ್ರುಕ್) ಮೂಲಕ ಅವರು ಜನಸಾಮಾನ್ಯರ ಭಾಷೆಯೊಂದಿಗೆ ಸಂವಾದಿಸತೊಡಗಿದರು. ಋಷಿ ಶೇಖ್ ನೂರ್-ಉದ್-ದಿನ್ ತಮ್ಮ ಒಂದು ಶ್ರುಕ್‌ನಲ್ಲಿ ಈ ರೀತಿ ಹೇಳಿದ್ದಾರೆ:

ಒಂದೇ ತಂದೆತಾಯಿಯ ಮಕ್ಕಳಲ್ಲವೆ ನಾವು
ನಮ್ಮಲ್ಲೇಕಿರಬೇಕು ಒಡಕು?
ಹಿಂದೂ ಮುಸಲ್ಮಾನರು ಒಟ್ಟಿಗೇ ಪೂಜಿಸಲಿ
ಇರುವ ಒಬ್ಬನೇ ದೇವನನ್ನು
ಜೊತೆಯಲ್ಲೇ ಭೂಮಿಗೆ ಬಂದವರು ನಾವು
ನಾವಲ್ಲದೆ ಮತ್ತಾರು ಹಂಚಿಕೊಳ್ಳಬೇಕು
ನಮ್ಮ ಸುಖ ದುಃಖಗಳನ್ನು?

ಕಾಶ್ಮೀರವು ಮುಸಲ್ಮಾನ ಋಷಿಗಳಿಗೆ ಋಣಿಯಾಗಿರಬೇಕಿರುವುದು ಕಾಶ್ಮೀರಿ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಅವರ ಕೊಡುಗೆಯಿಂದಾಗಿ. ಉಲೇಮಾಗಳು ರಾಜರ ಆಸ್ಥಾನಗಳಲ್ಲಿದ್ದರೆ, ಮಧ್ಯ ಏಷ್ಯಾ ಮತ್ತು ಇರಾನ್‌ನಿಂದ ಬಂದ ಸೂಫಿಗಳು ಜನಸಾಮಾನ್ಯರಿಗೆ ಅರ್ಥವಾಗದ ಫಾರ್ಸಿ ಅಥವಾ ಅರೇಬಿಕ್ ಮಾತನಾಡುತ್ತಿದ್ದರು ಹಾಗೂ ಧಾರ್ಮಿಕವಾಗಿ ಉತ್ತುಂಗ ಸ್ಥಿತಿಯಲ್ಲಿದ್ದ ಕಾಶ್ಮೀರಿ ಪಂಡಿತರು ಸಂಸ್ಕೃತ ಮಾತನಾಡುತ್ತಿದ್ದರು. ಜನಸಾಮಾನ್ಯರೊಂದಿಗೆ ಅವರದೇ ಭಾಷೆಯೊಂದಿಗೆ ಮಾತನಾಡುತ್ತಿದ್ದವರು ಮುಸಲ್ಮಾನ ಋಷಿಗಳು ಮಾತ್ರ. ಅಲ್ಲಿನ ಪಂಡಿತರು ಸಂಸ್ಕೃತವನ್ನು 'ದೇವವಾಣಿ' ಎಂದು ಕರೆದರೆ ಕಾಶ್ಮೀರಿ ಭಾಷೆಯನ್ನು 'ಪೈಶಾಚ ಭಾಷೆ' ಎಂದು ಕರೆದರು. ಪೂರ್ವ ಇಸ್ಲಾಮಿನ ಕಾಶ್ಮೀರವನ್ನು ಪರಿಚಯಿಸುವ *ರಾಜತರಂಗಿಣಿ* ಬರೆದಿರುವ ಪಂಡಿತ ಕಲ್ಹಣ ಕಾಶ್ಮೀರಿ ಭಾಷೆಯನ್ನು ಕುಡುಕರು ಮಾತ್ರ ಮಾತನಾಡಬಹುದಾದ ಅಸಹ್ಯ ಭಾಷೆ ಎಂದಿದ್ದಾನೆ. ಋಷಿ ಸೂಫಿಗಳ ಮಾತು ಮತ್ತು ಬೋಧನೆ ಸರಳ ಭಾಷೆಯದಾಗಿದ್ದು ಅವು ತೀರಾ ಜನಸಾಮಾನ್ಯರಿಗಾಗಿತ್ತು. ಅವರು ಎಂದೂ ಶ್ರೀಮಂತರನ್ನು,

ನಗರ, ಪಟ್ಟಣಗಳನ್ನು ಅರಸಿ ಹೊರಟವರಲ್ಲ. ಆದುದರಿಂದಲೇ ಇಂದು ಕಾಶ್ಮೀರದಲ್ಲಿ ಸೂಫಿಗಳ ಸಮಾಧಿ ಅಥವಾ ದರ್ಗಾಗಳು ಎಲ್ಲಾ ಹಳ್ಳಿಗಳಲ್ಲಿವೆಯೇ ಹೊರತು ಪಟ್ಟಣಗಳಲ್ಲಿಲ್ಲ.

ಇಂದಿನ ಕಾಶ್ಮೀರ ಮತ್ತು ಸೂಫಿ ಪರಂಪರೆ

ಸೂಫಿಗಳ ಪ್ರಭಾವದಿಂದಾಗಿ ಕಾಶ್ಮೀರದಲ್ಲಿನ ಹಿಂದೂ-ಮುಸಲ್ಮಾನ ಧರ್ಮ ಸಮನ್ವಯತೆ ಇಡೀ ಭಾರತಕ್ಕೇ ಮಾದರಿಯಾಗಿತ್ತು. ಅದರಿಂದಾಗಿಯೇ 1947ರಲ್ಲಿ ಭಾರತ-ಪಾಕಿಸ್ತಾನ ವಿಭಜನೆಯಾದಾಗ ಕೋಮುದಂಗೆಗಳು ಪಕ್ಕದ ಜಮ್ಮುವನ್ನೊಳಗೊಂಡಂತೆ ಎಲ್ಲೆಡೆ ನಡೆಯುತ್ತಿದ್ದರೂ ಕಾಶ್ಮೀರದ ಕಣಿವೆಯಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲೆ ಯಾವುದೇ ದೌರ್ಜನ್ಯ ನಡೆಯಲಿಲ್ಲ. ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಕೆಡವಿದಾಗ ಕಾಶ್ಮೀರದಲ್ಲಿ ಕೋಮುಗಲಭೆಯುಂಟು ಮಾಡಲು ಕೆಲವರು ಪ್ರಯತ್ನಿಸಿ ಅಲ್ಲಿನ ಹಿಂದೂ ದೇವಾಲಯಗಳನ್ನು ಕೆಡವಲು ಮುಂದಾದಾಗ ಕಾಶ್ಮೀರದ ಮುಸಲ್ಮಾನರೇ ಅದರ ರಕ್ಷಣೆಗೆ ನಿಂತು ದೇವಾಲಯಗಳಿಗೆ ಹಾನಿಯಾಗದಂತೆ ತಡೆದರು.

ಆದರೆ ಇಂದು ಕಾಶ್ಮೀರದಲ್ಲಿ ಪರಿಸ್ಥಿತಿ ಎಂದಿನಂತಿಲ್ಲ. ಕಾಶ್ಮೀರದ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದ ಸೂಫಿ ಪರಂಪರೆ ಇಂದು ಕಣ್ಮರೆಯಾಗುತ್ತಿದೆ. ಶತಶತಮಾನಗಳಿಂದ ಹಿಂದು ಮತ್ತು ಮುಸಲ್ಮಾನರು ಅಲ್ಲಿ ಅನ್ಯೋನ್ಯವಾಗಿ ಬದುಕುತ್ತಾ ಬಂದಿದ್ದಾರೆ. ತಮ್ಮ ನಡುವೆ ಕಂದಕ ಉಂಟಾಗಿದೆ ಎಂಬುದನ್ನು ಅಲ್ಲಿನ ಜನ ಈಗಲೂ ನಿರಾಕರಿಸುತ್ತಾರೆ. ಕಾಶ್ಮೀರದಲ್ಲಿ ಏನೇ ಸಂಘರ್ಷಗಳಿದ್ದರೂ ಅದು ರಾಜಕಾರಣಿಗಳ ನಡುವೆ ಹಾಗೂ ರಾಜಕಾರಣ ಮಟ್ಟದಲ್ಲಿ ಮಾತ್ರ, ಕಾಶ್ಮೀರಿ ಜನರ ಸಮನ್ವಯದ ಸಾಮುದಾಯಕ ಮನಃಸ್ಥಿತಿಯಲ್ಲಿ ಯಾವುದೇ ಬದಲಾವಣೆ ಉಂಟಾಗಿಲ್ಲ ಎನ್ನುತ್ತಾರೆ. ಆದರೂ ಗಡಿಯಾಚೆಗಿನ ಮೂಲಭೂತವಾದಿಗಳು ಕಾಶ್ಮೀರದ ಧರ್ಮಸಾಮರಸ್ಯವನ್ನು ಹದಗೆಡಿಸಲು ಪ್ರಯತ್ನಿಸುತ್ತಿದ್ದಾರೆ. ಅದರ ಫಲವಾಗಿಯೇ ಸಾವಿರಾರು ಹಿಂದೂ ಪಂಡಿತ ಕುಟುಂಬಗಳು ಕಣಿವೆಯಿಂದ ನಿರಾಶ್ರಿತರಾಗಿ ಹೊರಹೋಗಬೇಕಾಯಿತು. ಅಲ್ಲದೆ ಇಂದಿನ ಯುವಪೀಳಿಗೆ ಈ ಅದ್ಭುತ ಧರ್ಮಸಮನ್ವಯದ ಪರಂಪರತೆಗೆ ಅಪರಿಚಿತವಾಗಿ ಬೆಳೆಯುತ್ತಿದೆ.

ಇಂದು ನಿಜವಾದ ಸೂಫಿ ಆಚರಣೆ ಕಾಶ್ಮೀರದಲ್ಲಿ ಕಡಿಮೆಯಾಗುತ್ತಿದೆ. ಹಿಂದೆ ದರ್ಗಾಗಳು ವಹಿಸಿದ್ದ ಪಾತ್ರ ಇಂದಿಲ್ಲ. ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದಲ್ಲಿ ಅವುಗಳ ನಿರ್ವಹಣೆ ಇರುವುದರಿಂದ ಇಂದು ಅವು ಬರೀ ಹಣಗಳಿಸುವ ವಾಣಿಜ್ಯ ಮಂದಿರಗಳಾಗಿವೆ. ದರ್ಗಾಗಳ ಮೇಲ್ವಿಚಾರಕರು ಹಿಂದಿನ ಸೂಫಿಗಳ ಬಗೆಗೆ ಪವಾಡದ ಕತೆಗಳನ್ನು ಕಟ್ಟಿ ಜನರನ್ನು ಮರಳುಮಾಡುತ್ತಿದ್ದಾರೆ. ರಾಜಕಾರಣಿಗಳು ತಮ್ಮ ರಾಜಕೀಯದ ಉದ್ದೇಶಗಳಿಗೆ ಅವುಗಳನ್ನು ಬಳಸಿಕೊಳ್ಳುತ್ತಿದ್ದಾರೆ, ಏಕೆಂದರೆ ಜನಸಾಮಾನ್ಯರು ಇಂದಿಗೂ ಭಕ್ತಿ, ಶ್ರದ್ಧೆಯಿಂದ ಅವುಗಳನ್ನು ಅನುಸರಿಸುತ್ತಾರೆ.

ದೇವಾಲಯ ಯಾವುದಾದರೇನು....

ಕೆಲದಿನಗಳ ಹಿಂದೆ ಪತ್ರಿಕೆಯಲ್ಲಿ ಸುದ್ದಿಯೊಂದಿತ್ತು. ಉತ್ತರ ಕರ್ನಾಟಕದಲ್ಲಿ ಹಿಂದೂ ದೇವಾಲಯದಲ್ಲಿ ನಮಾಜು ಮಾಡುತ್ತಿದ್ದ ಇಬ್ಬರು ಕಾಶ್ಮೀರದವರನ್ನು ಅವರು ಹಿಂದೂ ದೇವಾಲಯದಲ್ಲಿ ನಮಾಜು ಮಾಡಿದ 'ಅಪರಾಧ'ಕ್ಕಾಗಿ ಜನ ಹಿಡಿದು ಪೋಲಿಸರಿಗೆ ಕೊಟ್ಟಿದ್ದರು. ಆ ಇಬ್ಬರು ದೇವಸ್ಥಾನದಲ್ಲಿ ನಮಾಜು ಮಾಡಲು ಕಾರಣಗಳೇನು ಅಥವಾ ಅವರ ಮನಸ್ಸಿನಲ್ಲಿ ಏನಿತ್ತೆಂಬುದರ ಬಗೆಗೆ ಪತ್ರಿಕೆಯಲ್ಲಿ ವಿವರಗಳಿರಲಿಲ್ಲ. ಆಗ ಕೆಲ ವರ್ಷಗಳ ಹಿಂದೆ ಇಂಗ್ಲಿಷ್ ವಾರಪತ್ರಿಕೆಯೊಂದರಲ್ಲಿ ಓದಿದ ಸಣ್ಣ ವರದಿಯೊಂದು ನೆನಪಾಯಿತು. ಆ ವರದಿಗಾರ ಕಾಶ್ಮೀರಕ್ಕೆ ಹೋಗಿದ್ದಾಗ ಟ್ಯಾಕ್ಸಿಯೊಂದರಲ್ಲಿ ಸಂಜೆ ಶ್ರೀನಗರಕ್ಕೆ ಹಿಂದಿರುಗುವಾಗ ಟ್ಯಾಕ್ಸಿಯ ಮುಸಲ್ಮಾನ ಡ್ರೈವರ್ ಹತ್ತಿರದಲ್ಲೇ ಸೂರ್ಯದೇವನ ದೇವಾಲಯವೊಂದಿದೆಯೆಂದೂ, ಅದು ತುಂಬಾ ಸುಂದರವಾಗಿರುವುದರಿಂದ ಅದನ್ನು ನೋಡುವಿರೇನು ಎಂದು ಕೇಳಿದ. ವರದಿಗಾರನಿಗೂ ಸಮಯವಿದ್ದುದರಿಂದ ಆ ದೇವಾಲಯವನ್ನು ನೋಡೋಣವೆಂದು ಒಪ್ಪಿ ಹೊರಟರು. ಆ ಸುಂದರ ದೇವಾಲಯವನ್ನು ನೋಡುತ್ತಾ ಪ್ರಾಂಗಣದಲ್ಲಿ ಓಡಾಡುವಾಗ ಅಲ್ಲಿ ಕೆಲ ಮುಸಲ್ಮಾನರು ನಮಾಜು ಮಾಡುತ್ತಿದ್ದರು. ಈ ವರದಿಗಾರನಿಗೆ ಹಿಂದೂ ದೇವಾಲಯದಲ್ಲಿ ನಮಾಜು ಮಾಡುತ್ತಿದ್ದ ಮುಸಲ್ಮಾನರನ್ನು ಕಂಡು ಅಚ್ಚರಿಯಾಗಿ, ಕುತೂಹಲದಿಂದ ಅವರನ್ನೇ ಕೇಳೋಣವೆಂದು ಅವರ ಬಳಿ ಹೋಗಿ ಅವರಿಗೆ ಹಿಂದೂ ದೇವಾಲಯದಲ್ಲಿ ನಮಾಜು ಮಾಡಲು ಏನೂ ಅನ್ನಿಸುವುದಿಲ್ಲವೇ ಎಂದು ಕೇಳಿದನು. ಅದಕ್ಕವರಲ್ಲಿ ಒಬ್ಬಾತ, 'ದೇವಾಲಯ ಯಾವುದಾದರೇನು, ಎಲ್ಲರಿಗೂ ಹಾಗೂ ಎಲ್ಲೆಡೆಯೂ ಇರುವ ದೇವರು ಒಬ್ಬನೇ ಅಲ್ಲವೆ?' ಎಂದು ಪ್ರಶ್ನಿಸಿದನಂತೆ.

ಹೋ ಸರ್ಫಿ! ಆ ದೇವನ ಮುಖದ
ಪ್ರಜ್ವಲತೆಯ ಕಿರಣ ಕತ್ತಲನ್ನು ಬೆಳಕಾಗಿಸಿರುವಾಗ
ಕಾಬಾದಲ್ಲಿನ ಬೆಳಕು ಸೋಮನಾಥನಲ್ಲಿ
ಇಲ್ಲವೆನ್ನುವುದು ಹೇಗೆ ಸಾಧ್ಯ?
ಎಲ್ಲಿ ನೋಡಿದರೂ ಅದೇ ಮುಖದ ಬೆಳಕು
ಒಂದಲ್ಲ, ಎರಡಲ್ಲ, ನೂರು ಸಾವಿರ ಕನ್ನಡಿ
ನೋಡಿದರೂ ಅದೇ ಮುಖ!

– ಹಜರತ್ ಯಾಕೂಬ್ ಸಾಹಿಬ್ ಸರ್ಫಿ (ಕಾಶ್ಮೀರಿ ಸೂಫಿ ಕವಿ)

ಸೂಫಿ ಕತೆಗಳು

ಸೂಫಿಸಂಗೆ ಸೂಕ್ತ ಪದ ಎಂದರೆ, ಅರಾಬಿಕ್ ಪದ 'ಮರೀಫಾ'ದಿಂದ ವ್ಯುತ್ಪತ್ತಿಗೊಂಡಿರುವ 'ಇರ್ಫಾನ್', ಅಂದರೆ ಗ್ರಹಿಸು, ತಿಳಿ. ಸೂಫಿಸಂ ತನ್ನ ವಿದ್ಯಾರ್ಥಿಗಳ ಸುಪ್ತ ಸಾಮರ್ಥ್ಯ ಮತ್ತು ಪ್ರತಿಭೆಯ ಅನಾವರಣ ವಿಧಾನವನ್ನು ಬೋಧಿಸುತ್ತದೆ; ಅವರ ಗ್ರಹಣ ಸಾಮರ್ಥ್ಯವನ್ನು ವಿಸ್ತರಿಸುತ್ತದೆ; ಸೀಮಿತ ಎಲ್ಲೆಗಳನ್ನು ಧಿಕ್ಕರಿಸುತ್ತದೆ

ಹಾಗೂ ತನ್ಮೂಲಕ ಅವರೊಳಗಿನ ಆತ್ಮಸ್ವರ್ಗದೆಡೆಗಿನ ಪಯಣಕ್ಕೆ ಅನುವು ಮಾಡಿಕೊಡುತ್ತದೆ.

ಸೂಫಿ ಗುರುಗಳು ತಮ್ಮ ಶಿಷ್ಯರಿಗೆ ಶಿಕ್ಷಣದ ಮಾಧ್ಯಮವಾಗಿ ಕತೆಗಳನ್ನು ಹೇಳುತ್ತಿದ್ದರು. ಸೂಫಿಗಳ ಬದುಕಿನ ಘಟನೆಗಳೂ ಸಹ ಕತೆಗಳಾಗಿ ತಲೆತಲೆಮಾರುಗಳಿಂದ ಹರಿದುಬಂದಿವೆ. ಸೂಫಿ ಕತೆಗಳು ಮನರಂಜಿಸುತ್ತವೆ ಹಾಗೂ ನಿತ್ಯ ಬದುಕಿನ ನೀತಿ ಬೋಧಿಸುತ್ತವೆ. ಈ ಎರಡು ಉದ್ದೇಶಗಳ ಹಿಂದೆ ಅವುಗಳಿಗೆ ಮತ್ತೊಂದು ಉನ್ನತ ಉದ್ದೇಶವಿದೆ; ಅವು ಮನುಷ್ಯನ ಗ್ರಹಿಕೆಯ ಎಲ್ಲೆಗಳನ್ನು ವಿಸ್ತರಿಸುತ್ತವೆ, ಗ್ರಹಿಕೆಗೆ ಹೊಸ ಆಯಾಮಗಳನ್ನು ಕೊಡುತ್ತವೆ. ಎಲ್ಲಾ ಸೂಫಿ ಕತೆಗಳೂ ತಮ್ಮ ಅಂತರಾಳದಲ್ಲಿ ವಿವಿಧ ಆಯಾಮಗಳನ್ನು ಹಾಗೂ ಬಹುಸ್ತರ ಸಾಮರ್ಥ್ಯವನ್ನು ಹೊಂದಿವೆ.

ನಮ್ಮ ಪರಿಕಲ್ಪನೆಯನ್ನು ವಿಸ್ತೃತಗೊಳಿಸುವ ಅಂಗ ಮಿದುಳು. ಆ ಪರಿಕಲ್ಪನೆಯ 'ಅಂಗ'ದ ವಿಸ್ತೃತತೆ ಶಾಬ್ದಿಕ ಮತ್ತು ಶಾಬ್ದಿಕವಲ್ಲದ ಚಟುವಟಿಕೆಗಳು ಸಮ್ಮಿಳಿತವಾಗುವುದರ ಮೇಲೆ ಅವಲಂಬಿತವಾಗಿದೆ. ಭಾವುಕತೆ ಮತ್ತು ಬೌದ್ಧಿಕತೆಗಳು ಸಮತೋಲನದಲ್ಲಿ ಸಮ್ಮಿಳಿತವಾಗಿರುವಾಗ ಅಂತರ್‌ದೃಷ್ಟಿಯ ಔನ್ನತ್ಯ ಸಾಧ್ಯವಾಗುತ್ತದೆನ್ನುತ್ತಾರೆ ಮನೋವಿಜ್ಞಾನಿಗಳು. ಸೂಫಿಗಳು ಸಾಂಪ್ರದಾಯಕವಾಗಿ ಈ ಅಂತರ್‌ದೃಷ್ಟಿಯನ್ನು ವಿಸ್ತೃತಗೊಳಿಸುವ ಬಗೆಗೆ ಮೊದಲಿನಿಂದಲೂ ಹೇಳುತ್ತಾ ಬಂದಿದಾರೆ.

ಈಗಿನ ಶಿಕ್ಷಣ ಮಕ್ಕಳಲ್ಲಿ ಅಂತರ್‌ದೃಷ್ಟಿ ಗ್ರಹಿಕೆಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದಿಲ್ಲ. ತಮ್ಮ ನಂಬಿಕೆಗಳನ್ನು ತಾವು ತಿಳಿದಿರುವುದೇ ಸರಿ ಎಂದು ನಂಬಿರುವುದನ್ನು ಮಕ್ಕಳ ಮೇಲೆ ಬಲವಂತವಾಗಿ ಹೇರುತ್ತಾರೆ. ವಿಷಯವೊಂದನ್ನು ಅರ್ಥೈಸಿಕೊಳ್ಳುವಲ್ಲಿ ಅಂತರ್‌ದೃಷ್ಟಿಯ ಮತ್ತು ಗ್ರಹಣಶಕ್ತಿಯ ಮಹತ್ವದ ಅರಿವು ಅಂತಹ ಬೋಧಕರಿಗಿರುವುದಿಲ್ಲ. ಸೂಫಿಯೊಬ್ಬರು ಹೇಳಿರುವಂತೆ 'ಅದನ್ನು ಮಾಡುವುದು ಹೀಗೆ ಎನ್ನುವುದನ್ನು ಅದು ಸತ್ಯವೆಂಬ ನಂಬಿಕೆ ನನಗಿದೆ ಎಂಬುದು ಎಂದಿಗೂ ಸರಿದೂಗಿಸಲಾಗದು'. ಎಲ್ಲ ಮನುಷ್ಯರಲ್ಲಿ ಅಂತರ್‌ದೃಷ್ಟಿಯ ಗ್ರಹಣಶಕ್ತಿ ಸುಪ್ತವಾಗಿದೆ ಯೆಂದೂ ಹಾಗೂ ಅದನ್ನು ಅಭಿವೃದ್ಧಿಪಡಿಸಿದಲ್ಲಿ ಮನುಷ್ಯ ತನ್ನನ್ನು ಬದುಕಿನಲ್ಲಿ ಸಂಪೂರ್ಣವಾಗಿ ಮತ್ತು ಫಲಕಾರಿಯಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದೇ ಸೂಫಿ ಶಿಕ್ಷಣದ ಅಂತರಾಳ. ಈ ಅಂತರಾಳದ ದೀಪದ ಬೆಳಕೇ ಸೂಫಿ ಕತೆಗಳು.

ಸೂಫಿ ಗುರುಗಳು ತಮ್ಮ ಶಿಷ್ಯರನ್ನು ಇಂತಹ ಕಥಾ ಸಾಗರದಲ್ಲಿ ಮುಳುಗುವಂತೆ ಮಾಡುತ್ತಾರೆ. ಆ ಶಿಷ್ಯರಿಗೆ ಆ ಕತೆಗಳ ಕೊಂಚ 'ಅರಿವು' ಕೂಡಲೇ ಸಿಗಬಹುದು. ಆದರೆ ಆ ಕತೆಗಳ ಅಂತರಾಳದ ವಿವಿಧ ಆಯಾಮಗಳು ಆ ಶಿಷ್ಯ ಅವುಗಳಿಗಾಗಿ 'ತಯಾರಾದಾಗ' ಅವು ತನ್ನಂತಾನೇ ತೆರೆದುಕೊಳ್ಳುತ್ತವೆ. ಅವರು ತಮ್ಮ ಶಿಷ್ಯರಿಗೆ ಯಾವುದನ್ನೂ ಬಲವಂತವಾಗಿ ಹೇರುವುದಿಲ್ಲ. ಇದೇ ಸತ್ಯ ಎಂದು ಅರಚುವುದಿಲ್ಲ. ಈ ರೀತಿಯ ಹೇರಿಕೆ ಮತ್ತು ನಂಬಿಕೆ ಮನುಕುಲದ ಅಸ್ತಿತ್ವಕ್ಕೆ ಕಂಟಕಕಾರಿ ಎನ್ನುತ್ತಾರೆ ಅವರು.

ಸೂಫಿ ಕತೆಗಳು ಮನರಂಜನಾತ್ಮಕವಾಗಿರುವುದರಿಂದ ಅದರ ಅಂತರಾಳ ಅರಿವಾಗದಿದ್ದರೂ ಜನ ಅವುಗಳನ್ನು ಮತ್ತೆ ಮತ್ತೆ ಹೇಳುತ್ತಾ ಹೋಗುತ್ತಾರೆ. ಶತಶತಮಾನಗಳ ಈ ಹಳೆಯ ಕತೆಗಳು ಯಾವುದೇ ಗುರುವಿಲ್ಲದಿದ್ದರೂ ಒಬ್ಬರಿಂದೊಬ್ಬರಿಗೆ, ಊರಿಂದೂರಿಗೆ, ದೇಶದಿಂದ ದೇಶಕ್ಕೆ ಸಂಸ್ಕೃತಿಗಳ ಎಲ್ಲೆಗಳನ್ನು ಮೀರಿ ಸುಲಭವಾಗಿ ಹರಡಿಕೊಂಡಿವೆ. ಹಾಗಾಗಿ ಇಂದು ಸೂಫಿ ಕತೆಗಳು ಮಕ್ಕಳ ಕತೆಗಳಲ್ಲಿ, ಪಠ್ಯ ಪುಸ್ತಕಗಳಲ್ಲಿ ಹಾಗೂ ಜಾನಪದ ಕತೆಗಳಲ್ಲೂ ಸಹ ಸೇರಿಕೊಂಡಿವೆ.

ಸೂಫಿ ಕತೆಗಳು

ಶ್ರದ್ಧೆಯಿಂದ ನಡೆ

ಒಂದೂರಿನಲ್ಲಿ ಒಬ್ಬ ಮೌಲ್ವಿ ಇದ್ದ. 'ನೀವು ದೇವರ ಹೆಸರನ್ನು ಹೇಳಿದಲ್ಲಿ ಏನು ಬೇಕಾದರೂ ಸಾಧಿಸಬಹುದು' ಎಂದು ಮೌಲ್ವಿ ಸದಾ ತನ್ನ ಬೋಧನೆಗಳಲ್ಲಿ ತಿಳಿಸುತ್ತಿದ್ದ. ಒಂದು ದಿನ ನದಿಯನ್ನು ದಾಟಲು ದಡದಲ್ಲಿ ದೋಣಿಗಾಗಿ ಕಾಯುತ್ತಿದ್ದಾಗ ಆತನ ಅನಕ್ಷರಸ್ಥ ಶಿಷ್ಯನೊಬ್ಬ ಮೌಲ್ವಿಯ ಬಳಿ ಬಂದು 'ಸ್ವಾಮಿ, ದೋಣಿ ಬರುವುದು ಇನ್ನೂ ತಡವಾಗುತ್ತದಂತೆ. ನನ್ನ ಮಗುವಿಗೆ ಮೈ ಹುಷಾರಿಲ್ಲ, ಬೇಗ ಹೋಗಬೇಕು, ಏನು ಮಾಡಲಿ?' ಎಂದು ಕೇಳಿದ

'ದೋಣಿ ಬರದಿದ್ದರೆ ನಾನೇನು ಮಾಡಲಿ? ನಾನೂ ದೋಣಿಗಾಗಿಯೇ ಕಾಯುತ್ತಿದ್ದೇನೆ' ಎಂದ ಮೌಲ್ವಿ ಸಿಡುಕುತ್ತ.

'ಸ್ವಾಮಿ, ನಾನೊಬ್ಬ ಬಡವ, ಏನೂ ಅರಿಯದವ, ನೀವು ಎಲ್ಲಾ ಬಲ್ಲ ಜ್ಞಾನಿಗಳು, ನನಗೊಂದು ದಾರಿ ತೋರಿಸಿ' ಎಂದ ಆತನ ಶಿಷ್ಯ.

'ನಾನು ಎಷ್ಟು ಸಾರಿ ನಿನಗೆ ಹೇಳಿಲ್ಲ, ದೇವರ ಹೆಸರು ಹೇಳಿದಲ್ಲಿ ಏನು ಬೇಕಾದರೂ ಮಾಡಬಹುದೆಂದು. ಈಗ ಹೋಗು, ನನಗೆ ಸುಮ್ಮನೆ ತೊಂದರೆ ಕೊಡಬೇಡ' ಎಂದು ಗದರಿಸಿ ಕಳುಹಿಸಿದ.

ಹಲವಾರು ದಿನಗಳ ನಂತರ ಮೌಲ್ವಿ ಮತ್ತೊಮ್ಮೆ ನದಿಯ ದಡದಲ್ಲಿ ದೋಣಿಗಾಗಿ ಕಾಯುತ್ತ ನಿಂತಿದ್ದ. ಆಗ ಅಲ್ಲಿಗೆ ಅದೇ ಶಿಷ್ಯ ಬಂದು, 'ಸ್ವಾಮಿ, ನೀವೇಕೆ ಇಲ್ಲಿ ನಿಂತಿದ್ದೀರಿ? ನದಿಯನ್ನೇಕೆ ದಾಟುತ್ತಿಲ್ಲ? ಎಂದು ಕೇಳಿದ.

'ನಾನು ಹೇಗೆ ದಾಟಲಿ? ನೀನೊಬ್ಬ ಮೂರ್ಖ, ದಾಟಲು ದೋಣಿಯೆ ಇಲ್ಲವಲ್ಲ. ನಿನಗೇನು ಕಣ್ಣು ಕಾಣುವುದಿಲ್ಲವೆ? ಯಾವಾಗಲೂ ಈ ರೀತಿಯ ಮೂರ್ಖ ಪ್ರಶ್ನೆಗಳನ್ನು ಕೇಳಿ ನನ್ನ ತಲೆ ಏಕೆ ತಿನ್ನುತ್ತೀಯ? ಹೋಗು ಇಲ್ಲಿಂದ' ಎಂದು ಗದರಿಸಿದ.

'ನಿಮಗೆ ತೊಂದರೆ ಕೊಟ್ಟಿದ್ದಕ್ಕೆ ನನ್ನನ್ನು ಕ್ಷಮಿಸಿ ಸ್ವಾಮಿ. ನದಿದಾಟುವ ದಾರಿಯನ್ನು ನೀವೇ ನನಗೆ ತೋರಿಸಿದ್ದೀರಿ ಹಾಗೂ ಅಂದಿನಿಂದ ನಾನು ನದಿಯನ್ನು ಅದೇ ರೀತಿ ದಾಟುತ್ತಿದ್ದೇನೆ' ಎಂದು ಹೇಳಿ ದೇವರ ಹೆಸರನ್ನು ಧ್ಯಾನಿಸುತ್ತಾ ನದಿಯ ನೀರಿನ ಮೇಲೆ ನಡೆದುಕೊಂಡು ಹೋದ.

ಇದನ್ನು ಕಂಡು ಬೆಕ್ಕಸಬೆರಗಾದ ಮೌಲ್ವಿ, 'ಹೆಚ್ಚು ಕತ್ತಲಿರುವುದು ದೀಪದ ಕೆಳಗೆ ಎನ್ನುವುದು ಎಷ್ಟು ಸತ್ಯ!' ಎಂದುಕೊಂಡ.

ಬದುಕೆಂಬ ಸೇತುವೆ

ಬೊಹ್ಲುಲ್ ಸೇತುವೆಯ ಮೇಲೆ ಕೂತು ಹರಿಯುತ್ತಿದ್ದ ನದಿಯನ್ನು ನೋಡುತ್ತಾ ಮೈ ಮರೆತಿದ್ದ. ಅಲ್ಲಿ ಹಾದು ಹೋಗುತ್ತಿದ್ದ ರಾಜ ಬೊಹ್ಲುಲ್‌ನನ್ನು ನೋಡಿ ಕೂಡಲೇ ಆತನನ್ನು ಬಂಧಿಸಿ ತರುವಂತೆ ಅಜ್ಞಾಪಿಸಿದ.

'ಸೇತುವೆ ಇರುವುದು ಹಾದು ಹೋಗಲು, ಅಲ್ಲೇ ಕೂತಿರಲು ಅಲ್ಲ' ಎಂದ ರಾಜ.

ಅದಕ್ಕೆ ಬೊಹ್ಲುಲ್ ಹೇಳಿದ, 'ಒಮ್ಮೆ ನಿನ್ನನ್ನೇ ನೋಡಿಕೊ, ಸೇತುವೆಯೆಂಬ ಈ ಬದುಕಿಗೆ ಹೇಗೆ ಅಂಟಿಕೊಂಡಿದ್ದೀಯೆ.'

ಸರ್ವಾಂತರ್ಯಾಮಿ

ಒಬ್ಬ ಸೂಫಿ ಶಿಷ್ಯ ಹಲವಾರು ವರ್ಷಗಳನ್ನು ಸತ್ಯ ಹಾಗೂ ಜ್ಞಾನದ ಅನ್ವೇಷಣೆಯಲ್ಲಿ ಪ್ರಾರ್ಥನೆ ಹಾಗೂ ತಪಸ್ಸಿನಲ್ಲಿ ಕಳೆದ. ಆತ ಅಲ್ಲಾಹ್‌ನನ್ನು ಸತ್ಯದ ದರ್ಶನ ಮಾಡಿಸುವಂತೆ ಪ್ರಾರ್ಥನೆ ಮಾಡಿಕೊಂಡ.

ಒಂದು ರಾತ್ರಿ ತಪ್ಪಸ್ಸಿನಲ್ಲಿ ಗಾಢವಾಗಿ ಮುಳುಗಿದ್ದಾಗ ಸೂಫಿ ಸಂತ ಹಜ್ರತ್ ಖಿಜಿರ್ ಆತನ ಮುಂದೆ ಕಾಣಿಸಿಕೊಂಡು, 'ಓ ಸಾಲಿಕ್ ಹೇಳು, ಜಾತ್-ಎ-ಬಾರಿ ಬಗ್ಗೆ ನೀನು ಏನು ತಿಳಿದುಕೊಳ್ಳಬೇಕಾಗಿದೆ?' ಎಂದು ಕೇಳಿದರು.

ತನ್ನ ಪ್ರಾರ್ಥನೆ ಹಾಗೂ ತಪಸ್ಸಿಗೆ ಪ್ರತಿಫಲ ಸಿಕ್ಕಿದ್ದರಿಂದ ಸಂತೋಷಗೊಂಡ ಶಿಷ್ಯ 'ಅಲ್ಲಾಹ್ ಎಲ್ಲಿದ್ದಾನೆ ಹೇಳು?' ಎಂದು ಕೇಳಿದ.

ಅದಕ್ಕೆ ಖಿಜಿರ್ ಉತ್ತರಿಸಿದ,

'ಖಿಜಿರ್ ಏನು ಹೇಳಬಲ್ಲ?
ಅಥವಾ, ಏಕಾದರೂ ಹೇಳಬೇಕು?
ಮೀನೇನಾದರೂ ಕೇಳಿದರೆ
ನೀರು ಎಲ್ಲಿದೆ ಎಂದು?'

ಅತ್ಯಂತ ಬೆಲೆ ಬಾಳುವಂತಹುದು

ಅಮೀರ್ ಖುಸ್ರೊ ತನ್ನ ಪೀರ್ ಹಜ್ರತ್ ನಿಜಾಮುದ್ದೀನ್‌ರನ್ನು ತನ್ನ ಬದುಕಿನಲ್ಲಿ ಎಲ್ಲಾದುದಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ. ಒಂದು ದಿನ ಅತ್ಯಂತ ಬೆಲೆ ಬಾಳುವ ವಸ್ತುಗಳನ್ನು ಕೊಂಡು ಪೆಷಾವರ್‌ನಿಂದ ತನ್ನ ಕಾರವಾನ್‌ನಲ್ಲಿ ದೆಹಲಿಗೆ ಹಿಂದಿರುಗುತ್ತಿದ್ದಾಗ gÁwæAiÀÄ¯Éè ÄvÀÄ D gÁwæ ಸರಾಯ್ (ಛತ್ರ) ಒಂದರಲ್ಲಿ ಉಳಿದುಕೊಂಡ. ಆತನಿಗೆ ಅಲ್ಲೇ ಎಲ್ಲೋ ಹತ್ತಿರದಲ್ಲೇ ತನ್ನ ಪೀರ್ ಇದ್ದಾನೆ ಎಂದೆನ್ನಿಸುತ್ತಿತ್ತು.

ಅದೇ ಕುತೂಹಲದಲ್ಲಿದ್ದಾಗ ಹಜ್ರತ್ ನಿಜಾಮುದ್ದೀನರ ಬಳಿಯಿಂದ ಬಂದಿದ್ದ ಒಬ್ಬಾತ ಅಲ್ಲೇ ಉಳಿದುಕೊಂಡಿದ್ದ. ಆತನ ಮುಖದಲ್ಲಿ ಬೇಸರ ಮತ್ತು ನಿರಾಸೆಯಿತ್ತು. ಏಕೆಂದು ಖುಸ್ರೊ ಕೇಳಿದ್ದಕ್ಕೆ ಆತ, 'ಹಲವಾರು ದಿನ ನಿಜಾಮುದ್ದೀನರ ಬಳಿ ಕಳೆದಿದ್ದಕ್ಕೆ ನನಗೆ ಸಿಕ್ಕಿದ್ದು ಇಷ್ಟೆ ನೋಡಿ' ಎಂದು ಪೀರರು ತನಗೆ ಕೊಟ್ಟಿದ್ದ ಅವರ ಕಿತ್ತುಹೋಗಿರುವ ಚಪ್ಪಲಿಗಳನ್ನು ತೋರಿಸಿದ.

ಆ ಕಿತ್ತು ಹೋಗಿರುವ ಚಪ್ಪಲಿಗಳನ್ನು ಕಂಡ ಖುಸ್ರೊ ಸಂತೋಷದಿಂದ 'ಆ ಚಪ್ಪಲಿಗಳನ್ನು ನನಗೆ ಮಾರುವೆಯಾ? ಎಂದು ಕೇಳಿದ.

'ಈ ಕಿತ್ತು ಹೋಗಿರುವ ಚಪ್ಪಲಿಗಳು ಎಷ್ಟು ಮಹಾ ಬೆಲೆಬಾಳಬಲ್ಲವು?' ಎಂದ ಆತ ಖುಸ್ರೋನ ಮಾತುಗಳನ್ನು ನಂಬಲಾರದೆ.

'ನನ್ನ ಕಾರವಾನ್‌ನಲ್ಲಿರುವ ಎಲ್ಲಾ ವಸ್ತುಗಳನ್ನು ಹಾಗೂ ಒಂಟೆಗಳನ್ನೂ ಈ ಕಿತ್ತುಹೋಗಿರುವ ಪೀರರ ಚಪ್ಪಲಿಗೆ ಬದಲಾಗಿ ಕೊಟ್ಟುಬಿಡುತ್ತೇನೆ. ನನ್ನ ಬಳಿ ಇನ್ನೂ ನೂರು ಕಾರವಾನ್ ಇದ್ದಿದ್ದರೂ ನಿನಗೆ ಕೊಟ್ಟುಬಿಡುತ್ತಿದ್ದೆ. ನನ್ನ ಪ್ರೀತಿಪಾತ್ರರಾದ ಪೀರ್‌ರ ನೆನಪಿಗೆ' ಎಂದು ಖುಸ್ರೊ.

ಖುಸ್ರೊ ದೆಹಲಿಗೆ ಹಿಂದಿರುಗಿದಾಗ ಖುಸ್ರೋನನ್ನು ಕಂಡು, 'ಹುಡುಕುವವನಿಗೆ ಅಲ್ಲಾಹ್ ಆತನಿಗೆ ಬೇಕಾದುದನ್ನು ಹಾಗೂ ಅಷ್ಟೇ ಬೆಲೆ ಬಾಳುವಂತಹುದನ್ನು ಕೊಟ್ಟೇ ಕೊಡುತ್ತಾನೆ' ಎಂದರು ಹಜ್ರತ್ ನಿಜಾಮುದ್ದೀನ್.

ಛತ್ರ

ಬಾಲ್ಕ್‌ನ ಸುಲ್ತಾನ ಇಬ್ರಾಹಿಂ ಆದಂ ಒಂದು ದಿನ ತನ್ನ ಆಸ್ಥಾನದಲ್ಲಿ ಕೂತಿದ್ದಾಗ ಒಬ್ಬ ಫಕೀರ ಆಸ್ಥಾನವನ್ನು ಪ್ರವೇಶಿಸಿದ. ಆ ಫಕೀರನಲ್ಲಿ ಎಂಥದೋ ತೇಜಸ್ಸು ಇತ್ತು. ಆತನನ್ನು ಆಹ್ವಾನದ ಭಟರಾಗಲಿ, ಸೈನಿಕರಾಗಲಿ ತಡೆದು ನಿಲ್ಲಿಸಲು ಆಗಲಿಲ್ಲ. ಆಸ್ಥಾನಕ್ಕೆ ಪ್ರವೇಶಿಸಿದ ಫಕೀರ ನೇರ ಸುಲ್ತಾನನ ಬಳಿ ಹೋಗಿ ಸಿಂಹಾಸನದ ಪಕ್ಕದಲ್ಲಿ ತನ್ನ ಚಾಪೆಯನ್ನು ಹಾಸಿಕೊಂಡ. ಸುಲ್ತಾನನಿಗೆ ಏನೊಂದೂ ಅರ್ಥವಾಗದೆ,

'ಏನು ಮಾಡುತ್ತಿದ್ದೀಯ?' ಎಂದು ಗದರಿಸಿದ.

'ಈ ರಾತ್ರಿ ನಾನು ಈ ಛತ್ರದಲ್ಲಿ ಕಳೆಯಬೇಕಾಗಿದೆ. ಅದಕ್ಕೆ ಚಾಪೆ ಹಾಸಿಕೊಳ್ಳುತ್ತಿದ್ದೇನೆ.' ಎಂದ ಫಕೀರ.

'ಇದು ಛತ್ರವಲ್ಲ, ಇದು ನನ್ನ ಅರಮನೆ' ಎಂದು ಇಬ್ರಾಹಿಂ ಸಿಟ್ಟಿನಿಂದ, 'ಹೌದೇನು? ಹಾಗಾದರೆ ನಿನಗಿಂತ ಮೊದಲು ಇಲ್ಲಿ ಯಾರು ವಾಸಿಸುತ್ತಿದ್ದರು ಹೇಳು?' ಎಂದ ಫಕೀರ.

'ನಮ್ಮ ತಂದೆ' ಉತ್ತರಿಸಿದ ಇಬ್ರಾಹಿಂ.

'ಆತನಿಗೂ ಮೊದಲು?' ಪ್ರಶ್ನಿಸಿದ ಫಕೀರ

'ನನ್ನ ತಾತ' ಎಂದ ಸುಲ್ತಾನ.

'ಆತನಿಗೂ ಮೊದಲು?' ಮತ್ತೆ ಪ್ರಶ್ನಿಸಿದ ಫಕೀರ.

'ನಮ್ಮ ಮುತ್ತಾತ, ಆತನಿಗೂ ಮೊದಲು ನಮ್ಮ ವಂಶದ ಏಳೂ ತಲೆಮಾರುಗಳು ಈ ಅರಮನೆಯಲ್ಲಿ ಜೀವನ ನಡೆಸಿವೆ' ಎಂದ ಸುಲ್ತಾನ ಹೆಮ್ಮೆಯಿಂದ.

'ನಿನಗಿಂತ ಮೊದಲು ಎಷ್ಟೊಂದು ಜನ ಇಲ್ಲಿ ಇದ್ದು ಹೋಗಿದ್ದಾರೆ. ನಿನ್ನ

ನಂತರವೂ ಬಹಳಷ್ಟು ಜನ ಇಲ್ಲಿ ಇದ್ದು ಹೋಗಲಿದ್ದಾರೆ. ಹಾಗಿರುವಾಗ ಇದು ಛತ್ರವಲ್ಲವೆ ಮತ್ತೇನು?' ಕೇಳಿದ ಫಕೀರ.

ಸ್ವರ್ಗದ ಸೇಬು

ಸತ್ಯಾನ್ವೇಷಣೆಯಲ್ಲಿರುವ ಗುರುಗಳಿಗೆ ಎದುರಾಗುವ ದೊಡ್ಡ ತೊಂದರೆ ಎಂದರೆ ಸಾಮಾನ್ಯ ಜನ ಅವರಿಂದ ನಿರೀಕ್ಷಿಸುವ ಅಸಾಮಾನ್ಯ ಪವಾಡಗಳು. ಒಮ್ಮೆ ಮುಲ್ಲಾ ನಸ್ರುದ್ದೀನರಿಗೂ ಹೀಗೇ ಆಗಿತ್ತು. ಒಂದು ಶುಕ್ರವಾರದ ದಿನ ಪ್ರಾರ್ಥನೆಯ ನಂತರ ಮುಲ್ಲಾ ನೆರೆದಿದ್ದ ಜನಕ್ಕೆ ಸ್ವರ್ಗದ ಬಗ್ಗೆ ತಿಳಿಸುತ್ತಿದ್ದರು ಹಾಗೂ ಜನ ಒಳ್ಳೆಯವರು ಹಾಗೂ ಪರಿಶುದ್ಧರಾಗಿದ್ದಲ್ಲಿ ಸ್ವರ್ಗಕ್ಕೆ ಹೋಗಬಹುದು ಎಂದು ಸಹ ತಿಳಿಸುತ್ತಿದ್ದರು. ಎಲ್ಲ ಗುಂಪುಗಳಲ್ಲಿ ಇರುವಂತೆ ಅಲ್ಲಿಯೂ ಸಹ ಒಬ್ಬ ತರಲೆ ಮಾಡುವವನಿದ್ದ. ಅವನು, 'ಸ್ವಾಮಿ, ಸ್ವರ್ಗದ ಸುಖ ಭೋಗಗಳ ಬಗ್ಗೆ ನೀವು ಎಷ್ಟು ಹೇಳಿದರೆ ಏನು ಬಂತು, ಮುಂದೆ ನಮಗೆ ಅವೆಲ್ಲಾ ಸ್ವರ್ಗದಲ್ಲಿ ಸಿಗುತ್ತವೆಯೋ ಇಲ್ಲವೋ ಅದೂ ಸಹ ತಿಳಿದಿಲ್ಲ. ಸ್ವರ್ಗದಲ್ಲಿ ಸಿಗಬಹುದಾದುದರ ಮಾದರಿ ಸಹ ನಾವು ನೋಡುವ ಹಾಗಿಲ್ಲ ವಲ್ಲ? ಎಂದು ಕೇಳಿದ.

'ಹೋ, ಅಪನಂಬಿಕೆಯವನೆ, ನಿನಗೆ ಮನವರಿಕೆಯಾಗಬೇಕಾದರೆ ಏನು ಮಾಡಬೇಕು ಹೇಳು' ಕೇಳಿದರು ಸೂಫಿ ಬೇಸರಿದಿಂದ.

'ನೀವು ಸ್ವರ್ಗದಲ್ಲಿನ ಸೇಬಿನ ಬಗ್ಗೆ ಹೇಳುತ್ತಿದ್ದೀರಲ್ಲ. ಆ ಸೇಬಿನ ರುಚಿ ನೋಡೋಣ, ಸ್ವರ್ಗದಿಂದ ಒಂದು ತರಿಸಿ ಕೊಡಿ' ಸವಾಲೆಸೆದ ಆತ.

ಮುಲ್ಲಾನಸ್ರುದ್ದೀನ್ ತಮ್ಮ ಕೈಮೇಲೆ ಮಾಡಿ ಹೊಗೆ ಬರಿಸಿ ಆ ಹೊಗೆಯ ಮೋಡದೊಳಗಿನಿಂದ ಒಂದು ಸೇಬು ತರಿಸಿ ಆ ಅಪನಂಬಿಕೆಯಾತನಿಗೆ ಕೊಡುತ್ತಾ

'ತಗೋ ಸ್ವರ್ಗದ ಸೇಬು ಹೇಗಿದೆಯೆಂದು ರುಚಿ ನೋಡು' ಎಂದರು.

ಆತ ಆ ಸೇಬಿನ ರುಚಿ ನೋಡಿ, 'ಹೌದೌದು, ಸ್ವರ್ಗದ ಸೇಬೇ ಇರಬೇಕು. ಏಕೆಂದರೆ ಇದು ಕೊಳೆತಿದೆ!' ಎಂದ ಮುಖ ಸಿಂಡರಿಸುತ್ತ.

'ಹೌದು ಅದು ಕೊಳೆತಿದೆ', ಹೇಳಿದರು ನಸ್ರುದ್ದೀನ್, 'ನಿನ್ನಂತಹವನಿಗೆ ಸ್ವರ್ಗದಲ್ಲಿ ಸಿಗುವುದು ಅಂತಹ ಹಣ್ಣುಗಳೇ!'

ಕಲಿಯಲು ಕಲಿ

ಒಬ್ಬಾತ ಸೂಫಿ ಗುರುವಿನ ಬಳಿ ಹೋಗಿ 'ಸ್ವಾಮಿ, ನಾನು ಸತ್ಯ ಹಾಗೂ ವಾಸ್ತವದ ಬಗ್ಗೆ ಅರಿಯಬೇಕೆಂದಿದ್ದೇನೆ. ದಯಮಾಡಿ ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ' ಎಂದು ಕೇಳಿದ. ಆತನ ಮಾತನ್ನು ಕೇಳುತ್ತಾ ಕೂತಿದ್ದ ಗುರು ಮೇಲೆದ್ದು, 'ಬಾ ಹೋಗಿ ಸ್ವಲ್ಪ ನೀರು ತರೋಣ' ಎಂದು ಆತನನ್ನು ಕರೆದೊಯ್ದರು. ಆತನನ್ನು ಬಾವಿಯ ಬಳಿ ಕರೆದೊಯ್ದ ಗುರು ತಾನು ತಂದಿದ್ದ ಪಾತ್ರೆಯನ್ನು ಬಾವಿಯ ಅಂಚಿನ ಮೇಲೆ ಇಟ್ಟು ಬಾವಿಯಿಂದ ನೀರು ಸೇದಿ ಪಾತ್ರೆಗೆ ಹೊಯ್ಯತೊಡಗಿದರು. ಪಾತ್ರೆ ತುಂಬಿ ನೀರು ಹೊರಚೆಲ್ಲುತ್ತಿದ್ದರೂ ನೀರು ಸೇದಿ ಹೊಯ್ಯುತ್ತಲೇ ಇದ್ದರು. ಅದನ್ನು ನೋಡುತ್ತಲೇ ಇದ್ದ ಶಿಷ್ಯನಿಗೆ ಗುರುವಿನ ರೀತಿ ಅರ್ಥವಾಗದೆ, 'ತುಂಬಿರುವ ಪಾತ್ರೆಗೆ ನೀರು ಹೊಯ್ಯುವುದರಲ್ಲಿ ಏನು ಅರ್ಥವಿದೆ? ನೋಡಿ ಪಾತ್ರೆ ತುಂಬಿದೆ. ಇನ್ನು ಹೆಚ್ಚಿನ ನೀರು ಅದರಲ್ಲಿ ಹಿಡಿಸದು' ಎಂದ.

ಅದಕ್ಕೆ ಸೂಫಿ ಗುರು, 'ನೋಡಪ್ಪಾ, ನಿನ್ನ ಮನಸ್ಸು ಸಹ ಈ ಪಾತ್ರೆಯ ತರಹ. ಅದರಲ್ಲಿ ತುಂಬಿರುವ ಪೂರ್ವಾಪರ ಪರಿಕಲ್ಪನೆಗಳನ್ನು, ಬೇಡದ ಮೌಲ್ಯಗಳನ್ನು, ಭಾವನೆಗಳನ್ನು ಖಾಲಿ ಮಾಡದೆ ಅದರಲ್ಲಿ ಸತ್ಯ ಹಾಗೂ ವಾಸ್ತವವನ್ನು ತುಂಬುವುದಾದರೂ ಹೇಗೆ?' ಎಂದರು.

ಚಿನ್ನದ ಮಡಕೆಗಳು

'ಏಕೆ ಬೇಸರದಿಂದ ಏನೋ ಆಲೋಚಿಸುತ್ತಿದ್ದೀಯೆ?' ಕೇಳಿದರು ಸೂಫಿ ಗುರು ತಮ್ಮ ಶಿಷ್ಯನನ್ನು. 'ನಿನ್ನನ್ನು ಚಿಂತೆಗೊಳಗಾಗಿಸಿರುವುದು ಖಿಜಿರ್(ಪ್ರವಾದಿ)ರವರ ಚಿನ್ನದ ಮಡಕೆಗಳೆ?'

'ಹೌದು, ಅದು ನಿಮಗೆ ಹೇಗೆ ತಿಳಿಯಿತು?' ಕೇಳಿದ ಶಿಷ್ಯ.

'ಖಿಜಿರ್ ನನ್ನನ್ನೂ ಸಹ ಕೇಳಿದ್ದರು, ನನಗೂ ಆ ಚಿನ್ನ ತುಂಬಿರುವ ಮಡಕೆಗಳು ಬೇಕೆ ಎಂದು. ಅದಕ್ಕೆ ನಾನು ಹೌದು ಅದನ್ನೆಲ್ಲಾ ನಾನು ಖರ್ಚು ಮಾಡಬೇಕೆಂದು ಕೇಳಿದ್ದೆ. ನಾನು ಅರ್ಧ ತುಂಬಿರುವ ಮಡಕೆಯನ್ನು ಪೂರ್ತಿ ತುಂಬಿಸಿದ ನಂತರ ಎಲ್ಲವನ್ನೂ ತೆಗೆದುಕೊಂಡು ಖರ್ಚು ಮಾಡಬಹುದು ಎಂದು ಖಿಜಿರ್ ಹೇಳಿದ್ದರು.

'ಆ ಮಡಕೆಯನ್ನು, ಪ್ರಿಯ ಶಿಷ್ಯನೇ', ಮುಂದುವರಿಸಿದರು ಗುರುಗಳು,

'ಶತಶತಮಾನಗಳಿಂದ ನನ್ನಂಥ ನಿನ್ನಂಥವರು ತುಂಬಿಸಲು ಜೀವ ಸವೆಸುತ್ತಿದ್ದಾರೆ, ಒಂದಲ್ಲ ಒಂದು ದಿನ ಖಿಜಿರ್‌ರವರ ಚಿನ್ನವನ್ನು ಖರ್ಚು ಮಾಡಬಹುದೆಂದು.'

ಸ್ವರ್ಗಲೋಕದ ನೀರು

ಹರಿತ್ ಹಾಗೂ ಆತನ ಪತ್ನಿ ನಫೀಸಾ ಬಡ ಅಲೆಮಾರಿಗಳಾಗಿದ್ದು, ಮರಳುಗಾಡಿನಲ್ಲಿ ಎಲ್ಲೆಲ್ಲಿ ಖರ್ಜೂರದ ಮರಗಳು ಕಾಣುತ್ತಿದ್ದವೋ ಅಲ್ಲೆಲ್ಲಾ ತಮ್ಮ ಹರಕಲು ಗುಡಾರ ಹಾಕಿ, ಮರಳುಗಾಡಿನ ಇಲಿಗಳನ್ನು ಅವುಗಳ ಚರ್ಮಕ್ಕಾಗಿ ಹಿಡಿದು, ತಾಳೆ ಎಲೆಗಳಿಂದ ಹಗ್ಗಗಳನ್ನು ಮಾಡಿ ಹಾದು ಹೋಗುವ ವರ್ತಕ, ಯಾತ್ರಿಕರಿಗೆ ಅವುಗಳನ್ನು ಮಾರಾಟ ಮಾಡಿ ಜೀವನ ನಡೆಸುತ್ತಿದ್ದರು.

ಒಂದು ದಿನ ಅವರು ತಂಗಿದ್ದ ಜಾಗದಲ್ಲಿ ನೀರಿನ ಹೊಸ ಚಿಲುಮೆಯೊಂದು ಕಾಣಿಸಿಕೊಂಡಿತು. ಆ ಚಿಲುಮೆಯ ಒಂದು ಬೊಗಸೆ ನೀರು ಕುಡಿದ ಹರಿತ್‌ನಿಗೆ ಅದು ಸ್ವರ್ಗಲೋಕದ ನೀರೇ ಎನ್ನಿಸಿತು. ಏಕೆಂದರೆ ಅಷ್ಟು ಸಿಹಿಯಾದ ನೀರನ್ನು ಆತ ಎಂದೂ ಕುಡಿದಿರಲಿಲ್ಲ. ಈ ನೀರನ್ನು ಬಾಗ್ದಾದಿನ ಖಲೀಫ ಹರೂನ್ ರಷೀದ್‌ಗೆ ಕೊಡುಗೆಯಾಗಿ ಕೊಡಬೇಕೆಂದು ಅನ್ನಿಸಿ ಕೂಡಲೆ ಎರಡು ಮೇಕೆ ಚರ್ಮದ ಚೀಲಗಳನ್ನು ತೆಗೆದುಕೊಂಡು, ಅವುಗಳಲ್ಲಿ ಆ ನೀರು ತುಂಬಿ ಬಾಗ್ದಾದ್‌ನ ಕಡೆಗೆ ಹೊರಟ.

ಹಲವಾರು ದಿನಗಳ ಪ್ರಯಾಣದ ನಂತರ ಹರಿತ್ ಖಲೀಫನ ಅರಮನೆಗೆ ನಡೆದು ಖಲೀಫನ ಎದುರು ನಿಂತು,

'ಹೇ, ಶ್ರದ್ಧಾಪ್ರಜೆಗಳ ನಾಯಕನೆ, ನಾನೊಬ್ಬ ಬಡ ಅಲೆಮಾರಿ, ಮರಳುಗಾಡನ್ನು ಬಿಟ್ಟು ಹೊರಗಿನ ಪ್ರಪಂಚ ನೋಡಿದವನಲ್ಲ. ನಾನು ಮರಳುಗಾಡಿನ ಎಲ್ಲ ನೀರನ್ನೂ ಕುಡಿದಿದ್ದೇನೆ. ಆದರೆ ಒಂದು ಹೊಸ ಚಿಲುಮೆಯ ನೀರು ಸ್ವರ್ಗಲೋಕದ ನೀರಿದ್ದ ಹಾಗಿದೆ. ಅಷ್ಟು ಸಿಹಿಯಾದ ನೀರನ್ನು ನಾನೆಂದೂ ಕಂಡಿಲ್ಲ, ಅದನ್ನು ತಮ್ಮಂತಹ ಖಲೀಫರಿಗೆ ಬಳುವಳಿಯಾಗಿ ಕೊಡಬೇಕೆಂದು ತಂದಿದ್ದೇನೆ' ಎಂದ.

ಖಲೀಫ ಹರೂನ್ ಕೂಡಲೇ ಆ ನೀರಿನ ರುಚಿ ನೋಡಿದ, ಆತನಿಗೆ ಆ ನೀರು ಅಂಥ ವಿಶೇಷವಾದದ್ದು ಅನ್ನಿಸಲಿಲ್ಲ. ಆದರೂ ಆತ ತನ್ನ ಪ್ರಜೆಗಳನ್ನು ಚೆನ್ನಾಗಿ ಅರಿತಿದ್ದ. ತನ್ನ ನಿರ್ಧಾರ ತಿಳಿಸುವವರೆಗೂ ಹರಿತ್‌ನನ್ನು ಬಂಧನದಲ್ಲಿಡುವಂತೆ ತಿಳಿಸಿದ. ನಂತರ ತನ್ನ ಸೇನಾನಾಯಕನನ್ನು ಕರೆದು, 'ಆ ಬಡಪಾಯಿ ಅಲೆಮಾರಿ ಪ್ರಾಮಾಣಿಕ. ನಮಗೆ ಏನೂ ಅಲ್ಲದ್ದು ಆತನಿಗೆ ಸರ್ವಸ್ವ. ಅದ್ದರಿಂದ ಆತನನ್ನು ಈ ರಾತ್ರಿಯೆ ಅರಮನೆಯಿಂದ ಆತನ ಮರಳುಗಾಡಿನ ಬಿಡಾರಕ್ಕೆ ಕರೆದುಕೊಂಡುಹೋಗಿ ಬಿಟ್ಟು ಬನ್ನಿ. ಆತನಿಗೆ ನಮ್ಮ ಮಹಾನ್ ಟೈಗ್ರಿಸ್ ನದಿಯನ್ನು ನೋಡಲೂ ಬಿಡಬೇಡಿ, ಅದರ ನೀರು ಕುಡಿಯಲೂ ಬಿಡಬೇಡಿ. ತಾನು ಖಲೀಫರಿಗೆ ತಂದ ಮರಳುಗಾಡಿನ ಚಿಲುಮೆಯ ನೀರೆ ಸ್ವರ್ಗಲೋಕದ ನೀರು ಎಂದು ಆತ ಭಾವಿಸಿರಲಿ, ಆತನ ಬಳುವಳಿಯಿಂದ ಖಲೀಫರಿಗೆ ಸಂತೋಷವಾಗಿದೆ ಎಂದು ಹೇಳಿ ಒಂದು ಸಾವಿರ ಚಿನ್ನದ ನಾಣ್ಯ ಕೊಟ್ಟು ವಂದನೆಗಳನ್ನು ತಿಳಿಸಿ. ಆ ಮರಳುಗಾಡಿನ ನೀರಿನ ಚಿಲುಮೆಗೆ ಆತನೇ

ಕಾವಲುಗಾರನೆಂದು ತಿಳಿಸಿ ಅಲ್ಲಿ ಹಾದು ಹೋಗುವ ಪ್ರಯಾಣಿಕರಿಗೆ ನೀರನ್ನು ಉಚಿತವಾಗಿ ಹಂಚಲು ಹೇಳಿ' ಎಂದ ಹೇಳಿ ಕಳುಹಿಸಿದ.

ಪಟ್ಟಣದಲ್ಲೊಬ್ಬ ಮೂರ್ಖ

ಶತಮೂರ್ಖನೊಬ್ಬ ಒಂದು ದೊಡ್ಡ ನಗರಕ್ಕೆ ಬಂದ. ಅಲ್ಲಿ ರಸ್ತೆಗಳಲ್ಲಿ ಸಾವಿರಾರು ಜನ ಓಡಾಡುತ್ತಿರುವುದನ್ನು ಕಂಡು ಆತನಿಗೆ ಗಾಬರಿಯಾಯಿತು. 'ಇಲ್ಲಿ ನಾನು ರಾತ್ರಿ ಮಲಗಿ ಬೆಳಿಗ್ಗೆ ಎದ್ದಾಗ ಇಷ್ಟೊಂದು ಜನರ ನಡುವೆ ನನ್ನನ್ನು ನಾನೇ ಗುರುತು ಹಿಡಿಯುವುದು ಕಷ್ಟವಾಗಬಹುದು' ಎಂದೆನ್ನಿಸಿತು. ಅದಕ್ಕಾಗಿ ಆತ ರಾತ್ರಿ ಛತ್ರವೊಂದರಲ್ಲಿ ಮಲಗುವಾಗ, ಬೆಳಿಗ್ಗೆ ಎದ್ದಾಗ ತನ್ನನ್ನು ತಾನು ಗುರುತು ಹಿಡಿಯಲು ಅನುವಾಗಲೆಂದು ತನ್ನ ಕಾಲಿಗೆ ತನ್ನ ಬಳಿಯಿದ್ದ ಸೋರೆಕಾಯಿ ಬುರುಡೆಯನ್ನು ಕಟ್ಟಿಕೊಂಡ.

ಇದನ್ನು ಗಮನಿಸುತ್ತಿದ್ದ ಒಬ್ಬಾತ ತಮಾಷೆ ಮಾಡೋಣವೆಂದು, ಆ ಮೂರ್ಖ ನಿದ್ದೆ ಮಾಡುವವರೆಗೂ ಕಾಯುತ್ತಿದ್ದು, ನಂತರ ಆ ಸೋರೆಕಾಯಿ ಬುರುಡೆಯನ್ನು ಬಿಚ್ಚಿ ತನ್ನ ಕಾಲಿಗೆ ಕಟ್ಟಿಕೊಂಡು ಮಲಗಿದ.

ಬೆಳಿಗ್ಗೆ ಮೊದಲಿಗೆ ಎದ್ದ ಶತಮೂರ್ಖ, ಸೋರೆಕಾಯಿ ಬುರುಡೆ ಇನ್ನೊಬ್ಬಾತನ ಕಾಲಲ್ಲಿದ್ದುದು ಕಂಡು ಅವನೇ ತಾನು ಎಂದುಕೊಂಡ. ನಂತರ ಏನೋ ಆಲೋಚಿಸಿ ಆತನ ಮೇಲೆ ಕಿರುಚುತ್ತಾ ಎರಗಿಹೋದ, 'ನೀನೇ ನಾನಾದರೆ, ನಾನು ಯಾರು ಹೇಳು?.'

ಕನಸು ಹಾಗೂ ರೊಟ್ಟಿ

ಮರುಭೂಮಿಯಲ್ಲಿ ಪ್ರಯಾಣಿಸುತ್ತಿದ್ದ ಮೂರು ಜನ ಪರಸ್ಪರ ಪರಿಚಯ ಮಾಡಿಕೊಂಡು, ಗೆಳೆಯರಾಗಿ, ತಮ್ಮಲ್ಲಿದ್ದುದನ್ನೆಲ್ಲಾ ಹಂಚಿಕೊಂಡು ಪ್ರಯಾಣ ನಡೆಸುತ್ತಿದ್ದರು. ಕೆಲದಿನಗಳ ನಂತರ ತಮ್ಮಲ್ಲಿದ್ದ ಆಹಾರ, ನೀರು ಎಲ್ಲಾ ಮುಗಿದುಹೋಗಿ, ಕೇವಲ ಒದು ರೊಟ್ಟಿಯ ತುಣುಕು ಹಾಗೂ ಒಂದು ಬೊಗಸೆಯಷ್ಟು ನೀರು ಮಾತ್ರ ಉಳಿಯಿತು. ಮೂವರೂ ಅದು ನನಗೆ ಬೇಕು, ತನಗೆ ಬೇಕು ಎಂದು ಕಿತ್ತಾಡತೊಡಗಿದರು. ಏನೂ ತೀರ್ಮಾನವಾಗಲಿಲ್ಲ. ಅಷ್ಟರಲ್ಲಿ ಕತ್ತಲಾಗತೊಡಗಿತು. ಕೊನೆಗೆ ಒಬ್ಬ, ಎಲ್ಲರೂ ಮಲಗೋಣವೆಂದೂ, ಯಾರಿಗಾದರೂ ಕನಸಿನಲ್ಲಿ ರೊಟ್ಟಿ, ನೀರು ಯಾರಿಗೆ ಸಿಗಬೇಕೆಂಬುದುರ ಬಗ್ಗೆ ಪರಿಹಾರ ಕಾಣಬಹುದು ಎಂದು ಸೂಚಿಸಿದ.

ಮರುದಿನ ಬೆಳಿಗ್ಗೆ, ಸೂರ್ಯ ಹುಟ್ಟುತ್ತಿರುವಂತೆಯೇ ಮೂವರೂ ಎದ್ದರು. ಮೊದಲನೆಯವ ತನ್ನ ಕನಸಿನ ಬಗ್ಗೆ ಹೇಳಿದ. 'ನನ್ನ ಕನಸಿನಲ್ಲಿ ನಾನು ಸುಂದರ, ಅದ್ಭುತ ಲೋಕಗಳಿಗೆಲ್ಲಾ ಹೋಗಿ ಬಂದೆ. ಅಲ್ಲಿ ಒಬ್ಬ ಸನ್ಯಾಸಿ ಕಂಡು, ನಿನಗೇ ರೊಟ್ಟಿ ನೀರು ದಕ್ಕಬೇಕು. ಏಕೆಂದರೆ ನಿನ್ನ ಭೂತ ಹಾಗೂ ಭವಿಷ್ಯದ ಬದುಕು ಅಷ್ಟು ಶ್ಲಾಘನೀಯವಾಗಿದೆ ಎಂದ. ಆದುದರಿಂದ ಆ ರೊಟ್ಟಿ, ನೀರು ನನಗೇ ಕೊಡಿ'.

ಎರಡನೆಯವ, 'ಎಂಥ ವಿಚಿತ್ರ! ನಾನು ನನ್ನ ಕನಸಿನಲ್ಲಿ ನನ್ನ ಭೂತ ಹಾಗೂ ಭವಿಷ್ಯವನ್ನು ಕಣ್ಣಾರೆ ಕಂಡೆ. ನನ್ನ ಭವಿಷ್ಯದಲ್ಲಿ ಒಬ್ಬ ಮೇಧಾವಿ ಕಂಡು, ನಿನ್ನ ಗೆಳೆಯರಿಗಿಂತ ನಿನಗೇ ರೊಟ್ಟಿ ನೀರು ಸಿಗಬೇಕು, ಏಕೆಂದರೆ ನೀನು ಹೆಚ್ಚು ಕಲಿತಿರುವವನೂ ಹಾಗೂ ತಾಳ್ಮೆ ಇರುವವನೂ ಆಗಿದ್ದೀಯ. ಅಲ್ಲದೆ ಮುಂದೆ ನೀನೇ ಜನನಾಯಕನೂ ಆಗುತ್ತೀಯೆ ಎಂದ. ಆದುದರಿಂದ ರೊಟ್ಟಿ, ನೀರು ನನಗೇ ಸಿಗಬೇಕು' ಎಂದು ಹೇಳಿದ.

ಮೂರನೆಯ ಪ್ರಯಾಣಿಕ, 'ನನ್ನ ಕನಸಿನಲ್ಲಿ ಏನನ್ನೂ ಕಾಣಲಿಲ್ಲ, ಏನನ್ನೂ ಕೇಳಲಿಲ್ಲ, ಆದರೆ ರಾತ್ರಿ ಎಂಥದೋ ಅದ್ವಿತೀಯ ಶಕ್ತಿಯೊಂದು ನನ್ನನ್ನು ಎಚ್ಚರಿಸಿ, ಅದೇ ಕ್ಷಣ ರೊಟ್ಟಿಯನ್ನು ತಿನ್ನುವಂತೆ ಹಾಗೂ ಆ ಬೊಗಸೆ ನೀರನ್ನು ಕುಡಿಯುವಂತೆ ಪ್ರೇರೇಪಿಸಿತು. ನಾನು ಅದನ್ನೇ ಮಾಡಿದೆ' ಎಂದ.

ನೂರಿ ಬೇಯ ಹಳೆಯ ಸಂದೂಕ

ನೂರಿ ಬೆ ಅಲ್ಬೇನಿಯಾ ದೇಶದ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಿದ್ದ, ಆತನ ಹೆಂಡತಿ ಆತನಿಗಿಂತ ತೀರ ಚಿಕ್ಕ ವಯಸ್ಸಿನವಳು. ಒಂದು ದಿನ ಸಂಜೆ ಆತ ಮನೆಗೆ ಹಿಂದಿರುಗಿದಾಗ ಆತನ ನಿಷ್ಠಾವಂತ ಸೇವಕನೊಬ್ಬ ಬಂದು,

'ನಿಮ್ಮ ಪತ್ನಿಯ ನಡವಳಿಕೆ ತೀರ ಸಂಶಯಾಸ್ಪದವಾಗಿದೆ. ನಿಮ್ಮ ಅಜ್ಜಿಗೆ ಸೇರಿದ, ಒಬ್ಬ ವ್ಯಕ್ತಿ ಹಿಡಿಸಬಹುದಾದಷ್ಟು ಹಳೆಯ ದೊಡ್ಡ ಸಂದೂಕ ಆಕೆಯ ಕೋಣೆಯಲ್ಲಿದೆ' ಎಂದ.

'ಆ ಸಂದೂಕದಲ್ಲಿ ಆಕೆಯ ಕುಸುರಿ ಬಟ್ಟೆಗಳಿರಬಹುದು ಬಿಡು' ಎಂದ ನೂರಿ ಬೆ. 'ಇಲ್ಲ, ನಾವಂದುಕೊಂಡಿರುವುದಕ್ಕಿಂತ ಹೆಚ್ಚಿನದೇನೋ ಆ ಸಂದೂಕದಲ್ಲಿದೆಯೆಂದು ನನ್ನ ನಂಬಿಕೆ. ನಾನು ನಿಮ್ಮ ಹಳೆಯ ನಿಷ್ಠಾವಂತ ಸೇವಕ. ನನಗೇ ಅದರಲ್ಲೇನಿದೆಯೆಂದು ನೋಡಲು ಆಕೆ ಬಿಡಲಿಲ್ಲ' ಎಂದ ಸೇವಕ.

ನೂರಿ ಬೆ ತನ್ನ ಪತ್ನಿಯ ಕೋಣೆಗೆ ಹೋದ. ಆತನ ಪತ್ನಿ ಆ ಸಂದೂಕದ ಪಕ್ಕದಲ್ಲಿ ಖಿನ್ನಳಾಗಿ ಕುಳಿತಿದ್ದಳು.

'ಆ ಸಂದೂಕದಲ್ಲೇನಿದೆಯೆಂದು ತೋರಿಸುವೆಯಾ?' ನೂರಿ ಬೆ ತನ್ನ ಪತ್ನಿಯನ್ನು ಕೇಳಿದ.

'ನಿಮ್ಮ ಸೇವಕನ ಅಪನಂಬಿಕೆಯಿಂದಲೇ ಅಥವಾ ನನ್ನ ಮೇಲೆ ನಿಮಗೇ ನಂಬಿಕೆಯಿಲ್ಲವೆ? ನೂರಿ ಬೇನ ಪತ್ನಿ ಕೇಳಿದಳು.

'ನಂಬಿಕೆ ಅಪನಂಬಿಕೆಗಳ ಬಗ್ಗೆ ತಲೆ ಕೆಡಿಕೊಳ್ಳದ ಸಂದೂಕ ತೆರೆಯುವುದು ಸುಲಭವಲ್ಲವೆ?'

'ಇಲ್ಲ, ಅದು ಸಾಧ್ಯವಿಲ್ಲ'

'ಸಂದೂಕಕ್ಕೆ ಬೀಗ ಹಾಕಿದೆಯೆ?'

'ಹೌದು'

'ಆದರೆ ಕೀಲಿ ಎಲ್ಲಿದೆ?'

ಆಕೆ ಕೀಲಿ ತೋರಿಸಿದಳು, 'ನಿಮ್ಮ ಸೇವಕನನ್ನು ಹೊರಗೆ ಕಳುಹಿಸಿ, ಕೊಡುತ್ತೇನೆ' ಎಂದಳು

ಸೇವಕನನ್ನು ಹೊರಗೆ ಕಳುಹಿಸಲಾಯಿತು. ಆಕೆ ತನ್ನ ಪತಿಯ ಕೈಗೆ ಕೀಲಿ ಕೊಟ್ಟು ಅತ್ಯಂತ ಮಾನಸಿಕ ವೇದನೆಗೊಳಗಾಗಿ ಹಿಂದೆ ಸರಿದಳು.

ಕೀಲಿ ತನ್ನ ಕೈಗೆ ತೆಗೆದುಕೊಂಡ ನೂರಿ ಬೆ ಬಹಳ ಹೊತ್ತು ಆಲೋಚಿಸಿದ. ಕೊನೆಗೆ ಏನೋ ನಿರ್ಧರಿಸಿದವನಂತೆ ತನ್ನ ನಾಲ್ಕು ಆಳುಗಳನ್ನು ಕರೆದು ಅವರ ಕೈಯಲ್ಲಿ ಆ ಸಂದೂಕ ಹೊರಿಸಿ ದೂರ ನಿರ್ಜನ ಪ್ರದೇಶಕ್ಕೆ ತೆಗೆದುಕೊಂಡು ಹೋಗಿ, ಅದನ್ನು ತೆರೆಯದೆಯೇ ಮಣ್ಣಿನಲ್ಲಿ ಹೂತುಬಿಟ್ಟ.

ಅಂದಿನಿಂದ ಆ ಹಳೆಯ ಸಂದೂಕದ ವಿಷಯ ಯಾರೂ ಮಾತನಾಡಲಿಲ್ಲ.

ಗುಲಾಮನ ಮಂತ್ರಮಾಟ

ಸುಲ್ತಾನ ಮಹಮೂದ್ ಘಜ್ನವಿಯ ಬಳಿ ಅಯಾಜ್ ಎಂಬ ಗುಲಾಮನಿದ್ದ. ಆತನ ಒಳ್ಳೆಯತನದಿಂದಾಗಿ ರಾಜ ಆತನಿಗೆ ಗೌರವ ಸನ್ಮಾನದಿಂದ ಉನ್ನತ ಹುದ್ದೆಯನ್ನು ಕೊಟ್ಟಿದ್ದ. ಆದರೆ 'ಬರೇ ಗುಲಾಮ'ನೊಬ್ಬನಿಗೆ ಇಷ್ಟೊಂದು ಹಿರಿತನ ಸುಲ್ತಾನ ಕೊಟ್ಟಿರುವುದರಿಂದಾಗಿ ಅಯಾಜ್‌ನನ್ನು ಕಂಡು ಕರುಬುವ ಶತ್ರುಗಳು ಆಸ್ಥಾನದಲ್ಲಿ ಬಹಳ ಜನ ಇದ್ದರು. ಅವರು ಸದಾ ಅಯಾಜ್‌ನನ್ನೇ ಗಮನಿಸುತ್ತಿದ್ದರು. ಅವನೇನಾದರೂ ತಪ್ಪು ಮಾಡಿದಲ್ಲಿ ಅದನ್ನೇ ದೊಡ್ಡದು ಮಾಡಿ ಅವನನ್ನು ಉನ್ನತ ಹುದ್ದೆಯಿಂದ ಕೆಳಗಿಳಿಸುವ ಹುನ್ನಾರ ನಡೆಸುತ್ತಿದ್ದರು.

ಪ್ರತಿದಿನ ಸಂಜೆ ಅಯಾಜ್ ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಿದ್ದ, ಅದನ್ನು ಗಮನಿಸುತ್ತಿದ್ದ ಆತನ ಶತ್ರುಗಳು, ಅಯಾಜ್ ಸುಲ್ತಾನನನ್ನು ಬಲೆಗೆ ಹಾಕಿಕೊಳ್ಳುವ ಏನೋ ಮಾಟಮಂತ್ರ ಮಾಡುತ್ತಿದ್ದಾನೆ ಎಂದುಕೊಂಡರು. ಮಾಟಮಂತ್ರ ಮಾಡುತ್ತಿರುವಾಗಲೇ ಆತನನ್ನು ಹಿಡಿಯಬೇಕೆಂದು ನಿರ್ಧರಿಸಿದರು.

ಒಂದು ಸಂಜೆ ಅಯಾಜ್ ತನ್ನ ಕೋಣೆಗೆ ಹೋದ ಸ್ವಲ್ಪ ಹೊತ್ತಿನ ನಂತರ ಅವರೆಲ್ಲಾ ಒಳನುಗ್ಗಿದರು. ಅಯಾಜ್‌ನ ಎದುರು ಪೆಟ್ಟಿಗೆಯೊಂದು ತೆರೆದಿತ್ತು ಹಾಗೂ ಅದರೊಳಗೆ ಮೀನಿನ ಬಲೆಯೊಂದಿತ್ತು. 'ಏನು ಮಾಡುತ್ತಿದ್ದೀಯ ನಿಜ ಹೇಳು', ಅಯಾಜ್‌ನನ್ನು ಗದರಿಸಿದರು.

'ನನ್ನ ಮೊದಲ ಬದುಕನ್ನು ನೆನಪಿಸಿಕೊಳ್ಳುತ್ತಿದ್ದೇನೆ ಮತ್ತು ಆಗಿನ ಅನುಭವಗಳನ್ನು ಸ್ಮರಿಸಿ ಮರುಅನುಭವಿಸುವ ಪ್ರಯತ್ನ ನಡೆಸುತ್ತಿದ್ದೇನೆ ಹಾಗೂ ನನಗೆ ನಾನೇ ಹೇಳಿಕೊಳ್ಳುತ್ತಿದ್ದೇನೆ. ಈಗಿನ ಸುಖ ವೈಭವದ ಬದುಕು ಕ್ಷಣಿಕವೆಂದು', ಅಯಾಜ್ ಹೇಳಿದ.

ಹಠಮಾರಿ ರಾಜಕುಮಾರಿ

ಒಂದಾನೊಂದು ರಾಜ್ಯಕ್ಕೆ ಒಬ್ಬ ಧಿಮಾಕಿನ ರಾಜನಿದ್ದ. ಆತ ಒಳ್ಳೆಯವನೇ ಆಗಿದ್ದರೂ, ತಾನು ನಂಬಿರುವುದು ಅಥವಾ ತಿಳಿದಿರುವುದೇ ಸರಿ ಎಂದು ವಾದಿಸುವ ಹಠಮಾರಿಯಾಗಿದ್ದ. ಆತನಿಗೆ ಮೂರು ಜನ ಹೆಣ್ಣು ಮಕ್ಕಳಿದ್ದರು.

ಒಂದು ದಿನ ಆ ಮೂವರೂ ರಾಜಕುಮಾರಿಯರನ್ನೂ ಕರೆದು, 'ನನ್ನ ರಾಜ್ಯ, ಆಸ್ತಿಯೆಲ್ಲಾ ನಿಮ್ಮದೆ. ನನ್ನಿಂದಾಗಿ ನೀವು ಜೀವ ಪಡೆದಿರಿ, ನಾನೇ ನಿಮ್ಮ ಬದುಕನ್ನು ಹಸನುಗೊಳಿಸಿದೆ. ನಿಮ್ಮ ಭವಿಷ್ಯ ಹಾಗೂ ವಿಧಿಯನ್ನು ನಿಯಂತ್ರಿಸುವವನು ನಾನೇ' ಎಂದ.

'ಆಯಿತು, ತಮ್ಮ ಅಪ್ಪಣೆ' ಎಂಬಂತೆ ಮೊದಲ ಇಬ್ಬರು ರಾಜಕುಮಾರಿಯರು ತಲೆಬಾಗಿ ಒಪ್ಪಿಕೊಂಡರು. ಆದರೆ ಕೊನೆಯ ರಾಜಕುಮಾರಿ ಒಪ್ಪಿಕೊಳ್ಳಲಿಲ್ಲ. 'ತಾವು ನನ್ನ ತಂದೆ ಹಾಗೂ ಈ ರಾಜ್ಯದ ರಾಜರಾಗಿರುವುದರಿಂದ ತಮ್ಮ ಆದೇಶ ಹಾಗೂ ಕಾನೂನುಗಳನ್ನು ಪರಿಪಾಲಿಸುತ್ತೇನೆ. ಆದರೆ ನೀವೇ ನನ್ನ ವಿಧಿ ಅಥವಾ ಭವಿಷ್ಯವನ್ನು ನಿಯಂತ್ರಿಸುವವರು ಎನ್ನುವುದನ್ನು ನಾನು ನಂಬುವುದಿಲ್ಲ' ಎಂದಳು.

ಇದರಿಂದ ಸಿಟ್ಟಿಗೆದ್ದ ಧಿಮಾಕಿನ ರಾಜ, 'ಹೌದೇನು? ನೋಡೋಣ! ನಿನ್ನ ವಿಧಿಯನ್ನು ನಾನೇ ನಿಯಂತ್ರಿಸುತ್ತೇನೆ!' ಎಂದು ಹೇಳಿ ಆ ರಾಜಕುಮಾರಿಯನ್ನು ಸೆರೆಮನೆಗೆ ಹಾಕಿಸಿದ.

ಹಲವಾರು ವರುಷಗಳೇ ಕಳೆದವು. ರಾಜ ತನಗೆ ತಾನೇ ಹೇಳಿಕೊಂಡ, 'ಆ ಹುಡುಗಿ ಸೆರೆಮನೆಯಲ್ಲಿರುವುದು ನನ್ನ ಇಚ್ಛೆಯಿಂದಲೇ ಹೊರತು ಆಕೆಯ ಇಚ್ಛೆಯಿಂದಲ್ಲ. ಇದರಿಂದಲೇ ಯಾರಾದರೂ ಹೇಳಬಹುದು, ಆಕೆಯ ವಿಧಿಯನ್ನು ನಿಯಂತ್ರಿಸುತ್ತಿರುವವನು ನಾನೇ ಎಂದು.'

ರಾಜ್ಯದ ಜನತೆಯೆಲ್ಲಾ ಪಿಸುಗುಟ್ಟತೊಡಗಿದರು, 'ಆ ರಾಜಕುಮಾರಿ ರಾಜನಿಗೆ ಸಿಟ್ಟು ಬರುವಂಥದೇನನ್ನೋ ಅಥವಾ ಏನೋ ಕೆಟ್ಟದ್ದನ್ನು ಮಾಡಿರಬೇಕು. ಇಲ್ಲದಿದ್ದರೆ ರಾಜ ತನ್ನ ಕರುಳಕುಡಿಯನ್ನೇ ಏಕೆ ಸೆರೆಮನೆಗೆ ಹಾಕುತ್ತಿದ್ದ?'.

ಆಗಿಂದಾಗ್ಗೆ ರಾಜ ರಾಜಕುಮಾರಿಯನ್ನು ಸೆರೆಮನೆಯಲ್ಲಿ ಭೇಟಿ ಮಾಡಿ, 'ಈಗಲಾದರೂ ಒಪ್ಪಿಕೋ, ನಿನ್ನ ಬದುಕಿಗೆ, ಸೆರೆಮನೆ ವಾಸಕ್ಕೆ ನಾನೇ ಕಾರಣ. ನಿನ್ನ ವಿಧಿ ನಿಯಂತ್ರಕ ನಾನೇ ಎಂಬುದನ್ನು ಒಪ್ಪಿಕೊ' ಎಂದು ಹೇಳುತ್ತಿದ್ದ. ಸೆರೆಮನೆ ವಾಸದಿಂದ ಬಳಲಿದ್ದರೂ, ಅಲ್ಲಿನ ಬದುಕು ಕಷ್ಟಕರವಾಗಿದ್ದರೂ ರಾಜಕುಮಾರಿ ರಾಜನಿಂದ ತನ್ನ ವಿಧಿಯನ್ನು ನಿಯಂತ್ರಿಸಲು ಸಾಧ್ಯವಿಲ್ಲವೆಂದೇ ಹೇಳುತ್ತಿದ್ದಳು.

ಒಂದು ದಿನ ರಾಜನ ತಾಳ್ಮೆ ಎಲ್ಲೆ ಮೀರಿತು. 'ನೀನೊಬ್ಬ ಹಠಮಾರಿ ಹುಡುಗಿ, ನಿನ್ನ ಹಠಮಾರಿತನದಿಂದ ನನ್ನ ಸಿಟ್ಟು ನೆತ್ತಿಗೇರಿ, ನಾನು ನಿನ್ನನ್ನು ಸಾಯಿಸಲೂಬಹುದು.

ಆದರೆ ನಾನು ಕರುಣಾಮಯಿ. ಆದುದರಿಂದ ನಾನು ನಿನ್ನನ್ನು ನನ್ನ ರಾಜ್ಯದ ಪಕ್ಕದಲ್ಲಿರುವ ದಟ್ಟಡವಿಯಲ್ಲಿ ಬಿಟ್ಟುಬಿಡುತ್ತೇನೆ. ಅಲ್ಲಿ ಕ್ರೂರ ಮೃಗಗಳಿವೆ, ಕಳ್ಳಕಾಕರರಿದ್ದಾರೆ, ಅಲ್ಲಿ ನಿನಗೆ ಹೇಗೆ ಬದುಕಲು ಸಾಧ್ಯವೋ ನೋಡುತ್ತೇನೆ. ನೀನೇ ಒಂದಲ್ಲ ಒಂದು ದಿನ ಅಲ್ಲಿ ಬದುಕಲಾಗದೆ ಓಡಿಬಂದು ನನ್ನ ಕಾಲಿಗೆ ಬಿದ್ದು ನಿನ್ನ ವಿಧಿ ನಿಯಂತ್ರಕ ನಾನೇ ಎಂದು ಒಪ್ಪಿಕೊಳ್ಳುತ್ತೀಯ' ಎಂದು ಹೇಳಿ ತನ್ನ ಭಟರನ್ನು ಕರೆದು ರಾಜಕುಮಾರಿಯನ್ನು ಕಾಡಿಗೆ ಅಟ್ಟಿಸಿದ.

ಆ ದಟ್ಟಡವಿಯಲ್ಲಿ ರಾಜಕುಮಾರಿ ಗುಹೆಯೊಂದನ್ನು ಕಂಡುಕೊಂಡು ಅದನ್ನೇ ತನ್ನ ಮನೆಯೆಂದುಕೊಂಡಳು. ಗಿಡಮರಗಳಿದ್ದ ಹಣ್ಣುಹಂಪಲುಗಳನ್ನು ತನ್ನ ಆಹಾರವೆಂದುಕೊಂಡಳು. ಅಲ್ಲಿಯೇ ಹರಿಯುತ್ತಿದ್ದ ಝರಿಯನ್ನು ತನ್ನ ನೀರ

ಆಸರೆಯನ್ನಾಗಿ ಮಾಡಿಕೊಂಡಳು. ದಟ್ಟಡವಿಯಲ್ಲಿಯೂ ಸಹ ಬದುಕಲು ಸಾಧ್ಯವೆಂಬುದನ್ನು ಅರಿತುಕೊಂಡಳು. 'ಈ ಕಾಡಿನ ಗಿಡಮರಗಳಿಗೆ, ವನ್ಯಮೃಗಗಳಿಗೆ, ಹಳ್ಳಕೊಳ್ಳಗಳಿಗೆ ತಮ್ಮದೇ ಆದ ಬದುಕಿದೆ, ಅವೆಲ್ಲಾ ಒಟ್ಟಾಗಿ ನನಗೊಂದು ಹೊಸ ಬದುಕು ಕೊಟ್ಟಿವೆ. ಆದರೆ ಅವ್ಯಾವೂ ನಮ್ಮ ತಂದೆಯ ಆದೇಶವನ್ನು ಪಾಲಿಸುವುದಿಲ್ಲ. ಅವುಗಳ ವಿಧಿಯನ್ನು ನಮ್ಮ ತಂದೆ ನಿಯಂತ್ರಿಸುವುದಿಲ್ಲ' ಎಂದುಕೊಂಡಳು.

ಹೀಗೆ ಅವಳು ಸಂತೃಪ್ತ ಬದುಕನ್ನು ನಡೆಸುತ್ತಿರಬೇಕಾದರೆ, ಒಂದು ದಿನ ಪ್ರಯಾಣಿಕನೊಬ್ಬ ದಾರಿತಪ್ಪಿ ಕಾಡಲ್ಲಿ ಅಲೆಯುತ್ತಿದ್ದ. ಆಕೆ ಆತನನ್ನು ಕಂಡು ತನ್ನ ಗುಹೆಗೆ ಕರೆತಂದು ಉಪಚರಿಸಿದಳು. ಆತ ಬಹು ಸಿರಿವಂತ ಕುಟುಂಬದಿಂದ ಬಂದವನಾಗಿದ್ದ, ಸ್ಫುರದ್ರೂಪಿ ಯುವಕನಾಗಿದ್ದ. ರಾಜಕುಮಾರಿಗೂ ಆತನಿಗೂ ಪ್ರೇಮ ಅಂಕುರಿಸಿತು. ಆ ಯುವಕ ರಾಜಕುಮಾರಿಯನ್ನು ತನ್ನ ದೇಶಕ್ಕೆ ಕರೆದೊಯ್ದು ಆಕೆಯನ್ನು ಮದುವೆಯಾದ.

ಹಲವಾರು ತಿಂಗಳುಗಳು ಆ ಯುವಕ ಹಾಗೂ ರಾಜಕುಮಾರಿ ಸುಖ ಸಂತೋಷದಿಂದ ಇದ್ದರು. ಆದರೆ ರಾಜಕುಮಾರಿಯ ಮನಸ್ಸೆಲ್ಲಾ ದಟ್ಟಡವಿಯ ಕಡೆಗೇ ಇತ್ತು. ಆಕೆ ತನ್ನ ಪತಿಯ ಮನವೊಪ್ಪಿಸಿ ಇಬ್ಬರೂ ಕಾಡಿಗೆ ಹಿಂದಿರುಗಿದರು. ತಮ್ಮ ಬುದ್ಧಿವಂತಿಕೆ ಹಾಗೂ ಸಾಧನಸಂಪತ್ತು ಉಪಯೋಗಿಸಿ ಆ ಕಾಡಿನಲ್ಲಿ ಪುಟ್ಟ ನಗರವೊಂದನ್ನು ನಿರ್ಮಿಸಿದರು. ಆ ಕಾಡಿನಲ್ಲಿದ್ದ ಕಳ್ಳಕಾಕರರಿಗೆ ಒಳ್ಳೆ ಬದುಕಿನ ರೀತಿ ನೀತಿಗಳನ್ನು ಕಲಿಸಿ ಸತ್ಪ್ರಜೆಗಳನ್ನಾಗಿ ಮಾಡಿದರು. ಅವರೆಲ್ಲಾ ಒಂದಾಗಿ ಆ ಯುವಕ ಹಾಗೂ ರಾಜಕುಮಾರಿಯನ್ನು ತಮ್ಮ 'ರಾಜ್ಯ'ದ ರಾಜ ರಾಣಿಯನ್ನಾಗಿ ಮಾಡಿದರು. ಆ ಪುಟ್ಟ ನಗರ ಶಾಂತಿ ಹಾಗೂ ವೈಭವತೆಗೆ ಇಡೀ ಪ್ರಪಂಚದಲ್ಲೇ ಹೆಸರುವಾಸಿಯಾಯಿತು.

ಈ ಸುದ್ದಿ ಇತ್ತ ರಾಜಕುಮಾರಿಯ ಧಿಮಾಕಿನ ತಂದೆಯ ಕಿವಿಗೂ ಬಿದ್ದಿತು. ತನ್ನ ಮಗಳೇ ಆ ರಾಜ್ಯದ ರಾಣಿಯೆಂಬುದು ಆತನಿಗೆ ತಿಳಿದಿರಲಿಲ್ಲ ದಟ್ಟಡವಿಯಲ್ಲಿ ನಿರ್ಮಾಣಗೊಂಡ ಆ ಸುಂದರ ನಗರವನ್ನು ಹಾಗೂ ಅದರ ನಿರ್ಮಾಪಕರನ್ನು ಅಲ್ಲದೆ ತನ್ನ ರಾಜ್ಯದಿಂದ ಗಡೀಪಾರು ಮಾಡಿದ ಕಳ್ಳಕಾಕರೇ ಆ ಸುಂದರ ನಗರದ ಸತ್ಪ್ರಜೆಗಳಾಗಿರುವುದನ್ನು ಒಮ್ಮೆ ಕಂಡು ಬರಬೇಕೆಂದು ಆತ ಹೊರಟ.

ಆ ದಟ್ಟಡವಿಯಲ್ಲಿನ ಸುಂದರ ನಗರದ ಅರಮನೆಗೆ ಹೊರಟು ಅಲ್ಲಿನ ರಾಜರಾಣಿಯರಿಗೆ ತನ್ನ ಪರಿಚಯ ಹೇಳೋಣವೆಂದು ತಲೆ ಎತ್ತಿದರೆ ಅಲ್ಲಿ ಸಿಂಹಾಸನದ ಮೇಲೆ ತನ್ನ ಮಗಳೇ ರಾಣಿಯಾಗಿ ವಿಜೃಂಭಿಸುತ್ತಿದ್ದಳು. ತನ್ನ ತಂದೆಯನ್ನು ಕಂಡು ನಸುನಕ್ಕು 'ನೋಡಿದೆಯಾ ಅಪ್ಪ, ಈಗಲಾದರೂ ಒಪ್ಪಿಕೊಳ್ಳುತ್ತೀಯ? ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ವಿಧಿಯಿರುತ್ತದೆ, ತನ್ನದೇ ಆದ ಆಯ್ಕೆ ಇರುತ್ತದೆ. ಇದನ್ನು ಯಾರೂ ನಿಯಂತ್ರಿಸಲು ಆಗುವುದಿಲ್ಲ' ಎಂದಳು. ತನ್ನ ಗರ್ವ, ಹಠಮಾರಿತನ ಅರಿವಾಗಿ ರಾಜ ತಲೆ ತಗ್ಗಿಸಿದ. ಆತನ ತಪ್ಪನ್ನೆಲ್ಲಾ ಮರೆತು ರಾಣಿಯಾಗಿದ್ದ ರಾಜಕುಮಾರಿ ತನ್ನ ತಂದೆಯನ್ನು ಪ್ರೀತಿಯಿಂದ ತಬ್ಬಿಕೊಂಡಳು.

ಮೂರು ಸತ್ಯಗಳು

ಸೂಫಿಗಳೆಂದರೆ ಸತ್ಯಾನ್ವೇಷಕರು. ಅವರ ದೃಷ್ಟಿಯಲ್ಲಿ ಸತ್ಯವೆಂದರೆ ವಸ್ತುನಿಷ್ಠ ವಾಸ್ತವದ ಜ್ಞಾನ. ಸ್ಪೇನ್ ದೇಶದ ಮರ್ಸಿಯಾ ಪ್ರಾಂತ್ಯದ ರಾಜ ರೋಡ್ರಿಗ್ಸ್ ಅತ್ಯಂತ ಕ್ರೂರಿ ಹಾಗೂ ದಡ್ಡನಾಗಿದ್ದ. ಸೂಫಿಗಳಿಂದ ಈ ಸತ್ಯವನ್ನು ತಾನು ಹೇಗಾದರೂ ಮಾಡಿ ಪಡೆದುಕೊಳ್ಳಬೇಕೆಂದು ಓಮರ್-ಎಲ್-ಅಳವಿ ಎಂಬ ಸೂಫಿಯನ್ನು ತನ್ನ ಆಸ್ಥಾನಕ್ಕೆ ಬಂಧಿಸಿ ಕರೆತರುವಂತೆ ಆಜ್ಞಾಪಿಸಿದ.

ತನ್ನ ಆಸ್ಥಾನಕ್ಕೆ ಬಂಧಿಯಾಗಿ ಬಂದ ಓಮರ್‌ನನ್ನು ಉದ್ದೇಶಿಸಿ ರಾಜ ರೋಡ್ರಿಗ್ಸ್, 'ನೀನು ಕಂಡುಕೊಂಡಿರುವ ಸತ್ಯವನ್ನು ನಮಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿ ಹೇಳಬೇಕು. ಇದು ರಾಜಾಜ್ಞೆ, ಇಲ್ಲದಿದ್ದರೆ ನಿನ್ನನ್ನು ಜೀವಸಹಿತ ವಾಪಸ್ಸು ಹೋಗಲು ಬಿಡುವುದಿಲ್ಲ' ಎಂದ.

ಅದಕ್ಕೆ ಓಮರ್, 'ಈ ಆಸ್ಥಾನದಲ್ಲಿ ಒಬ್ಬ ಬಂಧಿತ ವ್ಯಕ್ತಿ ಸತ್ಯವನ್ನು ಹೇಳಿದಲ್ಲಿ ಹಾಗೂ ಆತ ಹೇಳಿದ್ದು ಸತ್ಯವೆಂದು ಸಾಬೀತಾದಲ್ಲಿ ಆತನನ್ನು ಬಿಡುಗಡೆ ಮಾಡುವುದು ಈ ಗೌರವಯುತ ಆಸ್ಥಾನದ ಸಂಪ್ರದಾಯ ತಾನೆ?' ಎಂದು ಕೇಳಿದ.

'ಹೌದು' ಎಂದು ತಲೆಯಾಡಿಸಿದ ರೋಡ್ರಿಗ್ಸ್.

'ಹಾಗಿದ್ದಲ್ಲಿ ನಿಮ್ಮ ಆಸ್ಥಾನದಲ್ಲಿ ಪ್ರಮುಖರನ್ನು ಸಾಕ್ಷಿಯಾಗಲು ಹೇಳಿ, ನಾನು ಒಂದಲ್ಲ ಮೂರು ಸತ್ಯಗಳನ್ನು ನಿಮಗೆ ಹೇಳುತ್ತೇನೆ" ಎಂದ ಓಮರ್.

'ನೀನು ಹೇಳುವ ಸತ್ಯಗಳು, ಸತ್ಯಗಳೇ ಎಂದು ನಮಗೆ ಮನವರಿಕೆಯಾಗಬೇಕು. ನಿನ್ನ ಸತ್ಯದ ಜೊತೆಗೆ ಸಾಕ್ಷ್ಯಾಧಾರವನ್ನು ನೀನು ಒದಗಿಸಬೇಕು' ಎಂದ ರೋಡ್ರಿಗ್ಸ್.

'ನಿಮ್ಮಂಥ ಮಹಾರಾಜರಿಗೆ ನಾನು ಸತ್ಯವನ್ನಲ್ಲದೆ ಬೇರೇನನ್ನೂ ಹೇಳುವುದಿಲ್ಲ ನಾನು ಹೇಳುವ ಸತ್ಯಗಳೇ ಸ್ವತಃ ಸಾಕ್ಷಿಗಳಾಗಿರುತ್ತವೆ' ಎಂದ ಓಮರ್ ತಾನು ಅರಿತಿರುವ ಸತ್ಯಗಳನ್ನು ಹೇಳಲು ಅನುವಾದ; ರೋಡ್ರಿಗ್ಸ್ ಆ ಸತ್ಯಗಳನ್ನು ಕೇಳಲು ಉತ್ಸುಕನಾಗಿ ಕೂತ.

'ನಿಮ್ಮ ಮುಂದೆ ನಿಂತಿರುವ ನಾನು, ಓಮರ್-ಎಲ್-ಅಳವಿ ಎಂಬ ಸೂಫಿ. ಇದು ಮೊದಲನೇ ಸತ್ಯ.

'ನಾನು ಸತ್ಯವನ್ನು ಹೇಳಿದಲ್ಲಿ ನೀವು ನನ್ನನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿದ್ದೀರಿ ಇದು ಎರಡನೇ ಸತ್ಯ.

'ನೀವು ಸತ್ಯವನ್ನು ಅರಿಯಲು ಕಾತುರರಾಗಿದ್ದೀರಿ. ಇದು ಮೂರನೆಯ ಸತ್ಯ. ಈ ಮೂರೂ ಸತ್ಯಗಳು ಸುಳ್ಳು ಎಂದು ಸಾಬೀತು ಪಡಿಸಿದಲ್ಲಿ ನೀವು ನನ್ನನ್ನು ಕೊಲ್ಲಬಹುದು' ಎಂದು ಹೇಳಿ ಕೈಕಟ್ಟಿ ನಿಂತ ಓಮರ್.

ಓಮರ್‌ನ ಚಾಣಾಕ್ಷ ಉತ್ತರಗಳಿಂದಾಗಿ ರೋಡ್ರಿಗ್ಸ್‌ಗೆ ಏನು ಹೇಳಲೂ ತೋಚಲಿಲ್ಲ. ಓಮರ್‌ನನ್ನು ಬಿಡುಗಡೆ ಮಾಡಲೇಬೇಕಾಯಿತು.

ಸರಿಯಾದ ಪ್ರಾರ್ಥನೆ

ಸಂನ್ಯಾಸಿಯೊಬ್ಬ ಒಂದು ದಿನ ನದಿ ತೀರದಲ್ಲಿ ನಡೆಯುತ್ತಿದ್ದ. ನೈತಿಕತೆ ಹಾಗೂ ಜ್ಞಾನಾರ್ಜನೆಯ ವಿಷಯಗಳನ್ನು ಆಲೋಚಿಸುತ್ತ ತಾನರಸುತ್ತಿದ್ದ ಅಂತಿಮ ಸತ್ಯದ ಬಗ್ಗೆ ಚಿಂತಿಸುತ್ತಿದ್ದ.

ದೂರದಲ್ಲಾರೋ ದೇವರ ಮಂತ್ರಗಳನ್ನು ಹೇಳುತ್ತಿದ್ದುದು ಆತನ ಆಲೋಚನೆಗಳನ್ನು ಕೆಡಿಸಿತು. ‘ಆ ಮಂತ್ರಗಳನ್ನು ಅದ್ಯಾರೋ ತಪುತಪ್ಪಾಗಿ

ಉಚ್ಚರಿಸುತ್ತಿದ್ದಾರೆ’ ಎಂದುಕೊಂಡ. ‘ಅಂಥ ತಪ್ಪು ಉಚ್ಚಾರಣೆಯನ್ನು ಸರಿಪಡಿಸುವುದು ನನ್ನ ಆದಮ್ಯ ಕರ್ತವ್ಯ. ಪಾಪ ಆ ವ್ಯಕ್ತಿಗೆ ಸರಿಯಾಗಿ ಹೇಳಿಕೊಡುವ ಗುರುವಿಲ್ಲದೇ ಇರಬಹುದು. ಮಂತ್ರದ ತಪ್ಪು ಉಚ್ಚಾರಣೆ ಸರಿಪಡಿಸುವುದೂ ಸಹ ಧಾರ್ಮಿಕ ಸೇವೆಯೇ’ ಎಂದು ಕೊಂಡು, ಕೂಡಲೇ ಒಂದು ಸಣ್ಣ ದೋಣಿಯಲ್ಲಿ ಕೂತು ಮಂತ್ರಘೋಷಣೆ ಕೇಳಿ ಬರುತ್ತಿದ್ದ ನದೀ ತೀರದ ಇನ್ನೊಂದು ದಿಕ್ಕಿನೆಡೆಗೆ ನಡೆದ.

ಅಲ್ಲಿ ಒಂದು ಮುರುಕಲು ಗುಡಿಸಲಿನಲ್ಲಿ ಸೂಫಿ ಸಂತನಂತೆಯೇ ಧಿರುಸು ಧರಿಸಿದ್ದ ಒಬ್ಬಾತ ಮಂತ್ರದ ತಪ್ಪುತಪ್ಪು ಉಚ್ಚಾರಣೆಯಲ್ಲಿ ತೊಡಗಿದ್ದ. ಈ ಸಂನ್ಯಾಸಿ ಆತನ ಬಳಿಗೆ ಹೋಗಿ, ಆತನ ಉಚ್ಚಾರಣೆ ಎಲ್ಲಾ ತಪ್ಪುತಪ್ಪಾಗಿದೆಯೆಂದೂ, ಅದು

ಪವಿತ್ರ ಮಂತ್ರವೆಂದೂ, ಆ ಮಂತ್ರವನ್ನು ಸರಿಯಾಗಿ ಜಪಿಸಿದಲ್ಲಿ ಎಂತೆಂಥಾ ಅದ್ಭುತಗಳನ್ನೆಲ್ಲಾ ಸಾಧಿಸಬಹುದೆಂದು ಹೇಳಿ, ಆ ಮತ್ರೋಚ್ಚಾರಣೆಯ ಸರಿಯಾದ ರೀತಿಯನ್ನು ತಿಳಿಸಿಕೊಟ್ಟ. ಆ ಮುರುಕಲು ಗುಡಿಸಲು ಸಂತ ನಮ್ರವಾಗಿ ವಂದನೆಗಳನ್ನು ತಿಳಿಸಿದ.

ಈ ಸಂಪ್ರದಾಯಸ್ಥ ಸಂನ್ಯಾಸಿ ತನ್ನಿಂದೇನೋ ಮಹತ್ಕಾರ್ಯ ನಡೆಯಿತೆಂದು ಹೆಮ್ಮೆಯಿಂದ ಒಂದು ದೋಣಿಯಲ್ಲಿ ಕೂತು ವಾಪಸ್ಸು ಹೊರಟ. ಆತನ ತಲೆಯಲ್ಲಿ ಆ ಪವಿತ್ರ ಮಂತ್ರೋಚ್ಚಾರಣೆ ಸಾಧಿಸಿದಲ್ಲಿ ನೀರಿನ ಮೇಲೆ ನಡೆಯಬಹುದೆಂದೂ, ತನಗೂ ಸಹ ಒಂದಲ್ಲ ಒಂದು ದಿನ ನೀರಿನ ಮೇಲೆ ನಡೆಯಲು ಸಾಧ್ಯವಾಗಬಹುದೆಂದು ಆಲೋಚಿಸುತ್ತಿರುವಾಗ, ಯಾರೋ ತನ್ನನ್ನು ಕರೆದಂತಾಯಿತು. ಹಿಂತಿರುಗಿ ನೋಡಿದರೆ, ಒಂದು ವಿಸ್ಮಯಕಾರಿ ದೃಶ್ಯ ಕಣ್ಣಿಗೆ ಬಿತ್ತು. ಅದೇ ಮುರುಕಲು ಗುಡಿಸಲು ಸಂನ್ಯಾಸಿ ನೀರಿನ ಮೇಲೆ ಓಡುತ್ತಾ ಈತನೆಡೆಗೆ ಬರುತ್ತಿದ್ದ. ಈತನೆಡೆಗೆ ನೀರಿನ ಮೇಲೆಯೇ ಓಡಿ ಬಂದ ಆತ, ಕೈಜೋಡಿಸಿ, ‘ಸ್ವಾಮಿ, ನೀವು ಹೇಳಿಕೊಟ್ಟ ಸರಿಯಾದ ಮಂತ್ರೋಚ್ಚಾರಣೆಯ ರೀತಿ ನನಗೆ ಕಷ್ಟಕರವಾಗುತ್ತಿದೆ. ನಿಮಗೆ ತೊಂದರೆಯಾಗದಿದ್ದಲ್ಲಿ ಮತ್ತೊಮ್ಮೆ ಹೇಳಿಕೊಡುವಿರಾ?’.

ಮೂರು ಮೀನುಗಳು

ಒಂದು ಕೊಳದಲ್ಲಿ ಮೂರು ಮೀನುಗಳು ವಾಸಿಸುತ್ತಿದ್ದವು. ಒಂದು ಬುದ್ಧಿವಂತ ಮೀನು, ಮತ್ತೊಂದು ಅರೆಬುದ್ಧಿವಂತ ಮೀನು ಹಾಗೂ ಮೂರನೆಯದು ದಡ್ಡ ಮೀನು. ಎಲ್ಲ ಮೀನುಗಳ ಹಾಗೆಯೇ ಆ ಮೀನುಗಳ ಬದುಕೂ ಸಹ ಸಾಗಿತ್ತು. ಆದರೆ ಒಂದು ದಿನ ಒಬ್ಬ ಮೀನುಗಾರ ಆ ಕೊಳಕ್ಕೆ ಮೀನು ಹಿಡಿಯಲು ಬಂದ. ಆತನನ್ನು ನೀರಿನೊಳಗಿಂದಲೇ ನೋಡಿದ ಬುದ್ಧಿವಂತ ಮೀನು, ತನ್ನೆಲ್ಲ ಜೀವನಾನುಭವದಿಂದ, ತನ್ನ ಹಿರಿಯರಿಂದ ಕೇಳಿದ ಕತೆಗಳಿಂದ ಹಾಗೂ ತನ್ನ ಬುದ್ಧಿವಂತಿಕೆಯಿಂದ ಆ ಮೀನುಗಾರನಿಂದ ತಪ್ಪಿಸಿಕೊಳ್ಳುವ ಉಪಾಯ ಹುಡುಕತೊಡಗಿತು.

‘ಈ ಕೊಳದಲ್ಲಿ ನಾನು ಅಡಗಿಕೊಳ್ಳುವ ಸ್ಥಳಗಳು ಕಡಿಮೆಯಾಗಿದೆ. ಆದುದರಿಂದ ನಾನು ಸತ್ತಂತೆ ನಟಿಸುತ್ತೇನೆ’ ಎಂದುಕೊಂಡು, ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿ ನೀರಿನಿಂದ ಹೊರಕ್ಕೆ ನೆಗೆದು ಉಸಿರುಬಿಗಿಹಿಡಿದು, ಸತ್ತಂತೆ ನಟಿಸುತ್ತಿದ್ದುದರಿಂದ ಮೀನು ಸತ್ತಿದೆಯೆಂದು ತಿಳಿದ ಮೀನುಗಾರ ಆ ಮೀನನ್ನು ಎತ್ತಿ ನೀರಿಗೆ ಎಸೆದ. ಕೂಡಲೇ ಮೀನು ದಡದಂಚಿನಲ್ಲಿದ್ದ ಸಣ್ಣ ತೂತಿನೊಳಗೆ ಸೇರಿ ಅವಿತುಕೊಂಡಿತು.

ಇದನ್ನೆಲ್ಲ ಗಮನಿಸುತ್ತಿದ್ದ ಎರಡನೆಯ ಅರೆಬುದ್ಧಿವಂತ ಮೀನಿಗೆ ಏನೊಂದೂ ಅರ್ಥವಾಗಲಿಲ್ಲ. ಅದು ಮೊದಲನೆಯ ಮೀನಿನ ಬಳಿಗೆ ಹೋಗಿ ಇದೆಲ್ಲಾ ಏನೆಂದು ಕೇಳಿತು. ‘ತುಂಬಾ ಸರಳ’ ಎಂದಿತು ಬುದ್ಧಿವಂತ ಮೀನು, ‘ನಾನು ಸತ್ತಂತೆ ನಟಿಸಿದೆ. ಮೀನುಗಾರ ನನ್ನನ್ನು ವಾಪಸ್ಸು ಎಸೆದ’ ಎಂದಿತು.

ತಕ್ಷಣ ಅರೆಬುದ್ಧಿವಂತ ಮೀನು ನೀರಿನಿಂದ ಹೊರಕ್ಕೆ ಜಿಗಿದು ಮೀನುಗಾರನ ಕಾಲ ಬಳಿ ಬಿದ್ದಿತು. 'ಇದೇನಿದು ಆಶ್ಚರ್ಯ, ಎಲ್ಲ ಮೀನುಗಳು ನೀರಿನಿಂದ ಹಾರಿ ಹೊರಬರುತ್ತಿವೆಯೆಲ್ಲಾ!' ಎಂದುಕೊಂಡ. ಅರೆಬುದ್ಧಿವಂತ ಮೀನು ಉಸಿರು ಬಿಗಿಹಿಡಿಯಲು ಮರೆತಿದ್ದುದರಿಂದ ಅದು ಉಸಿರಾಡುತ್ತಲೇ ಇತ್ತು. ಅದು ಬದುಕಿದೆಯೆಂದು ಮೀನುಗಾರ ಅದನ್ನು ತನ್ನ ಬುಟ್ಟಿಗೆ ಹಾಕಿಕೊಂಡ. ಮೀನುಗಳಿಗೇನಾಗಿದೆಯೆಂದು ಕೊಳದಲ್ಲಿ ಬಗ್ಗಿ ನೋಡಿದ. ಆತ ಗೊಂದಲದಲ್ಲಿದ್ದುದರಿಂದ ಮೀನಿನ ಬುಟ್ಟಿಯ ಮುಚ್ಚಳವನ್ನು ಮುಚ್ಚಿರಲಿಲ್ಲ. ಅರೆಬುದ್ಧಿವಂತ ಮೀನು ಬುಟ್ಟಿಯಿಂದ ಹಾರಿ ಹೇಗೋ ನೀರು ಸೇರಿಕೊಂಡು ಬುದ್ಧಿವಂತ ಮೀನಿನ ಬಳಿ ಏದುಸಿರುಬಿಡುತ್ತಾ ಸೇರಿಕೊಂಡಿತು.

ಮೂರನೆಯ ದಡ್ಡ ಮೀನು ಈ ಎರಡೂ ಮೀನುಗಳ ಕತೆ ಕೇಳಿತು. ಆ ಎರಡು ಮೀನುಗಳು ಎಲ್ಲಾ ವಿವರಿಸಿ ಹೇಳಿ ನೀರಿನಿಂದ ಹಾರಿಬಿದ್ದಾಗ ಉಸಿರಾಡದೇ ಬಿದ್ದಿರುವುದು ಬಹಳ ಮುಖ್ಯವೆಂದು ಒತ್ತಿ ಒತ್ತಿ ಹೇಳಿದವು. 'ಎಲ್ಲಾ ಅರ್ಥವಾಯಿತು, ವಂದನೆಗಳು' ಎಂದು ಹೇಳಿದ ದಡ್ಡ ಮೀನು ನೀರಿನಿಂದ ಹಾರಿ ಮೀನುಗಾರನ ಕಾಲಬಳಿಯೇ ಬಿದ್ದಿತು. ಎರಡು ಮೀನುಗಳನ್ನು ಕಳೆದುಕೊಂಡಿದ್ದ ಮೀನುಗಾರ ಈ ಮೀನು ಉಸಿರಾಡುತ್ತಿದ್ದೆಯೋ ಇಲ್ಲವೋ ಎನ್ನುವುದನ್ನು ಗಮನಿಸದೆ ಎತ್ತಿ ತನ್ನ ಬುಟ್ಟಿಗೆ ಹಾಕಿ ಮುಚ್ಚಳವನ್ನು ಬಿಗಿಯಾಗಿ ಮುಚ್ಚಿದ. ನೀರಿಗೆ ಬಲೆಹಾಕಿ ಉಳಿದ ಮೀನು ಹಿಡಿಯಲು ಪ್ರಯತ್ನಿಸಿದ. ಆದರೆ ಉಳಿದ ಎರಡೂ ಮೀನುಗಳು ದಡದಂಚಿನ ಸಂದಿನಲ್ಲಿ ಅವಿತಿಟ್ಟು ಕೊಂಡಿದ್ದುದರಿಂದ ಆತನ ಬಲೆಗೆ ಅವು ಬೀಳಲಿಲ್ಲ. ಕೊನೆಗೆ ಬುಟ್ಟಿಯಲ್ಲಿದ್ದ ದಡ್ಡ ಮೀನನ್ನು ತನ್ನ ಬೆಕ್ಕಿಗೆ ಕೊಂಡೊಯ್ದ.

ರೊಟ್ಟಿ ಮತ್ತು ವಜ್ರಗಳು

ರಾಜ ತನ್ನಲ್ಲಿದ್ದ ಒಂದಷ್ಟು ವಜ್ರವೈಢೂರ್ಯಗಳನ್ನು ದಾನ ಮಾಡಿಬಿಡಬೇಕೆಂದು ನಿರ್ಧರಿಸಿದ. ಆ ದಾನವನ್ನು ಸ್ವೀಕರಿಸಿದವರು ಅದನ್ನು ಏನು ಮಾಡುತ್ತಾರೆ ಎಂಬುದನ್ನೂ ಸಹ ಪರೀಕ್ಷಿಸಬೇಕೆಂದು ಕೊಂಡ. ರಾಜ ರೊಟ್ಟಿ ಮಾಡುವವನ ತನ್ನ ನಂಬಿಕಸ್ತನನ್ನು ಕರೆದು ಎರಡು ರೊಟ್ಟಿ ಮಾಡುವಂತೆ ತಿಳಿಸಿದ; ಒಂದರಲ್ಲಿ ಒಂದಷ್ಟು ವಜ್ರಗಳನ್ನು ಸೇರಿಸಿ ಬೇಯಿಸುವಂತೆ ಹೇಳಿದ. ವಜ್ರಗಳಿರುವ ರೊಟ್ಟಿಯನ್ನು ಒಬ್ಬ ಒಳ್ಳೆಯ ಮನುಷ್ಯನಿಗೆ ಹಾಗೂ ಸಾಧಾರಣ ರೊಟ್ಟಿಯನ್ನು ಒಬ್ಬ ಕೆಟ್ಟವನಿಗೆ ಕೊಡುವಂತೆ ತಿಳಿಸಿದ. ಆ ರೊಟ್ಟಿಗಳನ್ನು ಪಡೆಯುವವರ ಪ್ರತಿಕ್ರಿಯೆ ಹೇಗಿರುತ್ತದೆಂಬುದನ್ನು ತಾನು ಅವಿತುಕೊಂಡು ಕಿಟಕಿಯಿಂದ ಗಮನಿಸುತ್ತಿರುತ್ತೇನೆ ಎಂದು ಹೇಳಿದ.

ಮರುದಿನ ಬೆಳಿಗ್ಗೆ ರೊಟ್ಟಿಯವನ ಬಳಿ ಭಿಕ್ಷೆ ಬೇಡಲು ಇಬ್ಬರು ಬಂದರು. ಅದರಲ್ಲಿ ಒಬ್ಬಾತ ಸಂನ್ಯಾಸಿ ಮತ್ತೊಬ್ಬ ಒಬ್ಬ ಸಾಮಾನ್ಯ ಮನುಷ್ಯ, ನೋಡಲು ಕೆಟ್ಟವನ ತರಹ ರೊಟ್ಟಿಯವನಿಗೆ ಕಂಡ. ವಜ್ರಗಳಿದ್ದ ರೊಟ್ಟಿಯನ್ನು ಸಂನ್ಯಾಸಿಗೂ, ಸಾಧಾರಣ ರೊಟ್ಟಿಯನ್ನು ಮತ್ತೊಬ್ಬನಿಗೂ ರೊಟ್ಟಿಯವ ಭಿಕ್ಷೆ ನೀಡಿದ.

ಆದರೆ ಸಂನ್ಯಾಸಿ, ನಿಜವಾದ ಸಂನ್ಯಾಸಿಯಾಗಿರಲಿಲ್ಲ. ಅವನೊಬ್ಬ ಕಳ್ಳ ಸಂನ್ಯಾಸಿಯಾಗಿದ್ದ. ಆತನ ಕೈಗೆ ವಜ್ರಗಳಿದ್ದ ರೊಟ್ಟಿ ಬಂದ ಕೂಡಲೆ ಅದು ತೂಕದ್ದೆನಿಸಿತು. ಅದರಲ್ಲಿದ್ದ ವಜ್ರಗಳು ಉಂಡೆಗಳಾಗಿ ಕಾಣುತ್ತಿದ್ದುದರಿಂದ ಆ ರೊಟ್ಟಿಯಲ್ಲಿ ಹಿಟ್ಟು ಉಂಡೆಗಳಾಗಿ ಸರಿಯಾಗಿ ಬೆಂದಿಲ್ಲವೆನಿಸಿತು. ಪಕ್ಕದಲಿದ್ದವನ ಸಾಧಾರಣ ರೊಟ್ಟಿ ಚೆನ್ನಾಗಿ ಕಾಣುತ್ತಿತ್ತು. ಅವನಿಗೆ ಹೇಗಾದರೂ ಮಾಡಿ ಈ ಬೆಂದಿಲ್ಲದ ರೊಟ್ಟಿಯನ್ನು ಸಾಗಹಾಕಿ, ಅವನ ರೊಟ್ಟಿಯನ್ನು ತಾನು ಪಡೆದುಕೊಳ್ಳಬೇಕೆಂದು ಹಂಚಿಕೆ ಹೂಡಿ, 'ಏನಪ್ಪಾ, ನಾವಿಬ್ಬರೂ ರೊಟ್ಟಿ ಅದಲುಬದಲು ಮಾಡಿಕೊಳ್ಳೋಣವೆ? ನೀನು ಬಹಳ ಹಸಿದಂತೆ ಕಾಣುತ್ತೀಯ. ನನ್ನ ರೊಟ್ಟಿ ತುಂಬ ದೊಡ್ಡದಾಗಿದೆ. ಇದನ್ನು ನೀನು ತೆಗೆದುಕೊಂಡು ನಿನ್ನ ಸಣ್ಣ ರೊಟ್ಟಿಯನ್ನು ನನಗೆ ಕೊಡು. ನನ್ನಗೆ ಅದೇ ಸಾಕು' ಎಂದ. ಆ ಎರಡನೇ ವ್ಯಕ್ತಿ ತನಗೆ ಯಾವುದಾದರೂ ಸರಿಯೆ ಎಂದು ಒಪ್ಪಿಕೊಂಡು ರೊಟ್ಟಿಯನ್ನು ಅದಲುಬದಲು ಮಾಡಿಕೊಂಡು ಅಲ್ಲಿಂದ ಹೊರಟ.

ಇದನ್ನೆಲ್ಲಾ ಅವಿತು ಗಮನಿಸುತ್ತಿದ್ದ ರಾಜನಿಗೆ ಆಶ್ಚರ್ಯವಾಯಿತು. ರಾಜನಿಗೆ ಸಂನ್ಯಾಸಿ ಕಳ್ಳ ಸಂನ್ಯಾಸಿಯೆಂದು ತಿಳಿಯಲಿಲ್ಲ. ಸಂನ್ಯಾಸಿಗೆ ವಜ್ರಗಳ ಅವಶ್ಯಕತೆಯಿಲ್ಲವೆಂದು ವಿಧಿಯೇ ಆತನಿಂದ ಮತ್ತೊಬ್ಬಾತನಿಗೆ ರೊಟ್ಟಿ ಕೊಡಿಸಿರಬೇಕೆಂದೂ, ಮತ್ತೊಬ್ಬಾತ ನಿಜವಾಗಿಯೂ ಒಳ್ಳೆಯವನಾಗಿದ್ದು ಆತ ಆ ವಜ್ರಗಳನ್ನು ಸದುಪಯೋಗ ಪಡಿಸಿಕೊಳ್ಳಬಹುದೆಂದು ಊಹಿಸಿದ.

'ನನಗೆ ಹೇಳಿದಷ್ಟು ನಾನು ಮಾಡಿದೆ' ಎಂದ ರೊಟ್ಟಿಯವ.

'ವಿಧಿ ಬರಹ ಬದಲಿಸಲು ನಮ್ಮಿಂದ ಸಾಧ್ಯವಿಲ್ಲ' ಎಂದ ರಾಜ.

'ನಾನೆಷ್ಟು ಚತುರ!' ಎಂದುಕೊಂಡ ಕಳ್ಳ ಸಂನ್ಯಾಸಿ.

ದಡ್ಡನ ಪ್ರೇಮ

ಒಂದಾನೊಂದು ಕಾಲದಲ್ಲಿ ಒಬ್ಬಾತ ತನ್ನ ಮೇಕೆ, ಒಂಟೆ ಮೇಯಿಸಿಕೊಂಡು ಕಾಡಿನಲ್ಲಿ ಸಣ್ಣ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದ. ಕಾಡಿನ ಹಣ್ಣು, ಕಂದಮೂಲಗಳಿಂದ ಹಾಗೂ ಒಂಟೆ ಮತ್ತು ಮೇಕೆಯ ಹಾಲಿನಿಂದ ತನ್ನ ಹೊಟ್ಟೆ ತುಂಬಿಸಿಕೊಂಡು ಜೀವನ ನಡೆಸುತ್ತಿದ್ದ. ರಾತ್ರಿ ಚಂದಿರನನ್ನು, ಹೊಳೆವ ತಾರೆಗಳನ್ನು ನೋಡಿ ಆನಂದಿಸುತ್ತಿದ್ದ. ಬದಲಾಗುವ ಋತುಗಳನ್ನು, ಸುರಿವ ಮಳೆಯನ್ನು, ಉಕ್ಕಿ ಹೊಮ್ಮುವ ಹೊಸ ಜೀವರಾಶಿಯನ್ನು ಹಾಗೂ ಕ್ರಮೇಣ ಅವು ಒಣಗಿ ಸೊರಗುವುದನ್ನು ಕಂಡು ಬೆಕ್ಕಸಬೆರಗಾಗಿದ್ದ. ಈ ಎಲ್ಲದಕ್ಕೂ ಕಾರಣನಾದ ಅಲ್ಲಾಹ್‌ನ ಅದ್ಭುತ ಶಕ್ತಿಯನ್ನು ಕಂಡು ವಿಸ್ಮಯಗೊಂಡಿದ್ದ.

ಒಂದು ದಿನ ಆಕಾಶದ ಕಡೆಗೆ ನೋಡುತ್ತ 'ನೀನೇಕೆ ನನ್ನ ಕಣ್ಣಿಗೆ ಕಾಣಿಸಿಕೊಂಡು ನನ್ನ ಮನೆಗೇಕೆ ಬರಬಾರದು?' ಎಂದು ಕೂಗಿದ. 'ಈ ಬಡವನ ಸಣ್ಣ ಗುಡಿಸಲು ನಿನಗೆ ಇಷ್ಟವಿಲ್ಲವೆ? ನನ್ನ ಮನೆಗೆ ಬಾ. ನಿನ್ನ ಕಾಲು ತೊಳೆದು ಉಯ್ಯಾಲೆಯಲ್ಲಿ ನಿನ್ನನ್ನು ಕೂಡಿಸಿ ತೂಗುತ್ತೇನೆ. ಜೋಗುಳ ಹಾಡುತ್ತೇನೆ. ಬೆಳಿಗ್ಗೆ ಎದ್ದ ನಂತರ ನಿನಗೆ

ಸ್ನಾನ ಮಾಡಿಸಿ ತಲೆ ಬಾಚುತ್ತೇನೆ. ಮನೆಮನೆಗೆ ಹೋಗಿ ಭಿಕ್ಷೆ ಬೇಡಿ ಸಿಕ್ಕ ಹಣದಿಂದ ನಿನಗೆ ಅತ್ಯುತ್ತಮ ಆಹಾರ ಕೊಂಡುತರುತ್ತೇನೆ. ನೀನು ತಿಂದು ಉಳಿದದ್ದನ್ನು ನಾನು ತಿನ್ನುತ್ತೇನೆ ಬಾ ನನ್ನ ಮನೆಗೆ' ಎಂದು ಅಲ್ಲಾಹ್‌ನನ್ನು ಕರೆದ.

ಆ ಬಡವ ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ ಪ್ರವಾದಿ ಮೂಸ (ಮೋಸಸ್‌ನ ಅರಾಬಿಕ್ ಹೆಸರು) ಅಲ್ಲಿ ಹಾದು ಹೋಗುತ್ತಿದ್ದ. ಅವನ ಮಾತುಗಳನ್ನು ಕೇಳಿಸಿಕೊಂಡು, 'ಎಂಥಾ ದಡ್ಡನಯ್ಯಾ ನೀನು! ಎಂತಹ ಮಾತುಗಳನ್ನಾಡುತ್ತಿದ್ದೀಯ? ಅಲ್ಲಾಹ್‌ನನ್ನು ನಿನ್ನಂತಹ ಹುಲುಮಾನವನೆಂದು ತಿಳಿದಿದ್ದೀಯ ನಿನ್ನ ಹಾಗೆ ಊಟ ಮಾಡಲು ಹಾಗೂ ಜೋಗುಳ ಕೇಳುತ್ತಾ ನಿದ್ದೆ ಮಾಡಲು? ಅಸೀಮಿತವಾದದ್ದನ್ನು ಸಮಯ ಮತ್ತು ಆಕಾಶಗಳ ಚೌಕಟ್ಟಿನಲ್ಲಿ ಬಂಧಿಸಿಡುವ ಪ್ರಯತ್ನ ನಿನ್ನದು. ಈ ಮೂರ್ಖತನದ ಪ್ರಯತ್ನ ಕೈಬಿಡು ಇಲ್ಲವೆಂದಲ್ಲಿ ಅಲಾಹ್ ನಿನಗೆ ಶಾಪ ಕೊಟ್ಟಾನು!' ಎಂದು ಗದರಿಸಿದ.

ಕೂಡಲೆ ಅಲ್ಲಾಹ್‌ನ ಧ್ವನಿ ಕೇಳಿತು! 'ಎಂತಹ ಕೆಲಸ ಮಾಡಿಬಿಟ್ಟೆ, ಮೂಸಾ! ಪ್ರೇಮಿಸುವನನ್ನು ಅವನು ಪ್ರೇಮಿಸುವುದರಿಂದ ದೂರ ಮಾಡಿಬಿಟ್ಟೆಯೆಲ್ಲಾ?''.

ಸಾವನ್ನು ಅರಿತವನು

ಒಮ್ಮೆ ಒಬ್ಬ ಫಕೀರ ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದ. ಹಡಗಿನವರೆಲ್ಲಾ ಫಕೀರನ ಬಳೀ ಬಂದು ಆಶೀರ್ವಾದ, ಉಪದೇಶ ಪಡೆಯುತ್ತಿದ್ದರು. ಆ ಫಕೀರ ಎಲ್ಲರಿಗೂ ಒಂದೇ ಮಾತು ಹೇಳುತ್ತಿದ್ದ; 'ಸಾವನ್ನು ಅರಿಯುವವರೆಗೂ ಸಾವಿನ ಬಗ್ಗೆ ಎಚ್ಚರಿಕೆಯಿಂದಿರಿ'.

ಪ್ರಯಾಣ ಹಾಗೇ ಮುಂದುವರಿದಂತೆ ಇದ್ದಕ್ಕಿದ್ದಂತೆ ಬಿರುಗಾಳಿ ಎದ್ದಿತು. ಸಮುದ್ರವೇ ಅಲ್ಲೋಲಕಲ್ಲೋಲವಾಗಿ ಹಡಗು ತೂರಾಡತೊಡಗಿತು. ಪ್ರಯಾಣಿಕರೆಲ್ಲಾ ಹೆದರಿ ಕಂಗಾಲಾಗಿ ಪ್ರಾಣಭಯದಿಂದ ಕೂಗಿ ಕಿರುಚಾಡಿದರು. ಕೆಲವರು ತಮ್ಮನ್ನು ಉಳಿಸುವಂತೆ ದೇವರ ಮೊರೆ ಇಟ್ಟರು. ಆದರೆ ಆ ಫಕೀರ ಇದ್ಯಾವುದರ ಪರಿವೆಯೇ ಇಲ್ಲದೆ ನಿರ್ಲಿಪ್ತನಾಗಿ ಸುಮ್ಮನೆ ಕೂತಿದ್ದ. ಕ್ರಮೇಣ ಬಿರುಗಾಳಿ ಕಡಮೆಯಾಯಿತು. ಸಮುದ್ರ ಶಾಂತವಾಯಿತು. ಫಕೀರನನ್ನು ಗಮನಿಸಿದ್ದವರು ಆತನ ಬಳಿ ಬಂದರು. ಒಬ್ಬಾತ, 'ಆ ಭಯಂಕರ ಬಿರುಗಾಳಿಯಲ್ಲಿ ನಮ್ಮ ಮತ್ತು ಸಾವಿನ ನಡುವೆ ಕೇವಲ ಒಂದು ಮರದ ಹಲಗೆಯಿತ್ತು ಗೊತ್ತೆ?' ಎಂದು ಕೇಳಿದ.

'ಹೋ ಗೊತ್ತು' ಎಂದ ಫಕೀರ. 'ನನಗೆ ಗೊತ್ತು ಸಮುದ್ರದಲ್ಲಿ ಯಾವಾಗಲೂ ಹಾಗೆಯೇ. ಆದರೆ ನಿಜ ಬದುಕಿನಲ್ಲಿ ನೆಲದ ಮೇಲೆ ನಮ್ಮ ಮತ್ತು ಸಾವಿನ ನಡುವಿನ ಅಂತರ ಇನ್ನೂ ಕಡಿಮೆಯೇ ಇರುತ್ತದೆ' ಎಂದ ಶಾಂತನಾಗಿ.

ಕಳೆದುಹೋದ ಒಂಟೆ ಮತ್ತು ಆತ್ಮತೃಪ್ತಿ

ಬಾಲ್ಕ್‌ನ ಸುಲ್ತಾನ ಇಬ್ರಾಹಿಂ ಅದಮ್ ಒಂದು ದಿನ ತನ್ನ ಸುಖಾಸನದಲ್ಲಿ ಕುಳಿತು ವಿರಮಿಸುತ್ತಾ ಅಲ್ಲಾಹ್‌ನ ಜಿಕ್ರ್ (ಧ್ಯಾನ) ಮಾಡುತ್ತಾ ಸತ್ಯಾನ್ವೇಷಣೆಯ ಪ್ರಯತ್ನ ನಡೆಸುತ್ತಾ ಕೂತಿದ್ದ. ಆಗ ಅರಮನೆಯ ತಾರಸಿಯ ಮೇಲೇನೋ ಸದ್ದಾದಂತಾಯಿತು. ಕೂಡಲೆ ಅರಮನೆಯ ಭಟರು ಮೇಲೆ ಹೋಗಿ ಒಬ್ಬಾತನನ್ನು ಹಿಡಿದು ತಂದರು.

'ನನ್ನ ಅರಮನೆಯ ತಾರಸಿಯ ಮೇಲೆ ಏನು ಮಾಡುತ್ತಿದ್ದೀಯ?' ಸುಲ್ತಾನ ಗದರಿಸಿ ಕೇಳಿದ.

'ಕಳೆದುಹೋಗಿರುವ ನನ್ನ ಒಂಟೆಯನ್ನು ಹುಡುಕುತ್ತಿದ್ದೆ' ಆತ ಉತ್ತರಿಸಿದ.

'ಏನು? ನನ್ನ ಅರಮನೆಯಲ್ಲಿ ನಿನ್ನ ಒಂಟೆಯೆ? ನಿನಗೆ ತಲೆ ಕೆಟ್ಟಿದೆಯೆ?' ಗದರಿಸಿದ ಸುಲ್ತಾನ.

'ನಿನ್ನ ಅರಮನೆಯ ಸುಖಭೋಗದಲ್ಲಿ, ನಿನ್ನ ಜಪಮಾಲೆಯಲ್ಲಿ ನೀನು ಅಲ್ಲಾಹ್‌ನನ್ನು ಹುಡುಕುತ್ತಿರುವಾಗ, ನಾನು ನನ್ನ ಒಂಟೆಯನ್ನು ಏಕೆ ಹುಡುಕಬಾರದು

ಇಬ್ರಾಹಿಂ? ನೀನು ಸತ್ಯ ಅರಿಯಬೇಕಾದಲ್ಲಿ ಹೋಗು, ಅರಿತವರ ಸಂಗ ಮಾಡು ಹಾಗೂ ನಿನ್ನಲ್ಲೇ, ನಿನ್ನ ಹೃದಯದಲ್ಲೇ ಸತ್ಯವನ್ನು ಅರಸು' ಎಂದ ಅಪರಿಚಿತ.

ಆ ಅಪರಿಚಿತ ಪ್ರಖ್ಯಾತ ಸೂಫಿ ಅಬ್ದುಲ್‌ನೆಂದು ಸುಲ್ತಾನ ಇಬ್ರಾಹಿಂ ಆದಮ್‌ನಿಗೆ ಕೂಡಲೇ ತಿಳಿಯಿತು. ಆತನ ಮಾತಿನ ಪ್ರಭಾವಕ್ಕೊಳಗಾದ ಇಬ್ರಾಹಿಂ ತನ್ನ ರಾಜ್ಯಭಾರವನ್ನು ತನ್ನ ಮಗನಿಗೊಪ್ಪಿಸಿ ಅರಮನೆ ಬಿಟ್ಟು ಹೊರಟ. ಊರೂರು ಅಲೆಯುತ್ತಾ ಹೊಸಹೊಸ ಸ್ಥಳಗಳನ್ನು ನೋಡುತ್ತಾ ಅರಿತವರಿಂದ ಕಲಿಯುತ್ತಾ ಆತ ಅಲೆದಾಡಿದ.

ಹಲವಾರು ವರ್ಷಗಳ ನಂತರ ತನ್ನ ಹರಿದ ಅಂಗಿಯನ್ನು ಕೆರೆಯೊಂದರ ಪಕ್ಕದಲ್ಲಿ ಕೂತು ಹೊಲೆಯುತ್ತಿದ್ದಾಗ ಈಗ ದೊಡ್ಡವನಾಗಿದ್ದ ಆತನ ಮಗ ಆತನನ್ನು ಹುಡುಕುತ್ತಾ ಅಲ್ಲಿಗೆ ಬಂದ. ತನ್ನ ತಂದೆಯನ್ನು ಕಂಡು ಆತನಿಗೆ ಸಂತೋಷವಾಯಿತು ಹಾಗೂ ಆತ ಕೃಶನಾಗಿ ಬಳಲಿದ್ದ ಆತನ ಸ್ಥಿತಿಯನ್ನು ಕಂಡು ಬೇಸರವೂ ಆಯಿತು.

'ಅಪ್ಪಾ, ಬಾ ಹೋಗೋಣ, ನಿನ್ನ ರಾಜ್ಯದ ರಾಜ್ಯಭಾರ ನೀನೇ ವಹಿಸಿಕೊ. ನೀನೆಂತಹ ಅಪ್ರತಿಮ ಸುಲ್ತಾನನಾಗಿದ್ದೆ. ಈಗ ನೋಡು ಹೇಗಾಗಿದ್ದೀಯ' ಆತಂಕದಿಂದ ಮಗ ತಂದೆಯಿರುವ ಪರಿಸ್ಥಿತಿ ಕಂಡು ಅಳತೊಡಗಿದ. 'ಇಂತಹ ಪರಿಸ್ಥಿತಿಯಲ್ಲಿ ನಿನ್ನನ್ನು ನೋಡಲು ಸಾಧ್ಯವಿಲ್ಲ. ಹಲವಾರು ತಿಂಗಳುಗಳಿಂದ ನಿನ್ನನ್ನು ದೇಶವೆಲ್ಲಾ ಹುಡುಕಿದ್ದೇನೆ. ನಡೆ ಮನೆಗೆ ಹೋಗೋಣ' ಎಂದ.

ಇಬ್ರಾಹಿಂನಿಗೂ ತನ್ನ ಮಗನನ್ನು ಕಂಡು ಸಂತೋಷವಾಯಿತು. ಆತನನ್ನು ತಬ್ಬಿಕೊಂಡ. ಆಗ ಆತನ ಕೈಯಲ್ಲಿದ್ದ ಹರಿದ ಅಂಗಿ ಹೊಲೆಯುತ್ತಿದ್ದ ಸೂಜಿ ಜಾರಿ ಕೆರೆಯ ನೀರಿಗೆ ಬಿದ್ದು ಕಳೆದುಹೋಯಿತು. ಇಬ್ರಾಹಿಂ ಕೆರೆಯ ಕಡೆಗೆ ತಿರುಗಿ ಚಪ್ಪಾಳೆ ತಟ್ಟಿದ. ಇದ್ದಕ್ಕಿದ್ದಂತೆ ನೀರು ಅಲುಗಾಡತೊಡಗಿತು. ನೂರಾರು ಮೀನುಗಳು ತಮ್ಮ ಬಾಯಲ್ಲಿ ಚಿನ್ನದ ಸೂಜಿ ಹಿಡಿದು ಬಂದವು. ಆತ ನಗುತ್ತಾ ಅಲ್ಲವೆಂಬಂತೆ ತಲೆಯಲ್ಲಾಡಿಸಿದ. ಎಲ್ಲಾ ಮೀನುಗಳು ವಾಪಸ್ಸು ಹೋದವು. ಕೊನೆಗೊಂದು ಮೀನು ಆತನದೇ ಸೂಜಿ ಹಿಡಿದು ಬಂದಿತು. ಇಬ್ರಾಹಿಂ ಅದನ್ನು ಸ್ವೀಕರಿಸಿದ. ನಂತರ ತನ್ನ ಮಗನ ಕಡೆ ತಿರುಗಿ, 'ಅಲ್ಲಾಹ್ ತನ್ನ ಸೃಷ್ಟಿಯ ಎಲ್ಲಾ ಜೀವಿಗಳನ್ನೂ ನನ್ನ ನಿಷ್ಠರನ್ನಾಗಿ ಮಾಡಿರುವಾಗ ಹಾಗೂ ಸತ್ಯದ ಅಂತರಾಳ ಅರಿತಿರುವ ನನಗೆ ಬಾಲ್ಕ್ ರಾಜ್ಯ ಅರ್ಥಹೀನ. ಆತ್ಮ ತೃಪ್ತಿಯೇ ನಿಜವಾದ ಆಸ್ತಿ. ಆತ್ಮತೃಪ್ತಿ ಇರುವವನಿಗೆ ಮತ್ತಾವುದರ ಅವಶ್ಯಕತೆಯೂ ಇಲ್ಲ, ನೀನು ಹಿಂದಿರುಗು' ಎಂದ.

ಕುರುಡರು ಕಂಡ ಆನೆ

ಘೋರ್‌ನ ಆಚೆ ನಗರವೊಂದಿತ್ತು. ಅಲ್ಲಿನ ಜನರೆಲ್ಲಾ ಕುರುಡರು. ಒಬ್ಬ ರಾಜ ತನ್ನ ಸೈನ್ಯದೊಂದಿಗೆ ಹೋಗುತ್ತಿದ್ದವನು ಆ ನಗರದ ಹೊರವಲಯದಲ್ಲಿ ಬೀಡುಬಿಟ್ಟ. ಆಗ ರಾಜನ ಬಳಿ ಯುದ್ಧದಲ್ಲಿ ಬಳಸಲು ಬಲಶಾಲಿ ಆನೆಯೊಂದಿತ್ತು. ಆನೆಯ ಸುದ್ದಿಯನ್ನು ಕೇಳಿದ ಕುರುಡು ಜನ ಆನೆಯನ್ನು 'ನೋಡಲು' ಕುತೂಹಲರಾದರು.

ಕೆಲವು ಉತ್ಸಾಹಿಗಳು, ಅದನ್ನು 'ನೋಡಲು' ಹೊರಟೇಬಿಟ್ಟರು. ಆ ಕುರುಡರಿಗೆ ಆನೆಯ ರೂಪ ಊಹಿಸಲೂ ಸಾಧ್ಯವಿರಲಿಲ್ಲ. ಆನೆಯನ್ನು ತಡಕಾಡಿ ಮುಟ್ಟಿ ಮುಟ್ಟಿ ನೋಡಿದರು. ಪ್ರತಿಯೊಬ್ಬರೂ ಆನೆಯ ರೂಪ ತನಗೇ ತಿಳಿದಿದೆಯೆಂದುಕೊಂಡ.

ಅವರು ಊರಿಗೆ ಹಿಂದಿರುಗಿದಾಗ ಊರಿನ ಇತರ ಜನ ಅವರ ಬಾಯಿಂದ ಆನೆಯ ರೂಪವರ್ಣನೆ ಕೇಳಲು ಕಾತುರರಾಗಿದ್ದರು.

ಒಬ್ಬ ಕುರುಡ ಹೇಳಿದ, 'ಆನೆ ಅಗಲವಾಗಿ, ಒರಟಾಗಿ, ದೊಡ್ಡದಾಗಿ ನಾವು ಹೊದೆಯುವ ಕಂಬಳಿಯ ಹಾಗಿದೆ' ಎಂದ. ಆತ ಆನೆಯ ಕಿವಿಯನ್ನು ಮಾತ್ರ ಸ್ಪರ್ಶಿಸಿದ್ದ.

ಎರಡನೆಯಾತ ಹೇಳಿದ, 'ಇಲ್ಲ, ಆನೆ ಹೇಗಿದೆಯೆಂದು ನನಗೆ ಮಾತ್ರ ಗೊತ್ತು. ಅದು ಉದ್ದಕ್ಕೆ, ನಳಿಕೆಯಂತೆ ಬಲಶಾಲಿಯಾಗಿದೆ' ಎಂದ. ಆತ ಅದರ ಸೊಂಡಿಲು ಮಾತ್ರ ಸ್ಪರ್ಶಿಸಿದ್ದ.

ಮೂರನೆಯವ ಹೇಳಿದ, 'ಇಲ್ಲ, ಆನೆ ದಪ್ಪಗೆ, ತೂಕವಾಗಿ ಕಂಬದ ಹಾಗಿದೆ' ಎಂದ. ಆತ ಆನೆಯ ಕಾಲು ಮಾತ್ರ ತಡವಿದ್ದ.

ಆನೆಯ ಸಂಪೂರ್ಣ ಅರಿವು ಯಾರಿಗೂ ಇರಲಿಲ್ಲ. ಜ್ಞಾನ 'ಕುರುಡರ' ಸಂಗಾತಿಯಾಗಲಾರದು.

ನಿಸ್ವಾರ್ಥ ಪ್ರೇಮ

ಒಂದು ದಿನ ಪ್ರವಾದಿ ಮೂಸಾ ದೇವರೊಂದಿಗೆ ಮತನಾಡಲು ಕೊಹ್-ಎ-ತೂರ್‌ಗೆ ಹೋಗುತ್ತಿದ್ದಾಗ ಒಬ್ಬ ಹೆಂಗಸು ಬಂದು, 'ನಾನೊಬ್ಬ ಸಿರಿವಂತಳು. ಆದರೆ ನನ್ನ ಕೊರತೆಯೆಂದರೆ ನನಗೆ ಮಕ್ಕಳೇ ಇಲ್ಲ. ಹೋ ಪ್ರವಾದಿಯೇ, ನನಗಾಗಿ ಅಲ್ಲಾಹ್‌ನನ್ನು ಕೇಳು ನನ್ನ ವಿಧಿಯಲ್ಲಿ ಮಕ್ಕಳಿವೆಯೆ ಎಂದು, ಮಕ್ಕಳಿಗಾಗಿ ಕಂಡ ಕಂಡ ಮಂದಿರಗಳನ್ನೆಲ್ಲಾ ಪ್ರಾರ್ಥಿಸಿದ್ದೇನೆ. ಆದರೆ ನಾನು ಯಶಸ್ವಿಯಾಗಿಲ್ಲ. ಕೊನೆಯದಾಗಿ ಅಲ್ಲಾಹ್‌ನನ್ನು ಕೇಳಿಬಿಡಿ: ನಂತರ ನನ್ನ ಹಣೆಬರಹವಿಷ್ಟೇ ಎಂದು ಸುಮ್ಮನಾಗಿಬಿಡುತ್ತೇನೆ' ಎಂದಳು.

ಮೂಸಾ ಹೋಗಿ ಅಲ್ಲಾಹ್‌ನನ್ನು ಕೇಳಿದ. ಅದಕ್ಕೆ ಅಲ್ಲಾಹ್, 'ಆಕೆಯ ವಿಧಿಯಲ್ಲಿ ಮಕ್ಕಳಿಲ್ಲವೆಂದು ತಿಳಿಸಿಬಿಡು' ಎಂದು ಹೇಳಿದ. ಮೂಸ ಹಿಂದಿರುಗಿ ಅಲ್ಲಾಹ್ ಹೇಳಿದುದನ್ನೇ ಆಕೆಗೆ ತಿಳಿಸಿದ. ಆಕೆ ದುಃಖಿತಳಾಗಿ ಹಿಂದಿರುಗಿದಳು.

ಕೆಲವು ವರ್ಷಗಳ ನಂತರ ಮೂಸಾ ಅದೇ ಊರಿನಲ್ಲಿ ಹಾದು ಹೋಗುತ್ತಿದ್ದಾಗ, ಅದೇ ಹೆಂಗಸು ಇಬ್ಬರು ಸುಂದರ ಮಕ್ಕಳೊಂದಿಗೆ ಹೋಗುತ್ತಿದ್ದಳು. ಪ್ರವಾದಿಯನ್ನು ಕಂಡ ಕೂಡಲೇ ಆ ಹೆಂಗಸು ಓಡಿ ಬಂದು, 'ಪ್ರವಾದಿಯೇ, ನನ್ನ ವಿಧಿಯಲ್ಲಿ ಮಕ್ಕಳಿಲ್ಲವೆಂದು ನೀವು ತಿಳಿಸಿದ್ದಿರಿ. ಇಲ್ಲಿ ನೋಡಿ ನನಗೀಗ ಇಬ್ಬರು ಮಕ್ಕಳು– ಒಬ್ಬ ಮಗ ಹಾಗೂ ಒಬ್ಬ ಮಗಳು. ಅಲ್ಲಾಹ್ ನನ್ನ ಆಸೆ ಈಡೇರಿಸಿದ್ದಾನೆ' ಎಂದಳು ಸಂತೋಷದಿಂದ.

ಮೂಸಾಗಿ ಗಲಿಬಿಲಿಯಾಯಿತು ಹಾಗೂ ತನ್ನ ಮೇಲೆಯೇ ಆಕೆಗೆ ಅಪನಂಬಿಕೆ ಬಂದುದರಿಂದ ಅವಮಾನವಾದಂತೆನ್ನಿಸಿ ಕೂಡಲೇ ನಿರ್ದಿಷ್ಟ ಸ್ಥಳಕ್ಕೆ ಹೋಗಿ ಅಲ್ಲಾಹ್ ನೊಂದಿಗೆ, 'ಯಾ ಅಲ್ಲಾಹ್, ಈ ರೀತಿ ನೀನು ಹೇಳುವುದೊಂದು ಮಾಡುವುದೊಂದು ಮಾಡಿದರೆ ಜನ ನನ್ನನ್ನು ಹೇಗೆ ನಂಬುತಾರೆ ಹಾಗೂ ಶ್ರದ್ಧೆ ಉಳಿಸಿಕೊಳ್ಳುತ್ತಾರೆ? ಆ ಹೆಂಗಸಿಗೆ ಮಕ್ಕಳಾಗುವುದಿಲವೆಂದು ನೀನೇ ಹೇಳಿದೆ. ಈಗ ನೋಡು, ಆಕೆಗೆ ಎರಡು ಸುಂದರ ಮಕ್ಕಳನ್ನು ಕೊಟ್ಟಿದ್ದೀಯ. ಈಗ ಆಕೆಗೆ ನನ್ನ ಮೇಲೆಯೇ ನಂಬಿಕೆಯಿಲ್ಲ. ನೀನು ಹೀಗೆ ಮಾಡಬಹುದೆ?' ಎಂದು ಕೇಳಿದ.

'ನನಗೆ ನಿನ್ನ ಭಾವನೆಗಳು ಅರ್ಥವಾಗುತ್ತವೆ ಮೂಸಾ', ಅಲ್ಲಾಹ್ ಹೇಳಿದ, 'ನಿನ್ನ ಪ್ರಶ್ನೆಗೆ ನಾನು ಉತ್ತರಿಸುತ್ತೇನೆ. ಆದರೆ ಅದಕ್ಕ ಮೊದಲು ನನಗೊಂದು ಬಟ್ಟಲು ಮನುಷ್ಯನ ರಕ್ತ ತಂದುಕೊಡು'. ದೇವರ ಈ ಬೇಡಿಕೆಯಿಂದ ವಿಚಲಿತನಾದರೂ ತನ್ನ ಪ್ರಶ್ನೆಗೆ ಉತ್ತರ ತಿಳಿಯುವ ಆಸೆಯಿಂದ ರಕ್ತ ತರಲು ಮೂಸಾ ನಗರಕ್ಕೆ ಬಂದ. ಎದುರು ಸಿಕ್ಕ ಮೊದಲ ಮನುಷ್ಯನ ಬಳಿ ಹೋಗಿ, 'ಅಲ್ಲಾಹ್‌ಗೆ ಒಂದು ಬಟ್ಟಲು ಮನುಷ್ಯರ ರಕ್ತ ಬೇಕಾಗಿದೆ. ನಿನ್ನ ರಕ್ತ ಕೊಡು' ಎಂದು ಕೇಳಿದ. 'ಒಂದು ಬಟ್ಟಲು ನನ್ನ ರಕ್ತ?', ಹೌಹಾರಿದ ಆತ 'ಒಂದು ಬಟ್ಟಲು ರಕ್ತ ಕೊಟ್ಟಲ್ಲಿ ನಾನು ಸತ್ತೇ ಹೋಗುತ್ತೇನೆ. ಇಲ್ಲಪ್ಪ ಇಲ್ಲ, ಕೊಡುವುದಿಲ್ಲ' ಎಂದವನೇ ಅಲ್ಲಿಂದ ಓಡಿದ.

ಮೂಸಾನಿಗೆ ಸಿಟ್ಟು ಬಂತು. 'ಎಂಥ ಮನುಷ್ಯರಿವರು. ಅಲ್ಲಾಹ್‌ನ ಕೃಪೆಯಿಂದ ಬದುಕಿರುವ ಇವರು ಅಲ್ಲಾಹ್‌ನೇ ಸ್ವತಃ ರಕ್ತ ಕೇಳಿದರೂ ಕೊಡಲು ನಿರಾಕರಿಸುವ ಕೃತಜ್ಞರು' ಎಂದುಕೊಂಡ. 'ಇರಲಿ, ಇವನೊಬ್ಬ ಕೊಡದಿದ್ದರೆ ಏನಂತೆ. ಈ ಊರಲ್ಲಿ ಸಾವಿರಾರು ಜನರಿದ್ದಾರೆ. ಯಾರಾದರೂ ಕೊಟ್ಟೇಕೊಡುತ್ತಾರೆ' ಎಂದುಕೊಂಡು ಹೊರಟ.

ಆದರೆ ಯಾರೂ ರಕ್ತ ಕೊಡಲು ಒಪ್ಪಲಿಲ್ಲ. ಸಂಜೆಯಾಯಿತು ನಿರಾಶನಾದ ಮೂಸಾ ದೇವರ ಬಳಿ ಬರಿಗೈಲಿ ಹಿಂದಿರುಗಬೇಕಲ್ಲ ಎಂದುಕೊಂಡು ಕಾಡಿನಲ್ಲಿ ಹಾದು ಹೋಗುತ್ತಿರಬೇಕಾದರೆ ಯಾರೋ ತನ್ನನ್ನು ಕರೆದಂತಾಯಿತು. ಧ್ವನಿ ಬಂದ ಕಡೆ ಹೋದರೆ ಅಲ್ಲಿ ಮರದ ಕೆಳಗೆ ಫಕೀರನೊಬ್ಬ ಕೂತಿದ್ದ.

'ಹೋ ದೇವದೂತನೆ ಎಲ್ಲಿಗೆ ಹೋಗುತ್ತಿದ್ದೀಯ? ಏಕೆ ಮುಖ ಸೋತಿದೆ, ಹೆಜ್ಜೆ ನಿಧಾನವಾಗಿದೆ?' ಫಕೀರ ಕೇಳಿದ.

'ನನ್ನ ನಿರಾಸೆಯ ಕಾರಣ ನಿನಗೆ ಹೇಳಿ ಪ್ರಯೋಜನವೇನು? ಇತರರಿಗಿಂತ ನಿನ್ನ ಉತ್ತರವೂ ಬೇರೆಯಾಗಿರುವುದಿಲ್ಲ. ಸತ್ಯ ಹೇಳುತ್ತೇನೆ, ಇಂದು ಮನುಷ್ಯನ ಒಳ್ಳೆಯತನದಲ್ಲಿ ನಾನು ನಂಬಿಕೆಯನ್ನೇ ಕಳೆದುಕೊಂಡಿದ್ದೇನೆ' ಎನ್ನುತ್ತಾ ಮೂಸಾ ಮುಂದೆ ಹೊರಟ.

'ನಿಲ್ಲು, ಹೋಗಬೇಡ. ನಿನ್ನ ದುಃಖವನ್ನಾದರೂ ನನ್ನ ಬಳಿ ಹೇಳಿಕೊ, ನಿನ್ನ ಹೃದಯದ ಭಾರವಾದರೂ ಕಡಮೆಯಾಗುತ್ತದೆ' ಫಕೀರ ಒತ್ತಾಯಿಸಿದ.

ನಡೆದುದನ್ನೆಲ್ಲಾ ಮೂಸಾ ವಿವರಿಸಿ, 'ಕೃತಘ್ನ ನೀಚರು' ಎಂದು ಜನರನ್ನು ನಿಂದಿಸಿ 'ಅವಮಾನದಿಂದ ತಲೆ ತಗ್ಗಿಸಿ ಅಲ್ಲಾಹ್‌ನ ಬಳಿ ಹಿಂದಿರುಗುತ್ತೇನೆ' ಎಂದ ನೋವಿನಿಂದ

'ಅಷ್ಟೆಯೇ?' ಎಂದ ಫಕೀರ ನಗುತ್ತ. ಕೂಡಲೆ ಬಳಿ ಇದ್ದ ಚಾಕುವಿನಿಂದ ತನ್ನ ರಕ್ತನಾಳವೊಂದನ್ನು ಕತ್ತರಿಸಿ 'ತಗೋ ಮೂಸಾ, ಎಷ್ಟು ರಕ್ತ ಬೇಕೋ ತೆಗೆದುಕೊ. ಅಲ್ಲಾಹ್‌ನಿಗೆ ನನ್ನ ದೇಹದ ಎಲ್ಲಾ ರಕ್ತ ಬೇಕಾದರೂ ಸಂತೋಷದಿಂದ ಕೊಟ್ಟುಬಿಡುತ್ತೇನೆ' ಎಂದ ಫಕೀರ. ಕೂಡಲೆ ಮೂಸಾ ಬಟ್ಟಲು ತುಂಬಾ ರಕ್ತ ತುಂಬಿಸಿಕೊಂಡು, ಫಕೀರನ ಗಾಯಕ್ಕೆ ಬಟ್ಟೆಯನ್ನು ಕಟ್ಟಿ ಸಂತೋಷದಿಂದ ಹೊರಟ.

'ನೀನು ಹೇಳಿದ ಹಾಗೆ ಮನುಷ್ಯನ ರಕ್ತ ತಂದಿದ್ದೇನೆ ಅಲ್ಲಾಹ್. ಈಗ ದಯವಿಟ್ಟು ನನ್ನ ಪ್ರಶ್ನೆಗೆ ಉತ್ತರ ನೀಡು. ಆ ಹೆಂಗಸಿನ ವಿಧಿಯಲ್ಲಿ ಮಕ್ಕಳಿಲ್ಲವೆಂದ ನೀನು ಆಕೆಯ ವಿಧಿಯನ್ನು ಏಕೆ ಬದಲಿಸಿದೆ?', ಮೂಸಾ ಕೇಳಿದ.

'ನಿನ್ನ ಪ್ರಶ್ನೆಗೆ ಉತ್ತರ ನೀನು ತಂದಿರುವ ರಕ್ತದ ಬಟ್ಟಲಿನಲ್ಲೇ ಇದೆ ಮೂಸಾ' ಹೇಳಿದ ಅಲ್ಲಾಹ್, 'ನಾನು ಮನುಷ್ಯನ ರಕ್ತ ಎಂದು ಕೇಳಿದನೇ ಹೊರತು, ಇಂತಹವರದೇ ರಕ್ತ ಬೇಕೆಂದು ಕೇಳಲಿಲ್ಲ. ನೀನೂ ಮನುಷ್ಯನಲ್ಲವೆ? ನಿನ್ನಲ್ಲೂ ರಕ್ತವಿದೆಯಲ್ಲವೆ? ಹಾಗಿದ್ದರೂ ನೀನು ಏಕೆ ಬೇರೆಯವರನ್ನು ಕೇಳುತ್ತಾ ಹೊರಟೆ? ನೀನೇ ರಕ್ತ ಕೊಡಬಹುದಿತ್ತಲ್ಲ? ನಾನು ಆ ಹೆಂಗಸಿನ ವಿಧಿ ಬದಲಿಸಿದೆ. ಏಕೆಂದರೆ ನಿನಗೆ ರಕ್ತ

ಕೊಟ್ಟ ಫಕೀರ ಆ ಹೆಂಗಸಿಗಾಗಿ ನನ್ನಲ್ಲಿ ಪ್ರಾರ್ಥಿಸಿದ್ದ. ನನ್ನನ್ನು ಪ್ರೀತಿಸುವವರಿಗಾಗಿ ನಾನು ಮೊದಲು ಬರೆದುದನ್ನು ಬದಲಿಸಬಲ್ಲೆ'.

ಮರಳುಗಾಡಿನ ಕತೆ

ದೂರ ಪರ್ವತಗಳಲ್ಲಿ ಜೀವ ತಳೆದ ನೀರಿನ ತೊರೆಯೊಂದು ಹರಿಯುತ್ತಾ ಹಳ್ಳಿ, ಗುಡ್ಡಗಾಡುಗಳನ್ನು ದಾಟಿ ಮರಳುಗಾಡನ್ನು ತಲುಪಿತು. ತಾನು ಹರಿದುಬಂದ ಇತರ ಎಲ್ಲದರಂತೆಯೇ ಇದರ ಮೂಲಕವೂ ಹರಿಯಲು ಯತ್ನಿಸಿತು. ಮರಳಿನಲ್ಲಿ ಮುನ್ನಡೆದಂತೆ ಅದರ ನೀರೆಲ್ಲವೂ ಇಂಗಿಹೋಗತೊಡಗಿತು. ತನ್ನ ವಿಧಿಯಲ್ಲಿ ಈ ಮರಳುಗಾಡನ್ನು ಹಾದುಹೋಗಬೇಕೆಂದು ಇದೆಯೆಂಬುದು ಅದಕ್ಕೂ ತಿಳಿದಿತ್ತು. ಆದರೆ ಅದಕ್ಕೆ ದಾರಿಯೇ ತೋಚಲಿಲ್ಲ. ಆಗ ಮರಳುಗಾಡಿನಲ್ಲಿದ್ದ ಧ್ವನಿಯೊಂದು ಪಿಸುಗುಟ್ಟಿತು, 'ಈ ಮರಳುಗಾಡನ್ನು ಗಾಳಿಯು ಹಾದು ಹೋಗಬಹುದಾದರೆ ನೀರಿನ ತೊರೆಯೇಕೆ ಹಾದು ಹೋಗಬಾರದು?'.

ತೊರೆ ಆ ಮಾತನ್ನು ಆಕ್ಷೇಪಿಸಿತು. ತಾನು ಮುನ್ನಡೆದಂತೆ ನೀರೆಲ್ಲಾ ಕಣ್ಮರೆಯಾಗುತ್ತಿದೆಯೆಂದೂ, ಗಾಳಿಗೆ ಹಾರಲು ಸಾಧ್ಯ, ಹಾಗಾಗಿ ಅದಕ್ಕೆ ಮರಳುಗಾಡನ್ನು ದಾಟಿ ಹೋಗಲು ಸಾಧ್ಯವೆಂದು ಹೇಳಿತು.

'ನಿನ್ನ ನಿತ್ಯದ ಹಾದಿಯಲ್ಲಿ ಹೊರಟರೆ ನೀನು ಈ ಮರಳುಗಾಡನ್ನು ದಾಟಲಾರೆ. ನೀನು ಕಣ್ಮರೆಯಾಗುತ್ತೀಯೆ ಅಥವಾ ಮಡುಗಟ್ಟಿ ನಿಂತ ನೀರಾಗುತ್ತೀಯೆ. ನಿನ್ನನ್ನು ನಿನ್ನ ಗುರಿಗೆ ಕೊಂಡೊಯ್ಯಲು ಗಾಳಿಗೆ ಅವಕಾಶ ಕೊಡು' ಎಂದಿತು ಮರಳಿನ ಪಿಸುದನಿ.

'ಅದು ಹೇಗೆ ಸಾಧ್ಯ?' ತೊರೆ ಕೇಳಿತು.

'ನೀನು ಗಾಳಿಯೊಂದಿಗೆ ಬೆರೆತುಹೋಗು' ಮರಳು ಹೇಳಿತು.

'ಇಲ್ಲ, ನಾನು ಒಪ್ಪಲಾರೆ, ನಾನು ಗಾಳಿಯೊಂದಿಗೆ ಬೆರೆತುಹೋದರೆ ನನ್ನ ಸ್ವಂತ ವ್ಯಕ್ತಿತ್ವವೇನಾಗಬೇಕು? ನನ್ನ ಅಸ್ತಿತ್ವವನ್ನೇ ಕಳೆದುಕೊಂಡ ಮೇಲೆ ನಾನು ಅದನ್ನು ಮರಳಿ ಪಡೆಯುವೆನೆ?' ಸಂಶಯದಿಂದ ತೊರೆ ಕೇಳಿತು.

'ಗಾಳಿ ಆ ಕೆಲಸ ಮಾಡುತ್ತದೆ. ನಿನ್ನನ್ನು ಕೊಡೊಯ್ದು ಮರಳುಗಾಡಿನ ಆಚೆ ಬೀಳುವಂತೆ ಮಾಡುತ್ತದೆ. ನೀನು ಮಳೆಯಂತೆ ಸುರಿದು ಹರಿವ ನದಿಯಾಗುತ್ತೀಯೆ'.

'ಇದು ಸತ್ಯವೆಂದು ನನಗೆ ಹೇಗೆ ತಿಳಿಯಬೇಕು?'

'ಇದು ಸತ್ಯ. ನೀನು ನಂಬದೆ ಹಾಗೇ ಉಳಿದಲ್ಲಿ ಹರಿವ ನದಿಯಾಗಲು ನಿನ್ನಿಂದ ಸಾಧ್ಯವಿಲ್ಲ. ನೀನು ಮಡುಗಟ್ಟಿ ನಿಂತ ಜವುಗಾಗಬಲ್ಲೆ. ಅದು ಆಗಬೇಕಾದರೂ ನಿನಗೆ ಹಲವರು ವರ್ಷಗಳು ಬೇಕಾಗುತ್ತದೆ'.

'ಆದರೆ, ನಾನು ಈಗಿರುವ ಹಾಗೆ ಸಣ್ಣ ತೊರೆಯಾಗಿಯೇ ಉಳಿಯಲು ಸಾಧ್ಯವಿಲ್ಲವೆ?'

'ಇಲ್ಲ ನಿನ್ನ ಅಂತಃಸ್ಸತ್ವವನ್ನು ಕೊಂಡೊಯ್ದು ಅದರಿಂದ ನೀನು ಹರಿವ ನದಿಯಾಗಬೇಕು. ನಿನ್ನನ್ನೀಗ ತೊರೆಯೆಂದೇ ಕರೆಯಲಾಗುತ್ತದೆ. ಏಕೆಂದರೆ ನಿನ್ನ ಅಂತಃಸ್ಸತ್ವ ಯಾವುದೆಂದು ನಿನಗೇ ತಿಳಿಯದು'.

ಈ ಮತು ಕೇಳಿದಾಕ್ಷಣ ತೊರೆಯ ಮನದಲ್ಲಿ ಹಲವಾರು ಯೋಚನಗಳೇಳ ಗೊಡಗಿದವು. ಹಿಂದೆ, ಬಹಳ ಹಿಂದೆ ತಾನೂ ಸಹ ಗಾಳಿಯ ಬಾಹುಗಳಲ್ಲಿದ್ದುದು ಅಸ್ಪಷ್ಟವಾಗಿ ನೆನಪಾಗತೊಡಗಿತು.

ತೊರೆ ನಿಧಾನವಾಗಿ ಆವಿಯಾಗಿ ತೆರೆದ ಗಾಳಿಯ ಬಾಹುಗಳಲ್ಲಿ ಸೇರಿ ನಿಧಾನವಾಗಿ ಮರಳುಗಾಡಿನಿಂದ ದೂರ ಹೋಗಿ ಪರ್ವತಗಳು ಸಿಕ್ಕಿದ ತಕ್ಷಣ ಮಳೆಯಾಗಿ ಧಾರಾಕಾರವಾಗಿ ಸುರಿಯತೊಡಗಿತು. ತೊರೆಗೆ ಸಂಶಯವಿದ್ದುದರಿಂದ ಹಲವಾರು ಅನುಭವಗಳು ಅದರ ಸ್ಮೃತಿಪಟಲದ ಮೇಲೆ ಬಲವಾಗಿ ಮೂಡತೊಡಗಿದ್ದವು. ಅದಕ್ಕನ್ನಿಸಿತು, 'ಹೌದು, ನಾನೀಗ ನನ್ನ ನಿಜ ರೂಪವನ್ನು ಕಂಡುಕೊಳ್ಳುತ್ತಿದ್ದೇನೆ.'

ತೊರೆ ಕಲಿಯುತೊಡಗಿತ್ತು. ಆದರೆ ಮರಳುಗಾಡು ಪಿಸುನುಡಿಯಿತು. 'ನಮಗಿದು ಚೆನ್ನಾಗಿ ಗೊತ್ತು, ಏಕೆಂದರೆ ಇದನ್ನು ನಾವು ಪ್ರತಿ ನಿತ್ಯ ನೋಡುತ್ತೇವೆ ಹಾಗೂ ನಮ್ಮ ಮರಳು ದಿಬ್ಬಗಳು ಆ ಬದಿಯ ಪರ್ವತಗಳಿಂದ ಈ ಬದಿಯ ನದಿಯ ದಂಡೆಯವರೆಗೂ ಹರಡಿದೆ'.

ಆದ್ದರಿಂದಲೇ, ಬದುಕಿನ ನದಿ ಹರಿಯಬೇಕಾದ ಹಾದಿ ಮರಳಿನ ಮೇಲೆ ಬರೆದಿದೆ ಎನ್ನುತ್ತಾರೆ.

ಬೆಕ್ಕಿನ ಬೆಲೆ

ಒಮ್ಮೆ ಬಹಳ ತೊಂದರೆಗೆ ಸಿಲುಕಿದ ಮನುಷ್ಯ, ತನ್ನ ಎಲ್ಲಾ ತೊಂದರೆಗಳು ನಿವಾರಣೆಯಾದಲ್ಲಿ ತನ್ನ ಮನೆ ಮಾರಿ ಬಂದ ಹಣವನ್ನು ಬಡ ಬಗ್ಗರಿಗೆ ಹಂಚುವುದಾಗಿ ಪ್ರಮಾಣ ಮಾಡಿದ. ಕೊನೆಗೊಂದು ದಿನ ಆತನ ಎಲ್ಲ ತೊಂದರೆಗಳೂ ನಿವಾರಣೆಯಾದುವು. ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಾಗಿ ಬಂತು. ಆದರೆ ಮನೆ ಮಾರಿ ಬಂದ ಹಣವನ್ನು ಬಡಬಗ್ಗರಿಗೆ ಹಂಚಲು ಆತನಿಗೆ ಮನಸ್ಸು ಬರಲಿಲ್ಲ. ಅದಕ್ಕಾಗಿ ಆತ ಒಂದು ಉಪಾಯ ಮಾಡಿದ.

ತನ್ನ ಮನೆ ಹಾಗೂ ತನ್ನ ಬೆಕ್ಕನ್ನು ಮಾರಾಟಕ್ಕೆ ಇಟ್ಟ. ಮನೆಯ ಬೆಲೆ ಒಂದು ಬೆಳ್ಳಿಯ ನಾಣ್ಯ, ಬೆಕ್ಕಿನ ಬೆಲೆ ಒಂದು ಸಾವಿರ ಬೆಳ್ಳಿಯ ನಾಣ್ಯ. ಆದರೆ ಕೊಳ್ಳುವವರು ಎರಡನ್ನೂ ಒಟ್ಟಿಗೇ ಕೊಳ್ಳಬೇಕು.

ಯಾರೋ ಒಬ್ಬಾತ ಎರಡನ್ನೂ ಕೊಂಡ. ಈತ ಮನೆಮಾರಿ ಬಂದ ಒಂದು ಬೆಳ್ಳಿಯ ನಾಣ್ಯವನ್ನು ಬಡಬಗ್ಗರಿಗೆ ಹಂಚಿ ತಾನು ಮಾಡಿದ ಪ್ರಮಾಣ ಉಳಿಸಿಕೊಂಡ. ಬೆಕ್ಕು ಮಾರಿಬಂದ ಹಣದಿಂದ ಹೊಸ ಮನೆ ಕೊಂಡ.

ರಾಕ್ಷಸ ಮತ್ತು ಸೂಫಿ

ಒಮ್ಮೆ ಒಬ್ಬ ಸೂಫಿ ಗುರು ಪರ್ವತವೊಂದರಲ್ಲಿ ಹಾದುಹೋಗುತ್ತಿದ್ದಾಗ ಒಬ್ಬ ನರಭಕ್ಷಕ ರಾಕ್ಷಸ ಎದುರಾದ. ಆ ಸೂಫಿಯನ್ನು ಕಂಡು ಆತನನ್ನು ಕೊಲ್ಲುವುದಾಗಿ ಹೆದರಿಸಿದ. ಸೂಫಿ ಹೇಳಿದ, ‘ಆಯಿತು ನನ್ನನ್ನು ಕೊಲ್ಲುವ ಪ್ರಯತ್ನ ಮಾಡಿ ನೋಡು, ನನ್ನ ಶಕ್ತಿ ಸಾಮರ್ಥ್ಯ ಏನೆಂದು ನಿನಗೆ ಗೊತ್ತಿಲ್ಲ’. ಆತನ ಮಾತಿಗೆ ಆ ರಾಕ್ಷಸ

ವಿಕಟವಾಗಿ ನಗುತ್ತಾ, ‘ನೀನೊಬ್ಬ ಸೂಫಿ ಗುರು. ನಿನ್ನ ಶಕ್ತಿ ಏನಿದ್ದರೂ ಆಧ್ಯಾತ್ಮದಲ್ಲಿ. ಆದರೆ ನನ್ನ ಬಳಿ ದೈತ್ಯ ದೈಹಿಕ ಬಲವಿದೆ. ಅಲ್ಲದೆ ನಾನು ನಿನಗಿಂತ ಮುವ್ವತ್ತುಪಟ್ಟು ಹೆಚ್ಚು ದೊಡ್ಡವನಾಗಿದ್ದೇನೆ. ಒಂದೇ ಏಟಿಗೆ ನಿನ್ನನ್ನು ಮುಗಿಸಿಬಿಡಬಲ್ಲೆ’ ಎಂದ.

‘ಹೌದೇನು? ಹಾಗಾದರೆ ಇಬ್ಬರ ಬಲಶಕ್ತಿಯನ್ನು ಪರೀಕ್ಷಿಸಿಯೇ ಬಿಡೋಣ. ಈ ಕಲ್ಲನ್ನು ಹಿಂಡಿ ನೀರು ತೆಗೆ ನೋಡೋಣ’ ಎನ್ನುತ್ತಾ ಸೂಫಿ ಗುರು ಒಂದು ಕಲ್ಲಿನ ಚೂರನ್ನು ರಾಕ್ಷಸನಿಗೆ ಕೊಟ್ಟ. ಕಲ್ಲನ್ನು ಹಿಂಡಿ ಹಿಂಡಿ ನೀರನ್ನು ತೆಗೆಯಲು ಪ್ರಯತ್ನಿಸಿ ಸೋತ ರಾಕ್ಷಸ, ‘ಈ ಕಲ್ಲಿನಲ್ಲಿ ನೀರೇ ಇಲ್ಲ. ನೀನು ಹಿಂಡು ನೋಡೋಣ’ ಎಂದು

ಸೂಫಿಗೆ ಹೇಳಿದ. ಸೂಫಿ ಗುರು ತನ್ನ ಕೈಚಳಕದಿಂದ ತನ್ನ ಕಿಸೆಯಲ್ಲಿದ್ದ ಮೊಟ್ಟೆಯೊಂದನ್ನು ಕಲ್ಲಿನೊಂದಿಗೆ ಸೇರಿಸಿ ಹಿಸುಕಿ ನೀರು ತೆಗೆದು ತೋರಿಸಿದ.

ರಾಕ್ಷಸ ಅಚ್ಚರಿಗೊಂಡ, ತಮಗರ್ಥವಾಗದ ಕ್ರಿಯೆಗಳಿಂದ ಪ್ರಭಾವಿತರಾಗಿ ಅಂತಹ ಕ್ರಿಯೆಗಳನ್ನು ಭಯಭಕ್ತಿಯಿಂದ ನೋಡುವ ಜನರ ಹಾಗೆ. ರಾಕ್ಷಸ ತನ್ನ ಗುಹೆಗೆ ಬಂದು ಆತಿಥ್ಯ ಸ್ವೀಕರಿಸುವಂತೆ ಸೂಫಿ ಗುರುವನ್ನು ಕೇಳಿಕೊಂಡಿತು. ರಾಕ್ಷಸನ ಗುಹೆಯಲ್ಲಿ ಸೂಫಿ ಸಾವಿರಾರು ಜನ ಹಾದಿಹೋಕರ ವಸ್ತುಗಳು ಚೆಲ್ಲಾಪಿಲ್ಲಿ ಯಾಗಿರುವುದನ್ನು ಕಂಡ. ತಾನು ಎಚ್ಚರದಿಂದಿರಬೇಕು ಎಂದು ಮನದಲ್ಲೇ ಅಂದುಕೊಂಡ

‘ಇಂದು ಇಲ್ಲೇ ಮಲಗಿ ವಿಶ್ರಮಿಸಿಕೊಳ್ಳಿ. ಬೆಳಿಗ್ಗೆ ನಿಮ್ಮ ಆಧ್ಯಾತ್ಮಕ ಶಕ್ತಿ ಹೆಚ್ಚೋ ಅಥವಾ ನನ್ನ ದೈಹಿಕ ಶಕ್ತಿ ಹೆಚ್ಚೋ ಎಂಬುದರ ಬಗ್ಗೆ ಚರ್ಚೆ ಮಾಡೋಣ’ ಎಂದ ರಾಕ್ಷಸ. ಅಲ್ಲೇ ಮಲಗಿದ ಸೂಫಿ ‘ಇದರಲ್ಲೇನೋ ಮೋಸವಿದೆ’ ಎಂದುಕೊಂಡ. ರಾಕ್ಷಸನ ನಿದ್ರೆಯ ಗೊರಕೆ ಕೇಳಿದ ಕೂಡಲೆ ಎದ್ದು ತಾನು ಮಲಗಿದ್ದ ಸ್ಥಳದಲ್ಲಿ ಮರದ ಕೊರಡೊಂದನ್ನು ಇಟ್ಟು ಅದಕ್ಕೆ ಹೊದಿಕೆ ಹೊದಿಸಿ ತಾನು ಅಡಗಿ ಕೂತ. ಸ್ವಲ್ಪ ಹೊತ್ತಿನಲ್ಲೇ ರಾಕ್ಷಸನೆದ್ದು ಒಂದು ದೊಡ್ಡ ಮರದ ಕೊರಡಿನಿಂದ ಸೂಫಿಯೇ ಮಲಗಿದ್ದಾನೆಂದು ಭಾವಿಸಿ ಶಕ್ತಿಯೆಲ್ಲಾ ಉಪಯೋಗಿಸಿ ನಜ್ಜುಗುಜ್ಜಾಗುವಂತೆ ಹೊಡೆದು ಸೂಫಿ ಸತ್ತನೆಂದು ಭಾವಿಸಿ ಮಲಗಿದ.

ಇದನ್ನೆಲ್ಲ ಗಮನಿಸುತ್ತಿದ್ದ ಸೂಫಿ ಗುರು ಸದ್ದಿಲ್ಲದೆ ಬಂದು ಅಲ್ಲೇ ಮಲಗಿ ರಾಕ್ಷಸನನ್ನು ಕರೆದು, ‘ಹೋ ರಾಕ್ಷಸನೇ! ನಿನ್ನ ಗುಹೆಯಲ್ಲಿ ಸೊಂಪಾಗಿ ನಿದ್ದೆ ಬರುತ್ತಿದೆ. ಆದರೆ ಈಗ ಆರೇಳು ಬಾರಿ ಸೊಳ್ಳೆ ಕಡಿದಂತಾಯಿತು. ಅದಕ್ಕೇನಾದರೂ ಪರಿಹಾರ ಹುಡುಕು’ ಎಂದ. ಈತನ ಮಾತು ಕೇಳಿದ ರಾಕ್ಷಸ ಹೆದರಿ ಬೆವತು ನೀರಾಗಿ, ‘ಇವನ್ಯಾರೋ ನನಗಿಂತ ಬಲಶಾಲಿ’ ಎಂದುಕೊಂಡು ಸುಮ್ಮನಾದ.

ಬೆಳಿಗ್ಗೆ ರಾಕ್ಷಸ ಸೂಫಿ ಗುರುವಿನ ಮುಂದೆ ಒಂದು ದೊಡ್ಡ ದನದ ಚೀಲವೊಂದನ್ನು ಎಸೆದು ‘ನೀರು ತೆಗೆದುಕೊಂಡು ಬಾ’ ಎಂದ. ಸೂಫಿ ಆ ಚೀಲವನ್ನು ತೆಗೆದುಕೊಳ್ಳದೆ (ಆತನ ಕೈಯಲ್ಲಿ ಅದನ್ನು ಎತ್ತಲೂ ಸಾಧ್ಯವಿರಲಿಲ್ಲ) ಹರಿಯುತ್ತಿದ್ದ ತೊರೆಯ ಬಳಿ ಹೋಗಿ ಸಣ್ಣ ಕಾಲುವೆಯೊಂದನ್ನು ಗುಹೆಯ ಕಡೆಗೆ ತೋಡತೊಡಗಿದ. ಆತ ನೀನು ತರದಿದ್ದನ್ನು ಕಂಡು ದಾಹದಿಂದ ಬಳುತ್ತಿದ್ದ ರಾಕ್ಷಸ ನೀರು ಬೇಗ ತರುವಂತೆ ಕೂಗಿದ. ‘ತಾಳ್ಮೆ ಇರಲಿ ಗೆಳೆಯಾ. ನಿನ್ನ ಗುಹೆಯ ಬಾಗಿಲಿಗೇ ನೀರು ಬರುವಂತೆ ಮಾಡುತ್ತಿದ್ದೇನೆ. ನಿನಗೆ ಮುಂದೆಂದೂ ನೀರು ಹೊತ್ತು ತರುವ ಅವಶ್ಯಕತೆ ಇರುವುದಿಲ್ಲ’ ಎಂದ ಸೂಫಿ. ತಾಳ್ಮೆ ಇರದ ರಾಕ್ಷಸ ತಾನೇ ಚೀಲ ಹೊತ್ತು ನೀರು ತಂದು ಕುಡಿದ. ಕಾಲುವೆ ತೋಡುತ್ತಿದ್ದ ಸೂಫಿಯನ್ನು ಕುರಿತು,

‘ನೀನು ತುಂಬಾ ಶಕ್ತಿಶಾಲಿಯಲ್ಲವೆ. ಹಾಗಿದ್ದರೂ ನೀನ್ಯಾಕೆ ಒಮ್ಮೆಲೇ ಕಾಲುವೆ ತೋಡದೆ, ನಿಧಾನವಾಗಿ ಆಗೆಯುತ್ತಿದ್ದೀಯ?’ ಎಂದು ಕೇಳಿದ ರಾಕ್ಷಸ.

‘ಏಕೆಂದರೆ ಮಾಡಬಹುದಾದ ಯಾವುದೇ ಕೆಲಸವಾಗಲೀ, ಅದನ್ನು ನೆರವೇರಿಸಬೇಕಾದಲ್ಲಿ ಕನಿಷ್ಠ ಶ್ರಮವನ್ನಾದರೂ ಪಡಲೇಬೇಕು. ಪ್ರತಿಯೊಂದು ಕಾರ್ಯಕ್ಕೂ

ಅದರದೇ ಆದ ಕನಿಷ್ಠ ಶ್ರಮ ನಿಗದಿಯಾಗಿರುತ್ತದೆ. ಈ ಕಾಲುವೆ ತೋಡಲು ಬೇಕಾದ ಕನಿಷ್ಠ ಶ್ರಮವನ್ನಷ್ಟೇ ನಾನು ಬಳಸುತ್ತಿದ್ದೇನೆ. ಆದರೆ, ನೀನೊಬ್ಬ ಅಭ್ಯಾಸದ ಪ್ರಾಣಿ, ನೀನು ದನದ ಚೀಲ ಹೊರುವುದನ್ನು ಬಿಡುವುದಿಲ್ಲ' ಎಂದ ಸೂಫಿ ಗುರು.

ಸುವರ್ಣ ಸಿರಿ

ಒಂದಾನೊಂದು ಕಾಲದಲ್ಲಿ ಅಬ್ದುಲ್ ಮಾಲಿಕ್‌ನೆಂಬ ವ್ಯಾಪಾರಸ್ಥನಿದ್ದ. ಆತ ಖೊರಾಸಾನ್‌ನ ಉದಾರ ವ್ಯಕ್ತಿಯೆಂದು ಪ್ರಖ್ಯಾತನಾಗಿದ್ದ, ಏಕೆಂದರೆ ದಾನಧರ್ಮದಲ್ಲಿ ಆತನದು ಎತ್ತಿದ ಕೈ. ಸದಾ ಬಡಬಗ್ಗರಿಗೆ ದಾನ ಮಾಡುತ್ತಲೇ ಇರುತ್ತಿದ್ದ.

ಒಂದು ದಿನ ಆತ, 'ನಾನು ಸುಮ್ಮನೆ ದಾನಧರ್ಮ ಮಾಡುತ್ತಿದ್ದೇನೆ. ನನ್ನಲ್ಲಿನ ಸಿರಿಸಂಪತ್ತಿನ ತ್ಯಾಗಕ್ಕಿಂತ ಹೆಚ್ಚಿನ ಸುಖಸಂತೋಷ ಇದರಿಂದ ಸಿಗುತ್ತಿದೆ. ಆದರೂ ನನ್ನ ಸಂಪತ್ತೇನೂ ಕಡಿಮೆಯಾಗಿಲ್ಲ' ಎಂದು ಯೋಚಿಸಿದ. ನಂತರ ಕೂಡಲೇ ತನ್ನಲ್ಲಿರುವುದನ್ನೆಲ್ಲಾ ದಾನ ಮಾಡಿಬಿಡುತ್ತೇನೆ ಎಂದು ತೀರ್ಮಾನಿಸಿ ತನ್ನಲ್ಲಿ ಒಂದು ಚಿಕ್ಕಾಸೂ ಉಳಿಸಿಕೊಳ್ಳದೆ ಎಲ್ಲವನ್ನೂ ಸಂತೋಷದಿಂದ ಹಂಚಿಬಿಟ್ಟ. ತನ್ನ ಮುಂದಿನ ಬದುಕು ಬಂದಂತೆ ಎದುರಿಸುತ್ತೇನೆ ಎಂದುಕೊಂಡು ಧ್ಯಾನ ಮಾಡಲು ಕೂತ. ಧ್ಯಾನ ಮಾಡುತ್ತಿರುವಾಗ ಒಂದು ವಿಚಿತ್ರ ಆಕೃತಿ ನೆಲದಿಂದ ರೂಪುಗೊಂಡು ಮೇಲೇರತೊಡಗಿತು. ಅದು ಮನುಷ್ಯನಾಕಾರ ತಳೆಯಿತು ಹಾಗೂ ಅದು ದರ್ವೇಶಿಯ ರೀತಿ ತೇಪೆ ಹಾಕಿದ ಬಟ್ಟೆ ತೊಟ್ಟಿತ್ತು.

'ಹೋ, ಅಬ್ದುಲ್ ಮಾಲಿಕ್, ಖೊರಾಸಾನ್‌ನ ಉದಾರ ವ್ಯಕ್ತಿಯೇ!', ಹೇಳಿತು ಆ ಆಕೃತಿ, 'ನಾನು ನೀನೇ. ನಾನು ನಿನ್ನದೇ ಪ್ರತಿರೂಪ. ಈಗ ನಿನಗೆ ಕಾಣಿಸಿಕೊಳ್ಳುತ್ತಿದ್ದೇನೆ. ಏಕೆಂದರೆ, ನಿನ್ನ ಹಿಂದಿನ ಒಳ್ಳೆಯ ಕಾರ್ಯಗಳನ್ನು ಮೀರಿಸುವಂತಹ ಒಳ್ಳೆಯ ಕಾರ್ಯವನ್ನು ಈಗ ಮಾಡಿದ್ದೀಯೆ. ನೀನು ನಿನಗಾಗಿ ಏನೂ ಉಳಿಸಿಕೊಳ್ಳದೆ, ಏನೊಂದೂ ಸ್ವಾರ್ಥವಿಲ್ಲದೆ ಏನನ್ನೂ ಬಯಸದೆ ನಿನ್ನಲ್ಲಿರುವುದನ್ನೆಲ್ಲಾ ದಾನಧರ್ಮ ಮಾಡಿದ್ದೀಯೆ. ಆದ್ದರಿಂದ ನಿನಗೆ ಎಲ್ಲ ಪ್ರತಿಫಲಗಳಿಗೂ ಮೂಲವಾದ ಪ್ರತಿಫಲದಿಂದ ನಿನಗೆ ಬಳುವಳಿ ಕೊಡುತ್ತೇನೆ. ಇನ್ನು ಮುಂದೆ ನಾನು ನಿನ್ನ ಮುಂದೆ ದಿನಾ ಈ ರೂಪದಲ್ಲಿ ಕಾಣಿಸಿಕೊಳ್ಳುತ್ತೇನೆ. ನೀನು ನನ್ನನ್ನು ಹೊಡೆದಲ್ಲಿ ನಾನು ಚಿನ್ನದ ಪ್ರತಿಮೆಯಾಗುತ್ತೇನೆ. ನನಗೆ ನೋವಾಗುವುದೆಂಬ ಹೆದರಿಕೆ ಬೇಡ. ನಿನಗೆ ಬೇಕಾದಷ್ಟು ಚಿನ್ನವನ್ನು ಪ್ರತಿಮೆಯಿಂದ ತೆಗೆದುಕೊ. ಅದು ಬರಿದಾಗುವುದೂ ಇಲ್ಲ. ಏಕೆಂದರೆ ಎಲ್ಲ ಲಾಭಗಳಿಗೂ ಮೂಲವಾದ ಲಾಭದಿಂದ ಅದು ತುಂಬತ್ತಲೇ ಇರುತ್ತದೆ' ಎಂದು ಹೇಳಿ ಆ ಆಕೃತಿ ಮಾಯವಾಯಿತು.

ಮರುದಿನ ಬೆಳಿಗ್ಗೆ ಅಬ್ದುಲ್ ಮಾಲಿಕ್ ಬೇ-ಅಕಲ್ ಎಂಬುವವನೊಂದಿಗೆ ಕೂತು ಮಾತನಾಡುತ್ತಿರುವಾಗ ದರ್ವೇಶಿ ಆಕೃತಿ ಮೂಡಲಾರಂಭಿಸಿತು. ಮಾಲಿಕ್ ಅದನ್ನು ಕೋಲಿನಿಂದ ಬಡಿದ ಕೂಡಲೆ ಆ ಆಕೃತಿ ನೆಲಕ್ಕೆ ಬಿದ್ದು ಚಿನ್ನದ ಪ್ರತಿಮೆಯಾಯಿತು. ಸ್ವಲ್ಪ ಚಿನ್ನ ತಾನು ತೆಗೆದುಕೊಂಡು ಸ್ವಲ್ಪ ತನ್ನ ಅತಿಥಿ ಬೇ-ಅಕಲ್‌ಗೆ ನೀಡಿದ.

ಇದನ್ನೆಲ್ಲ ಕಂಡ ಬೇ-ಅಕಲ್ ಆ ಘಟನೆಯ ಹಿಂದಿನ ಕತೆ ತಿಳಿಯದೇ ತಾನೂ ಅದನ್ನು ಮಾಡಬೇಕೆಂದು ಒಂದು ಉಪಾಯ ಹೂಡಿದ. ಒಂದು ದೊಡ್ಡ ಔತಣಕೂಟವೊಂದನ್ನು ಏರ್ಪಡಿಸಿ ಎಲ್ಲಾ ದರ್ವೇಶಿಗಳನ್ನು ಊಟಕ್ಕೆ ಆಹ್ವಾನಿಸಿದ. ಎಲ್ಲರೂ ಚೆನ್ನಾಗಿ ಊಟ ಮಾಡಿದ ಮೇಲೆ ಒಂದು ಕಬ್ಬಿಣದ ಸಲಾಕೆ ತೆಗೆದುಕೊಂಡು ಕೈಗೆ ಸಿಕ್ಕ ದರ್ವೇಶಿಗಳನ್ನು ಬಡಿಯತೊಡಗಿದ. ಯಾರೂ ಚಿನ್ನದ ಪ್ರತಿಮೆಗಳಾಗಿ ನೆಲಕ್ಕೆ ಬೀಳಲಿಲ್ಲ. ಬದಲಿಗೆ ಎಲ್ಲರೂ ಬೇ-ಅಕಲ್‌ನ ಮೇಲೆ ಬಿದ್ದು ನ್ಯಾಯಾಧೀಶರ ಬಳಿ ಕರೆದೊಯ್ದು ದೂರು ನೀಡಿ ಎಲ್ಲಾ ವಿವರಿಸಿದರು.

ಆದರೆ ಬೇ-ಅಕಲ್, ಅಬ್ದುಲ್ ಮಾಲಿಕ್‌ನ ಮನೆಯಲ್ಲಿ ನಡೆದ ಘಟನೆ ವಿವರಿಸಿ ತಾನೂ ಚಿನ್ನ ಪಡೆಯಲು ಆ ರೀತಿ ಮಾಡಿದೆನೆಂದು ಹೇಳಿದ. ಅಬ್ದುಲ್ ಮಾಲಿಕ್‌ನನ್ನು ಕರೆಸಲಾಯಿತು. ಆತ ಬರುವಾಗ ಆತನ ಪ್ರತಿರೂಪ ಏನು ಹೇಳಬೇಕೆಂದು ಆತನ ಕಿವಿಯಲ್ಲಿ ಪಿಸುಗುಟ್ಟಿತು. ನ್ಯಾಯಾಧೀಶರಿಗೆ,

'ಬೇ-ಅಕಲ್‌ಗೆ ತಲೆ ಕೆಟ್ಟಿರಬೇಕು. ಇಲ್ಲವಾದಲ್ಲಿ ಈ ರೀತಿ ಔತಣಕ್ಕೆ ಬಂದ ಅತಿಥಿಗಳನ್ನು ಹೊಡೆಯುತ್ತಿರಲಿಲ್ಲ. ಆತ ನನಗೆ ಗೊತ್ತು ಆದರೆ ಆತ ನನ್ನ ಬಗ್ಗೆ ಹೇಳಿರುವುದೆಲ್ಲಾ ಸುಳ್ಳು' ಎಂದ ಅಬ್ದುಲ್ ಮಾಲಿಕ್.

ಬೇ-ಅಕಲ್‌ನನ್ನು ಆತ ಶಾಂತನಾಗುವವರೆಗೆ ಹುಚ್ಚರನ್ನು ಕೂಡಿಡುವ ಮನೆಯಲ್ಲಿಡಲಾಯಿತು. ಅಬ್ದುಲ್ ಮಾಲಿಕ್ ಚಿನ್ನ ಪಡೆಯುವ ರೀತಿಯನ್ನು ಯಾರೂ ನಂಬಲೂ ಇಲ್ಲ. ಆದರೆ ಅಬ್ದುಲ್ ಮಾಲಿಕ್ ನಂತರವೂ ಹಲವಾರು ವರ್ಷ ತನ್ನ ಪಿತೃಗಳನ್ನು ಸೇರುವವರೆಗೂ ತನ್ನದೇ ಪ್ರತಿರೂಪವಾದ ಪ್ರತಿಮೆಯನ್ನು ಹೊಡೆದು, ವಸ್ತು ರೂಪದಲ್ಲಲ್ಲದೆ ಇತರ ರೂಪದಲ್ಲಿ ಸಹಾಯ ಮಾಡಲಾಗದವರಿಗೆ ತಾನೇ ಆದ ಸಿರಿಯನ್ನು ಹಂಚುತ್ತಿದ.

ನೊಣ ಮತ್ತು ಆನೆ

ಒಮ್ಮೆ ನಾಮೂಸ್ ಎಂಬ ನೊಣವಿತ್ತು. ಆ ನೊಣ ಬಹಳ ಸೂಕ್ಷ್ಮಮತಿ ಯಾಗಿದ್ದುದರಿಂದ ಎಲ್ಲರೂ ಅದನ್ನು 'ಸೂಕ್ಷ್ಮಮತಿ ನಾಮೂಸ್' ಎಂದು ಕರೆಯುತ್ತಿದ್ದರು. ಹಲವಾರು ಕಾರಣಗಳಿಂದಾಗಿ ಅದು ತನ್ನ ಮನೆ ಬದಲಿಸಬೇಕೆಂದು ತೀರ್ಮಾನಿಸಿತು ಹಾಗೂ ತನ್ನ ಹೊಸ ಮನೆಯಾಗಿ ಆನೆಯೊಂದರ ಕಿವಿಯನ್ನು ಆಯ್ಕೆ ಮಾಡಿಕೊಂಡಿತು.

ನೊಣ ನಾಮೂಸ್‌ನ ಹೊಸ ಮನೆ ಬೆಚ್ಚಗೆ ಸುರಕ್ಷಿತವಾಗಿತ್ತು. ಸಮಯ ಸಾಗಿದಂತೆ ನೊಣ ತನ್ನ ಸಂತಾನಾಭಿವೃದ್ಧಿ ಮಾಡಿ ತನ್ನ ಸಂತತಿಯನ್ನು ಪ್ರಪಂಚದ ಎಲ್ಲ ದಿಕ್ಕಿಗೂ ಕಳುಹಿಸುತ್ತಿತ್ತು. ನೊಣ ತನ್ನ ಬದುಕಿನಲ್ಲಿ ಎಲ್ಲ ನೊಣಗಳ ಬದುಕಿನಲ್ಲಿಯಂತೆಯೇ ಸುಖ ಸಂತೋಷ, ಕಷ್ಟಸುಖಗಳನ್ನು ಅನುಭವಿಸಿತು. ಆನೆಯ ಕಿವಿ ಅದರ ಶಾಶ್ವತ ಮನೆಯಾಗಿದೆಯೇನೋ ಎಂದೆನಿಸುತ್ತಿತ್ತು. ತನ್ನ ಬದುಕಿಗೂ, ತನ್ನ ಬದುಕಿನ ಚರಿತ್ರೆಗೂ ಹಾಗೂ ಬೆಚ್ಚಗೆ ಸದಾ ಸ್ವಾಗತಿಸುವ, ತನ್ನ ಬದುಕಿನ ಹಲವಾರು

ಅನುಭವಗಳ ಮೂಕ ಸಾಕ್ಷಿಯ ಈ ಮನೆಗೂ ಅವರ್ಣನೀಯ ಸಂಬಂಧವೇರ್ಪಟ್ಟಿದೆ ಎಂದೆನ್ನಿಸುತ್ತಿತ್ತು.

ಆದರೆ ನಾಮೂಸ್ ಆ ಮನೆಗೆ ಮೊದಲಿಗೆ ಕಾಲಿಡುವಾಗ ತನ್ನ ಆಚಾರ, ವಿಚಾರ ಸಂಪ್ರದಾಯಗಳನ್ನು ಮರೆತಿರಲಿಲ್ಲ. ಮೊದಲ ದಿನ ಮನೆಯ ಬಾಗಿಲಲ್ಲಿ ನಿಂತು, 'ಹೋ ಆನೆಯೇ, ನಾನು ನಾಮೂಸ್ ಎಂಬ ನೊಣ, ಎಲ್ಲರೂ ಸೂಕ್ಷ್ಮಮತಿ ನಾಮೂಸ್ ಎಂಬುವವ. ಈ ಸ್ಥಳವನ್ನು ನನ್ನ ಮನೆಯನ್ನಾಗಿ ಮಾಡಿಕೊಳ್ಳುತ್ತಿದ್ದೇನೆ. ಈ ಸ್ಥಳ ನಿನ್ನ ಕಿವಿಯಾಗಿರುವುದರಿಂದ ಸಂಪ್ರದಾಯದಂತೆ ನಿನಗೆ ತಿಳಿಸುತ್ತಿದ್ದೇನೆ' ಎಂದು ತನ್ನ ಸಣ್ಣ ದನಿಯಲ್ಲಿ ಕೂಗಿತ್ತು. ಆನೆ ಯಾವುದೇ ಆಕ್ಷೇಪಣೆ ಎತ್ತಿರಲಿಲ್ಲ.

ಅದರ ಮಾತು ಆನೆಗೆ ಕೇಳಿಸಿಲ್ಲ ಎಂಬುದು ನಾಮೂಸ್‌ಗೆ ತಿಳಿದಿರಲೇ ಇಲ್ಲ. ಅಲ್ಲದೆ ನೊಣ ಮನೆ ಮಾಡಿಕೊಂಡಿದ್ದು, ತನ್ನ ಸಂತಾನಾಭಿವೃದ್ಧಿ ಮಾಡಿಕೊಂಡಿದ್ದು ಬದುಕಿನಲ್ಲಿ ಕಷ್ಟಸುಖ ಅನುಭವಿಸಿದ್ದು– ಯಾವುದೂ ಆನೆಯ ಗಮನಕ್ಕೆ ಬಂದಿರಲೇ ಇಲ್ಲ ಹಾಗೂ ನೊಣ ಅಲ್ಲಿರುವುದೇ ಆನೆಗೆ ಗೊತ್ತಿರಲಿಲ್ಲ.

ಕೊನೆಗೊಂದು ದಿನ ಹಲವಾರು ಕಾರಣಗಳಿಂದಾಗಿ ನೊಣ ಮನೆ ಬದಲಿಸೋಣವೆಂದು ತೀರ್ಮಾನಿಸಿತು. ಅದನ್ನೂ ಸಹ ಸಂಪ್ರದಾಯಬದ್ಧವಾಗಿಯೇ ಮಾಡಬೇಕೆಂದು ತಾನು ಹೇಳಬೇಕಾದ ಪದಗಳನ್ನು ಮನಸ್ಸಿನಲ್ಲಿ ಹೇಳಿಕೊಂಡು ಅಭ್ಯಾಸಮಾಡಿಕೊಂಡಿತು. ಕಿವಿಯ ಬಾಗಿಲ ಬಳಿ ನಿಂತು ಜೋರಾಗಿ ಆನೆಯನ್ನು ಕರೆಯಿತು. ಯಾವುದೇ ಉತ್ತರ ಬರಲಿಲ್ಲ. ಮತ್ತೊಮ್ಮೆ ಕೂಗಿತು. ಆನೆ ಮೌನವಾಗಿಯೇ ಇತ್ತು. ಮೂರನೆಯ ಸಾರಿ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಜೋರಾಗಿ ಕೂಗಿ ಹೇಳಿತು, 'ಹೋ ಆನೆಯೇ! ನಾನು ಸೂಕ್ಷ್ಮಮತಿ ನಾಮೂಸ್ ಎಂಬ ನೊಣ. ಇಷ್ಟು ಕಾಲ ನನ್ನ ಮನೆಯಾಗಿದ್ದ ಈ ನಿನ್ನ ಕಿವಿಯನ್ನು ಕೆಲವು ಕಾರಣಗಳಿಂದಾಗಿ ಬಿಟ್ಟು ಹೋಗಬೇಕೆಂದು ತೀರ್ಮಾನಿಸಿದ್ದೇನೆ.' ಕೊನೆಗೂ ನೊಣದ ಕೂಗು ಆನೆಯ ಕಿವಿ ಮುಟ್ಟಿತು. ಅದರ ಮಾತುಗಳ ಬಗ್ಗೆ ಆನೆ ಆಲೋಚಿಸುತ್ತಿರುವಂತೆ ನಾಮೂಸ್ ತನ್ನ ಮಾತು ಮುಂದುವರೆಸಿತು, 'ಈ ಸುದ್ದಿಯ ಬಗ್ಗೆ ನೀನು ಏನು ಹೇಳಬಯಸುತ್ತೀಯೆ? ನಾನು ಹೊರಟು ಹೋಗುವುದರ ಬಗ್ಗೆ ನಿನ್ನ ಅನಿಸಿಕೆ, ಭಾವನೆಗಳು ಏನು?'

ಆನೆ ತನ್ನ ಸೊಂಡಿಲು ಎತ್ತಿ ಸಣ್ಣದಾಗಿ ಕೂಗಿತು. ಆ ಕೂಗಿನಲ್ಲಿ, 'ಸುಖವಾಗಿ ಹೋಗು ನೊಣವೆ. ನಿಜ ಹೇಳಬೇಕೆಂದರೆ ನಿನ್ನ ಆಗಮನ ಎಷ್ಟು ಮಹತ್ವದ್ದಾಗಿದ್ದಿತೋ, ನಿನ್ನ ನಿರ್ಗಮನ ಕೂಡ ನನಗೆ ಅಷ್ಟೇ ಮಹತ್ವದ್ದಾಗಿದೆ' ಎಂಬ ಭಾವನೆಯಿತ್ತು.

ದಡ್ಡನೆಂಬ ಬುದ್ಧಿವಂತ

ಸ್ವತಃ ತನಗಾಗುವ, ತಾನು ಮಾಡುವ ಅಥವಾ ಇತರರು ಮಾಡುವ ಕಾರ್ಯ, ಘಟನೆಗಳನ್ನು ತಪ್ಪಾಗಿ ಗ್ರಹಿಸುವ ಸಾಮಾನ್ಯ ಮನುಷ್ಯನನ್ನು ದಡ್ಡನೆನ್ನುತ್ತಾರೆ. ಈ ರೀತಿಯ ಜನ ತಾವು ಮಾಡುವ ಕೆಲಸ ಕಾರ್ಯಗಳನ್ನು ಶಿಸ್ತು, ಶ್ರದ್ಧೆಯಿಂದ ನಿರ್ವಹಿಸುತ್ತಾರೆ ಹಾಗೂ ತಾವು ಮಾಡುತ್ತಿರುವುದು ಸರಿ ಮತ್ತು ವಿವೇಕಯುತವಾದುದು ಎಂದೇ ನಂಬಿರುತ್ತಾರೆ.

ಈ ರೀತಿಯ ದಡ್ಡನನ್ನು ಒಮ್ಮೆ ಆತನ ಯಜಮಾನ ಒಂದು ಹಿಡಿಯಿರುವ ಕುಡಿಕೆಯನ್ನು ಕೊಟ್ಟು ಅದರ ತುಂಬ ದ್ರಾಕ್ಷಾರಸ ಕೊಂಡು ತರುವಂತೆ ಹೇಳಿ ಕಳುಹಿಸಿದ. ದಾರಿಯಲ್ಲಿ ದಡ್ಡ ಎಡವಿ ಬಿದ್ದು, ಕುಡಿಕೆ ಕಲ್ಲಿಗೆ ತಾಗಿ ಒಡೆದು ಹೋಯಿತು. ಆ ಕುಡಿಕೆಯ ಹಿಡಿ ತೆಗೆದುಕೊಂಡು ಮನೆಗೆ ಹಿಂದಿರುಗಿ ತನ್ನ ಯಜಮಾನನಿಗೆ ಕುಡಿಕೆಯ ಹಿಡಿ ತೋರಿಸುತ್ತಾ 'ನಾನು ಹೋಗುತ್ತಿರುವಾಗ ದುಷ್ಟ ಕಲ್ಲೊಂದು ನನ್ನಿಂದ ಕುಡಿಕೆಯನ್ನು ಕಿತ್ತುಕೊಂಡುಬಿಟ್ಟಿತು' ಎಂದು ಹೇಳಿದ ಆತನ ಕತೆಯನ್ನು ಕೇಳಿ ಮನದಲ್ಲೇ ನಕ್ಕ ಯಜಮಾನ ಆತನನ್ನು ಪರೀಕ್ಷಿಸಲು, 'ಕುಡಿಕೆಯನ್ನು ಕಲ್ಲು ಕಿತ್ತುಕೊಂಡಿತಲ್ಲವೆ? ಹಾಗಾದರೆ ನನಗೇಕೆ ಅದರ ಹಿಡಿಯನ್ನು ತಂದು ತೋರಿಸುತ್ತಿದ್ದೀಯೆ?' ಎಂದು ಕೇಳಿದ. ಅದಕ್ಕೆ ದಡ್ಡ, 'ಜನ ಹೇಳುವಷ್ಟು ದಡ್ಡ ನಾನಲ್ಲ, ಆದುದರಿಂದ ನನ್ನ ಹೇಳಿಕೆಗೆ ಸಾಕ್ಷಿಯಾಗಿ ಈ ಹಿಡಿಯನ್ನು ನಾನು ತಂದಿದ್ದೇನೆ' ಎಂದ.

ಅಪ್ಪ ಬಿಟ್ಟು ಹೋದ ಆಸ್ತಿ

ಒಬ್ಬಾತ ತನ್ನ ಊರಿನಿಂದ ದೂರ ಇರುವಾಗ ಮರಣಹೊಂದಿದ. ಆತನಿಗೆ ಅರೀಫ್ ಎಂಬ ಒಬ್ಬ ಸಣ್ಣ ಮಗನಿದ್ದು ಬೇರೆ ಯಾರೂ ಹತ್ತಿರದ ನೆಂಟರಿಷ್ಟರು ಇರಲಿಲ್ಲ. ಆತ ತನ್ನ ಆಸ್ತಿಯ ವಿಲೇವಾರಿಯ ಬಗ್ಗೆ ತನ್ನ ಉಯಿಲಿನಲ್ಲಿ ಈ ರೀತಿ ಬರೆದಿದ್ದ. 'ನನ್ನ ಆಸ್ತಿ ಇರುವ ಊರಿನವರು ತಮಗೆ ಇಷ್ಟವಿರುವುದನ್ನು ತಾವು ತೆಗೆದುಕೊಳ್ಳಲಿ ಹಾಗೂ ನಂತರ ತಮಗೆ ಇಷ್ಟವಿರುವುದನ್ನು ನನ್ನ ಮಗ ಅರಿಫ್‌ನಿಗೆ ಕೊಡಲಿ'. ಅರೀಫ್ ಇನ್ನೂ ಸಣ್ಣವನಾದುದರಿಂದ ಆತನಿಗೆ ಪ್ರಪಂಚಜ್ಞಾನ ಅಷ್ಟಿರಲಿಲ್ಲ. ಆದುದರಿಂದ ಊರಿನ ಹಿರಿಯರು ಉಯಿಲಿನಲ್ಲಿ ಬರೆದಿದ್ದಂತೆ ತಮಗೆ ಇಷ್ಟವಿರುವುದನ್ನು ತಾವೇ ಹಂಚಿಕೊಂಡು, ಕೊನೆಯಲ್ಲಿ ಉಳಿದ ಯಾರಿಗೂ ಬೇಡದ ಭೂಮಿಯನ್ನು ಅರೀಫ್‌ನಿಗೆ ಕೊಟ್ಟರು.

ಹಲವಾರು ವರ್ಷಗಳನಂತರ ಅರೀಫ್ ದೊಡ್ಡವನಾದ ಮೇಲೆ ಊರಿನವರ ಮೋಸ ತಿಳಿದು ಅವರಿಂದ ತನ್ನ ಆಸ್ತಿ ವಾಪಸ್ಸು ಕೇಳಲು ಹೋದ. ಆದರೆ ಊರಿನ ಹಿರಿಯರೆಲ್ಲಾ, 'ನಿಮ್ಮ ತಂದೆ ಉಯಿಲಿನಲ್ಲಿ ಬರೆದಿದ್ದಂತೆ ನಾವು ಮಾಡಿದ್ದೇವೆ' ಎಂದರು. ತಮಗೆ ಇಷ್ಟವಿರುವುದನ್ನು ತಾವು ತೆಗೆದುಕೊಳ್ಳುವಂತೆ ಉಯಿಲಿನಲ್ಲಿ ಬರೆದಿದ್ದರಿಂದ ತಾವೇನೂ ಮೋಸ ಮಾಡಿಲ್ಲ ಎಂಬುದು ಅವರ ಭಾವನೆಯಾಗಿತ್ತು.

ಮಾತುಕತೆ ನಡೆಯುತ್ತಿರುವಂತೆ ಇದ್ದಕ್ಕಿದ್ದಂತೆ ಒಬ್ಬ ಅಪರಿಚಿತ ಎಲ್ಲಿಂದಲೋ ಬಂದು, 'ಆ ಉಯಿಲಿನ ಅರ್ಥ ತಮಗೆ ಇಷ್ಟವಿರುವುದನ್ನು ಅರೀಫ್‌ನಿಗೆ ಕೊಡಿ ಎಂದೂ, ಅಂದರೆ ತಮಗೆ ಬೇಕೆನಿಸಿ ತಾವು ಯಾವುದನ್ನು ತಮಗೆಂದೇ ಪಡೆದುಕೊಂಡಿದ್ದರೋ ಅದನ್ನೇ ನಂತರ ಅರಿಫ್‌ನಿಗೆ ಕೊಡಬೇಕು. ಅರೀಫ್‌ನ ಅಪ್ಪ ಸತ್ತಾಗ ಅರೀಫ್ ಇನ್ನು ಚಿಕ್ಕ ಹುಡುಗ. ಎಲ್ಲಾ ಆಸ್ತಿ ಚಿಕ್ಕ ಹುಡುಗನಿಗೆ ದಕ್ಕಿದ್ದರೆ, ಊರಿನವರೆಲ್ಲಾ ಅದನ್ನು ಕಿತ್ತುಕೊಳ್ಳದೆ ಬಿಡುತ್ತಿರಲಿಲ್ಲ. ಇಷ್ಟೂ ದಿನ ಆಸ್ತಿ ನಿಮ್ಮ ಸುಪರ್ದಿಗೆ ಬಿಟ್ಟುಕೊಟ್ಟಿದ್ದರಿಂದ ಅದು ನಿಮ್ಮದೇ ಎಂದು ಭಾವಿಸಿ ಅದನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದೀರ. ಅರೀಫ್‌ನ ಅಪ್ಪ ಬಹಳ ಬುದ್ಧಿವಂತಿಕೆಯಿಂದ ಆಸ್ತಿ ಸಂರಕ್ಷಣೆ ಹಾಗೂ ವರ್ಗಾವಣೆ ಉಯಿಲು ಬರೆದಿಟ್ಟಿದ್ದ. ಈಗ ನೀವು ಆಸ್ತಿ ಅರೀಫ್‌ನಿಗೆ ಹಿಂದಿರುಗಿಸಬೇಕಾದ ಸಮಯ ಬಂದಿದೆ ಎಂದು ಹೇಳಿದ.

ಉಯಿಲಿನ ಅರ್ಥ ಹಿರಿಯರಿಗೆ ಮನವರಿಕೆಯಾಯ್ತು. ತಮಗೆ ಇಷ್ಟವಿರುವುದನ್ನು ಅರೀಫ್‌ನಿಗೆ ವಾಪಸ್ಸು ಕೊಟ್ಟರು.

ನಾಯಿ ಮತ್ತು ಕತ್ತೆ

ಒಬ್ಬಾತ ಪ್ರಾಣಿಗಳ ಮಾತು ಅರ್ಥ ಮಾಡಿಕೊಳ್ಳುವುದನ್ನು ಕಲಿತಿದ್ದ. ಒಮ್ಮೆ ಹಳ್ಳಿಯ ಹಾದಿಯಲ್ಲಿ ಹಾದು ಹೋಗುತ್ತಿದ್ದಾಗ ಕತ್ತೆಯೊಂದು ಕೂಗುತ್ತಿತ್ತು ಹಾಗೂ ಪಕ್ಕದಲ್ಲೇ ಇದ್ದ ನಾಯಿಯೊಂದು ಬೊಗಳುತ್ತಿತ್ತು. ಅವುಗಳ ಮಾತು ಅರ್ಥಮಾಡಿಕೊಳ್ಳೋಣವೆಂದು ಅವುಗಳ ಹತ್ತಿರ ಹೋದ. ನಾಯಿ ಹೇಳುತ್ತಿತ್ತು. 'ನಿನ್ನ ಹುಲ್ಲಿನ

ಹಾಗೂ ಹಸಿರುಮೇವಿನ ಮಾತಿನಲ್ಲಿ ನನಗೆ ಆಸಕ್ತಿ ಇಲ್ಲ. ಮೊಲಗಳ ಬಗ್ಗೆ ಅಥವಾ ಮೂಳೆಗಳ ಬಗ್ಗೆ ಏನಾದರೂ ಇದ್ದರೆ ಹೇಳು'. ಅದನ್ನು ಕೇಳಿಸಿಕೊಂಡ ಆ ಮನುಷ್ಯ ಅವುಗಳ ಮಾತಿನ ನಡುವೆ ಪ್ರವೇಶಿಸಿ 'ಹುಲ್ಲೂ ಸಹ ಮೂಲಭೂತವಾಗಿ ಮಾಂಸದ ಹಾಗೆಯೇ ಕಾರ್ಯ ನಿರ್ವಹಿಸುತ್ತದೆ. ಎರಡೂ ಒಂದೇ' ಎಂದು ಹೇಳಿದ. ಆತ ಮಾತು ಮುಗಿಸುವ ಮೊದಲೇ, ನಾಯಿ ಬೊಗಳುತ್ತಾ ಆತನ ಮೇಲೆ ಹಾರಿ ಬಿತ್ತು. ಕತ್ತೆ ಆತನನ್ನು ಜಾಡಿಸಿ ಒದೆಯಿತು. ಆತನನ್ನು ಓಡಿಸಿ ಅವು ತಮ್ಮ ಚರ್ಚೆ ಮುಂದುವರೆಸಿದವು.

ಚಪ್ಪಲಿ ಒಯ್ಯುವವರು

ಇಬ್ಬರು ದೈವ ಭಕ್ತರು ಜೊತೆಯಲ್ಲೇ ಮಸೀದಿಗೆ ಹೋದರು. ಮೊದಲನೆಯಾತ ತನ್ನ ಚಪ್ಪಲಿ ಹೊರಗೇ ಬಿಟ್ಟು ಒಳ ಪ್ರವೇಶಿಸಿದ. ಎರಡನೆಯಾತ ತನ್ನ ಚಪ್ಪಲಿ ಕಾಲಿನಿಂದ ತೆಗೆದು ಅವುಗಳನ್ನು ಜೋಡಿಸಿ ತನ್ನ ಕೈಯಲ್ಲಿಡಿದು ಒಳ ಹೊರಟ. ಅಲ್ಲಿಯೇ ಬಾಗಿಲ ಬಳಿ ಕೂತಿದ್ದ ಕೆಲವರು ಇವರ ನಡತೆಯನ್ನು ನೋಡಿ ತಮ್ಮತಮ್ಮಲ್ಲೇ ಮಾತನಾಡಲಾರಂಭಿಸಿದರು.

'ಒಬ್ಬಾತ ತನ್ನ ಚಪ್ಪಲಿ ಹೊರಬಿಟ್ಟು ಒಳಹೋದರೆ ಮತ್ತೊಬ್ಬಾತನೂ ಹಾಗೆಯೇ ಮಾಡಬಹುದಿತ್ತಲ್ಲವೆ?' ಎಂದ ಒಬ್ಬ.

'ಇಲ್ಲ, ಚಪ್ಪಲಿ ತೆಗದು ತನ್ನ ಕೈಯಲ್ಲಿ ಚಪ್ಪಲಿ ಹಿಡಿದು ಒಳ ಹೊರಟಾತನಿಗೆ ತನ್ನ ಕೈಯಲ್ಲಿನ ಚಪ್ಪಲಿ ಆತನಿಗೆ ಆತನ ನಮ್ರತೆಯನ್ನು ಜ್ಞಾಪಿಸುತ್ತಿರುತ್ತದೆ' ಎಂದ ಇನ್ನೊಬ್ಬಾತ.

ಅಷ್ಟರಲ್ಲಿ ಒಳ ಹೋದ ಇಬ್ಬರೂ ತಮ್ಮ ಪ್ರಾರ್ಥನೆ ಮುಗಿಸಿ ಹೊರಬಂದರು. ಹೊರಗೆ ಚರ್ಚೆ ನಡೆಸುತ್ತಿದ ಜನ ಕುತೂಹಲದಿಂದ ಅವರನ್ನೇ ಕೇಳೋಣವೆಂದು ಅವರಿಬ್ಬರನ್ನೂ ಪ್ರತ್ಯೇಕವಾಗಿ ಕರೆದು ಮಾತನಾಡಿಸಿದರು.

ಮೊದಲನೆಯಾತ, 'ನಾನು ನನ್ನ ಚಪ್ಪಲಿಗಳನ್ನು ಹೊರಗೇ ಬಿಟ್ಟು ಹೋದೆ, ಏಕೆಂದರೆ ಯಾರಾದರೂ ಅದನ್ನು ನೋಡಿ ಕದಿಯಬೇಕೆಂಬ ಆಸೆ ಉಂಟಾಗಿ ಅತ ಆ ಆಸೆಯನ್ನು ಹತ್ತಿಕ್ಕಿದಲ್ಲಿ ಆತ ಉತ್ತಮ ಆತ್ಮದವನಾಗುತ್ತಾನೆ' ಎಂದ. ಎಲ್ಲರಿಗೂ ಆತನ ಉತ್ತರ ಕೇಳಿ ತನ್ನ ವಸ್ತು ಹೋಗುವುದೆಂಬ ಪರಿವೆಯಿಲ್ಲದೆ ಹೊರಗೇ ಬಿಟ್ಟು ಹೋದ ಆತನ ಸಚ್ಚಾರಿತ್ರ್ಯವನ್ನು ಹೊಗಳಿದರು.

ಎರಡನೆಯಾತ, 'ನಾನು ನನ್ನ ಚಪ್ಪಲಿಗಳನ್ನು ತೆಗೆದು ಒಳಗೆ ಕೊಂಡೊಯ್ದುದು ಏಕೆಂದರೆ ಹೊರಗೇ ಬಿಟ್ಟಲ್ಲಿ ಯಾರಿಗಾದರೂ ಅದನ್ನು ಕದಿಯುವ ಆಸೆಯಾಗಿ ಆತ ಕದ್ದೇಬಿಟ್ಟಿದ್ದಲ್ಲಿ ಆತನ ಪಾಪಕಾರ್ಯದಲ್ಲಿ ನಾನೂ ಭಾಗಿಯಾದಂತಾಗುತ್ತಿತ್ತು' ಎಂದ. ಆತನ ಮಾತಿಗೆ ಎಲ್ಲರೂ ತಲೆದೂಗಿ 'ವಾಹ್, ಎಂತಹ ಒಳ್ಳೆಯ ಮನುಷ್ಯ' ಎಂದರು.

ಅಷ್ಟರಲ್ಲಿ ಅಲ್ಲಿಯೇ ಇದ್ದ ಒಬ್ಬಾತ, 'ನೀವಿಬ್ಬರೂ ಮತ್ತು ಇತರರು ಹೀಗೆ ನಡೆಯದ ಘಟನೆಗಳನ್ನು ಕಲ್ಪಿಸಿಕೊಂಡು ಒಬ್ಬರನ್ನೊಬ್ಬರು ಹೊಗಳಿಕೊಳ್ಳುತ್ತಿದ್ದೀರ. ಆದರೆ ನೀವು ಹೀಗೆ ಮಾತನಾಡುತ್ತಿರುವಾಗ ವಾಸ್ತವವಾಗಿ ಕೆಲವು ಘಟನೆಗಳು ಇಲ್ಲಿ ನಡೆದುವು' ಎಂದು ಕೂಗಿ ಹೇಳಿದ.

'ಹೌದೆ? ಏನದು? ಏನದು?' ಎಂದರು ಎಲ್ಲರೂ.

'ಚಪ್ಪಲಿಗಳನ್ನು ಕದಿಯಬೇಕೆಂದು ಯಾರಿಗೂ ಆಸೆಯಾಗಲಿಲ್ಲ. ನಿಮ್ಮ ಕಲ್ಪನೆಯ ಚಪ್ಪಲಿಯ ಕಳ್ಳ ಇತ್ತ ಹಾದೂ ಹೋಗಲಿಲ್ಲ. ಬದಲಿಗೆ ಇನ್ನೊಬ್ಬಾತ ಹೊರಗೆ ಬಿಡಲಾಗಲಿ ಅಥವಾ ಒಳಗೆ ಕೊಂಡೊಯ್ಯಲಾಗಲಿ ಚಪ್ಪಲಿಯೇ ಇಲ್ಲದವ ಮಸೀದಿಯ ಒಳಗೆ

ಹೋದ. ಆತನ ನಡವಳಿಕೆಯನ್ನು ಯಾರೂ ಗಮನಿಸಲಿಲ್ಲ. ಆತನನ್ನು ಗಮನಿಸುವವರ ಅಥವಾ ಗಮನಿಸಿದವರ ಮೇಲೆ ಆತ ಯಾವ ಪ್ರಭಾವ ಬೀರಬಹುದೆನ್ನುವ ಬಗ್ಗೆ ಆತ ಪ್ರಜ್ಞಾಪೂರ್ವಕವಾಗಿರಲಿಲ್ಲ. ಆತನ ಪ್ರಾಮಾಣಿಕತೆಯಿಂದಾಗಿ ಇಂದು ಮಸೀದಿಯಲ್ಲಿನ ಆತನ ಪ್ರಾರ್ಥನೆ ಬಹಳ ನೇರವಾಗಿಯೇ ಪ್ರಭಾವ ಬೀರಿದೆ. ಆ ಪ್ರಭಾವದಿಂದಾಗಿ ಚಪ್ಪಲಿ ಕದಿಯಬಹುದಾದ ಅಥವಾ ಕದಿಯುವ ಅಥವಾ ಕದಿಯಬೇಕೆನ್ನಿಸಿ ಆ ಇಚ್ಛೆಯನ್ನು ನಿಗ್ರಹಿಸಿ ಉತ್ತಮ ಜನರಾಗುವಂತಹವರ್‍ಯಾರೂ ಇತ್ತ ಸುಳಿಯಲೇ ಇಲ್ಲ' ಎಂದ ಆತ.

ಪ್ರಜ್ಞಾಪೂರ್ವಕ ಸನ್ನಡತೆ ಎಷ್ಟೇ ಸುಸಂಪನ್ನವಾಗಿದ್ದರೂ ವಿವೇಕವುಳ್ಳ ಜನರಿದ್ದಾರೆನ್ನುವುದರ ಜ್ಞಾನದ ಮುಂದೆ ಅದು ಹಳಸಲಾಗುತ್ತದೆ.

ಸಿದ್ಧಿಯ ಹಾದಿ

ಮರಿಯಂ(ಮೇರಿ)ನ ಮಗ ಇಸಾ(ಯೇಸು)ನ ಬಗೆಗೆ ಇಮಾಂ–ಅಲ್–ಘಜಾಲಿ ಒಂದು ಕತೆ ಹೇಳುತ್ತಿದ್ದರು:

ರಸ್ತೆಯ ಬದಿ ಬೇಸರದಿಂದ ಕೂತಿದ್ದ ಜನರನ್ನು ಕಂಡ ಇಸಾ ಒಂದು ದಿನ, 'ಏಕೆ? ನಿಮಗೆ ಏನು ತೊಂದರೆಯಾಗಿದೆ?' ಎಂದು ಕೇಳಿದರು.

'ನರಕದ ಹೆದರಿಕೆ ನಮ್ಮನ್ನು ಬಾಧಿಸುತ್ತಿದೆ' ಎಂದರು ಆ ಜನರು.

ಇಸಾ ಹಾಗೆ ಮುಂದೆ ಹೋದಂತೆ ಅಲ್ಲಿಯೂ ಸ್ವಲ್ಪ ಜನ ತಲೆಯ ಮೇಲೆ ಕೈಹೊತ್ತು ಕೂತಿದ್ದರು. ಅವರನ್ನು 'ಏಕೆ ಹೀಗಿದ್ದೀರಿ? ಆತಂಕದ ಕಾರಣವೇನು?' ಎಂದು ಇಸಾ ಕೇಳಿದರು.

'ಸ್ವರ್ಗ ಪಡೆಯಲೇಬೇಕೆಂಬ ಇಚ್ಛೆ ನಮ್ಮದು. ಆ ಆಸೆಯ ಬಾಧೆಯಿಂದ ನರಳಿ ನರಳಿ ಹೀಗಾಗಿದ್ದೇವೆ' ಎಂದರು ಅವರು.

ಇನ್ನೂ ಮುಂದೆ ಹೋದಂತೆ ಜನ ಗುಂಪುಗೂಡಿದ್ದರು. ಅವರೆಲ್ಲಾ ಶ್ರಮಜೀವಿಗಳು, ಬದುಕಲ್ಲಿ ಬಹಳ ಬಳಲಿದಂತೆ ಕಂಡುಬರುತ್ತಿದ್ದರು. ಆದರೆ ಅವರ ಮುಖದಲ್ಲಿ ಸಂತೋಷದ ಲವಲವಿಕೆ ಕಂಡುಬರುತ್ತಿತ್ತು.

'ನಿಮ್ಮ ಸಂತೋಷಕ್ಕೆ ಕಾರಣವೇನು?' ಅವರನ್ನು ಇಸಾ ಕೇಳಿದರು.

'ಸತ್ಯದ ಜೀವಚೇತನ ನಮ್ಮನ್ನು ಸಂತೋಷವಾಗಿಟ್ಟಿದೆ. ಬದುಕಿನ ವಾಸ್ತವತೆಯನ್ನು ಕಂಡಿದ್ದೇವೆ. ಹಾಗಾಗಿ ಪ್ರಾಪಂಚಿಕತೆಯಲ್ಲಿ ನಮಗೆ ಆಸಕ್ತಿಯಿಲ್ಲ' ಎಂದರು ಅವರು.

'ಅಂತ್ಯದಲ್ಲಿ ಸಿದ್ಧಿಸುವವರು ನೀವೇ' ಎಂದರು ಇಸಾ.

ಉದಾರನಾಗಬಯಸಿದ ರಾಜ

ಪರ್ಷಿಯಾದ ರಾಜನೊಬ್ಬ ದರ್ವೇಶಿಯೊಬ್ಬನನ್ನು ಕೇಳಿದ, 'ನನಗೊಂದು ಕತೆ ಹೇಳು.'

'ಹೋ ಮಹಾರಾಜನೇ, ನಿನಗೆ ಅರೇಬಿಯಾದ ರಾಜ ಹಾತಿಮ್ ತಾಯ್‌ನ ಕತೆ ಹೇಳುತ್ತೇನೆ. ಆತನಷ್ಟು ವಿಶಾಲ ಹೃದಯಿ, ನಿಸ್ವಾರ್ಥಿ ಹಾಗೂ ಉದಾರ ಮನಸ್ಸಿನ ಮನುಷ್ಯ ಬೇರ್‍ಯಾರೂ ಇಲ್ಲವೆಂದೇ ಹೇಳಬಹುದು. ನೀನೂ ಆತನ ಹಾಗೆ ಇರಲು ಸಾಧ್ಯವಾದರೆ, ನೀನೂ ಸಹ ಅಪ್ರತಿಮ ಮಹಾನ್ ರಾಜನಾಗುತ್ತೀಯೆ' ಎಂದ ಆ ದರ್ವೇಶಿ.

'ನೀನು ನನ್ನ ಔದಾರ್ಯಕ್ಕೇ ಮಸಿ ಬಳಿಯುವ ಮಾತನಾಡು ತ್ತೀದ್ದೀಯೆ. ನೀನು ಹೇಳುವ ಕತೆ ನನ್ನನ್ನು ಸಂತೋಷಗೊಳಿಸದಿದ್ದಲ್ಲಿ ನಿನ್ನ ತಲೆ ಹೋಗುತ್ತದೆ ಎಚ್ಚರವಿರಲಿ. ಕತೆ ಹೇಳುವವನಾಗು' ಎಂದು ರಾಜ. ರಾಜನ ಈ ರೀತಿಯ ಮಾತಿಗೆ ಕಾರಣವೇನೆಂದರೆ, ಪರ್ಷಿಯಾದಲ್ಲಿ ಆಸ್ಥಾನಿಕರು ರಾಜನನ್ನು ಭೂತ, ವರ್ತಮಾನ ಹಾಗೂ ಭವಿಷ್ಯ ದಲೆಲ್ಲಾ 'ನೀವೇ ಅಪ್ರತಿಮ, ಸಕಲಗುಣ ಸಂಪನ್ನ ರಾಜರು' ಎಂದು ಹೊಗಳುವುದು ವಾಡಿಕೆಯಾಗಿತ್ತು. ಆದರೆ ಆ ಸಂಪ್ರದಾಯ ವನ್ನು ದರ್ವೇಶಿ ಮುರಿದಿದ್ದ. ಆತ ಹೇಳಿದ ಕತೆ ಹೀಗಿತ್ತು:

ಅರೇಬಿಯಾದ ರಾಜ ನೊಬ್ಬನಿಗೆ ಹಾತಿಮ್‌ತಾಯ್‌ನ ರಾಜ್ಯ ಸಂಪತ್ತು, ಸುಭಿಕ್ಷ ಗ್ರಾಮಗಳು, ಓಯಸಿಸ್‌ಗಳು, ಒಂಟೆಗಳು ಹಾಗೂ ಧೀರ ಶೂರ ಸೈನಿರ ದಂಡಿನ ಮೇಲೆ ದುರಾಸೆಯ ಕಣ್ಣಿತ್ತು. 'ನನಗೆ ಶರಣಾಗಿ ನಿನ್ನ ರಾಜ್ಯವನ್ನು ನನಗೊಪ್ಪಿಸು. ಇಲ್ಲವಾದಲ್ಲಿ ಯುದ್ಧಕ್ಕೆ ಅಣಿಯಾಗು' ಎಂದು ಆತ ರಾಜ ಹಾತಿಮ್‌ತಾಯ್‌ಗೆ ಸಂದೇಶ ಕಳುಹಿಸಿದ.

ಹಾತಿಮ್‌ತಾಯ್‌ನ ಸಲಹಾಕಾರರು, 'ಈ ಶತ್ರು ರಾಜನಿಗೆಷ್ಟು ಸೊಕ್ಕು, ನಮ್ಮ ರಾಜನ ಹಾಗೂ ರಾಜ್ಯದ ರಕ್ಷಣೆಗಾಗಿ ಪ್ರಾಣ ತೆರಲು ತಯಾರಿಲ್ಲದ ಒಬ್ಬ ಪ್ರಜೆಯೂ ನಮ್ಮಲ್ಲಿಲ್ಲ. ಕೂಡಲೇ ಯುದ್ಧಕ್ಕೆ ಸಿದ್ಧರಾಗೋಣ' ಎಂದರು.

ಆದರೆ ಹಾತಿಮ್‌ತಾಯ್, 'ಬೇಡ ನನಗಾಗಿ ಯುದ್ಧಮಾಡಿ ಜೀವ ತೆರುವ ಬದಲು ನಾನೇ ಓಡಿಹೋಗುತೇನೆ. ನನ್ನ ಪ್ರಜೆಗಳಲ್ಲಿ ಒಬ್ಬನು ಮಡಿದರೂ ನನ್ನ ಔದಾರ್ಯಕ್ಕೆ ಕಳಂಕ ಬಂದಂತೆ. ನೀವು ಶಾಂತಿಯಿಂದ ಶರಣಾದಲ್ಲಿ ಶತ್ರು ರಾಜ ಸಂತುಷ್ಟನಾಗಿ ನಿಮ್ಮ ಸೇವೆ ಹಾಗೂ ತೆರಿಗೆ ಬಯಸುತ್ತಾನೆಯೇ ಹೊರತು ನಿಮ್ಮ ಆಸ್ತಿಪಾಸ್ತಿ ನಷ್ಟವಾಗುವುದಿಲ್ಲ. ಅದರ ಬದಲಿಗೆ ನೀವು ವಿರೋಧ ವ್ಯಕ್ತಪಡಿಸಿದಲ್ಲಿ ಯುದ್ಧ ಸಂಪ್ರದಾಯದಂತೆ ನಿಮ್ಮ ಆಸ್ತಿಪಾಸ್ತಿ ಕೊಳ್ಳೆ ಹೊಡೆಯುತ್ತಾನೆ. ನೀವು ಯುದ್ಧದಲ್ಲಿ ಸೋತಲ್ಲಿ ನಿರ್ಗತಿಕರಾಗುತ್ತೀರಿ' ಎಂದು ಹೇಳಿ ತನ್ನ ಪ್ರಜೆಗಳು ನಿರೀಕ್ಷಿಸದಿದ್ದ ಮಾತು ಹೇಳಿದ. ಹಾತಿಮ್‌ತಾಯ್ ತನ್ನ ಪ್ರಜೆಗಳನ್ನು ಒಪ್ಪಿಸಿ ಸಾಧಾರಣ ಬಟ್ಟೆ ತೊಟ್ಟು ಒಂದು ಊರುಗೋಲು ಹಿಡಿದು ಹತ್ತಿರದ ಬೆಟ್ಟಗುಡ್ಡಗಳಿಗೆ ಹೋಗಿ ಗುಹೆಯೊಂದನ್ನು ಆಶ್ರಯಿಸಿದ.

ಕೆಲ ಪ್ರಜೆಗಳು ತಮಗಾಗಿ ರಾಜ ಹಾತಿಮ್‌ತಾಯ್ ತನ್ನ ರಾಜ್ಯ ತೊರೆದ ಆತನ ನಿಸ್ವಾರ್ಥತೆಯನ್ನು, ತ್ಯಾಗವನ್ನು ಹೊಗಳಿದರೆ, ಕೆಲವರು 'ಇವನೆಂಥಾ ರಾಜ? ಇವನಷ್ಟು ಹೇಡಿಯೇ ಇಲ್ಲ' ಎಂದರು. ಇನ್ನು ಕೆಲವರು, 'ಈ ರಾಜ ಬಹಳ ಚಾಲಾಕಿ, ಶತ್ರು ರಾಜನಿಗೆ ಹೆದರಿ, ಅವನ ಮರ್ಜಿಗೆ ನಮ್ಮನ್ನು ತಳ್ಳಿ ತನ್ನ ಪ್ರಾಣ ಉಳಿಸಿಕೊಳ್ಳಲು ಓಡಿಹೋದ' ಎಂದರು. ಇನ್ನು ಕೆಲವರು ಏನೂ ಹೇಳಲು ತೋಚದೆ ಸುಮ್ಮನಿದ್ದರು.

ಶತ್ರು ರಾಜ ಸುಲಭವಾಗಿ ದಕ್ಕಿದ ಹಾತಿಮ್‌ತಾಯ್‌ನ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಈತನೂ ಯಾವುದೇ ತೆರಿಗೆಯನ್ನು ಹೆಚ್ಚಿಸಲಿಲ್ಲ ಹಾಗೂ ಹಾತಿಮ್‌ತಾಯ್‌ನಂತೆ ನ್ಯಾಯ ಒದಗಿಸುವ ಉತ್ತಮ ರಾಜ್ಯಭಾರ ನಡೆಸತೊಡಗಿದ. ಆದರೆ ಆತ ಸಂತುಷ್ಟನಾಗಿರಲಿಲ್ಲ. ಹೊಸ ರಾಜ್ಯ ತನಗೆ ದಕ್ಕಿದ್ದರೂ ಸಹ ಅದು ಹಾತಿಮ್‌ತಾಯ್‌ನ ಉದಾರತೆಯಿಂದಲೇ ದಕ್ಕಿರುವುದು ಎಂದು ಪ್ರಜೆಗಳು ಪಿಸುಗುಟ್ಟುವುದು ಆತನಿಗೆ ಕೇಳಿಸುತ್ತಿತ್ತು. 'ಈ ನಾಡಿಗೆ ನಾನು ನಿಜವಾದ ಒಡೆಯನಾಗಲಾರೆ. ಹಾತಿಮ್‌ತಾಯ್ ಬದುಕಿರುವವರೆಗೂ ಈ ಜನಗಳ ನಿಷ್ಠೆ ಆತನೆಡೆಗೇ ಇರುತ್ತದೆ. ಅವರು ನನಗೆ ಭಯಭಕ್ತಿ ತೋರಿದರೂ ಸಹ ಅದು ತೋರಿಕೆಯದಾಗಿದ್ದು ಅವರು ಸಂಪೂರ್ಣವಾಗಿ ನನ್ನ ಪ್ರಜೆಗಳಾಗಲಾರರು' ಎಂದು ಆಲೋಚಿಸಿ ಹಾತಿಮ್‌ತಾಯ್‌ನನ್ನು ಹಿಡಿದು ತಂದವರಿಗೆ ಐದು ಸಾವಿರ ಚಿನ್ನದ ನಾಣ್ಯ ಬಹುಮಾನವಾಗಿ ಕೊಡುವುದಾಗಿ ಢಂಗುರ ಸಾರಿಸಿದ.

ಹಾತಿಮ್‌ತಾಯ್‌ನಿಗೆ ಇದ್ಯಾವುದೂ ತಿಳಿದಿರಲಿಲ್ಲ. ಒಂದು ದಿನ ಆತ ತನ್ನ ಗುಹೆಯ ಬಳಿ ಕುಳಿತಿದ್ದಾಗ ಸೌದೆಗಾಗಿ ಬಂದವರ ಮಾತು ಕೇಳಿಸಿತು. ಮರ ಕಡಿಯುವವ ತನ್ನ ಹೆಂಡತಿಗೆ, 'ನೋಡು, ನನಗೂ ವಯಸ್ಸಾಯಿತು. ನೀನಿನ್ನೂ ಚಿಕ್ಕವಳಾಗೇ ಇದ್ದೀಯ. ಮಕ್ಕಳಿನ್ನೂ ಸಣ್ಣವರು. ನಾನೇ ಬೇಗ ಸಾಯಬಹುದು. ನಾನು ಸತ್ತಲ್ಲಿ ನೀವು ದಿಕ್ಕಿಲ್ಲದವರಾಗುತ್ತೀರ. ಈ ರಾಜ ಹಾತಿಮ್‌ತಾಯ್‌ನನ್ನಾದರೂ ಹಿಡಿದುಕೊಟ್ಟಲ್ಲಿ ಐದು ಸಾವಿರ ಚಿನ್ನದ ನಾಣ್ಯ ಬಹುಮಾನ ಸಿಗುತ್ತದೆ. ಆಗ ನಾನು ನಿಶ್ಚಿಂತೆಯಿಂದ ಸಾಯಬಹುದು. ಆ ಹಣದಿಂದ ನಿಮ್ಮ ಬದುಕೂ ಹಸನಾಗುತ್ತದೆ' ಎಂದು ಹೇಳುತ್ತಿದ್ದ.

'ಥೂ ನಿನ್ನ! ನಾಚಿಕೆಯಾಗಬೇಕು ನಿನಗೆ! ನೀನು ಸತ್ತು ನಾನೂ ನನ್ನ ಮಕ್ಕಳು ನಿರ್ಗತಿಕರಾದರೂ ಪರವಾಗಿಲ್ಲ. ಅಂತಹ ಮಹಾನ್ ಉದಾರಿ, ನಮಗಾಗಿ ಅಷ್ಟೆಲ್ಲಾ ತ್ಯಾಗ ಮಾಡಿದ ರಾಜ ಹಾತಿಮ್‌ತಾಯ್‌ನನ್ನು ಹಿಡಿದುಕೊಡಬೇಕೆನ್ನುತ್ತೀಯಲ್ಲ! ನೀನೆಂಥ ಮನುಷ್ಯ!' ಎಂದು ಆತನ ಹೆಂಡತಿ ಆತನನ್ನು ಬೈದಳು.

'ನೀನು ಹೇಳುವುದೇನೋ ಸರಿ. ಆದರೆ ಪ್ರತಿಯೊಬ್ಬ ಮನುಷ್ಯ ಆತನ ಸಂಸಾರದ ಬಗ್ಗೆ ಯೋಚನೆ ಮಾಡಬೇಕಲ್ಲ. ನನಗೂ ನನ್ನ ಜವಾಬ್ದಾರಿ ಹೊಣೆಗಾರಿಕೆಗಳಿವೆ. ನಿನಗೆ ತಿಳಿದಂತೆ ಬಹಳಷ್ಟು ಜನ ಹಾತಿಮ್‌ತಾಯ್‌ನನ್ನು ಹೇಡಿಯೆಂದು ಕರೆಯುತ್ತಿದ್ದಾರೆ. ನಾವಲ್ಲದಿದ್ದರೆ ಅವರಾದರೂ ಆತನನ್ನು ಹುಡುಕಿಯೇ ತೀರುತ್ತಾರೆ' ಎಂದ ಗಂಡ.

'ಹಾತಿಮ್‌ತಾಯ್‌ನನ್ನು ಹೇಡಿ ಎಂದು ಕರೆಯುತ್ತಿರುವವರಿಗೆ ಚಿನ್ನದ ನಾಣ್ಯಗಳ ಆಸೆಯಾಗಿದೆ ಅಷ್ಟೆ' ಎಂದಳು ಆತನ ಹೆಂಡತಿ.

ಅಷ್ಟರಲ್ಲಿ ಅವರ ಮಾತು ಕೇಳಿ ಅಲ್ಲಿಗೆ ಬಂದ ರಾಜ ಹಾತಿಮ್‌ತಾಯ್ ತಾನೇ ರಾಜ ಹಾತಿಮ್‌ತಾಯ್ ಎಂದೂ, ತನ್ನನ್ನು ಅವರ ಹೊಸ ರಾಜನಲ್ಲಿಗೆ ಕರೆದುಕೊಂಡು ಹೋಗಿ ತಮ್ಮ ಬಹುಮಾನ ಪಡೆದುಕೊಳ್ಳಿ ಎಂದು ಹೇಳಿದ. ಆ ಸೌದೆ ಕಡಿಯುವಾತನಿಗೆ ತಾನಾಡಿದ ಮಾತುಗಳಿಂದ ನಾಚಿಕೆಯಾಗಿ ರಾಜ ಹಾತಿಮ್‌ತಾಯ್‌ನ ಔದಾರ್ಯತೆಯ ಮುಂದೆ ಕಣ್ಣೀರು ಹಾಕಿ, 'ಇಲ್ಲ ಮಹಾನ್ ಹಾತಿಮ್, ನಾನದನ್ನು ಮಾಡಲಾರೆ' ಎಂದು ತಲೆ ತಗ್ಗಿಸಿ ನಿಂತ. ಅಷ್ಟರಲ್ಲಿ ಹಾತಿಮ್‌ತಾಯ್‌ನನ್ನು ಹುಡುಕುತ್ತಾ ಬಂದ ಹಲವಾರು ಜನ ಇವರ ಸುತ್ತ ಸೇರಿದರು.

'ನೀನು ನನ್ನನ್ನು ಕರೆದೊಯ್ಯದಿದ್ದರೆ, ನಾನೇ ಶರಣಾಗಿ ಇಷ್ಟು ದಿನ ನೀನೇ ನನ್ನನ್ನು ಅವಿತಿಟ್ಟಿದ್ದೆ ಎಂದು ರಾಜನಿಗೆ ಹೇಳುತ್ತೇನೆ. ಆಗ ಅವರು ನಿನ್ನನ್ನು ದೇಶದ್ರೋಹದ ಅಪವಾದದ ಮೇಲೆ ಕೊಲ್ಲದೇ ಬಿಡುವುದಿಲ್ಲ' ಎಂದು ಸೌದೆ ಕಡಿಯುವವನಿಗೆ ಹಾತಿಮ್‌ತಾಯ್ ಹೇಳಿದ.

ಆತನೇ ಹಾತಿಮ್‌ತಾಯ್ ಎಂದು ತಿಳಿದ ಕೂಡಲೇ ಅಲ್ಲಿ ನೆರೆದಿದ್ದ ಜನ ಆತನನ್ನು ಹಿಡಿದು ಬಂಧಿಸಿ ಶತ್ರು ರಾಜನಲ್ಲಿಗೆ ಕರೆದೊಯ್ದರು. ಸೌದೆ ಕಡಿಯುವವ ಬಹಳ ನೊಂದು ಅವರನ್ನು ಹಿಂಬಾಲಿಸಿದ. ಶತ್ರು ರಾಜನ ಮುಂದೆ 'ಹಾತಿಮ್‌ತಾಯ್‌ನನ್ನು ಹಿಡಿದದ್ದು ನಾನೇ' ಎಂದು ಅವರಲ್ಲಿ ಕಿತ್ತಾಟವಾಗತೊಡಗಿತು. ಶತ್ರು ರಾಜನ ಮುಖದಲ್ಲಿ ಗೊಂದಲ ಕಂಡ ಹಾತಿಮ್‌ತಾಯ್ ತನ್ನ ಮಾತು ವ್ಯಕ್ತಪಡಿಸಲು ಅವಕಾಶ ಕೇಳಿಕೊಂಡು, 'ಹೋ ರಾಜನೇ, ನನ್ನನ್ನು ಹಿಡಿದದ್ದು ಈ ಗುಂಪಿನ ಜನರಲ್ಲ, ಆ ಸೌದೆ ಕಡಿಯುವವ. ದಯವಿಟ್ಟು ಆತನಿಗೇ ಬಹುಮಾನ ಕೊಡಿ. ನಂತರ ನನ್ನನ್ನು ನಿಮ್ಮಿಷ್ಟದಂತೆ ಮಾಡಿ' ಎಂದು ಹೇಳಿದ. ಆಗ ಸೌದೆ ಕಡಿಯುವವ ಮುಂದೆ ಬಂದು ಗಳಗಳನೆ ಅಳುತ್ತ ನಡೆದ ಕತೆಯನ್ನೆಲ್ಲಾ ವಿವರಿಸಿ ಹೇಳಿದ. ತಮ್ಮ ಮಾತುಗಳನ್ನು ಕೇಳಿ ತನ್ನ ಕುಟುಂಬದ ಭವಿತವ್ಯದ ಸುರಕ್ಷತೆಗಾಗಿ ಸ್ವತಃ ಹಾತಿಮ್‌ತಾಯ್‌ನೇ ಮುಂದೆ ಬಂದು ಸೆರೆಸಿಕ್ಕಿದ್ದಾನೆಂದೂ ತಿಳಿಸಿದ.

ಇದನ್ನು ಕೇಳಿದ ಶತ್ರು ರಾಜನ ಮನಸ್ಸು ಕರಗಿತು. ಹಾತಿಮ್‌ತಾಯ್‌ನ ಒಳ್ಳೆಯತನ ಕಂಡ ಕೂಡಲೇ ಆತನ ರಾಜ್ಯ ಆತನಿಗೆ ಹಿಂದಿರುಗಿಸಿ ತನ್ನ ರಾಜ್ಯಕ್ಕೆ ಹಿಂದಿರುಗಿದ.

ದರ್ವೇಶಿಯಿಂದ ಈ ಕತೆ ಕೇಳಿದ ಪರ್ಷಿಯಾದ ರಾಜ, 'ಅದ್ಭುತ ಕತೆ! ಇದರಿಂದ ನಮಗೂ ಲಾಭವಾಗುತ್ತದೆ. ನೀನು ಬಿಡು ಬದುಕಲ್ಲಿ ಎಲ್ಲಾ ಪರಿತ್ಯಾಗ ಮಾಡಿದವನು. ಇದರಿಂದ ನಿನಗೇನೂ ಲಾಭವಾಗಲಾರದು. ಆದರೆ ನಾನು ರಾಜ, ನಾನು ಸಿರಿವಂತ. ಆ ಬೇಯಿಸಿದ ಹಲ್ಲಿಗಳನ್ನು ತಿಂದು ಬದುಕುವ ಅರೇಬಿಯಾದ ರಾಜರು ಉದಾರತೆಯಲ್ಲಿ ನನ್ನಂತಹ ಪರ್ಷಿಯದ ರಾಜನನ್ನು ಮೀರಿಸಬಲ್ಲರೇ? ನನಗೊಂದು ಉಪಾಯ ಹೊಳೆದಿದೆ. ನಾನೂ ನನ್ನ ಔದಾರ್ಯತೆ ತೋರಿಸುತ್ತೇನೆ' ಎಂದು ಹೇಳಿ ಕೂಡಲೆ ತನ್ನ ದೇಶದ ಅತ್ಯುತ್ತಮ ಕಟ್ಟಡ ವಿನ್ಯಾಸಗಾರರನ್ನು ಕರೆಸಿದ. ಯಾರೂ ಎಂದೂ ಕಂಡರಿಯದ ನಲವತ್ತು ಕಿಟಕಿಗಳ್ಳುಳ್ಳ ಅರಮನೆಯೊಂದನ್ನು ಕಟ್ಟಲು ಆಜ್ಞೆ ನೀಡಿದ.

ಅರಮನೆಯ ನಿರ್ಮಾಣದ ನಂತರ ಅದನ್ನು ಚಿನ್ನದ ನಾಣ್ಯಗಳಿಂದ ತುಂಬಿಸಿದ ಹಾಗೂ ರಾಜ ಪ್ರತಿ ದಿನ ಒಂದೊಂದು ಕಿಟಕಿಯಿಂದ ಬಡಬಗ್ಗರಿಗೆ ದಾನ ನೀಡುವುದಾಗಿ ಢಂಗುರ ಹೊಡೆಸಿದ.

ಅದರಂತೆ ರಾಜ ಪ್ರತಿದಿನ ಒಂದೊಂದು ಕಿಟಕಿಯಿಂದ ಒಬ್ಬೊಬ್ಬರಿಗೆ ಒಂದೊಂದು ಚಿನ್ನದ ನಾಣ್ಯ ದಾನ ನೀಡುತ್ತಾ ಬಂದ. ಒಬ್ಬ ದರ್ವೇಶಿ ದಿನಾ ನಾಣ್ಯದ ಭಿಕ್ಷೆಗೆ ಬರುತ್ತಿದ್ದುದನ್ನು ರಾಜ ಗಮನಿಸಿದ. ಮೊದಲಿಗೆ ರಾಜ, 'ಪಾಪ, ಯಾರೋ ಅವಶ್ಯಕತೆ ಇರುವವರಿಗೆ ಕೊಡಲು ತೆಗೆದುಕೊಂಡು ಹೋಗುತ್ತಿರಬಹುದು' ಎಂದುಕೊಂಡ. ಆತ ಮತ್ತೆ ಮತ್ತೆ ಬರುತ್ತಿದ್ದುದರಿಂದ ರಾಜ, 'ಆತ ಎಲ್ಲಾ ದರ್ವೇಶಿಗಳಂತೆ ಗುಪ್ತ ದಾನದಲ್ಲಿ ತೊಡಗಿರಬಹುದು' ಎಂದುಕೊಂಡು ಸುಮ್ಮನಾದ. ಆದರೆ ದರ್ವೇಶಿ ಮೇಲಿಂದ ಮೇಲೆ ಬರತೊಡಗಿದಂತೆ ನಲ್ವತ್ತನೆಯ ದಿನ ರಾಜನಿಗೆ ಸಂಶಯ, ಕುತೂಹಲ ತಡೆಯಲಾರದೆ ಭಿಕ್ಷೆಗೆ ಕೈ ಚಾಚಿದ ಆ ದರ್ವೇಶಿಯ ಕೈ ಹಿಡಿದು, 'ಕೃತಘ್ನ ದುರುಳನೆ! ಒಂದು ದಿನವೂ ನನಗೆ ವಂದನೆ ಹೇಳಿಲ್ಲ, ಮುಗುಳ್ನಗುವುದೂ ಇಲ್ಲ, ಬಾಗಿ ಗೌರವ ತೋರಿಲ್ಲ. ಆದರೂ ದಿನಾ ಬಂದು ಚಿನ್ನದ ನಾಣ್ಯ ದಾನ ಪಡೆಯುತ್ತಿದ್ದೀಯೆ? ನನ್ನ ಸಂಪತ್ತಿನಿಂದ ನೀನು ಸಿರಿವಂತನಾಗಬಯಸಿದ್ದೀಯಾ? ಅಥವಾ ಅದರಲಿ ಬಡ್ಡಿ ವ್ಯವಹಾರ ನಡೆಸುತಿದ್ದೀಯಾ? ತೇಪೆ ಹಾಕಿದ ಬಟ್ಟೆಧರಿಸಿ ದರ್ವೇಶಿಯಂತೆ ನಟಿಸುತ್ತಿದ್ದೀಯಾ? ನಿಜ ಹೇಳು' ಎಂದು ಗದರಿಸಿದ.

ರಾಜ ಈ ಮಾತುಗಳನ್ನು ಹೇಳಿದ ಕೂಡಲೆ ಆ ದರ್ವೇಶಿ ಇದುವರೆಗೆ ಪಡೆದಿದ್ದ ನಲ್ವತ್ತು ಚಿನ್ನದ ನಾಣ್ಯಗಳನ್ನು ಕೆಳಗೆಸೆದು, 'ಹೋ, ಪರ್ಷಿಯಾದ ರಾಜನೆ, ನಿನ್ನಲ್ಲಿ ಔದಾರ್ಯತೆ ಎಲ್ಲಿದೆ? ಔದಾರ್ಯತೆ ಪಡೆಯಬೇಕಾದರೆ ನೀನು ಮೂರು ವಿಷಯಗಳನ್ನು ಕಲಿಯಲೇ ಬೇಕು. ಮೊದಲನೆಯದು, ಔದಾರ್ಯದ ಕಾರ್ಯವನ್ನು ಯಾವುದೇ ಆಲೋಚನೆ, ಭಾವುಕತೆ ಇಲ್ಲದೆ ನೆರವೇರಿಸುವುದು; ಎರಡನೆಯದು, ತಾಳ್ಮೆ ಇರಬೇಕು ಹಾಗೂ ಮೂರನೆಯದು ಗುಮಾನಿ, ಅಪನಂಬಿಕೆಗಳನ್ನು ತ್ಯಜಿಸುವುದು' ಎಂದು ಹೇಳಿ ಅಲ್ಲಿಂದ ಹೊರಟುಹೋದ.

ಆದರೆ ಆ ರಾಜ ಅವನ್ನೆಲ್ಲಾ ಕಲಿಯಲೇ ಇಲ್ಲ. ಆತನಿಗೆ ಔದಾರ್ಯತೆ ಎಂದರೆ ಜನ ಆತನ ಬಗ್ಗೆ ಏನು ಹೇಳುತ್ತಾರೆ ಹಾಗೂ ತಾನು ಎಷ್ಟು ಉದಾರ ಎನ್ನುವುದರ ಬಗ್ಗೆ ಆಲೋಚಿಸುದಾಗಿತ್ತು ಅಷ್ಟೆ.

ನಂಬಿಕೆ ಮತ್ತು ಚಿಕಿತ್ಸೆ

ಬೈಜಾಂಟಿಯಂ ಸಾಮ್ರಾಜ್ಯದ ದೊರೆಯೊಬ್ಬನಿಗೆ ಒಮ್ಮೆ ಭಯಂಕರ ಕಾಯಿಲೆಯೊಂದು ಬಂದಿತು. ಯಾವ ವೈದ್ಯನಿಂದಲೂ ಅದನ್ನು ವಾಸಿ ಮಾಡಲಾಗಲಿಲ್ಲ. ರಾಜ ಸುತ್ತಮುತ್ತಲ ದೇಶಗಳಿಗೆಲ್ಲಾ ತನ್ನ ರಾಯಭಾರಿಗಳನ್ನು ಕಾಯಿಲೆಗಳ ವಿವರಗಳೊಂದಿಗೆ ಕಳುಹಿಸಿದ. ಚಿಕಿತ್ಸೆ ತಿಳಿದವರಿದ್ದಲ್ಲಿ ಬರುವಂತೆ ಕೋರಿದ. ಪ್ರಖ್ಯಾತ ಸೂಫಿ ಅಲ್-ಗಜಾಲಿಗೂ ವಿಷಯ ತಿಳಿಯಿತು. ಆತ ತನ್ನ ಶಿಷ್ಯ ಅಲ್-ಅರೀಫ್‌ನನ್ನು ರಾಜನ ಬಳಿಗೆ ಕಳುಹಿಸಿದ.

ಅಲ್-ಅರೀಫ್ ರಾಜನ ಆಸ್ಥಾನಕ್ಕೆ ಬಂದಾಗ ಆತನನ್ನು ಗೌರವ ಸನ್ಮಾನಗಳಿಂದ ಸ್ವಾಗತಿಸಿ ರಾಜನ ಕಾಯಿಲೆಯನ್ನು ವಾಸಿಮಾಡುವಂತೆ ಕೋರಿಕೊಂಡರು. ಆತ ರೋಗಿಯನ್ನು ಪರೀಕ್ಷಿಸಿದ. ಇದುವರೆಗೆ ಏನೇನು ಚಿಕಿತ್ಸೆಗಳನ್ನು ನೀಡಲಾಗಿದೆಯೆಂಬುದರ ಬಗ್ಗೆ ವಿವರಗಳನ್ನು ಪಡೆದ. ಕೊನೆಗೆ ಆಸ್ಥಾನದ ಎಲ್ಲಾ ಪ್ರಮುಖರನ್ನು ಕರೆದು,

'ನಿಮ್ಮ ಮಹಾರಾಜರು ನಂಬಿಕೆಯನ್ನು ಹೊಂದಿರಬೇಕು' ಎಂದ.

'ಮಹಾರಾಜರಿಗೆ ನಂಬಿಕೆ ಇದೆ. ಆದರೆ ನಂಬಿಕೆಯೇ ಚಿಕಿತ್ಸೆಯಾಗುವುದಿಲ್ಲವಲ್ಲ' ಎಂದ ಒಬ್ಬ ಆಸ್ಥಾನಿಕ.

'ಹಾಗಿದ್ದಲ್ಲಿ ಅವರ ಕಾಯಿಲೆಯನ್ನು ವಾಸಿಮಾಡಲು ಇರುವುದು ಒಂದೇ ಒಂದು ಚಿಕಿತ್ಸೆ. ಅದು ಮಾತ್ರ ಅವರನ್ನು ಉಳಿಸಲ್ಲದು. ಆದರೆ ಅದೆಷ್ಟು ಭಯಂಕರ ಹಾಗೂ ಅಮಾನವೀಯವಾದುದೆಂದರೆ, ಅದನ್ನು ಹೇಳಲು ನನಗಿಷ್ಟವಿಲ್ಲ' ಎಂದ ಅಲ್-ಅರೀಫ್.

ಎಲ್ಲರೂ ಆತನನ್ನು ಬೇಡಿಕೊಂಡರು. ಆದರೆ ಅಲ್-ಅರೀಫ್ ಆ ಚಿಕಿತ್ಸಾ ವಿಧಾನವನ್ನು ಹೇಳಲು ತಯಾರಿರಲಿಲ್ಲ. ಆತನನ್ನು ಒತ್ತಾಯಗೊಳಿಸಿ, ಹೆದರಿಸಿ, ಆಮಿಷ ಒಡ್ಡಿ ಎಲ್ಲಾ ವಿಧದ ಅಸ್ತ್ರಗಳನ್ನು ಬಳಸಿ ಕೊನೆಗೆ ಆತನ ಬಾಯಿ ಬಿಡಿಸಿದರು. ಆತ ಹೇಳಿದ, 'ಏಳು ವರ್ಷದ ಕೆಳಗಿನ ನೂರಾರು ಮಕ್ಕಳ ನೆತ್ತರಲ್ಲಿ ನಿಮ್ಮ ಮಹಾರಾಜರು ಸ್ನಾನ ಮಾಡಿದರೆ ನಿಮ್ಮ ಮಹಾರಾಜರ ಕಾಯಿಲೆ ವಾಸಿಯಾಗುತ್ತದೆ'.

ಎಲ್ಲರೂ ಬೆಚ್ಚಿಬಿದ್ದರು. ಈ ಪರದೇಶದವನ್ಯಾರೋ ತಲೆಕೆಟ್ಟವನೆಂದರು, ಇವನದೇನೋ ಕುತಂತ್ರ ಎಂದರು. ಕೊನೆಗೆ ಆದದ್ದಾಗಲಿ ಈ ಚಿಕಿತ್ಸೆಯನ್ನೂ ನಡೆಸಿಬಿಡೋಣವೆಂದು ನಿರ್ಧರಿಸಿದರು. ರಾಜನಿಗೆ ವಿಷಯ ತಿಳಿಸಿದಾಗ ಆತನೂ ಆ ಚಿಕಿತ್ಸೆಯನ್ನು ನಿರಾಕರಿಸಿದ. ಆದರೆ ನೂರಾರು ಮಕ್ಕಳೇನು, ಇಡೀ ಸಾಮ್ರಾಜ್ಯದ

ಪ್ರಜೆಗಳೆಲ್ಲರ ಪ್ರಾಣಕ್ಕಿಂತ ಮಹಾರಾಜರ ಪ್ರಾಣವೇ ಮಿಗಿಲಾದುದೆಂದು ಹೇಳಿ ಆತನನ್ನು ಒಪ್ಪಿಸಿದರು.

ರಾಜ್ಯದಲ್ಲೆಲ್ಲಾ ಢಂಗುರ ಸಾರಿ ಒಂದು ನಿರ್ದಿಷ್ಟ ದಿನಾಂಕದೊಳಗೆ ರಾಜನ ಚಿಕಿತ್ಸೆಗೆ ಆಹುತಿ ನೀಡಲು ಏಳು ವರ್ಷದ ಕೆಳಗಿನ ಮಕ್ಕಳನ್ನೆಲ್ಲಾ ಅರಮನೆಗೆ ಕಳುಹಿಸಬೇಕೆಂದು ಪ್ರಚಾರ ಮಾಡಲಾಯಿತು. ಎಲ್ಲಾ ಪ್ರಜೆಗಳು ಶಾಪ ಹಾಕಿದರು. ಮಕ್ಕಳನ್ನು ಆಹುತಿ ಕೊಡಬೇಕಾದ ನಿರ್ದಿಷ್ಟ ದಿನಾಂಕದೊಳಗೆ ಆತನ ಕಾಯಿಲೆ ವಾಸಿಯಾಗಲೆಂದು ಪ್ರಾರ್ಥನೆಯೂ ಮಾಡಿದರು.

ಇತ್ತ ರಾಜನಿಗೆ ಪಾಪಪ್ರಜ್ಞೆ ಕಾಡತೊಡಗಿತ್ತು. ತನ್ನ ಒಳಿತಿಗೆ ಹಸುಳೆಗಳನ್ನು ಬಲಿಕೊಡುವುದು ಸರಿಯಲ್ಲವೆಂದು ಆಲೋಚಿಸತೊಡಗಿದ. ಈ ಹಿಂಸೆಯಿಂದ ಹಗಲು ರಾತ್ರಿ ನಿದ್ರೆಯಿಲ್ಲದೆ ನರಳಾಡಿದ. ಕೊನೆಗೆ ತಾನು ಸತ್ತರೂ ಪರವಾಗಿಲ್ಲ ಕಂದಮ್ಮಗಳನ್ನು ಬಲಿಕೊಡುವುದಿಲ್ಲವೆಂದು ನಿರ್ಧರಿಸಿದ. ತನ್ನ ಆಸ್ಥಾನದವರಿಗೂ ಇದೇ ತನ್ನ ದೃಢ ನಿರ್ಧಾರವೆಂದು ತಿಳಿಸಿದ. ಆಶ್ಚರ್ಯವೆಂಬಂತೆ ಅಂದಿನಿಂದ ರಾಜನ ಆರೋಗ್ಯ ಸುಧಾರಿಸತೊಡಗಿತು. ಕೆಲ ದಿನಗಳಲ್ಲೇ ಕಾಯಿಲೆ ಸಂಪೂರ್ಣವಾಗಿ ವಾಸಿಯಾಗಿ ಮೊದಲಿನಂತಾದ. ಕೆಲವು ರಾಜನ ಒಳ್ಳೆಯ ನಿರ್ಧಾರದಿಂದಾಗಿ ಗುಣಮುಖನಾದನೆಂದು ಹೇಳಿದರೆ, ಇನ್ನು ಕೆಲವರು ತಾಯಂದಿರ ಪ್ರಾರ್ಥನೆಗಳಿಂದಾಗಿ ಗುಣಮುಖನಾದನೆಂದು ಹೇಳಿದರು.

ಕೆಲವರು ಕುತೂಹಲದಿಂದ ಅಲ್-ಅರೀಫ್‌ನನ್ನು ರಾಜ ಗುಣಮುಖನಾಗಲು ಕಾರಣವೇನೆಂದು ಕೇಳಿದಾಗ ಆತ 'ರಾಜನಲ್ಲಿ ನಂಬಿಕೆ ಎಂಬುದೇ ಇರಲಿಲ. ಆದುದರಿಂದ ಆತನಿಗೆ ಅದಕ್ಕೆ ಸಮವಾದ ಅಷ್ಟೇ ಪ್ರಬಾವಯುತವಾದುದೊಂದು ಬೇಕಾಗಿತ್ತು. ತಾನು ಸತ್ತರೂ ಪರವಾಗಿಲ್ಲ. ಹಸುಳೆಗಳ ಆಹುತಿ ಬೇಡ ಎಂಬ ಆತನ ದೃಢ ನಿರ್ಧಾರ ಮತ್ತು ತಾಯಂದಿರ ಪ್ರಾರ್ಥನೆ ಆತನ ಮನೋಸ್ಥೈರ್ಯವನ್ನು ಹೆಚ್ಚಿಸಿ ಕಾಯಿಲೆ ಗುಣಮುಖವಾಯಿತು' ಎಂದ.

ಆದರೆ ಆಸ್ಥಾನದವರು, 'ಅವನದೆಲ್ಲಾ ಬೊಗಳೆ, ರಾಜ ಗುಣಮುಖನಾದದ್ದು ಆಸ್ಥಾನದ ಪೂಜಾರಿಗಳ ಪ್ರಾರ್ಥನೆಯಿಂದ. ಅವನೆಂತಹ ವೈದ್ಯ, ಹಸುಳೆಗಳನ್ನು ಕೊಲ್ಲಲು ಹೇಳಿದವನು?' ಎಂದರು.

ಈ ವಿಷಯವನ್ನು ಅಲ್-ಗಜಾಲಿಗೆ ತಿಳಿಸಿದಾಗ ಆತ, 'ಯಾವುದೇ ಕಾರ್ಯ ನೆರಬೇರಬೇಕಿದ್ದಲ್ಲಿ ಅದಕ್ಕಾಗಿ ನಿಗದಿ ಪಡಿಸಿದ ಸಮಯದಲ್ಲೇ ಕಾರ್ಯವಹಿಸುವಂತೆ ರೂಪಿಸಿದ ವಿನ್ಯಾಸ ಅದನ್ನು ನೆರವೇರಿಸುತ್ತದೆ' ಎಂದನಂತೆ.

ಮೂವರು ದರ್ವೇಶಿಗಳು

ಒಂದಾನೊಂದು ಕಾಲದಲ್ಲಿ ಮೂವರು ದರ್ವೇಶಿಗಳಿದ್ದರು. ಅವರ ಹೆಸರು ಯಾಕ್, ದೊ ಮತ್ತು ಸೆ ಎಂದಾಗಿತ್ತು. ಅವರು ಅನುಕ್ರಮವಾಗಿ ಉತ್ತರ, ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಿಂದ ಬಂದವರಾಗಿದ್ದರು. ಆದರೆ ಅವರೆಲ್ಲರ ಗುರಿ ಒಂದೇ ಆಗಿತ್ತು– ಗಾಢ ಜ್ಞಾನದ ಅನ್ವೇಷಣೆ, ಅದಕ್ಕಾಗಿ ಸೂಕ್ತ ಹಾದಿಯನ್ನು ಅರಸುತ್ತಿದ್ದರು.

ಮೊಲದನೆಯಾತ ಯಾಕ್–ಬಾಬ. ಆತ ಕೂತು ಗಾಢ ಜ್ಞಾನದ ಬಗ್ಗೆಯೇ ಯೋಚಿಸಿ ಯೋಚಿಸಿ ತಲೆ ಬಿಸಿ ಮಾಡಿಕೊಂಡ. ಎರಡನೆಯಾತ, ದೊ–ಅಫಾ ಶೀರ್ಷಾಸನ ಹಾಕಿ ಗೋಣು ನೋಯುವವರೆಗೂ ಯೋಚಿಸಿದ. ಮೂರನೆಯಾತ, ಸೆ–ಖಲಂದರ್ ಮೂಗಿನಿಂದ ನೆತ್ತರು ಸುರಿಯುವವರೆಗೂ ಪುಸ್ತಕಗಳನ್ನು ಓದಿದ. ಆದರೂ ಅವರಿಗೆ ಗಾಢ ಜ್ಞಾನದ ದರ್ಶನವಾಗಲಿಲ್ಲ.

ಕೊನೆಗೆ ಏಕಾಂತದಲ್ಲಿ ಕೂತು ತಪಸ್ಸು ಮಾಡೋಣವೆಂದು ನಿರ್ಧರಿಸಿದರು. ನಲ್ವತ್ತು ದಿನಗಳ ಕಾಲ ಕಠಿಣ ತಪಸ್ಸನ್ನಾಚರಿಸಿದರು. ಒಂದು ದಿನ ನೆಲದಿಂದ ಬಿಳಿಯ ಹೊಗೆ ಎದ್ದು ಅದರಲ್ಲಿ ವೃದ್ಧನೊಬ್ಬನ ಮುಖಾಕೃತಿ ಮೂಡಲಾರಂಭಿಸಿತು. 'ನೀನೆಯೋ ಮನುಜರ ಮಾರ್ಗದರ್ಶಿ ರಹಸ್ಯಮಯಿ ಖಿದಿರ್?' ಎಂದು ಕೇಳಿದ ಮೊದಲನೆಯಾತ. 'ಅಲ್ಲ, ಆತ ಖುತುಬ್, ವಿಶ್ವದ ಆಧಾರ ಸ್ತಂಭ' ಎಂದ ಎರಡನೆಯಾತ. 'ಅಲ್ಲ ಅಲ್ಲ, ಆತ ರೂಪಾಂತರಗೊಂಡಿರುವ ಅಬ್ದಲ್‌ಗಳಲ್ಲಿ ಒಬ್ಬ' ಎಂದ ಮೂರನೆಯವ.

'ಅದ್ಯಾವುದೂ ನಾನಲ್ಲ' ಎಂದು ಘರ್ಜಿಸಿತು ಆ ಮುಖಾಕೃತಿ. 'ಆದರೆ ನೀವಂದುಕೊಂಡದ್ದೆಲ್ಲಾ ನಾನಾಗಬಲ್ಲೆ. ಆದರೆ ನೀವು ಮೂವರೂ ಬಯಸುತ್ತಿರುವುದು ಗಾಢ ಜ್ಞಾನವನ್ನಲ್ಲವೆ?' ಇಂದು ಕೇಳಿತು.

'ಹೌದು ಮಹಾಸ್ವಾಮಿ' ಒಕ್ಕೊರಲಿನಿಂದ ಆ ಮೂವರೂ ಕೂಗಿದರು. ಅವರಿಗೆ ಗಾಢ ಜ್ಞಾನ ಸಿಕ್ಕಷ್ಟೇ ಸಂತೋಷವಾಗಿತ್ತು.

'ಜ್ಞಾನದ ಅನ್ವೇಷಣೆಗೆ ಎಷ್ಟು ಮನುಷ್ಯರ ಹೃದಯಗಳಿವೆಯೋ ಅಷ್ಟೂ ಹಾದಿಗಳಿವೆ ಎಂಬ ಮಾತನ್ನು ನೀವು ಕೇಳಿಲ್ಲವೆ? ಇರಲಿ, ನಿಮಗೆ ನಿಮ್ಮ ನಿಮ್ಮ ಹಾದಿ ತೋರಿಸುತ್ತೇನೆ' ಎಂದಿತು ಮುಖಾಕೃತಿ.

ಜ್ಞಾನದ ಅನ್ವೇಷಣೆಗೆ ಮೊದಲನೆಯ ದರ್ವೇಶಿ ಮೂರ್ಖರ ನಾಡಿನಲ್ಲಿ ಹಾದುಹೋಗಬೇಕು, ಎರಡನೆಯ ದರ್ವೇಶಿ ಮಾಯಾದರ್ಪಣ ಹುಡಕಬೇಕು ಹಾಗೂ ಮೂರನೆಯಾತ ಸುಂಟರಗಾಳಿ ಭೂತವನ್ನು ಹುಡುಕಬೇಕು' ಎಂದು ಹೇಳಿ ಆ ಮುಖಾಕೃತಿ ಕಣ್ಮರೆಯಾಯಿತು.

ಆ ಮೂವರು ದರ್ವೇಶಿಗಳಿಗೆ ಸಂಪೂರ್ಣ ಉತ್ತರ ಸಿಕ್ಕಿರಲಿಲ್ಲ. ಮೂವರು ಮೂರು ಹಾದಿಯವರಾದ್ದರಿಂದ ತಮ್ಮ ತಮ್ಮ ಹಾದಿಯೇ ಅತ್ಯುತ್ತಮವಾದದ್ದೆಂದು ನಂಬಿದ್ದರು. ಆದರೂ ಯಾವ ದಾರಿ ಉತ್ತಮ ಎಂದು ಕೇಳಬೇಕೆಂದಿದ್ದರು. ಆದರೆ ಅಷ್ಟರಲ್ಲಿ ಆ ಮುಖಾಕೃತಿ ಕಣ್ಮರೆಯಾಗಿತ್ತು.

ಮೊದಲಿಗೆ ಯಾಕ್–ಬಾಬಾ ಮೂರ್ಖರ ನಾಡನ್ನು ಅರಸುತ್ತಾ ಹೊರಟ. ಕಂಡಕಂಡವರನ್ನೆಲ್ಲಾ ಕೇಳುತ್ತಿದ್ದ 'ಮೂರ್ಖರ ನಾಡು ಎಲ್ಲಿದೆ?' ಎಂದು. ಕೊನೆಗೆ ಯಾರೋ ದಾರಿ ತೋರಿಸಿದರು. ಮೂರ್ಖರ ನಾಡಿಗೆ ಹೆಜ್ಜೆ ಇಡುತ್ತಿದ್ದಂತೆಯೇ ಒಂದು ಬಾಗಿಲನ್ನು ಹೊತ್ತೊಯುತ್ತಿದ್ದ ಹೆಂಗಸೊಬ್ಬಳನ್ನುಕಂಡ. 'ಯಾಕಮ್ಮಾ ಬಾಗಿಲು ಹೊತ್ತುಕೊಂಡು ಹೋಗುತ್ತಿದ್ದೀಯ?' ಎಂದು ಕೇಳಿದ ಯಾಕ್–ಬಾಬಾ.

'ಈ ದಿನ ಬೆಳಿಗ್ಗೆ ಕೆಲಸಕ್ಕೆ ಹೊರಡುವ ಮುನ್ನ ಮನೆಯಲ್ಲಿ ಬೆಲೆ ಬಾಳುವ ಒಡವೆ ವಸ್ತ್ರಗಳಿವೆಯೆಂದೂ, ಯಾರನ್ನೂ ಬಾಗಿಲ ಮೂಲಕ ಬಿಡಬೇಡವೆಂದು ನನ್ನ ಗಂಡ ಹೇಳಿದ್ದಾನೆ. ನಾನು ಹೊರಹೋದಾಗ ಈ ಬಾಗಿಲ ಮೂಲಕ ಯಾರೂ ಹಾದು ಹೋಗದಿರಲೆಂದು ಕೊಂಡೊಯ್ಯುತ್ತಿದ್ದೇನೆ' ಎಂದಳು ಆ ಹೆಂಗಸು.

'ನೀನು ಹೀಗೆ ಹೋದಕಡೆಯಲ್ಲೆಲ್ಲಾ ಬಾಗಿಲು ಕೊಂಡೊಯ್ಯದಂತೆ ಮಾಡಿ ನಿನ್ನ ಸಮಸ್ಯೆ ಪರಿಹಾರದ ವಿಧಾನ ತಿಳಿಸಿ ಹೇಳಲೆ?' ಕೇಳಿದ ಯಾಕ್-ಬಾಬಾ.

'ಖಂಡಿತಾ ಬೇಡ, ನೀನು ಸಹಾಯ ಮಾಡುವುದಿದ್ದಲ್ಲಿ, ಈ ಬಾಗಿಲಿನ ತೂಕ ಹೇಗೆ ಕಡಿಮೆಮಾಡಬಹುದೆಂದು ಹೇಳು' ಎಂದಳು ಆಕೆ.

'ಇಲ್ಲ, ಅದು ನನ್ನಿಂದ ಸಾಧ್ಯವಿಲ್ಲ' ಎಂದು ಹೇಳಿ ಮುನ್ನಡೆದ ಯಾಕ್-ಬಾಬಾ.

ಸ್ವಲ್ಪ ಮುಂದೆ ಜನ ಗುಂಪುಗೂಡಿದ್ದರು. ಅಲ್ಲೇ ಬಳ್ಳಿಯಲ್ಲಿ ಬಿಟ್ಟಿದ್ದ ಕಲ್ಲಂಗಡಿ ಹಣ್ಣಿನ ಮುಂದೆ ಅವರೆಲ್ಲಾ ಹೆದರಿ ನಿಂತಿದ್ದರು. ಆತ ಏನಾಯಿತೆಂದು ವಿಚಾರಿಸಿದಾಗ,

ಯಾವುದೋ ರಕ್ಕಸ ಮೊಟ್ಟೆಯೊಂದಿದೆ ಇಲ್ಲಿ, ಖಂಡಿತಾ ಅದು ಇನ್ನೂ ದೊಡ್ಡದಾಗಿ ಬೆಳೆದು ನಮ್ಮನ್ನೆಲ್ಲಾ ಕೊಲ್ಲುತ್ತದೆ. ನಮಗೆ ಅದನ್ನು ಮುಟ್ಟಲೂ ಹೆದರಿಕೆ ಎಂದ ಅಲ್ಲಿ ನಿಂತಿದ್ದ ಒಬ್ಬಾತ.

'ಅದರ ಬಗ್ಗೆ ಸ್ವಲ್ಪ ಹೇಳಲೆ?' ಕೇಳಿದ ಯಾಕ್-ಬಾಬಾ.

'ಮೂರ್ಖನಾಗಬೇಡ, ತಾಕತ್ತಿದ್ದರೆ ಅದನ್ನು ಕೊಂದು ತೋರಿಸು. ನಿನಗೆ ಬಹುಮಾನ, ಬಳುವಳಿ ನೀಡುತ್ತೇವೆ. ನಮಗಂತೂ ಅದರ ಬಗ್ಗೆ ಏನೇನೂ ಹೇಳಬೇಡ' ಎಂದ ಮತ್ತೊಬ್ಬಾತ.

ಮನದಲ್ಲೇ ನಗುತ್ತಾ ದರ್ವೇಶಿ ಚಾಕು ತೆಗೆದುಕೊಂಡು ಹೋಗಿ ಕಲ್ಲಂಗಡಿ ಹಣ್ಣನ್ನು ಕತ್ತರಿಸಿ ಹೋಳೊಂದನ್ನು ತಿಂದ. ಜನರೆಲ್ಲಾ ಆತನ ಧೈರ್ಯ ಸಾಹಸಕ್ಕೆ ಮೆಚ್ಚಿ ಹರ್ಷೋದ್ಗಾರ ಮಾಡಿ ಆತನಿಗೆ ಕೈ ತುಂಬಾ ಹಣ ನೀಡಿ,

'ನಮ್ಮೆಲ್ಲರ ಪ್ರಾಣ ಉಳಿಸಿದ್ದಕ್ಕೆ ವಂದನೆಗಳು. ಈ ಊರು ಬಿಟ್ಟು ಹೋಗು. ಆದರೆ ಮತ್ತೆ ಬಂದು ಅದೇ ರೀತಿ ನಮ್ಮನ್ನೂ ಕೊಂದುಬಿಡಬೇಡ' ಎಂದು ಕೇಳಿಕೊಂಡರು.

ಆದರೆ ಆತ ಆ ಊರು ಬಿಟ್ಟು ಹೋಗಲಿಲ್ಲ. ಮೂರ್ಖರ ನಾಡಿನಲ್ಲಿ ತಾನೂ ಮೂರ್ಖನಂತೆ ಆಲೋಚಿಸಿ ಬದುಕಬೇಕೆಂಬುದನ್ನು ಕಲಿತುಕೊಂಡ. ಹಲವಾರು ವರ್ಷಗಳು ಪ್ರಯತ್ನಪಟ್ಟು ಕೆಲವರಾದರೂ ಮೂರ್ಖರಲ್ಲಿ ವಿವೇಕ ತುಂಬಿದ. ಅದಕ್ಕೆ ಪ್ರತಿಫಲವಾಗಿ ಕೊನೆಗೊಂದು ದಿನ ಆತ ಗಾಢ ಜ್ಞಾನವನ್ನು ಪಡೆದುಕೊಂಡ. ಮೂರ್ಖರ ನಾಡಿನಲ್ಲಿ ಆತ ಸಂತನಾದರೂ ಅಲ್ಲಿನ ಜನ ಆತನನ್ನು ರಕ್ಕಸ ಮೊಟ್ಟೆಯನ್ನು ಕೊಂದು ಅದರ ನೆತ್ತರು ಕುಡಿದವನೆಂದೇ ನೆನಪಿಸಿಕೊಳ್ಳುತ್ತಿದ್ದರು. ಆತನನ್ನೇ ಅಲ್ಲಿನ ಬಹಳ ಜನ ಅನುಕರಿಸಿದರು. ಆದರೆ ಅವರ್‍ಯಾರಿಗೂ ಗಾಢ ಜ್ಞಾನದ ದರ್ಶನವಾಗಲೇ ಇಲ್ಲ

ಅಷ್ಟರಲ್ಲಿ ಎರಡನೆಯ ದರ್ವೇಶಿ, ದೋ-ಅಫಾ ಸಹ ಗಾಢ ಜ್ಞಾನದ ಅನ್ವೇಷಣೆಯಲ್ಲಿ ಹೊರಟಿದ್ದ. ಹೋದ ಹೋದಲ್ಲೆಲ್ಲಾ ಮಾಯಾದರ್ಪಣವನ್ನು ಯಾರಾದರೂ ಕಂಡಿರುವಿರಾ ಎಂದು ವಿಚಾರಿಸುತ್ತಿದ್ದ. ಯಾರೂ ಇಲ್ಲವೆನ್ನುತ್ತಿದ್ದರು. ಕೊನೆಗೂ ಮಾಯಾದರ್ಪಣ ಇರುವ ಊರು ಸಿಕ್ಕೇಬಿಟ್ಟಿತು. ಆ ಊರಿನ

ಬಾವಿಯೊಂದರಲ್ಲಿ ಕೂದಲಿನಷ್ಟು ಸಣ್ಣನೆಯ ನೂಲಿನಿಂದ ಮಾಯಾದರ್ಪಣವನ್ನು ನೇತುಹಾಕಲಾಗಿತ್ತು. ಅಲ್ಲಿ ಮಾಯಾದರ್ಪಣದ ಒಂದು ಚೂರು ಇತ್ತು ಅಷ್ಟೆ. ಏಕೆಂದರೆ ಆ ಮಾಯಾದರ್ಪಣ ಮನುಷ್ಯರ ಆಲೋಚನೆಗಳಿಂದ ರಚಿಸಲ್ಪಟ್ಟಿದ್ದು ಮನುಷ್ಯರ ಆಲೋಚನೆಗಳು ಸಂಪೂರ್ಣವಾಗಿಲ್ಲದಿದ್ದುದರಿಂದ ದರ್ಪಣವೂ ಸಂಪೂರ್ಣವಾಗಿರಲಿಲ್ಲ.

ಮಾಯಾದರ್ಪಣದ ಕಾವಲಿಗಿದ್ದ ರಕ್ಕಸನನ್ನು ಕಾಳಗದಲ್ಲಿ ಸೋಲಿಸಿ, ದೋ-ಅಫಾ ಅದನ್ನು ಪಡೆದುಕೊಂಡ. ಆ ಕನ್ನಡಿಯಲ್ಲಿ ನೋಡಿ ಗಾಢ ಜ್ಞಾನವನ್ನು ಕೋರಿಕೊಂಡ; ಕೂಡಲೇ ಅದು ಆತನದಾಯಿತು. ಆತ ಊರಿನಲ್ಲಿ ಬೋಧನೆ ಮಾಡುತ್ತಾ ಹಲವಾರು ವರ್ಷಗಳನ್ನು ಕಳೆದ. ಆದರೆ ಆತನ ಶಿಷ್ಯರಲ್ಲಿ ಮಾಯಾದರ್ಪಣವನ್ನು ಸುಸ್ಥಿತಿಯಲ್ಲಿಡಲು ಬೇಕಾದ ನೇಮನಿಷ್ಠೆಗಳು ಇಲ್ಲದಿದ್ದುದರಿಂದ ಅದು ಕ್ರಮೇಣ ಮಾಯವಾಯಿತು. ಆದರೆ ಈಗಲೂ ಕಂಡ ಕಂಡ ಕನ್ನಡಿಗಳನ್ನು ದಿಟ್ಟಿಸಿ ನೋಡುತ್ತಾ ಇದೇ ದರ್ವೇಶಿ ದೋ-ಅಫಾನ ಮಾಯಾದರ್ಪಣ ಎಂದು ನಂಬಿದವರಿದ್ದಾರೆ.

ಇತ್ತ ಮೂರನೆಯ ದರ್ವೇಶಿ, ಸೆ-ಖಲಂದರ್ ಸುಂಟರಗಾಳಿಯ ಭೂತಕ್ಕಾಗಿ ಊರೂರು ಹುಡುಕಾಡಿದ. ಆ ಭೂತಕ್ಕೆ ಹಲವಾರು ಹೆಸರುಗಳಿದ್ದುದು ಸೆ-ಖಲಂದರ್‌ಗೆ ತಿಳಿದಿರಲಿಲ್ಲ. ಎಷ್ಟೋ ಬಾರಿ ಆ ಭೂತ ಎದುರಾದರೂ ಅದೇ ಸುಂಟರಗಾಳಿಯ ಭೂತವೆಂದು ಆತನಿಗೆ ತಿಳಿಯುತ್ತಿರಲಿಲ್ಲ.

ಎಷ್ಟೋ ವರ್ಷಗಳ ಹುಡುಕಾಟದ ನಂತರ ಯಾವುದೋ ಹಳ್ಳಿಯಲ್ಲಿ 'ಸುಂಟರಗಾಳಿಯ ಭೂತದ ಬಗ್ಗೆ ಗೊತ್ತೆ?' ಎಂದು ಕೇಳಿದಾಗ, 'ಯಾವುದೇ ಭೂತದ ಬಗ್ಗೆ ನಮಗೆ ಗೊತ್ತಿಲ್ಲ. ಆದರೆ ಈ ಊರಿನ ಹೆಸರು ಮಾತ್ರ ಸುಂಟರಗಾಳಿಯೇ' ಎಂದರು. ಸೆ-ಖಲಂದರ್ ಅಲ್ಲೇ ಕೂತು ಸುಂಟರಗಾಳಿಯ ಭೂತ ನನ್ನೆದುರು ಬರುವವರೆಗೂ ನಾನು ಈ ಸ್ಥಳ ಬಿಟ್ಟು ಏಳುವುದಿಲ್ಲವೆಂದು ಹೇಳಿದ. ಅಲ್ಲೇ ಎಲ್ಲೋ ಇದ್ದ ಸುಂಟರಗಾಳಿಯ ಭೂತ ಸುಯ್ಯೆಂದು ತಿರುಗುತ್ತಾ ಬಂದು ಆತನ ಮುಂದೆ ನಿಂತಿತು.

'ನಮ್ಮ ಊರಿನ ಜನ ಅಪರಿಚಿತರನ್ನು ಇಷ್ಟಪಡುವುದಿಲ್ಲ. ಅದಕ್ಕಾಗಿಯೇ ತಕ್ಷಣ ನಿನ್ನೆದುರಿಗೆ ಬಂದು ನಿಂತಿದ್ದೇನೆ. ಏನು ಬೇಕು ಬೇಗ ಹೇಳು ದರ್ವೇಶಿ' ಎಂದಿತು ಆ ಭೂತ.

'ನನಗೆ ಗಾಢ ಜ್ಞಾನ ಬೇಕು. ಅದು ನಿನ್ನಿಂದ ಸಿಗುತ್ತದೆಂದು ಹೇಳಲಾಗಿದೆ' ಎಂದು ತನ್ನ ಹಿಂದಿನ ಕತೆಯನ್ನೆಲ್ಲಾ ಹೇಳಿದ ಸೆ-ಖಲಂದರ್.

'ಆಯಿತು ಗಾಢ ಜ್ಞಾನ ದೊರಕಿಸಿಕೊಳ್ಳುವ ವಿಧಾನ ತಿಳಿಸಿಕೊಡುತ್ತೇನೆ' ಎಂದು ಹೇಳಿದ ಸುಂಟರಗಾಳಿಯ ಭೂತ ಅದಕ್ಕಾಗಿ ಪಠಿಸಬೇಕಾದ ಮಂತ್ರ, ಆಚರಿಸಬೇಕಾದ ನೇಮ ಆಚರಣೆಗಳು, ಮಾಡಬೇಕಾದ ಕಾರ್ಯ ಕಸರತ್ತುಗಳನ್ನೆಲ್ಲಾ ಹೇಳಿಕೊಟ್ಟಿತು.

ಸುಂಟರಗಾಳಿಯ ಭೂತವನ್ನು ವಂದಿಸಿದ ಸೆ-ಖಲಂದರ್ ಆ ಎಲ್ಲಾ ಅಭ್ಯಾಸಗಳನ್ನು ಕೂಡಲೇ ಆರಂಭ ಮಾಡಿದ. ದಿನಗಳು ಕಳೆದವು, ವಾರಗಳು ಕಳೆದವು,

ತಿಂಗಳುಗಳು ಕಳೆದವು, ವರುಷಗಳೂ ಉರುಳಿದವು. ಜನ ಎಲ್ಲಾ ಬಂದು ಈತನ ಆಚರಣೆ ಕಸರತ್ತುಗಳನ್ನು ಕುತೂಹಲದಿಂದ ನೋಡತೊಡಗಿದರು, ಆತನನನ್ನು ಅನುಕರಿಸತೊಡಗಿದರು; ಆತನನ್ನು ಮಹಾನ್ ಸಂನ್ಯಾಸಿಯೆಂದು ಪೂಜಿಸತೊಡಗಿದರು. ಅಂತೂ ಕೊನೆಗೊಂದು ದಿನ ಆತನಿಗೆ ಗಾಢ ಜ್ಞಾನ ಲಭಿಸಿಯೇ ಬಿಟ್ಟಿತು. ಆತನ ಹಿಂದೆ ಆತನನ್ನು ಅನುಕರಿಸುವ ದೊಡ್ಡ ಜನ ಸಮೂಹವೇ ಇದ್ದಿತು. ಆದರೆ ಅವರ್‍ಯಾರಿಗೂ ಆ ಜ್ಞಾನ ದಕ್ಕಲೇ ಇಲ್ಲ. ಏಕೆಂದರೆ ಈತನ ಆಚರಣೆಯ ಅಂತ್ಯದಲ್ಲಿ ಅವರ ಆಚರಣೆಗಳು ಆರಂಭವಾಗಿದ್ದವು.

ಈ ಮೂವರು ದರ್ವೇಶಿಗಳ ಅನುಯಾಯಿಗಳು ಯಾವಾಗಲಾದರೂ ಪರಸ್ಪರ ಭೇಟಿಯಾದಾಗ,

'ನನ್ನ ಬಳಿ ಮಾಯಾದರ್ಪಣವಿದೆ. ಅದರಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡು, ಗಾಢ ಜ್ಞಾನ ನಿನ್ನದಾಗುತ್ತದೆ' ಎಂದು ಒಬ್ಬ ಹೇಳಿದರೆ ಮತ್ತೊಬ್ಬ, 'ಅಷ್ಟೆಲ್ಲಾ ಏಕೆ, ಒಂದು ಕಲ್ಲಂಗಡಿ ಹಣ್ಣಿನ ಆಹುತಿ ಕೊಡು, ಜ್ಞಾನ ದಕ್ಕುತ್ತದೆ' ಎನ್ನುತ್ತಿದ್ದ. ಮಗದೊಬ್ಬ 'ಅವೆಲ್ಲಾ ಸುಳ್ಳು. ಪ್ರಾರ್ಥನೆ, ಆಚರಣೆಗಳ ಕಸರತ್ತಿನಿಂದಲೇ ಗಾಢ ಜ್ಞಾನದ ದರ್ಶನವಾಗುವುದು' ಎನ್ನುತ್ತಿದ್ದ.

ಯಾಕ್, ದೋ, ಮತ್ತು ಸೆ ದರ್ವೇಶಿಗಳು ಗಾಢ ಜ್ಞಾನವನ್ನು ಪಡೆದುಕೊಂಡಿದ್ದರೂ, ಆದರೆ ಅವರ ಅನುಯಾಯಿಗಳಿಗೆ ತಾವು ಯಾವುದೇ ರೀತಿಯಲ್ಲಿ ಸಹಾಯ ಮಾಡಲು ಸಾಧ್ಯವಿಲ್ಲದ ಅಸಹಾಯಕ ಸ್ಥಿತಿಯಲ್ಲಿದ್ದರು, ಭಯಂಕರ ಅಲೆಯಲ್ಲಿ ಕೊಚ್ಚಿ ಹೋದವರು ನೆಲದ ಮೇಲಿನವನನ್ನು ಬೆನ್ನಟ್ಟಿರುವ ಚಿರತೆಯಿಂದ ತಪ್ಪಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆ.

ವ್ಯಾಕರಣ ತಜ್ಞ ಮತ್ತು ದರ್ವೇಶಿ

ಒಂದು ದಿನ ರಾತ್ರಿ ದರ್ವೇಶಿಯೊಬ್ಬ ಒಂದು ಪಾಳು ಬಾವಿಯ ಬಳಿ ಹಾದು ಹೋಗುತ್ತಿದ್ದಾಗ ಯಾರೋ ಬಾವಿಯಿಂದ ಕೂಗಿಕೊಳ್ಳುವುದು ಕೇಳಿಸಿತು. ಆತ ಬಾವಿಯಲ್ಲಿ ಬಗ್ಗಿ ನೋಡಿ, 'ಯಾರಿದ್ದೀರಿ ಬಾವಿಯಲ್ಲಿ?' ಎಂದು ಕರೆದ. 'ನಾನೊಬ್ಬ ವ್ಯಾಕರಣ ತಜ್ಞ ಕತ್ತಲಲ್ಲಿ ಕಾಣದೆ ಬಾವಿಗೆ ಬಿದ್ದು ಬಿಟ್ಟಿದ್ದೇನೆ. ದಯವಿಟ್ಟು ನನ್ನನ್ನು ಕಾಪಾಡಿ' ಎಂದು ಮೊರೆಯಿಟ್ಟ ಬಾವಿಯಲ್ಲಿದ್ದವ.

'ಹೆದರಿಕೋ ಬೇಡ. ಹಾಗೇ ಇರು. ಕೂಡಲೆ ಹೇಣಿ ಒಂದು ಮತ್ತು ಅಗ್ಗ ತರುತ್ತೇನೆ. ಎಂದ ದರ್ವೇಶಿ.

'ಒಂದು ನಿಮಿಷ ಗೆಳೆಯ, ನಿನ್ನ ಉಚ್ಚಾರ ಮತ್ತು ವ್ಯಾಕರಣ ಸರಿಯಿಲ್ಲ. ಅದನ್ನು ಸರಿಪಡಿಕೊ' ಎಂದ ಬಾವಿಯೊಳಗಿದ್ದ ವ್ಯಾಕರಣ ತಜ್ಞ,

'ಹೋ, ನಿನಗೆ ವ್ಯಾಕರಣ ಅಷ್ಟು ಮುಖ್ಯವೊ! ಹಾಗಾದರೆ ನಾನು ಹುಚ್ಚಾರಣೆ ಮತ್ತು ವ್ಯಾಕರಣ ಕಲಿತು ಬರುವ ದಿನದವರೆಗೂ ಅಲ್ಲೇ ಬಿದ್ದಿರು' ಎಂದ ದರ್ವೇಶಿ ಅಲ್ಲಿಂದ ಹೊರಟುಹೋದ.

ಬೆಸ್ತ ಮತ್ತು ಸೀಸೆಯ ಭೂತ

ಒಂದು ದಿನ ಬೆಸ್ತನೊಬ್ಬನಿಗೆ ತನ್ನ ಬಲೆಯಲ್ಲಿ ಒಂದು ವಿಚಿತ್ರ ಹಿತ್ತಾಳೆಯ ಸೀಸೆಯೊಂದು ಸಿಕ್ಕಿತು. ಅದನ್ನು ಸೀಸದಿಂದ ಮುಚ್ಚಲಾಗಿತ್ತು. ಸೀಸೆ ದೊಡ್ಡದಾಗೇನೂ ಇರಲಿಲ್ಲ. ಅದರ ಮೇಲೆ ರಾಜ ಸೊಲೋಮನ್‌ನ ಲಾಂಛನದ ಮುದ್ರಯಿತ್ತು. ಅದರೊಳಗೆ ಒಂದು ಭಯಾನಕ ಭೂತವನ್ನು ಬಂಧಿಸಿ ರಾಜ ಸೋಲೋಮನ್ ಸ್ವತಃ ಅದರ ದುಷ್ಕೃತ್ಯಗಳಿಂದ ಜನರನ್ನು ರಕ್ಷಿಸಲು ಅದನ್ನು ಸಾಗರ ತಳಕ್ಕೆ ಎಸೆದಿದ್ದ. ಕೊನೆಗೊಂದು ದಿನ ಅದನ್ನು ನಿಯಂತ್ರಿಸುವವರು ಬರಬಹುದು ಹಾಗೂ ಅದನ್ನು ಮನುಕುಲದ ಒಳಿತಿಗಾಗಿ ಬಳಸಬಹುದೆಂದು ಭಾವಿಸಿದ್ದ. ಈ ಬೆಸ್ತನಿಗೆ ಆ ವಿಷಯ ಯಾವೂದೂ ತಿಳಿದಿರಲಿಲ್ಲ. ಆದರೆ ಆತನ ಎದುರಿಗೆ ಕುತೂಹಲಕರವಾದ ವಸ್ತುವೊಂದಿತ್ತು. ಅದರಿಂದ ತನಗೇನಾದರೂ ಲಾಭವಿದೆಯೇನೋ ಎಂದು ಆತ ಆಲೋಚಿಸುತ್ತಿದ್ದ. ಸೀಸೆ ಕಲಾತ್ಮಕವಾಗಿತ್ತು. ಮಿರಮಿರನೆ ಮಿಂಚುತ್ತಿತ್ತು. 'ಒಳಗೆ ವಜ್ರಗಳಿರಬಹುದು' ಎಂದುಕೊಂಡ.

'ತನಗೆ ಬಳಸಲು ಕಲಿತಿರುವುದನ್ನು ಮಾತ್ರ ಮನುಷ್ಯ ಬಳಸಬಲ್ಲ' ಎಂಬ ಹಿರಿಯರ ಹೇಳಿಕೆಯನ್ನು ಮರೆತು ಆತುರದಿಂದ ಸೀಸೆಯ ಮುಚ್ಚಳವನ್ನು ತೆರೆದ. ಅದನ್ನು ತಲೆಕೆಳಗೆ ಮಾಡಿ ನೋಡಿದ, ಅಲುಗಾಡಿಸಿ ನೋಡಿದ. ಅದರೊಳಗೆ ಏನೂ ಇರಲಿಲ, ನಿರಾಸೆಯಿಂದ ಕೆಳಗೆಸೆದ. ಸೀಸೆಯೊಳಗಿಂದ ಸಣ್ಣದಾಗಿ ಹೊಗೆ ಬರತೊಡಗಿತು. ಹೊಗೆ ದಟ್ಟವಾಗಿ ಭಯಂಕರ ಆಕೃತಿಯ ರೂಪ ತಳೆದು ಗಹಗಹಿಸಿ ನಗರಲಾರಂಭಿಸಿತು.

'ನಾನು ಭೂತಗಳ ದೊರೆ, ರಹಸ್ಯ ಪವಾಡಗಳ ಅರಿವುಳ್ಳವನು! ಸೊಲೋಮನ್‌ನ ವಿರುದ್ಧ ತಿರುಗಿ ಬಿದ್ದದ್ದರಿಂದ ನನ್ನನ್ನು ಈ ಸೀಸೆಯಲ್ಲಿ ಬಂಧಿಸಿಟ್ಟಿದ್ದ. ಈಗ ನಿನ್ನನ್ನು ಕೊಲ್ಲುತ್ತೇನೆ!' ಎಂದು ಗರ್ಜಿಸಿತು ಆ ಆಕೃತಿ.

ಬೆಸ್ತ ಹೆದರಿ ಗಡಗಡ ನಡುಗಿ ಭೂತಕ್ಕೆ ಅಂಗಾತ ಬಿದ್ದ. 'ನಾನು ನಿನ್ನನ್ನು ಸ್ವತಂತ್ರಗೊಳಿಸಿದೆ. ನನ್ನನ್ನೇ ಕೊಲ್ಲುವೆಯಾ? ದಯವಿಟ್ಟು ಕೊಲ್ಲಬೇಡ' ಎಂದು ಗೋಗರೆದ.

'ನಿನ್ನನ್ನು ಕೊಂದೇ ತೀರುತ್ತೇನೆ. ಬಂಡೇಳುವುದೇ ನನ್ನ ಗುಣ, ವಿನಾಶವೇ ನನ್ನ ಸಾಮರ್ಥ್ಯ' ಎಂದಿತು ಭೂತ.

ಹೆದರಿದ ಬೆಸ್ತ, ಕೊಂಚ ಚೇತರಿಸಿಕೊಂಡು, 'ನನಗೇನೋ ಸಿರಿಸಂಪತ್ತು ಸಿಗಬಹುದೆಂದು ಈ ಸೀಸೆ ತೆರೆದರೆ ನನಗೇ ವಿನಾಶ ಬಂತಲ್ಲ' ಎಂದು ಕೊರಗಿದ. ತಕ್ಷಣ ಅವನಿಗೊಂದು ಉಪಾಯ ಹೊಳೆಯಿತು.

'ನಿನಗೆ ಅಷ್ಟೊಂದು ತಾಕತ್ತಿದೆಯೆಂದು ನಂಬಲು ಸಾಧ್ಯವಿಲ್ಲ. ನಿನಗೆ ಅಷ್ಟೊಂದು ದೈತ್ಯಾಕಾರವಿದೆ. ಅಷ್ಟು ಸಣ್ಣ ಸೀಸೆಯಲ್ಲಿ ನೀನಿದ್ದೆಯಾ? ನೀನು ಸುಳ್ಳು ಹೇಳುತ್ತಿದ್ದೀಯೆ' ಎಂದ ಬೆಸ್ತ ಭೂತವನ್ನು ಕೆಣಕುವಂತೆ.

'ಏನು? ಭೂತಗಳ ದೊರೆ ನಾನು. ನನ್ನ ಮಾತಿನ ಮೇಲೆಯೇ ಅಪನಂಬಿಕೆಯೆ? ನಾನು ಆ ಸೀಸೆಯೊಳಗಿನಿಂದಲೇ ಹೊರಬಂದದ್ದು. ಬೇಕಾದರೆ ತೋರಿಸುತ್ತೇನೆ

ನೋಡು' ಎಂದು ಭೂತ ಮತ್ತೆ ಹೊಗೆಯಂತಾಗಿ ಸೀಸೆಯ ಒಳಗೆ ಸೇರಿಕೊಂಡಿತು. ಬೆಸ್ತ ತಕ್ಷಣ ಮುಚ್ಚಳದಿಂದ ಸೀಸೆಯನ್ನು ಮುಚ್ಚಿಬಿಟ್ಟ. ಅದನ್ನು ಸಮುದ್ರಕ್ಕೆ ಎಸೆದು 'ಬದುಕಿದೆಯ ಬಡ ಜೀವವೆ' ಎಂದು ನಿಟ್ಟುಸಿರು ಬಿಟ್ಟ.

ಹಲವಾರು ವರ್ಷಗಳು ಕಳೆದವು. ಆ ಬೆಸ್ತ ಸತ್ತುಹೋಗಿದ್ದ. ಈಗ ಆತನ ಮೊಮ್ಮಗ ಬೆಸ್ತನಾಗಿದ್ದ. ಒಂದು ದಿನ ಆತನಿಗೂ ತನ್ನ ಬಲೆಯಲ್ಲಿ ಅದೇ ಸೀಸೆ ಸಿಕ್ಕಿತು. ಆದರೆ ಆತ ಅದನ್ನು ತೆರೆಯಲಿಲ್ಲ. ಏಕೆಂದರೆ ಅವನ ತಂದೆ ತಾಯಂದಿರು ಅವನಿಗೆ ತಿಳಿಸಿ ಹೇಳಿದ್ದ, 'ತಾನು ಬಳಸಲು ಕಲಿತಿರುವುದನ್ನು ಮಾತ್ರ ಮನುಷ್ಯ ಬಳಸಬಲ್ಲ' ಎಂಬ ಮಾತು ಅವನಿಗೆ ನೆನಪಿತ್ತು.

'ಸೀಸೆ ಅಲುಗಾಡಿದ್ದರಿಂದ ಒಳಗಿನ ಭೂತ ಎಚ್ಚೆತ್ತುಕೊಂಡು, 'ಹೋ ಅದಮ್‌ನ ಮಗನೆ, ಅಥವಾ ನೀನು ಯಾರೇ ಆಗಿರು, ಈ ಸೀಸೆಯ ಮುಚ್ಚಳ ತೆರೆದು ನನ್ನನ್ನು ಹೊರಗೆ ಬಿಡು. ನಾನು ಭೂತಗಳ ದೊರೆ, ರಹಸ್ಯ ಪವಾಡಗಳ ಅರಿವುಳ್ಳವನು' ಇಂದು ಒಳಗಿನಿಂದಲೇ ಕೂಗಿತು. ಯುವ ಬೆಸ್ತ, ಎಚ್ಚರಿಕೆಯಿಂದ ಗುಹೆಯೊಂದರಲ್ಲಿ ಸೀಸೆಯನ್ನು ಭದ್ರವಾಗಿಟ್ಟು ಹತ್ತಿರದ ಬೆಟ್ಟದಲ್ಲಿನ ಸಂನ್ಯಾಸಿಯೊಬ್ಬನ ಬಳಿ ಸಲಹೆ ಕೇಳಲು ಹೋದ. ಆತನಿಗೆ ಎಲ್ಲವನ್ನೂ ವಿವರವಾಗಿ ತಿಳಿಸಿದ. ಎಲ್ಲವನ್ನೂ ಕೇಳಿದ ಸಂನ್ಯಾಸಿ,

'ನಿನ್ನ ಹಿರಿಯರ ಹೇಳಿಕೆ ಸರಿಯಾದುದು. ಈ ಕೆಲಸ ನೀನೇ ಮಾಡಬೇಕು ಹಾಗೂ ಅದನ್ನು ಹೇಗೆ ಸರಿಯಾಗಿ ಮಾಡಬೇಕೆಂದು ಕಲಿಯಬೇಕು' ಎಂದು ಹೇಳಿದ.

'ನಾನೇನು ಮಾಡಬೇಕು?' ಯುವ ಬೆಸ್ತ ಕೇಳಿದ.

'ನಿನಗೇನಾದರೂ ಮಾಡಲೇಬೇಕೆಂದೆನ್ನಿಸುತ್ತಿದೆಯೆ?' ಸಂನ್ಯಾಸಿ ಕೇಳಿದ.

'ಹೌದು, ಆ ಭೂತವನ್ನು ಬಿಡುಗಡೆ ಮಾಡಬೇಕೆಂದೆನ್ನಿಸುತ್ತಿದೆ. ಬಹುಶಃ ನನಗದು ರಹಸ್ಯ ಜ್ಞಾನ ಕಲಿಸಿಕೊಡಬಹುದು. ಚಿನ್ನದ ಬೆಟ್ಟವನ್ನು ಅಥವಾ ಮುತ್ತು ರತ್ನಗಳ ಸಾಗರವನ್ನೇ ಕೊಡಬಹುದು' ಎಂದ ಬೆಸ್ತ.

'ಹೌದು, ಭೂತ ನಿನಗೆ ಅದೆಲ್ಲವನ್ನೂ ಕೊಡಬಹುದು. ಹಾಗೆಯೇ ನಿನ್ನಿಂದ ಅವೆಲ್ಲವನ್ನು ವಾಪಸ್ಸು ಕಿತ್ತುಕೊಳ್ಳಲೂಬಹುದು. ಏಕೆಂದರೆ ನಿನಗೆ ಅಷ್ಟೆಲ್ಲಾ ರಹಸ್ಯ ಜ್ಞಾನವನ್ನಾಗಲಿ, ಸಿರಿಸಂಪತ್ತನ್ನಾಗಲಿ ರಕ್ಷಿಸಿಕೊಳ್ಳುವ ಶಕ್ತಿಯಿಲ್ಲ. ಅಲ್ಲದೆ ಬಳಸಲು ಕಲಿತಿರುವುದನ್ನು ಮಾತ್ರ ಮನುಷ್ಯ ಬಳಸಬಲ್ಲ ಎಂಬ ಹೇಳಿಕೆಯಂತೆ ಅಷ್ಟೊಂದು ಸಿರಿಸಂಪತ್ತನ್ನು ಹಾಗೂ ಜ್ಞಾನವನ್ನು ನಿನಗೆ ಬಳಸಲು ಗೊತ್ತಿಲ್ಲದಿರುವುದರಿಂದ ನಿನಗೆ ಅನಾಹುತಗಳೂ ಬಂದೊದಗಬಹುದು' ಎಂದ ಸಂನ್ಯಾಸಿ.

'ಹಾಗಾದರೆ ನಾನೇನು ಮಾಡಲಿ?' ಯುವ ಬೆಸ್ತ ಕೇಳಿದ.

ಭೂತ ನಿನಗೇನು ಕೊಡಬಲ್ಲದೆಂಬುದರ ಮಾದರಿಯನ್ನು ಅದರಿಂದಲೇ ಕೇಳಿ ಪಡೆ. ಅದನ್ನು ಪರೀಕ್ಷಿಸುವ ಹಾಗೂ ಅದನ್ನು ರಕ್ಷಿಸಿಕೊಳ್ಳುವ ವಿಧಾನವನ್ನೂ

ಸಹ ಕೇಳಿ ತಿಳಿದುಕೋ. ಜ್ಞಾನವನ್ನು ಕೇಳು, ಸಿರಿಸಂಪತ್ತನ್ನಲ್ಲ. ಏಕೆಂದರೆ ಜ್ಞಾನವಿಲ್ಲದ ಸಿರಿ ನಿಷ್ಪ್ರಯೋಜಕ ಹಾಗೂ ವಿನಾಶಕಾರಕ' ಎಂದ ಸಂನ್ಯಾಸಿ.

ವಿವೇಕ ಪಡೆದುಕೊಂಡ ಯುವ ಬೆಸ್ತ ಸೀಸೆ ಇರಿಸಿದ್ದ ಗುಹೆಗೆ ಹಿಂದಿರುಗಿದ. ಸೀಸೆಯನ್ನು ತಟ್ಟಿ ಭೂತವನ್ನು ಕರೆದ. ಭೂತ ಒಳಗಿನಿಂದಲೇ ಗರ್ಜಿಸಿತು, 'ನನ್ನನ್ನು ಹೊರಗೆ ಬಿಡು ಅದಮ್‌ನ ಮಗನೆ!'.

'ನಿನ್ನ ಮಾತಿನಲ್ಲಾಗಲಿ ನಿನ್ನ ಶಕ್ತಿ ಪವಾಡಗಳಲ್ಲಾಗಲಿ ನನಗೆ ನಂಬಿಕೆಯಿಲ್ಲ, ಎಂದ ಬೆಸ್ತ.

'ನನ್ನಲ್ಲಿ ನಂಬಿಕೆಯಿಲ್ಲವೆ? ನಾನು ಭೂತಗಳ ದೊರೆ! ನಾನು ಸುಳ್ಳು ಹೇಳುವುದಿಲ್ಲವೆಂದು ನಿನಗೆ ತಿಳಿದಿಲ್ಲವೆ?', ಕೇಳಿತು ಭೂತ.

'ಇಲ್ಲ, ನಾನು ನಂಬುವುದಿಲ್ಲ'.

'ನಿನಗೆ ನಂಬಿಕೆ ಬರಬೇಕಾದರೆ ನಾನೇನು ಮಾಡಬೇಕು?' ಹತಾಶೆಯಿಂದ ಕೇಳಿತು ಭೂತ.

'ನಿನ್ನ ಶಕ್ತಿಯ ಪ್ರದರ್ಶನ ಮಾಡು, ಸೀಸೆಯ ಒಳಗಿನಿಂದಲೇ ಯಾವುದಾದರೂ ಪ್ರದರ್ಶನ ಮಾಡಬಲ್ಲೆಯಾ?'

'ಮಾಡಬಲ್ಲೆ, ಆದರೆ ಸೀಸೆಯಿಂದ ಹೊರಬರಲು ಮಾತ್ರ ಸಾಧ್ಯವಿಲ್ಲ'.

'ಹಾಗಾದರೆ ನನ್ನ ಮನಸ್ಸಿನಲ್ಲಿ ಗೋಜಲು ಗೋಜಲಾದ ಸಮಸ್ಯೆಯೊಂದು ಕಾಡುತ್ತಿದೆ. ಅದನ್ನರಿಯುವ ಸಾಮರ್ಥ್ಯ ನನಗೆ ಕೊಡು'.

ಭೂತ ತನ್ನ ಚಮತ್ಕಾರ ತೋರಿಸಿತು. ಬೆಸ್ತನಲ್ಲಿ ಅರಿವು ಮೂಡತೊಡಗಿತು. ತನ್ನ ತಾತನ ಹಾಗೂ ಬೆಸ್ತನ ಮೊದಲ ಭೇಟಿ, ಸನ್ನಿವೇಶಗಳೆಲ್ಲಾ ಕಣ್ಮುಂದೆ ಮೂಡತೊಡಗಿತು ಹಾಗೂ ಭೂತದಿಂದ ಕಲಿತ ಪಾಠವನ್ನು ಹೇಗೆ ಇತರರಿಗೆ ತಿಳಿಸಬೇಕೆಂಬುದೂ ಅರಿವಾಯಿತು. ತನ್ನ ತಾತನ ಹಾಗೆಯೇ ತಾನೂ ಆ ಸೀಸೆಯನ್ನು ಮತ್ತೆ ಸಾಗರ ಆಳಕ್ಕೆ ಎಸೆದುಬಿಟ್ಟ. ನಂತರ ತನ್ನ ಬೆಸ್ತ ವೃತ್ತಿ ಬಿಟ್ಟು ಬದುಕೆಲ್ಲಾ ತಾನು ಕಲಿಯದುದನ್ನು ಬಳಸುವುದರಿಂದಾಗುವ ಅನಾಹುತಗಳ ಬಗ್ಗೆ ಜನರಿಗೆ ತಿಳಿಹೇಳುತ್ತಾ ಕಳೆದ.

ಅದಾದ ನಂತರ ಯಾರಿಗೂ ಸೀಸೆಯಾಗಲಿ ಸೀಸೆಯೊಳಗಿನ ಭೂತವಾಗಲಿ ಸಿಗಲಿಲ್ಲ ಹಾಗೂ ಆ ಭೂತದಿಂದ ಕಲಿಯಬೇಕಾದ ಅವಕಾಶವೂ ಸಿಗಲಿಲ್ಲವಾದುದರಿಂದ ಜನ ಆ ಯುವ ಬೆಸ್ತನನ್ನೇ ಅನುಕರಿಸಿದರು. ಆದರೆ ಆತನ ಬೋಧನೆಯ ಅಂತರಾಳವನ್ನು ಅನುಕರಿಸಲಾಗಲಿಲ್ಲ. ಅವರೆಲ್ಲಾ ಸೀಸೆಯೇ ಲಾಂಛನವಾದ ಧರ್ಮವನ್ನೇ ಪ್ರಾರಂಭಿಸಿದರು. ಹಲವಾರು ಶತಮಾನಗಳ ನಂತರ ಆ ಜನರಿಗೆ ಸೀಸೆ ಒಂದು ಪವಿತ್ರ ಹಾಗೂ ರಹಸ್ಯದ ಸಂಕೇತವಾಗಿದೆ. ಆ ಬೆಸ್ತ ನೆಲೆಯೂರಿದ ಜಾಗದಲ್ಲಿ ಒಂದು ಸಣ್ಣ ಗುಡಿಸಲು ಕಟ್ಟಿ ತಾವು ಬೆಲೆಬಾಳುವ ಒಡವೆ ವಸ್ತ್ರಗಳನ್ನು ಧರಿಸಿಕೊಳ್ಳುತ್ತಾರೆ ಹಾಗೂ ಅಲ್ಲಿ ಆಡಂಬರದ ಪೂಜೆ ಪುನಸ್ಕಾರಗಳನ್ನು, ಆಚರಣೆಗಳನ್ನು ನಡೆಸುತ್ತಾರೆ.

ವಿವೇಕ ಪಡೆದ ಬೆಸ್ತನ ಅನುಯಾಯಿಗಳು ಇಂದಿಗೂ ಇದ್ದಾರೆ. ಆದರೆ ಆತ ಬೆಸ್ತನಾಗಿದ್ದನೆಂಬುದನ್ನು ಮರೆತಿದ್ದಾರೆ.

ಸಾಗರ ತಳದಲ್ಲಿನ ಭೂತ ಈಗಲೂ ಗೊಣಗಾಡುತ್ತಲೇ ಇದೆ.

ಸೂಕ್ತ ಸಮಯ, ಸ್ಥಳ ಹಾಗೂ ಜನ

ಬಹಳ ಹಿಂದೆ ರಾಜನೊಬ್ಬನಿದ್ದ. ಆತ ಒಮ್ಮೆ ಒಬ್ಬ ದರ್ವೇಶಿಯನ್ನು ಕರೆದು, 'ಮನುಷ್ಯನ ಆದಿಯಿಂದಲೂ ಹಲವಾರು ಗುರುಗಳ ಮೂಲಕ ಈ ದರ್ವೇಶಿ ಪಥ ಅವಿಚ್ಛಿನ್ನವಾಗಿ ಹರಿದುಬಂದಿದೆ ಹಾಗೂ ಎಲ್ಲರಿಗೂ ಜ್ಞಾನ, ವಿವೇಕದ ಬೆಳಕಾಗಿದೆ. ಅದರ ಮುಂದೆ ನನ್ನ ಈ ರಾಜ ವರ್ಚಸ್ಸು ಏನೇನೂ ಇಲ್ಲ' ಎಂದ.

'ಹೌದು, ಅದು ಸತ್ಯ' ಎಂದ ದರ್ವೇಶಿ.

'ನಿನ್ನ ಜ್ಞಾನ ವರ್ಚಸ್ಸಿನಿಂದ, ನಿನ್ನ ವಿವೇಕದಿಂದ ನಾನು ಸತ್ಯವನ್ನು ಅರಿಬೇಕೆಂದಿದ್ದೇನೆ. ನನಗೆ ಬೋಧಿಸು' ಎಂದ ರಾಜ.

'ಇದು ಬೇಡಿಕೆಯೋ ಅಥವಾ ಆಜ್ಞೆಯೋ? ಎಂದ ಕೇಳಿದ ದರ್ವೇಶಿ.

'ಅದು ನೀನು ಸ್ವೀಕರಿಸಿದಂತೆ, ನೀನು ನನಗೆ ಬೋಧಿಸಲು ಆಜ್ಞೆಯೇ ಬೇಕಾದರೆ ಆಜ್ಞೆಯೇ ಎಂದುಕೊ ಅಥವಾ ಬೇಡಿಕೆಯೇ ಸಾಕೆಂದರೆ ಬೇಡಿಕೆಯೇ ಎಂದುಕೊ' ಎಂದ ರಾಜ.

ಹಲವಾರು ನಿಮಿಷಗಳು ದರ್ವೇಶಿ ಮಾತನಾಡಲೇ ಇಲ್ಲ. ತಲೆ ತಗ್ಗಿಸಿಯೇ ಇದ್ದ. ದರ್ವೇಶಿಯ ಉತ್ತರಕ್ಕೆ ಕಾದು ಕೂತ ರಾಜ. ನಂತರ ತಲೆ ಎತ್ತಿದ ದರ್ವೇಶಿ,

'ನೀನು ಸಂವಹನದ ಕ್ಷಣಕ್ಕಾಗಿ ಕಾಯಬೇಕು' ಎಂದು ಹೇಳಿದ.

ರಾಜನಿಗೆ ಒಂದರೆಕ್ಷಣ ಗೊಂದಲವಾಯಿತು. ರಾಜನಾಗಿರುವ ನಾನು ಕೇಳಿದ ತಕ್ಷಣ ಆತ ತಿಳಿಸಿಹೇಳಬೇಕಾಗಿತ್ತು. ದರ್ವೇಶಿ ಆಸ್ಥಾನ ಬಿಟ್ಟು ಹೊರಟುಹೋದ. ಅದಾದ ನಂತರ ದರ್ವೇಶಿ ಪ್ರತಿ ದಿನವೂ ಆಸ್ಥಾನಕ್ಕೆ ಬರುತ್ತಿದ್ದ. ಎಲ್ಲರೊಂದಿಗೆ ಮಾತನಾಡುತ್ತಿದ್ದ. ಆಸ್ಥಾನದ ಕಾರ್ಯಕಲಾಪಗಳಲ್ಲಿ ಭಾಗಿಯಾಗುತ್ತಿದ್ದ.

'ಈ ದರ್ವೇಶಿ ಪ್ರತಿ ದಿನಾ ಬರುತ್ತಾನೆ. ಎಲ್ಲರೊಂದಿಗೆ ನಗುತ್ತಾ ಮಾತನಾಡುತ್ತಾನೆ. ಇಲ್ಲೇ ಊಟ ಮಾಡುತ್ತಾನೆ, ಮಲಗುತ್ತಾನೆ. ಆದರೆ ನಾನು ಕಲಿಯಬೇಕಿರುವುದರ ಬಗ್ಗೆ ಚಕಾರವೇ ಎತ್ತುತ್ತಿಲ್ಲವಲ್ಲ? ಯಾವುದಾದರೂ ಸಂಕೇತಕ್ಕೆ ಆತ ಕಾಯುತ್ತಿರುವನೇ?' ಎಂದು ರಾಜ ತೇಪೆಯ ಧಿರಿಸಿನ ದರ್ವೇಶಿಯನ್ನು ಕಂಡಾಗಲೆಲ್ಲಾ ಆಲೋಚಿಸುತ್ತಿದ್ದ. ಆದರೆ ಆತನಿಗೆ ಆ ದರ್ವೇಶಿಯ ಮನಸ್ಸಿನಾಳದ ರಹಸ್ಯ ಭೇದಿಸಲಾಗಲಿಲ್ಲ.

ಇದೇ ಸಮಯದಲ್ಲಿ ಆಸ್ಥಾನದಲ್ಲಿ ಯಾರೋ ಹೇಳಿದರು. 'ಸಾಹಿಲ್ ದೌದ್ ಈ ಪ್ರಪಂಚದಲ್ಲೇ ಶ್ರೇಷ್ಠ ಗಾಯಕ' ಎಂದು. ರಾಜನಿಗೆ ಕೂಡಲೆ ಆ ಗಾಯಕನ ಗಾಯನ ಕೇಳಬೇಕೆನ್ನಿಸಿತು. 'ಆತನನ್ನು ಕರೆತನ್ನಿರಿ' ಎಂದು ಕೂಡಲೆ ಆಜ್ಞಾಪಿಸಿದ.

ಆಮಂತ್ರಣ ತಂಡವೇ ಗಾಯಕನ ಮನೆಗೆ ಹೋಯಿತು. ಆದರೆ ಗಾಯನ ಸಾಮ್ರಾಜ್ಯದ ರಾಜ ದೌದ್, 'ನಿಮ್ಮ ರಾಜನಿಗೆ ಗಾಯನದ ಅವಶ್ಯಕತೆಗಳ ಬಗ್ಗೆ ಕಿಂಚಿತ್ತೂ ಜ್ಞಾನವಿಲ್ಲ. ಆತ ನನ್ನ ಮುಖ ನೋಡಬೇಕೆಂದಿದ್ದರೆ ಮಾತ್ರ ನಾನು ಬರುತ್ತೇನೆ. ನನ್ನ ಹಾಡುಗಾರಿಕೆ ಕೇಳಬೇಕೆಂದಿದ್ದರೆ, ನನಗೆ ಹಾಡಬೇಕೆನ್ನಿಸುವವರೆಗೆ ಆತ ಎಲ್ಲರ ಹಾಗೆ ಕಾಯಬೇಕು. ಯಾವಾಗ ಹಾಡಬೇಕು, ಯಾವಾಗ ಹಾಡಬಾರದು ಎಂಬ ಜ್ಞಾನವಿರುವ ಯಾವ ಕತ್ತೆ ಬೇಕಾದರೂ ಶ್ರೇಷ್ಠ ಗಾಯಕನಾಗಬಲ್ಲದು. ಅದೇ ರೀತಿ ನಾನೂ ಸಹ ಶ್ರೇಷ್ಠ ಗಾಯಕನಾಗಿದ್ದೇನೆ' ಎಂದು ಹೇಳಿದ.

ಇದನ್ನು ರಾಜನಿಗೆ ತಿಳಿಸಿದಾಗ, ಒಂದೆಡೆ ಆ ಗಾಯಕನ ಮೇಲೆ ಸಿಟ್ಟು ಮತ್ತೊಂದೆಡೆ ಆತನ ಗಾಯನ ಕೇಳಬೇಕೆಂಬ ಆಸೆ– ಎರಡೂ ಬಾಧಿಸಿತು. 'ಈತನಿಗೆ ಅದು ಯಾವಾಗ ಹಾಡಬೇಕೆಂದೆನ್ನಿಸುತ್ತದೆಯೊ! ನನಗಂತೂ ಈಗಲೇ ಆತನ ಹಾಡು ಕೇಳಬೇಕೆನಿಸುತ್ತಿದೆ. ಈ ಮನುಷ್ಯನನ್ನು ನನಗಾಗಿ ಹಾಡುವಂತೆ ಮಾಡುವವರು ಯಾರೂ ಇಲ್ಲವೇ?' ಎಂದ ಅಸಹಾಯಕತೆಯಿಂದ.

ಆಗ ದರ್ವೇಶಿ ಎದ್ದು ಮುಂದೆ ಬಂದು, 'ಬಾ ನವಿಲೆ, ಬಾ ಆ ಗಾಯಕನ ಮನೆಗೆ ಹೋಗೋಣ' ಎಂದು ರಾಜನನ್ನು ಕರೆದ. ಆಸ್ಥಾನದವರೆಲ್ಲಾ ತಮ್ಮ ತಮ್ಮಲ್ಲೇ ಪಿಸುಗುಟ್ಟತೊಡಗಿದರು. 'ಈ ದರ್ವೇಶಿ ರಾಜನನ್ನು ಕರೆಯುತ್ತಿದ್ದಾನಲ್ಲ, ದೌದ್‌ನಿಂದ ಹಾಡು ಹಾಡಿಸಲು ಅವನಿಂದ ಸಾಧ್ಯವೆ? ಅದರಲ್ಲಿ ಆತ ಯಶಸ್ವಿಯಾದರೆ ಪರವಾಗಿಲ್ಲ ಇಲ್ಲವಾದಲ್ಲಿ ಆತನ ಕತೆ ಮುಗಿದಂತೆಯೆ' ಎಂದುಕೊಂಡರು.

ರಾಜ ಯಾರೂ ತನ್ನನ್ನು ಗುರುತಿಸದಿರಲೆಂದು ಸಾಮಾನ್ಯನ ಹಾಗೆ ಮಾರುವೇಷ ತೊಟ್ಟು ದರ್ವೇಶಿಯನ್ನು ಹಿಂಬಾಲಿಸಿದ. ದರ್ವೇಶಿ ಹಾಗೂ ರಾಜ ದೌದ್‌ನ ಮನೆಯ ಬಳಿ ಹೋಗಿ ಬಾಗಿಲು ತಟ್ಟಿದರು.

'ನಾನು ಈ ದಿನ ಹಾಡುವುದಿಲ್ಲ, ನನಗೆ ತೊಂದರೆ ಕೊಡದೆ ಹೊರಟುಹೋಗಿ' ಎಂದ ದೌದ್ ಒಳಗಿನಿಂದಲೇ.

ದರ್ವೇಶಿ ಅಲ್ಲೇ ಮನೆಯ ಮುಂದೆ ಕೂತು ದೌದ್‌ನಿಗೆ ಪ್ರಿಯವಾದ ಸಂಗೀತವೊಂದನ್ನು ಹಾಡತೊಡಗಿದ. ಸಂಗೀತದ ರಾಗ ತಾಳಗಳ ಬಗೆಗೆ ಅಷ್ಟಾಗಿ ತಿಳಿದಿಲ್ಲದ ರಾಜ 'ವಾಹ್! ಎಷ್ಟು ಚೆನ್ನಾಗಿದೆ ಸಂಗೀತ, ನಿನ್ನ ಧ್ವನಿ' ಎಂದು ಹೇಳಿ ದರ್ವೇಶಿಯ ಹಾಡನ್ನು ಆನಂದಿಸತೊಡಗಿದ. ಆದರೆ ಆ ಸಂಗೀತದಲ್ಲಿ ಆತ ಬೇಕೆಂದೇ ರಾಗವನ್ನು ತಪ್ಪುತಪ್ಪಾಗಿ ಹಾಡಿದ್ದು ರಾಜನ ಗಮನಕ್ಕೆ ಬರಲಿಲ್ಲ. ಈ ರೀತಿ ತಪ್ಪುತಪ್ಪಾಗಿ ಹಾಡಿದ್ದು ಶ್ರೇಷ್ಠ ಗಾಯಕ ದೌದ್‌ನ ಮನದಲ್ಲಿ ಅದನ್ನು ಸರಿಪಡಿಸಲು ಹಾಡಬೇಕೆಂಬ ಇಚ್ಛೆ ಬರಲಿ ಎಂಬುದೂ ಸಹ ರಾಜನಿಗೆ ತಿಳಿಯಲಿಲ್ಲ.

'ವಾಹ್! ಬಹಳ ಚೆನ್ನಾಗಿದೆ. ನೀನೂ ಸಹ ಇಷ್ಟು ಚೆನ್ನಾಗಿ ಹಾಡುವೆಯೆಂದು ನನಗೆ ತಿಳಿದಿರಲಿಲ್ಲ. ದಯವಿಟ್ಟು ಮತ್ತೊಮ್ಮೆ ಹಾಡು. ಅಂತಹ ಮಧುರ ಧ್ವನಿ ನಾನು ಕೇಳಿಯೇ ಇರಲಿಲ್ಲ' ಎಂದು ರಾಜ ದರ್ವೇಶಿಯನ್ನು ಕೇಳಿಕೊಂಡ.

ಅಷ್ಟರಲ್ಲಿ ಹೊರಗೆ ಬಂದ ದೌದ್‌ನೇ ಹಾಡಲಾರಂಭಿಸಿದ. ಹಾಡಿನ ಆರಂಭದಲ್ಲಿಯೇ ರಾಜ ಮತ್ತು ದರ್ವೇಶಿ ಆತನ ಗಾಯನಕ್ಕೆ ಮನಸೋತರು, ಮೈ ಮರೆತರು. ರಾಜನಿಗೆ ಬಹಳ ಸಂತೋಷವಾಯಿತು. ದೌದ್‌ನಿಗೆ ರಾಜ ಸಾಕಷ್ಟು ಕಾಣಿಕೆ, ಬಳುವಳಿ ಕಳುಹಿಸಿದ.

'ಹೋ ವಿವೇಕದ ಮನುಷ್ಯನೆ! ಆ ಕೋಗಿಲೆಯನ್ನು ಹಾಡುವಂತೆ ಮಾಡಿದ ನಿನ್ನ ಚತುರತೆಯನ್ನು ಮೆಚ್ಚುತ್ತೇನೆ' ಎಂದ ರಾಜ ದರ್ವೇಶಿಗೆ.

'ಪ್ರಭು, ಹಾಡು ಕೇಳಬೇಕಾದಲ್ಲಿ ಹಾಡು ಹಾಡುವವರಿರಬೇಕು ಮತ್ತು ಹಾಡು ಕೇಳುವವರಿರಬೇಕು. ಹಾಡು ಹಾಡುವಂತೆ ಪ್ರೇರೇಪಿಸಲು ಹಾಗೂ ಅದನ್ನು ಸ್ವೀಕರಿಸಲು ಅವರಿಬ್ಬರ ನಡುವೆ ಸಂವಹನಕ್ಕೆ ವಾಹಕವೊಂದು ಇರಬೇಕಾಗುತ್ತದೆ. ಶ್ರೇಷ್ಠ ಗಾಯಕರ ಹಾಗೂ ರಾಜರ ನಡುವೆಯೂ ಅಷ್ಟೆ, ದರ್ವೇಶಿ ಮತ್ತು ಅವರ ಶಿಷ್ಯರ ನಡುವೆಯೂ ಅಷ್ಟೆ. ಸ್ಥಳ, ಸಮಯ, ಜನ ಹಾಗೂ ಚತುರತೆಗಳು ಮುಖ್ಯ' ಎಂದ ದರ್ವೇಶಿ.

ಅತ್ಯಮೂಲ್ಯ ಹಾಗೂ ನಿಕೃಷ್ಟ

ಒಬ್ಬ ರಾಜ ಒಮ್ಮೆ ತನ್ನ ಸಲಹಾಕಾರ ಸೂಫಿಯನ್ನು ಕರೆದು, 'ನಿಜವಾದ ಆಲೋಚನೆಯ ಶಕ್ತಿ ಇರುವುದು, ಬದಲಿ ಮಾರ್ಗಗಳನ್ನು ಅವಲೋಕಿಸುವುದರಲ್ಲಿ ಎಂದು ನನಗನ್ನಿಸುತ್ತದೆ. ಈ ಎರಡರಲ್ಲಿ ಯಾವುದು ಒಳ್ಳೆಯದು ಹೇಳು; ನನ್ನ ಪ್ರಜೆಗಳಿಗೆ ಹೆಚ್ಚು ಜ್ಞಾನ ಒದಗಿಸಿ ಅವರ ಜ್ಞಾನ ಹೆಚ್ಚಿಸಲೆ ಅಥವಾ ಅವರಿಗೆ ಹೆಚ್ಚು ಆಹಾರ ಕೊಡಲೆ? ಎರಡರಿಂದಲೂ ಅವರಿಗೆ ಅನುಕೂಲವಾಗುತ್ತದೆ' ಎಂದ.

ಅದಕ್ಕೆ ಸೂಫಿ, 'ಪ್ರಭು, ಜ್ಞಾನ ಸ್ವೀಕರಿಸಲು ಸಾಧ್ಯವಿಲ್ಲದವರಿಗೆ ನೀವು ಜ್ಞಾನ ಒದಗಿಸುವುದರಿಂದ ಪ್ರಯೋಜನವಿಲ್ಲ. ಅದೇ ರೀತಿ ನಿಮ್ಮ ಉದ್ದೇಶದ ಅರಿವಿಲ್ಲದ ಜನಕ್ಕೆ ನೀವು ಆಹಾರ ಒದಗಿಸುವುದೂ ಅಷ್ಟೆ. ಆದುದರಿಂದ ಎರಡರಿಂದಲೂ ಅವರಿಗೆ ಅನುಕೂಲವಾಗುತ್ತದೆ ಎನ್ನುವ ನಿಮ್ಮ ಭಾವನೆ ತಪ್ಪು. ನೀವು ಕೊಡುವ ಹೆಚ್ಚು ಆಹಾರದಿಂದ ಅವರಿಗೆ ಅಜೀರ್ಣವಾದಲ್ಲಿ ಅಥವಾ ಅದನ್ನು ಒಂದು ರೀತಿಯ ರಾಜನ ಲಂಚ ಎಂದುಕೊಂಡಲ್ಲಿ ಹಾಗೂ ಸುಲಭವಾಗಿ ಇನ್ನೂ ಹೆಚ್ಚು ಆಹಾರ ರಾಜನಿಂದ ಪಡೆಯಬಹುದು ಎಂದು ಪ್ರಜೆಗಳು ತಿಳಿದುಕೊಂಡಲ್ಲಿ ನಿಮ್ಮ ಉದ್ದೇಶ ಸೋಲುತ್ತದೆ. ಅದೇ ರೀತಿ ನೀವು ಹೆಚ್ಚಿನ ಜ್ಞಾನ ಒದಗಿಸುವುದು ಅವರ ಅರಿವಿಗೆ ಬರದಿದ್ದಲ್ಲಿ, ನೀವು ಕೊಡುತ್ತಿರುವುದು ಜ್ಞಾನ ಎಂಬುದೂ ಸಹ ತಿಳಿಯದಿದ್ದಲ್ಲಿ ಅಥವಾ ಜ್ಞಾನ ಒದಗಿಸುವ ನಿಮ ಉದ್ದೇಶ ಅವರಿಗೆ ತಿಳಿಯದಿದ್ದಲ್ಲಿ ನೀವು ಇಲ್ಲಿಯೂ ಸಹ ಸೋತಂತೆಯೇ– ಪ್ರಜೆಗಳಿಗೆ ಅನುಕೂಲವೇನೂ ಆಗುವುದಿಲ್ಲ. ಆದುದರಿಂದ ನಿಮ್ಮ ಪ್ರಶ್ನೆಯನ್ನು ಹಂತಹಂತವಾಗಿ ಪರಿಶೀಲಿಸಬೇಕು. ಮೊದಲನೆಯ ಹಂತ ಪರಿಗಣನೆ; ಅತ್ಯಮೂಲ್ಯ ವ್ಯಕ್ತಿ ಅಯೋಗ್ಯ ಹಾಗೂ ಅಯೋಗ್ಯ ವ್ಯಕ್ತಿ ಅತ್ಯಮೂಲ್ಯನಾದವ ಎಂಬುದು ಮೊದಲ ಹಂತದ ಪರಿಗಣನೆ' ಎಂದ.

'ಹೌದೇನು? ನಿನ್ನ ಪರಿಗಣನೆಯ ಸತ್ಯ ನನಗರ್ಥವಾಗುತ್ತಿಲ್ಲ. ಅದನ್ನು ರುಜುವಾತು ಮಾಡಿ ತೋರಿಸು' ಎಂದ ರಾಜ.

ಸೂಫಿ ಆಗ ಅಫಘಾನಿಸ್ತಾನದ ಪ್ರಮುಖ ದರ್ವೇಶಿಯನ್ನು ಕರೆಸಿದ. ಆತನನ್ನು ಸೂಫಿ ಕೇಳಿದ, 'ನೀವು ಇಷ್ಟಪಡುವುದಾದಲ್ಲಿ, ಕಾಬೂಲಿನಲ್ಲಿ ಯಾರಾದರೂ ಒಬ್ಬಾತ ಏನು ಮಾಡಬಹುದೆಂದು ಇಚ್ಛಿಸುವಿರಿ?'

ಈ ಪ್ರಶ್ನೆಯ ಹಿಂದಿನ ಘಟನೆಯ ಕತೆಯನ್ನು ಅರಿತಿದ್ದ ದರ್ವೇಶಿ, 'ಕಾಬೂಲಿನ ಮಾರುಕಟ್ಟೆಯಲ್ಲಿ ಒಬ್ಬ ವ್ಯಾಪಾರಸ್ಥನಿದ್ದಾನೆ. ಆತ ಒಂದು ಮಂಕರಿ ಚೆರ್ರಿಯನ್ನು ಅದರ ಅವಶ್ಯಕತೆಯುಳ್ಳ ನಿರ್ದಿಷ್ಟ ವ್ಯಕ್ತಿಗೆ ಪುಕ್ಕಟೆಯಾಗಿ ನೀಡಿದಲ್ಲಿ ಆ ವ್ಯಾಪಾರಸ್ಥನಿಗೆ ಸಿರಿಸಂಪತ್ತು ಸಿಗುತ್ತದೆ, ಇಡೀ ದೇಶಕ್ಕೆ ಒಳ್ಳೆಯದಾಗುತ್ತದೆ' ಎಂದು ಹೇಳಿದ.

ರಾಜನಿಗೆ ಸಂತೋಷವಾಯಿತು, ಏಕೆಂದರೆ ಸಾಮಾನ್ಯವಾಗಿ ಸೂಫಿಗಳು ಇಂತಹ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ. 'ಆ ವ್ಯಾಪಾರಸ್ಥನನ್ನು ಕೂಡಲೇ ಕರೆಸಿರಿ, ಒಂದು ಮಂಕರಿ ಚೆರ್ರಿಯನ್ನು ಕೊಡುವಂತೆ ಮಾಡುತ್ತೇನೆ' ಎಂದು ಕೂಗಿದ ರಾಜ.

'ಇಲ್ಲ ಹಾಗಾಗುವುದಿಲ್ಲ. ಆತನೇ ಸ್ವಇಚ್ಛೆಯಿಂದ ಅದನ್ನು ನೀಡಬೇಕು' ಎಂದ ಮೊದಲ ಸೂಫಿ.

ವ್ಯಾಪಾರಸ್ಥನಿಗೆ ತಿಳಿಯಬಾರದೆಂದು ಇಬ್ಬರು ಸೂಫಿಗಳು ಮತ್ತು ರಾಜ ಮಾರುವೇಶದಲ್ಲಿ ಕಾಬೂಲಿಗೆ ಹೊರಟರು. ಸಾಮಾನ್ಯ ಧಿರಿಸಿನಲಿದ್ದ ಪ್ರಮುಖ ದರ್ವೇಶಿ ಆ ವ್ಯಾಪಾರಸ್ಥನ ಬಳಿ ಹೋಗಿ ಆತನಿಗೆ ವಂದಿಸಿ, 'ನನಗೊಬ್ಬ ಬಡವ ಪರಿಚಯವಿದ್ದಾನೆ ಆತನಿಗೆ ಚೆರ್‍ರಿ ಹಣ್ಣಿನ ತುರ್ತು ಅವಶ್ಯಕತೆ ಇದೆ. ಒಂದು ಮಂಕರಿ ಚೆರ್‍ರಿಯನ್ನು ಪುಕ್ಕಟೆಯಾಗಿ ಕೊಡುವೆಯಾ?' ಎಂದು ಕೇಳಿದ. ಆ ವ್ಯಾಪಾರಸ್ಥ ಜೋರಾಗಿ ನಕ್ಕುಬಿಟ್ಟ, 'ಎಷ್ಟೋ ವಿಧದ ಮೋಸಗಳನ್ನು ನೋಡಿದ್ದೇನೆ. ಆದರೆ ಈ ರೀತಿ ಸುಳ್ಳು ಹೇಳಿ ಚೆರ್‍ರಿಯನ್ನು ಪುಕ್ಕಟೆಯಾಗಿ ಕೇಳುತ್ತಿರುವುದನ್ನು ನೋಡುತ್ತಿರುವುದು ಇದೇ ಮೊದಲ ಬಾರಿ. ಹೋಗು ಹೋಗು' ಎಂದು ಗದರಿಸಿ ಕಳುಹಿಸಿದ.

ರಾಜನೊಂದಿಗಿದ್ದ ಮೊದಲ ಸೂಫಿ, 'ನನ್ನ ಮಾತಿನ ಅರ್ಥವಾಯಿತೆ ಈಗ. ನಮ್ಮ ಮಹಾನ್ ವ್ಯಕ್ತಿ ಆ ದರ್ವೇಶಿ ಒಂದು ಅತ್ಯಮೂಲ್ಯ ಸಲಹೆ ಕೊಟ್ಟರೂ ಅದಕ್ಕೇನೂ ಬೆಲೆಯಿಲ್ಲದ ಆತ ನಗೆಪಾಟಲಿಗೆ ಈಡಾದ ಅಯೋಗ್ಯನಾಗಿದ್ದಾನೆ' ಎಂದ. ರಾಜ ಒಪ್ಪಿಕೊಂಡು, 'ಆಯಿತು. ಅಯೋಗ್ಯ ವ್ಯಕ್ತಿ ಅತ್ಯಮೂಲ್ಯವಾದವ ಎಂಬುದನ್ನು ನಿರೂಪಿಸು ಎಂದ.

ಆ ಇಬ್ಬರು ದರ್ವೇಶಿಗಳು ತಮ್ಮನ್ನು ಹಿಂಬಾಲಿಸುವಂತೆ ರಾಜನಿಗೆ ತಿಳಿಸಿ ಮುಂದೆ ಹೊರಟರು. ಕಾಬೂಲ್ ನದಿಯನ್ನು ದಾಟುತ್ತಿದ್ದಾಗ ಆ ಇಬ್ಬರು ತಕ್ಷಣ ರಾಜನನ್ನು ಹಿಡಿದು ನದಿಗೆ ಎಸೆದುಬಿಟ್ಟರು. ರಾಜನು ಹೆದರಿಕೆಯಿಂದ ಕೂಗಲಾರಂಭಿಸಿದ, ಏಕೆಂದರೆ ಆತನಿಗೆ ಈಜು ಬರುತ್ತಿರಲಿಲ್ಲ. ಅಲ್ಲಿದ್ದ ಹಲವಾರು ಜನ ತಮಗೆ ಈಜು ಬರುತ್ತಿದ್ದರೂ ಸುಮ್ಮನೆ ನಿಂತು ನೋಡುತ್ತಿದ್ದರು. ಇನ್ನೇನು ರಾಜ ಮುಳುಗುತ್ತಾನೆ ಎನ್ನುವಷ್ಟರಲ್ಲಿ ಅಲ್ಲೇ ಇದ್ದ ಕಾಕಾ ದಿವಾನ ತಕ್ಷಣ ನೀರಿಗೆ ಹಾರಿ ರಾಜನನ್ನು ಎಳೆದು ತಂದು ಆತನ ಪ್ರಾಣ ಉಳಿಸಿದ. ಕಾಕಾ ದಿವಾನ ಒಬ್ಬ ಬೀದಿ ಬೀದಿ ಅಲೆಯುವ ಹುಚ್ಚನಾಗಿದ್ದ. ಗಾಬರಿ, ಹೆದರಿಕೆಯಿಂದಿದ್ದ ರಾಜ ಸ್ವಲ್ಪ ಹೊತ್ತಿನ ನಂತರ ಚೇತರಿಸಿಕೊಂಡ. ಆ ಇಬ್ಬರು ದರ್ವೇಶಿಗಳೂ, 'ಈಗ ಈ ಒಬ್ಬ ಅಯೋಗ್ಯ ಅತ್ಯಮೂಲ್ಯ ವ್ಯಕ್ತಿ ಅಲ್ಲವೆ?' ಎಂದರು ಒಕ್ಕರಲಿನಿಂದ.

ಅದಾದ ನಂತರ ರಾಜ ಸೂಕ್ತ ಜನರಿಗೆ ಅವರಿಗೆ ಅವಶ್ಯಕತೆ ಇದೆ ಅನ್ನಿಸಿದ್ದನ್ನು ಮಾತ್ರ– ಅದು ಜ್ಞಾನವಾಗಿರಬಹುದು ಅಥವಾ ಆಹಾರವಾಗಿರಬಹುದು, ಕೊಡುತ್ತಾ ತನ್ನ ಹಿಂದಿನ ಸಾಂಪ್ರದಾಯಕ ರಾಜ್ಯಾಡಳಿತಕ್ಕೆ ಹಿಂದಿರುಗಿದ.

ಮೂರು ಉಪದೇಶಗಳು

ಒಬ್ಬ ಬೇಟೆಗಾರ ಒಮ್ಮೆ ಒಂದು ಸಣ್ಣ ಪಕ್ಷಿಯನ್ನು ಹಿಡಿದ. ಆ ಪಕ್ಷಿ, 'ನಾನು ಬಹಳ ಪುಟ್ಟ ಪಕ್ಷಿ. ನನ್ನಿಂದ ನಿನಗೆ ಉಪಯೋಗವೇನೂ ಇಲ್ಲ. ನಿನ್ನ ಹೊಟ್ಟೆಗೆ ನಾನು ಯಾವ ಮೂಲೆಗೂ ಆಗುವುದಿಲ್ಲ. ನನ್ನನ್ನು ಬಿಟ್ಟುಬಿಡು. ಅದಕ್ಕೆ ಉಪಕಾರವಾಗಿ ನಿನಗೆ

ಮೂರು ಅತ್ಯಮೂಲ್ಯ ಉಪದೇಶ ನೀಡುತ್ತೇನೆ' ಎಂದು ಆತನಿಗೆ ಹೇಳಿತು. ಮೊದಲನೆಯ ಉಪದೇಶ ಆತನ ಮುಷ್ಠಿಯಲ್ಲಿರುವಾಗ, ಎರಡನೆಯದು ಹಾರಿ ಮರದ ರೆಂಬೆಯ ಮೇಲೆ ಕೂತನಂತರ ಹಾಗೂ ಮೂರನೆಯದನ್ನು ಪಕ್ಕದ ಬೆಟ್ಟದ ತುದಿಯಲ್ಲಿ ಕೂತನಂತರ ಹೇಳುತ್ತೇನೆ ಎಂದೂ ಹೇಳಿತು ಆ ಪಕ್ಷಿ.

'ಈ ಪುಟ್ಟ ಪಕ್ಷಿಯಿಂದ ನನಗೇನು ಉಪಯೋಗವಿಲ್ಲ, ನೋಡೋಣ ಏನು ಉಪದೇಶ ನೀಡುತ್ತದೆಯೋ' ಎಂದು ಆಲೋಚಿಸಿ 'ಆಯ್ತು ಬಿಟ್ಟು ಬಿಡುತ್ತೇನೆ, ಹೇಳು ಎಂದ.

'ನೀನು ಯಾವುದನ್ನಾದರೂ ಕಳೆದುಕೊಂಡಲ್ಲಿ, ಅದು ನಿನ್ನ ಪ್ರಾಣದಷ್ಟೇ ಬೆಲೆಬಾಳುವಂತಹುದಾದರೂ ಸರಿ, ನೀನು ಪಶ್ಚಾತ್ತಾಪ ಪಡಬೇಡ' ಎಂದು ಮೊದಲನೆಯ ಉಪದೇಶ ನೀಡಿತು.

ಬೇಟೆಗಾರ ತನ್ನ ಮುಷ್ಠಿಯಿಂದ ಪಕ್ಷಿಯನ್ನು ಬಿಡುಗಡೆ ಮಾಡಿದ. ಪಕ್ಷಿ ಹಾರಿ ಮರದ ರೆಂಬೆಯ ಮೇಲೆ ಕುಳಿತುಕೊಂಡಿತು.

'ನಿನ್ನ ಜ್ಞಾನೇಂದ್ರಿಯಗಳಿಗೆ ನಿಲುಕದ ಯಾವುದನ್ನೂ ನೀನು ಆಧಾರವಿಲ್ಲದೆ ನಂಬಬೇಡ' ಎಂದು ಎರಡನೆಯ ಉಪದೇಶ ನೀಡಿತು. ನಂತರ ಪಕ್ಷಿ ಹಾರಿ ಬೆಟ್ಟದ ತುದಿಯಲ್ಲಿ ಕುಳಿತುಕೊಂಡಿತು. ಅಲ್ಲಿಂದಲೇ ಆ ಪಕ್ಷಿ, 'ಎಂಥ ನತದೃಷ್ಟ ಬೇಟೆಗಾರನಯ್ಯಾ ನೀನು! ನನ್ನ ಹೊಟ್ಟೆಯಲ್ಲಿ ಎರಡು ದೊಡ್ಡ ವಜ್ರಗಳಿವೆ. ನೀನು ನನ್ನನ್ನು ಕೊಂದಿದ್ದರೆ ಅವೆರಡೂ ನಿನಗೆ ಸಿಗುತ್ತಿದ್ದವಲ್ಲ!' ಎಂದು ಹೇಳಿತು.

ಬೇಟೆಗಾರನಿಗೆ 'ಅಯ್ಯೋ, ಈ ಪಕ್ಷಿಯ ಮರಳು ಮಾತುಕೇಳಿ ಅದನ್ನು ಬಿಟ್ಟುಬಿಟ್ಟೆನಲ್ಲಾ! ಥೆ, ಎಂತಹ ಅವಕಾಶ ಕಳೆದುಕೊಂಡೆ' ಎಂದು ಮರುಗಿದ. ಆದರೂ 'ಆಯಿತು, ಅದೇನೋ ನಿನ್ನ ಮೂರನೆಯ ಉಪದೇಶ ಹೇಳು' ಎಂದ.

ಅದಕ್ಕೆ ಆ ಪಕ್ಷಿ ಹೇಳಿತು, 'ಎಂಥ ಮೂರ್ಖ ನೀನು! ನನ್ನ ಮೊದಲೆರಡು ಉಪದೇಶಗಳೇ ನಿನ್ನ ಅರಿವಿಗೆ ಬಂದಿಲ್ಲ, ಆದರೂ ಮೂರನೆಯದನ್ನು ಕೇಳುತ್ತಿದ್ದೀಯ! ನೀನು ಕಳೆದುಕೊಂಡಿದ್ದರ ಬಗ್ಗೆ ಪಶ್ಚಾತ್ತಾಪ ಪಡಬೇಡ ಹಾಗೂ ಜ್ಞಾನೇಂದ್ರಿಯಗಳಿಗೆ ನಿಲುಕದುದನ್ನು ನಂಬಬೇಡ ಎಂದು ಹೇಳಿದೆ. ಈಗ ನೀನು ಅವೆರಡನ್ನೂ ಮಾಡುತಿದ್ದೀಯೆ; ಅಸಂಬದ್ಧವನ್ನು ನಂಬುತ್ತಿದ್ದೀಯೆ ಹಾಗೂ ಅದನ್ನು ಕಳೆದುಕೊಂಡೆ ಎಂದು ಪಶ್ಚಾತ್ತಾಪ ಬೇರೆ ಪಡುತ್ತಿದ್ದೀಯೆ! ನನ್ನೊಳಗೆ ಎರಡು ದೊಡ್ಡ ವಜ್ರಗಳಿರಲು ಸಾಧ್ಯವೆ? ನನ್ನ ದೇಹ ಅಷ್ಟು ದೊಡ್ಡದಾಗಿದೆಯೆ? ನೀನೊಬ್ಬ ಮೂರ್ಖ. ಮನುಷ್ಯ ತಾನಿರಬೇಕಾದ ಮಿತಿಯೊಳಗೇ ನೀನಿರಬೇಕು. ಅದರಿಂದ ಹೊರಬರಲು ನಿನ್ನಿಂದ ಸಾಧ್ಯವಿಲ್ಲ' ಎಂದು ಹೇಳಿ ಆ ಪುಟ್ಟ ಪಕ್ಷಿ ಹಾರಿಹೋಯಿತು.

ಬೆಟ್ಟದ ಹಾದಿ

ಒಬ್ಬ ಬುದ್ಧಿವಂತ ಮೇಧಾವಿ ವ್ಯಕ್ತಿ ಯಾವುದೋ ಊರಿಗೆ ಹೋಗಬೇಕಿತ್ತು. ತಾನು ತಲುಪಬೇಕಿದ್ದ ಹಿಂದಿನ ಊರಿನಲ್ಲಿ ವಿಶ್ರಾಂತಿಗಾಗಿ ಛತ್ರವೊಂದರಲ್ಲಿ ಇಳಿದುಕೊಂಡಿದ್ದ. ವಿವಿಧ ದೃಷ್ಟಿಕೋನಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡೋಣವೆಂದು ನಿರ್ಧರಿಸಿ ಅಲ್ಲಿನ ಜನರನ್ನು ವಿಚಾರಿಸಿದ. ಅವರೆಲ್ಲಾ 'ಕಜಾಬ್ ಮಹಾಸುಳ್ಳುಗಾರ ಹಾಗೂ ರಸ್ತಗು ಮಹಾನ್ ಪ್ರಾಮಾಣಿಕ ವ್ಯಕ್ತಿ' ಎಂದು ಹೇಳಿದರು.

ಈ ಯಾತ್ರಿಕ ಅವರನ್ನು ಅರಸಿ 'ಪಕ್ಕದೂರಿಗೆ ಹೋಗಲು ಉತ್ತಮವಾದ ಹಾದಿ ಯಾವುದು' ಎಂದು ಕೇಳಿದ.

ಪ್ರಾಮಾಣಿಕ ರಸ್ತಗು ಹೇಳಿದ, 'ಬೆಟ್ಟದ ಹಾದಿ'.

ಸುಳ್ಳುಗಾರ ಕಜಾಬ್ ಹೇಳಿದ, 'ಬೆಟ್ಟದ ಹಾದಿ'.

ಇಬ್ಬರೂ ಬೇರೆ ಬೇರೆ ಹೇಳಬಹುದೆಂದು ತಿಳಿದಿದ್ದ ಈ ಪ್ರಯಾಣಿಕ ಅವರ ಉತ್ತರದಿಂದ ಚಕಿತಗೊಂಡ, ಆದುದರಿಂದ ಊರಿನ ಇತರರನ್ನೂ ಇದೇ ಪ್ರಶ್ನೆ ಕೇಳಿದ. ಕೆಲವರೆಂದರು, 'ನದಿಯನ್ನು ದಾಟಬೇಕು', ಇನ್ನು ಕೆಲವರೆಂದರು, 'ಹೊಲಗದ್ದೆಗಳ ಮೂಲಕ ನಡೆಯಬೇಕು', ಉಳಿದವರು, 'ಬೆಟ್ಟದ ಹಾದಿಯೇ ಉತ್ತಮವಾದ ಹಾದಿ' ಎಂದರು.

ಕೊನೆಗೆ ಈತ ಬೆಟ್ಟದ ಹಾದಿಯಲ್ಲಿಯೇ ಹೋದ. ಆದರೆ ಪ್ರಾಮಾಣಿಕನ ಹಾಗೂ ಸುಳ್ಳುಗಾರನ ಉತ್ತರಗಳು ಒಂದೆ ಆಗಿದ್ದುದು ಮನದಲ್ಲೇ ಕಾಡುತ್ತಿತ್ತು. ಪಕ್ಕದೊರಿಗೆ ತಲುಪಿದ ನಂತರ ತನ್ನ ಈ ಅನುಭವಗಳನ್ನೆಲ್ಲಾ ಅಲ್ಲಿನ ಜನರಿಗೆ ತಿಳಿಸಿ, 'ಆ ಊರಿನ ಪ್ರಾಮಾಣಿಕ ಹಾಗೂ ಸುಳ್ಳುಗಾರ ಯಾರೆಂಬುದನ್ನು ತಾನು ಸರಿಯಾದ ವ್ಯಕ್ತಿಗಳನ್ನು ಕೇಳದೆ ಮೂಲಭೂತ ತಾರ್ಕಿಕ ತಪ್ಪು ಮಾಡಿದೆ ಹಾಗೂ ತಾನು ಬೆಟ್ಟದ ಹಾದಿಯಲ್ಲಿಯೇ ಸುಲಭವಾಗಿ ತಲುಪಿದೆನೆಂದು ತಿಳಿಸಿದ.

ಇದನ್ನು ಕೇಳಿಸಿಕೊಂಡು ಅಲ್ಲಿದ್ದ ಒಬ್ಬಾತ, 'ತರ್ಕಬದ್ಧವಾಗಿ ಆಲೋಚಿಸಬಲ್ಲವರೇ 'ಕುರುಡ'ರಾಗಿರುತ್ತಾರೆ ಹಾಗೂ ಅವರೇ ಇತರರ ಸಹಾಯ ಬಯಸುತ್ತಾರೆ. ಆದರೆ ಇಲ್ಲಿನ ವಿಷಯ ಬೇರೆಯದೇ ಆಗಿದೆ. ವಾಸ್ತವಾಂಶ ಏನೆಂದರೆ, ಆ ಊರಿನಿಂದ ಈ ಊರಿಗೆ ತಲುಪಲು ನದಿಯನ್ನು ದಾಟುವುದೇ ಸುಲಭದ ಹಾದಿ. ಆದುದರಿಂದ ಸುಳ್ಳುಗಾರ ನಿಮಗೆ ಸುಳ್ಳು ಹೇಳಿದ್ದಾನೆ. ಆದರೆ ಪ್ರಮಾಣಿಕ ವ್ಯಕ್ತಿ ಸತ್ಯ ಹೇಳಿದ್ದಾನೆ. ಏಕೆಂದರೆ ನಿಮ್ಮ ಬಳಿ ಕತ್ತೆಯೊಂದು ಇದ್ದುದನ್ನು ಗಮನಿಸಿ ನಿಮಗೆ ಬೆಟ್ಟದ ಹಾದಿ ಉತ್ತಮವೆಂದು ತಿಳಿಸಿದ್ದಾನೆ. ಆದರೆ ಸುಳ್ಳುಗಾರ ನಿಮ್ಮ ಬಳಿ ಏನಿತ್ತು ಏನಿಲ್ಲವೆಂಬುದನ್ನು ಗಮನಿಸಿಲ್ಲ. ನಿಮ್ಮ ಬಳಿ ದೋಣಿಯೊಂದು ಇಲ್ಲವೆಂಬುದನ್ನು ಗಮನಿಸಿದ್ದರೆ ಆತ ನದಿಯನ್ನು ದಾಟುವುದೇ ಉತ್ತಮ ಮಾರ್ಗ ಎನ್ನುತ್ತಿದ್ದ' ಎಂದ.

ಇಸಾನ ಮಂತ್ರ

ಜಲಾಲುದ್ದೀನ್ ರೂಮಿ ತಮ್ಮ ಶಿಷ್ಯರಿಗೆ ಈ ಕತೆ ಹೇಳುತ್ತಿದ್ದರಂತೆ:

ಒಮ್ಮೆ ಮರಿಯಂ(ಮೇರಿ)ನ ಮಗ ಇಸಾ (ಯೇಸು) ಜೆರೂಸಲೆಂನ ಮರಳುಗಾಡಿನಲ್ಲಿ ಹಲವಾರು ಜನರೊಂದಿಗೆ ಹೋಗುತ್ತಿದ್ದರಂತೆ. ಆ ಜನರಲ್ಲಿ ದುರಾಶೆ, ಲೋಭಗಳು ಇನ್ನೂ ಮನೆಮಾಡಿಕೊಂಡಿದ್ದವು. ಸತ್ತವರನ್ನು ಬದುಕಿಸುವ ಮಂತ್ರ ಹೇಳಿಕೊಡುವಂತೆ ಅವರೆಲ್ಲಾ ಇಸಾನನ್ನು ಒತ್ತಾಯಿಸಿದರು.

'ಬೇಡ. ನೀವದನ್ನು ದುರುಪಯೋಗಪಡಿಸಿಕೊಳ್ಳುತ್ತೀರಿ' ಎಂದ ಇಸಾ.

'ಇಲ್ಲ, ಅದರ ಸದುಪಯೋಗಕ್ಕಾಗಿ ನಮ್ಮ ಮನಸ್ಸುಗಳು ತಯಾರಾಗಿವೆ. ಅಲ್ಲದೆ ನೀವದನ್ನು ಹೇಳಿಕೊಟ್ಟಲ್ಲಿ ನಿಮ್ಮ ಮೇಲಿನ ನಮ್ಮ ಶ್ರದ್ಧೆ ಇನ್ನಷ್ಟು ಹೆಚ್ಚುತ್ತದೆ' ಎಂದರು ಆ ಜನರು.

'ನೀವು ಏನು ಕೇಳುತ್ತಿದ್ದೀರೆಂಬುದು ನಿಮಗೇ ತಿಳಿದಿಲ್ಲ' ಎಂದು ಹೇಳಿದ ಇಸಾ ಅವರಿಗೆ ಸತ್ತವರಿಗೆ ಜೀವ ತುಂಬುವ ಮಂತ್ರ ಹೇಳಿಕೊಟ್ಟ.

ಮಂತ್ರ ಕಲಿತ ಜನ ಮರಳುಗಾಡಿನಲ್ಲಿ ಹೋಗುತ್ತಿದ್ದಾಗ ಅವರಿಗೆ ಯಾವುದೋ ಪ್ರಾಣಿಯ ಮೂಳೆಗಳು ಚೆಲ್ಲಾಪಿಲ್ಲಿಯಾಗಿದ್ದುದು ಕಂಡುಬಂತು. ಅವರಲ್ಲಿ ಒಬ್ಬಾತ, 'ಇವು ಯಾವುದೋ ಪ್ರಾಣಿಯ ಮೂಳೆಗಳು, ಇದಕ್ಕೆ ಜೀವ ತುಂಬಿ ನಾವು ಕಲಿತ ಮಂತ್ರವನ್ನು ಪರೀಕ್ಷಿಸೋಣ' ಎನ್ನಲು ಎಲ್ಲರೂ ಉತ್ಸಾಹದಿಂದ ಮೂಳೆಗಳನ್ನು ಗುಡ್ಡೆ ಹಾಕಿ ಮಂತ್ರ ಪಠಿಸಿದರು. ಕೂಡಲೇ ಆ ಮೂಳೆಗಳಿಗೆ ಜೀವ ತುಂಬಿಕೊಂಡು ಅದು ಭಯಂಕರ ಕಾಡುಮೃಗವಾಯಿತು. ಅಲ್ಲಿದ್ದ ಜನರ ಮೇಲೆ ಹಾರಿ ಅವರ ಪ್ರಾಣ ತೆಗೆಯಿತು.

ವಿವೇಕ ಉಳ್ಳವರು ಸುಲಭವಾಗಿ ಕಲಿಯುತ್ತಾರೆ. ಇಲ್ಲದವರು ಇಂತಹ ನೋವಿನ ಘಟನೆಗಳಿಂದ ಕಲಿಯಬೇಕಾಗುತ್ತದೆ.

ಮಾಲಿಕ್ ದಿನಾರ್ ಸೂಫಿಯಾದದ್ದು

ತತ್ವಜ್ಞಾನದ ಎಲ್ಲಾ ಪುಸ್ತಕಗಳನ್ನು ಜಾಲಾಡಿದ ಮಾಲಿಕ್ ದಿನಾರ್‌ನಿಗೆ ಕೊನೆಗೆ ದಿವ್ಯ ಜ್ಞಾನದ ಅನ್ವೇಷಣೆಯಲ್ಲಿ ಹೊರಡಬೇಕೆನ್ನಿಸಿತು. 'ನಾನು ಹೊರಡುತ್ತೇನೆ..... ನನ್ನೊಳಗೇ ಇರುವನೆಂದು ಹೇಳಲಾಗುವ ಸುಪ್ತಗುರುವಿನ ಶಿಷ್ಯನಾಗುವ ಹಾದಿ ಹುಡುಕುತ್ತೇನೆ' ಎಂದುಕೊಂಡು ಹೊರಟ.

ಧೂಳಿನ ರಸ್ತೆಯಲ್ಲಿ ದರ್ವೇಶಿಯೊಬ್ಬ ಹೋಗುತ್ತಿದ್ದ. ಮಾಲಿಕ್ ಆತನನ್ನೇ ಹಿಂಬಾಲಿಸಿದ ಮೌನದಿಂದ. ಬಹಳಷ್ಟು ಹೊತ್ತು ಯಾರೂ ಮಾತನಾಡಲಿಲ್ಲ. ಕೊನೆಗೆ ದರ್ವೇಶಿ ಕೇಳಿದ, 'ಯಾರು ನೀನು? ಎಲ್ಲಿಗೆ ಹೋಗುತ್ತಿದ್ದೀಯ?'

ನನ್ನ ಹೆಸರು ಮಾಲಿಕ್ ದಿನಾರ್. ನಾನು ನನ್ನ ಸುಪ್ತ ಗುರುವಿನ ಅನ್ವೇಷಣೆಯಲ್ಲಿ ಹೊರಟಿದ್ದೇನೆ'.

'ನನ್ನ ಹೆಸರು ಅಲ್-ಮಾಲಿಕ್ ಅಲ್ ಫತೀ. ನಡೆ ನಾನು ನಿನ್ನೊಂದಿಗೆ ನಡೆಯುತ್ತೇನೆ'.

'ನನ್ನ ಸುಪ್ತ ಗುರುವಿನ ಅನ್ವೇಷಣೆಯಲ್ಲಿ ನನಗೆ ಸಹಾಯ ಮಾಡುವೆಯಾ?'

'ನಾನು ನಿನಗೆ ಸಹಾಯ ಮಾಡುವುದೆ ಅಥವಾ ನೀನು ನನಗೆ ಸಹಾಯ ಮಾಡುವುದೆ?' ಅಲ್-ಮಾಲಿಕ್ ಅಲ್ ಫತೀ ಎಲ್ಲ ದರ್ವೇಶಿಗಳ ಹಾಗೆ ಸಿಡುಕುತ್ತಾ ಹೇಳಿ, 'ಸುಪ್ತಗುರು ಎಂದರೆ ಆಯಾ ಮನುಷ್ಯನ ಆತ್ಮದಲ್ಲೇ ಇರುತ್ತಾನೆ ಎನ್ನುತ್ತಾರೆ. ಆ ಗುರುವನ್ನು ಹೇಗೆ ಹುಡುಕಿಕೊಳ್ಳುತ್ತಾರೆನ್ನುವುದು ಆಯಾ ಮನುಷ್ಯ ತನ್ನ ಬದುಕಿನ

ಅನುಭವಗಳನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾನೆ ಎನ್ನುವುದರ ಮೇಲೆ ಅವಲಂಬಿಸಿದೆ. ಈ ಉಪಯೋಗದಲ್ಲಿ ಬೇಕಾದರೆ ಸಂಗಾತಿಯೊಬ್ಬ ಭಾಗಶಃ ಸಹಕರಿಸಬಲ್ಲ ಅಷ್ಟೆ' ಎಂದು ಹೇಳಿದ.

ಹಾಗೆ ನಡೆಯುತ್ತಾ ಹೊರಟರು. ಹಾದಿಯ ಬದಿಯಲ್ಲಿ ಮರವೊಂದು ಕಂಡಿತು. ಅದು ತೂಗಾಡುತ್ತಾ ಶಬ್ದ ಮಾಡುತ್ತಿತ್ತು. ದರ್ವೇಶಿ ಮರದ ಬಳಿ ನಿಂತು, 'ಈ ಮರ ಏನೋ ಹೇಳುತ್ತಿದೆ' ಎಂದು ಹೇಳಿ ಅದರ ಶಬ್ದ ಆಲಿಸುವವನಂತೆ ನಿಂತು ಸ್ವಲ್ಪ ಹೊತ್ತಿನ ನಂತರ, 'ನನ್ನಲ್ಲಿರುವುದೇನೋ ನನ್ನನ್ನು ನೋಯಿಸುತ್ತಿದೆ. ಅದನ್ನು ತೆಗೆದು ನನ್ನ ನೋವು ಶಮನಮಾಡಿ ಎನ್ನುತ್ತಿದೆ ಈ ಮರ' ಎಂದ.

ಅದಕ್ಕೆ ಮಾಲಿಕ್ ದಿನಾರ್ ನಗುತ್ತಾ, 'ಮರ ಮಾತನಾಡಲು ಸಾಧ್ಯವೆ? ನಾವು ಇಲ್ಲಿ ನಿಂತು ಸಮಯ ಹಾಳು ಮಾಡುವುದು ಬೇಡ. ಹೋಗೋಣ ಬನ್ನಿ' ಎಂದು ಹೇಳಿದ. ಇಬ್ಬರೂ ಅಲ್ಲಿಂದ ಹೊರಟರು.

ಹಲವಾರು ಮೈಲಿ ನಡೆದ ನಂತರ ದರ್ವೇಶಿ, 'ಆ ಮರದ ಬಳಿ ನನಗೆ ಜೇನಿನ ವಾಸನೆ ಬಂದ ಹಾಗಿತ್ತು. ಆ ಮರದ ಪೊಟರೆಯಲ್ಲಿ ಕಾಡುಜೇನು ಗೂಡು ಕಟ್ಟಿರಬಹುದೇನೋ' ಎಂದ.

ಹೌದೆ? ಮರದ ಬಳಿ ವಾಪಸ್ಸು ಹೋಗೋಣ ಬನ್ನಿ, ಜೇನು ಸಂಗ್ರಹಿಸಿ ನಾವು ತಿನ್ನಬಹುದು ಹಾಗೂ ಹೆಚ್ಚಿನದನ್ನು ಮಾರಾಟ ಮಾಡಿ ಹಣವನ್ನು ಗಳಿಸಿಕೊಳ್ಳಬಹುದು. ಹೋಗೋಣ ನಡೆಯಿರಿ' ಎಂದ ಮಾಲಿಕ್ ದಿನಾರ್ ಆತುರದಿಂದ.

'ನಿನ್ನಿಷ್ಟದಂತೆಯೇ ಆಗಲಿ' ಎಂದ ದರ್ವೇಶಿ.

ಇಬ್ಬರೂ ಮರದ ಬಳಿ ಬರುವಷ್ಟರಲ್ಲಿ ಯಾರೋ ಪ್ರಯಾಣಿಕರು ಜೇನೆಲ್ಲಾ ಸಂಗ್ರಹಿಸಿ, ಅದನ್ನು ತಿನ್ನುತ್ತಾ ಚಪ್ಪರಿಸುತ್ತಿದ್ದರು.

'ವಾಹ್! ಎಂಥ ಅದೃಷ್ಟ ನಮ್ಮದು, ಇಡೀ ಊರಿಗಾಗುವಷ್ಟು ಜೇನುತುಪ್ಪವಿದೆ. ಬಡ ಪ್ರಯಾಣಿಕರಾದ ನಾವು ಇದನ್ನು ಮಾರಿ ಸಿರಿವಂತರಾಗಬಹುದು' ಎಂದುಕೊಳ್ಳುತ್ತಿದ್ದರು.

ದರ್ವೇಶಿ ಮತ್ತು ಮಾಲಿಕ್ ದಿನಾರ್‌ಗೆ ಏನೂ ಸಿಗದೆ ಬರಿಗೈಲಿ ಹಿಂದಿರುಗಿದರು. ಹಾಗೆ ನಡೆಯುತ್ತಿದ್ದಂತೆ ಬೆಟ್ಟವೊಂದು ಎದುರಾಯಿತು. ಅದನ್ನು ಹತ್ತುತ್ತಿದ್ದಾಗ ಏನೋ ಗುಂಯ್ಗುಡುವ ಸದ್ದು ಭೂಮಿಯ ಒಳಗಿನಿಂದ ಕೇಳುತ್ತಿತ್ತು. ದರ್ವೇಶಿ ಭೂಮಿಗೆ ಕಿವಿಕೊಟ್ಟು ಕೇಳಿದ. ನಂತರ, 'ಕೆಳಗೆ ಭೂಮಿಯೊಳಗೆ ಗೂಡುಕಟ್ಟುತ್ತಿರುವ ನೂರಾರು ಇರುವೆಗಳಿವೆ. ಅವು ಸಹಾಯಕ್ಕಾಗಿ ಕೂಗುತ್ತಿವೆ- 'ನಾವು ನಮ್ಮ ಗೂಡಿಗಾಗಿ ಅಗೆಯುತ್ತಿದ್ದೇವೆ. ಆದರೆ ವಿಚಿತ್ರದ ಕಲ್ಲುಗಳು ನಮಗೆ ತಡೆಯಾಗಿದೆ. ಅವನ್ನು ಅಗೆಯಲು ಸಹಾಯಮಾಡಿ' ಎಂದು ಮೊರೆಯಿಡುತ್ತಿವೆ. ಸ್ವಲ್ಪ ನಿಂತು ಆ ಕಲ್ಲುಗಳನ್ನು ಅಗೆದು ಇರುವೆಗಳಿಗೆ ಸಹಾಯ ಮಾಡೋಣವೆ?' ಎಂದು ದರ್ವೇಶಿ ದಿನಾರ್‌ನನ್ನು ಕೇಳಿದ.

'ಇರುವೆಗಳು ಹಾಗೂ ಕಲ್ಲುಗಳ ಗೊಡವೆಯೇಕೆ ನಮಗೆ? ನಾನು ಸುಪ್ತಗುರುವಿನ ಅನ್ವೇಷಣೆಯಲ್ಲಿದ್ದೇನೆ. ಇವಕ್ಕೆಲ್ಲಾ ಸಮಯವೆಲ್ಲಿದೆ? ಹೋಗೋಣ ನಡೆ' ಎಂದ ದಿನಾರ್.

'ಆಯಿತು ನಿನ್ನಿಷ್ಟದಂತೆ ಆಗಲಿ' ಎಂದ ದರ್ವೇಶಿ, 'ಆದರೆ ಹಿರಿಯರು ಹೇಳುತ್ತಾರೆ, ಈ ಜಗತ್ತಿನಲ್ಲಿ ಎಲ್ಲವೂ ಒಂದಲ್ಲೊಂದು ರೀತಿ ಪರಸ್ಪರ ಸಂಬಂಧ ಹೊಂದಿವೆ ಎಂದು. ನನಗನ್ನಿಸುತ್ತಿದೆ ಈ ಇರುವೆಗಳಿಗೂ ನಮಗೂ ಸಂಬಂಧವಿರಬಹುದು' ಎಂದೂ ಹೇಳಿದ.

ದಿನಾರ್ ಆತನ ಮಾತುಗಳನ್ನು ಕೇಳಿಸಿಕೊಳ್ಳಲೇ ಇಲ್ಲ. ಅಲ್ಲಿಂದ ಹೊರಡುವ ಆತುರದಲ್ಲಿದ್ದ, ಇಬ್ಬರೂ ಅಲ್ಲಿಂದ ಹೊರಟರು. ರಾತ್ರಿ ಒಂದು ಕಡೆ ತಂಗಿದ್ದಾಗ, ದಿನಾರ್ ತನ್ನ ಬಳಿಯಿದ್ದ ಚಾಕು ಕಳೆದುಹೋಗಿರುವುದನ್ನು ಗಮನಿಸಿದ. 'ನಾವು ಆ ಇರುವೆ ಗೂಡಿನ ಬಳಿಯಿದ್ದಾಗ ನನ್ನ ಚಾಕು ಬಿದ್ದುಹೋಗಿರಬಹುದು' ಎಂದ. ಬೆಳಿಗ್ಗೆ ಇಬ್ಬರೂ ಇರುವೆಯ ಗೂಡಿನ ಬಳಿ ವಾಪಸ್ಸು ಹೊರಟರು.

ಇರುವೆಯ ಗೂಡಿನ ಬಳಿ ಜನರ ಗುಂಪು ಸೇರಿತ್ತು. ಏನೆಂದು ನೋಡಿದಾಗ ಅವರು ಭೂಮಿಯ ಒಳಗೆ ಹೂತಿಟ್ಟಿದ್ದ ಚಿನ್ನದ ನಾಣ್ಯಗಳನ್ನು ತೆಗೆಯುತ್ತಿದ್ದರು. ಇವರನ್ನು ಕಂಡು, 'ನಾವು ಇಲ್ಲಿ ಹಾದು ಹೋಗುತ್ತಿದ್ದಾಗ ಮುದುಕ ದರ್ವೇಶಿಯೊಬ್ಬ ನಮ್ಮನ್ನು ಕರೆದು ಇಲ್ಲಿ ಅಗೆಯಿರಿ, ಕೆಲವರಿಗೆ ಕಲ್ಲು ಎನ್ನಿಸಿದ್ದು ಮತ್ತೆ ಕೆಲವರಿಗೆ ಚಿನ್ನವಾಗಿರುವಂಥದು ಸಿಗುತ್ತದೆ ಎಂದು ಹೇಳಿದ' ಎಂದರು.

ದಿನಾರ್ ತನ್ನ ದುರಾದೃಷ್ಟವನ್ನು ಶಪಿಸಿಕೊಂಡ, 'ನಾವು ನಿನ್ನೆ ಇಲ್ಲಿಯೇ ಇರುವೆಗಳ ಮೊರೆ ಕೇಳಿ ಅಗೆದಿದ್ದರೆ ಇಷ್ಟು ಹೊತ್ತಿಗೆ ಸಿರಿವಂತರಾಗುತ್ತಿದ್ದೆವಲ್ಲಾ ದರ್ವೇಶಿ! ಎಂಥ ಅವಕಾಶ ಹೋಯಿತು!' ಎಂದ ಕೈ ಕೈ ಹಿಸುಕಿಕೊಳ್ಳುತ್ತ. ಆ ಜನರ ಗುಂಪಿನಲ್ಲಿನ ಒಬ್ಬಾತ ದರ್ವೇಶಿಯ ಕಡೆ ಕೈ ತೋರಿಸುತ್ತ, 'ನಿನ್ನೆ ನಮಗೆ ಹೇಳಿದ ದರ್ವೇಶಿ ನಿನ್ನ ಹಾಗೆಯೇ ಇದ್ದ' ಎಂದ.

'ಎಲ್ಲಾ ದರ್ವೇಶಿಗಳೂ ಒಂದೇ ತರಹ ಇರುತ್ತಾರೆ ಬಿಡು' ಎಂದ ದರ್ವೇಶಿ ಅಲ್-ಮಾಲಿಕ್. ಇಬ್ಬರೂ ಅಲ್ಲಿಂದ ಹೊರಟರು.

ಕೆಲದಿನಗಳ ಪ್ರಯಾಣದ ನಂತರ ಒಂದು ಸುಂದರ ನದಿ ದಂಡೆಯ ಬಳಿ ಬಂದರು. ನದಿ ದಾಟಲು ನಾವೆಗಾಗಿ ಅಲ್ಲೇ ದಂಡೆಯ ಬಳಿ ಕಾದು ಕೂತಿದ್ದರು. ಅವರ ಎದುರಿಗೆ ನೀರಿನಲ್ಲಿ ಮೀನೊಂದು ಮೇಲೆ ಮೇಲೆ ಹಾರಿ ಇವರ ಕಡೆ ತಿರುಗಿ ಬಾಯಿ ತೆರೆಯುತ್ತಿತ್ತು. ಅದನ್ನು ನೋಡುತ್ತಿದ್ದ ದರ್ವೇಶಿ,

'ಆ ಮೀನು ತಾನೊಂದು ಕಲ್ಲು ನುಂಗಿಬಿಟ್ಟಿದ್ದೇನೆ, ನೋವು ತಡೆಯಾಲಾಗುತ್ತಿಲ್ಲ. ನನಗೆ ಸೊಪ್ಪಿನ ಮೂಲಿಕೆ ತಿನ್ನಿಸಿ ಈ ಕಲ್ಲು ಹೊರಬರುವಂತೆ ಮಾಡಿ ನನ್ನ ನೋವು ಶಮನಮಾಡಿ ಎಂದು ಪ್ರಾರ್ಥನೆ ಮಾಡುತ್ತಿದೆ' ಎಂದ ದರ್ವೇಶಿ. ಅಷ್ಟರಲ್ಲಿ ನಾವೆ ಬಂತು. ದರ್ವೇಶಿ ಅಲ್ಲೇ ನಿಂತು ತಡ ಮಾಡುತ್ತಾನೆಂದು ಎಣಿಸಿ ಮಾಲಿಕ್ ದಿನಾರ್

ಆತನನ್ನು ನಾವೆಗೆ ಎಳೆದೊಯ್ದ. ನದಿಯ ಮತ್ತೊಂದು ದಡ ತಲುಪಿದ ಇಬ್ಬರೂ ಅಲ್ಲೇ ಛತ್ರವೊಂದರಲ್ಲಿ ಆ ರಾತ್ರಿ ಉಳಿದುಕೊಂಡರು.

ಬೆಳಿಗ್ಗೆ ಚಹಾ ಕುಡಿಯುತ್ತಿದ್ದಾಗ ನಾವೆ ನಡೆಸುತ್ತಿದ್ದಾತ ಬಂದು ದರ್ವೇಶಿಯ ಕೈ ಚುಂಬಿಸಿ, 'ನಿನ್ನೆ ನನ್ನ ಅದೃಷ್ಟದ ದಿನ. ನೀವು ನನ್ನ ಅದೃಷ್ಟದ ಪ್ರಯಾಣಿಕರು. ನಿನ್ನೆ ನಾನು ನಾವೆಯನ್ನು ಬಿಟ್ಟು ಮನೆಗೆ ಹಿಂದಿರುಗೋಣವೆಂದು ಬಂದಾಗ ಬಡ ಪ್ರಯಾಣಿಕರಾದ ನೀವಿಬ್ಬರೂ ನಾವೆಗಾಗಿ ಕಾದಿದ್ದಿರಿ. ಬಡವರಿಗೆ ಸಹಾಯ ಮಾಡಿದಾಗ ಸಿಗುವ ಆಶೀರ್ವಾದಕ್ಕಷ್ಟೇ ನಾನು ನಿಮಗಾಗಿ ಮತ್ತೆ ನಾವೆ ನಡೆಸಿದೆ. ನಿಮ್ಮನ್ನು ಈ ದಡದಲ್ಲಿ ಬಿಟ್ಟು ಹಿಂದಿರುಗಿದಾಗ ಆ ದಡದಲ್ಲಿ ಮೀನೊಂದು ಬಿದ್ದು ಯಾವುದೋ ಸೊಪ್ಪನ್ನು ನುಂಗಲು ಪ್ರಯತ್ನಿಸುತ್ತಿತ್ತು. ನಾನು ಆ ಸೊಪ್ಪನ್ನು ಆ ಮೀನಿನ ಬಾಯಿಗೆ ಹಾಕಿದೆ. ಆ ಮೀನು ಯಾವದೋ ಕಲ್ಲನ್ನು ಹೊರಗೆ ಉಗುಳಿ ಮತ್ತೆ ನೀರಿಗೆ ಹಾರಿತು. ಆ ದೊಡ್ಡಕಲ್ಲು ಒಂದು ಅಮೂಲ್ಯ ವಜ್ರವಾಗಿತ್ತು' ಎಂದ.

'ನೀನದಕ್ಕೆ ಅರ್ಹ' ಎಂದ ದರ್ವೇಶಿ, ನಾವಿಕನನ್ನು ಆಶೀರ್ವದಿಸುತ್ತ.

ಇದನ್ನೆಲ್ಲ ನೋಡುತ್ತಿದ್ದ ಮಾಲಿಕ್ ದಿನಾರ್‌ಗೆ ದರ್ವೇಶಿಯ ಮೇಲೆ ಸಿಟ್ಟು ಬಂದು, 'ನೀನೊಬ್ಬ ದೆವ್ವ! ಆ ಮೂರು ಐಶ್ವರ್ಯದ ಬಗ್ಗೆ ಯಾವುದೋ ಮಾಯೆಯಿಂದ ನಿನಗೆ ಮೊದಲೇ ತಿಳಿದಿತ್ತು. ಆದರೂ ನನಗೆ ಹೇಳಲೇ ಇಲ್ಲ. ಇದೇನೇ ನಿನ್ನ ನಿಜವಾದ ಗೆಳೆತನ? ಮೊದಲಿಗೆ ನನ್ನ ದುರದೃಷ್ಟವೆನ್ನಬಹುದು, ಆದರೆ ನೀನಿಲ್ಲದಿದ್ದಲ್ಲಿ ಮರ, ಇರುವೆಗೂಡು ಹಾಗೂ ಮೀನುಗಳಲ್ಲಿ ಅಡಗಿರಬಹುದಾದ ವಸ್ತುಗಳ ಬಗ್ಗೆ ನನಗೆ ತಿಳಿಯುತ್ತಲೇ ಇರಲಿಲ್ಲ' ಎಂದ.

ತನ್ನ ಮಾತು ಮುಗಿಯುವಷ್ಟರಲ್ಲಿ ಆತನ ಆತ್ಮದಲ್ಲಿ ಭಯಂಕರ ಬಿರುಗಾಳಿ ಬೀಸುತ್ತಿರುವ ಅನುಭವವಾಗತೊಡಗಿತು. ಈಗ ನಾನು ಹೇಳಿದುದದರ ವಿರುದ್ಧವೇ ಸತ್ಯವೆಂಬ ಅರಿವು ಮೂಡತೊಡಗಿತು.

ಆಗ ದರ್ವೇಶಿ ಅಲ್-ಮಾಲಿಕ್ ಅಲ್-ಫತಿ ('ಅಜೇಯ ಸಾಮ್ರಾಟ') ಮಾಲಿಕ್ ದಿನಾರ್‌ನ ಭುಜವನ್ನು ಲಘುವಾಗಿ ತಟ್ಟಿ ಮುಗುಳ್ನಕ್ಕು, 'ತಮ್ಮಾ, ಅನುಭವದಿಂದ ಕಲಿಯಬಹುದೆಂಬುದು ಈಗ ನಿನ್ನ ಅರಿವಿಗೆ ಬರುತ್ತಿದೆ, ಆ ಸುಪ್ತ ಗುರುವಿನ ಆದೇಶ ಪಾಲಿಸುವವ ನಾನು' ಎಂದು ಹೇಳಿದ.

ದಿನಾರ್ ತನಗಾದ ಅವರ್ಣನೀಯ ಅನುಭವದಿಂದ ಎಚ್ಚೆತ್ತು ತಲೆಯೆತ್ತಿ ನೋಡಿದಾಗ ತನ್ನ ಗುರು ಯಾರೋ ಪ್ರಯಾಣಿಕರ ಜೊತೆ ಧೂಳಿನ ಹಾದಿಯಲ್ಲಿ ಹೋಗುತ್ತಿದ್ದ. ಆ ಪ್ರಯಾಣಿಕರು ಪ್ರಯಾಣದ ಕಷ್ಟ ತೊಂದರೆಗಳ ಬಗ್ಗೆ ಮಾತನಾಡುತ್ತಿದ್ದರು.

ಇಂದು ಅಪ್ರತಿಮ ದರ್ವೇಶಿಗಳಲ್ಲಿ ಮಾಲಿಕ್ ದಿನಾರ್‌ನ ಹೆಸರೂ ಸಹ ಸೇರಿಕೊಂಡಿದೆ.

ದರ್ವೇಶಿ ಮತ್ತು ರಾಜಕುಮಾರಿ

ರಾಜನ ಮಗಳು ಚಂದ್ರಚಕೋರಿಯ ಹಾಗಿದ್ದಳು. ಅವಳಷ್ಟು ಸುಂದರಿ ಮತ್ತಾರಿರಲಿಲ್ಲ. ಒಬ್ಬ ದರ್ವೇಶಿ ಒಂದು ದಿನ ರೊಟ್ಟಿಯನ್ನು ತಿನ್ನುತ್ತಿರುವಾಗ ಅವಳನ್ನು ಕಂಡ. ಅವಳ ಸೌಂದರ್ಯಕ್ಕೆ ಬೆಕ್ಕಸಬೆರಗಾಗಿ ಬಾಯಿ ಬಿಟ್ಟ. ಆಗ ಆತನ ಕೈಯಿಂದ ರೊಟ್ಟಿ ಜಾರಿ ಕೆಳಗೆ ಬಿದ್ದಿತು. ಅದನ್ನು ನೋಡಿದ ಅವಳು ಆತನನ್ನು ಕಂಡು ಮುಗುಳ್ನಕ್ಕಳು. ಅವಳ ಮುಗುಳ್ನಗೆ ಅವನನ್ನು ಉನ್ಮಾದದಿಂದ ಹುಚ್ಚನನ್ನಾಗಿ ಮಾಡಿತು. ಆ ಉನ್ಮಾದದಲ್ಲಿ ಏಳು ವರ್ಷ ಹುಚ್ಚನಾಗಿ ಬೀದಿಬೀದಿ ಅಲೆದ; ಬೀದಿ ನಾಯಿಗಳ ಒಡನಾಟ ಮಾಡಿದ; ರಾಜಕುಮಾರಿಯ ಹಿಂದೆ ಹಿಂದೆ ಅಲೆಯುತ್ತಿದ್ದ.

ಅವನ ನಡತೆ ರಾಜಕುಮಾರಿಗೆ ಕಿರಿಕಿರಿ ಉಂಟುಮಾಡುತ್ತಿತ್ತು. ಕೊನೆಗೆ ಆಕೆಯ ಬೆಂಗಾವಲು ಭಟರು ಆ ದರ್ವೇಶಿಯನ್ನು ಕೊಲ್ಲಲು ನಿರ್ಧರಿಸಿದರು. ಆದರೆ ಆಕೆ ಆತನ ಮೇಲೆ ಕರುಣೆ ತೋರಿ ಆತನನ್ನು ಕರೆದು, 'ನಾನು ನಿನಗೆ ಎಂದಿಗೂ ಸಿಗುವಂತಹವಳಲ್ಲ ನನ್ನ ಭಟರು ನಿನ್ನನ್ನು ಕೊಲ್ಲುತ್ತಾರೆ. ತಪ್ಪಿಸಿಕೊಂಡು ಹೋಗು ಎಲ್ಲಿಗಾದರೂ' ಎಂದಳು.

ಬಡಪಾಯಿ ದರ್ವೇಶಿ, 'ನಾನು ನಿನ್ನನ್ನು ಮೊದಲು ಕಂಡಾಗಿನಿಂದಲೂ ನನ್ನ ಬದುಕು ನನ್ನದೇ ಆಗಿಲ್ಲ. ನಿನ್ನ ಭಟರು ನನ್ನನ್ನು ವಿನಾಕಾರಣ ಕೊಲ್ಲುತ್ತಾರೆ. ನನ್ನ ಸಾವಿಗೆ ನೀನೇ ಕಾರಣವಾಗುವುದರಿಂದ ನನ್ನಲ್ಲಿ ವರುಷಗಳಿಂದ ಕೊರೆಯುತ್ತಿರುವ ಪ್ರಶ್ನೆಯೊಂದಿದೆ. ಅದಕ್ಕೆ ಉತ್ತರ ಹೇಳಿಬಿಡು. ಆ ದಿನ ನೀನು ನನ್ನನ್ನು ಕಂಡು ಮುಗುಳ್ನಕ್ಕಿದು ಏಕೆ?' ಎಂದು ಕೇಳಿದ.

'ಅಯ್ಯೋ ಹುಚ್ಚಪ್ಪ! ನಾನು ನಿನ್ನನ್ನು ಕಂಡಾಗ ನಿನ್ನನ್ನು ನೀನೇ ಮೂರ್ಖನನ್ನಾಗಿ ಮಾಡಿಕೊಳ್ಳುತ್ತಿದ್ದೀಯ ಎಂದು ನಿನ್ನ ಮೇಲೆ ಕರುಣೆ ತೋರಿ ನಕ್ಕೆ ಅಷ್ಟೆ' ಎಂದು ಹೇಳಿದ ರಾಜಕುಮಾರಿ ಅಲ್ಲಿಂದ ಮರೆಯಾದಳು.

ಹೂತಿಟ್ಟ ನಿಧಿ

ಒಬ್ಬ ರೈತನಿದ್ದ. ಆತ ಕಷ್ಟಪಟ್ಟು ದುಡಿಯುತ್ತಿದ್ದ ಹಾಗೂ ದಾನಧರ್ಮದಲ್ಲೂ ಆತನದು ಎತ್ತಿದ ಕೈಯಾಗಿತ್ತು. ಆದರೆ ಆತನ ಮಕ್ಕಳು ಅಷ್ಟೇ ಸೋಮಾರಿಗಳು. ಮೈಬಗ್ಗಿಸಿ ದುಡಿಯುತ್ತಿರಲಿಲ್ಲ. ರೈತನಿಗೆ ವಯಸ್ಸಾಗಿ ಸಾಯುವ ಕಾಲ ಬಂದಾಗ ತನ್ನ ಮಕ್ಕಳನ್ನು ಕರೆದು ತನ್ನ ಇಷ್ಟು ವರ್ಷಗಳ ಸಂಪಾದನೆಯ ಚಿನ್ನದ ನಾಣ್ಯಗಳನ್ನು ಹೊಲದಲ್ಲಿ ಹೂತಿಟ್ಟಿರುವುದಾಗಿ ತಿಳಿಸಿ ತೀರಿಕೊಂಡ.

ನಂತರ ಆತನ ಮಕ್ಕಳು ಚಿನ್ನಕ್ಕಾಗಿ ಹೊಲವನ್ನೆಲ್ಲಾ ಅಗೆದರು. ಯಾವುದೇ ಚಿನ್ನ ಸಿಗಲಿಲ್ಲ. ತಮ್ಮ ತಂದೆ ಬಹಳ ಉದಾರಿಯಾಗಿದ್ದುದರಿಂದ ಯಾರಿಗೋ ದಾನ ಮಾಡಿ ತಮಗೆ ಸುಳ್ಳು ಹೇಳಿರಬಹುದೆಂದು ಕೊಂಡರು. ಕೊನೆಗೆ, ಹೇಗೊ ಅಗೆದದ್ದಾಗಿದೆ,

ಆ ಜಮೀನಿನಲ್ಲಿ ಗೋಧಿ ಬಿತ್ತೋಣವೆಂದುಕೊಂಡು ಗೋಧಿಯನ್ನು ಬಿತ್ತಿದರು. ಬೆಳೆ ಚೆನ್ನಾಗಿ ಬಂತು. ಅದನ್ನು ಮಾರಾಟ ಮಾಡಿ ಒಳ್ಳೆಯ ಹಣವನ್ನು ಗಳಿಸಿದರು.

ಬೆಳೆಯ ನಂತರ 'ಕಳೆದ ವರ್ಷ ಹೂತಿಟ್ಟ ಚಿನ್ನವನ್ನು ನಾವು ಸರಿಯಾಗಿ ಹುಡುಕದೇ ಇರಬಹುದು. ಮತ್ತೊಮ್ಮೆ ಚಿನ್ನವನ್ನು ಹುಡುಕಲು ಪ್ರಯತ್ನಿಸೋಣ' ಎಂದುಕೊಂಡು ಆ ಅಣ್ಣತಮ್ಮಂದಿರು ಮತ್ತೊಮ್ಮೆ ಹೊಲವನ್ನೆಲ್ಲಾ ಅಗೆದರು. ಈ ಸಾರಿಯೂ ಅವರಪ್ಪ ಹೂತಿಟ್ಟ ನಿಧಿ ಸಿಗಲೇ ಇಲ್ಲ. ಮತ್ತೊಮ್ಮೆ ಬೆಳೆ ಬೆಳೆದರು; ಒಳ್ಳೆಯ ಬೆಳೆ ತೆಗೆದರು.

ಅಷ್ಟೊತ್ತಿಗಾಗಲೆ ಅವರಿಗೆ ಕೃಷಿಯ ಬಗ್ಗೆ, ಋತುಮಾನಗಳ ಬಗ್ಗೆ ಅರಿವು ಮೂಡಿತ್ತು. ಕಷ್ಟಪಟ್ಟು ದುಡಿಯುವುದರಿಂದ ಸಾಕಷ್ಟು ಪ್ರತಿಫಲವೂ ಸಿಗುತ್ತದೆಯೆಂಬುದು ತಿಳಿದಿತ್ತು. ಅದಾದ ನಂತರ ಅಪ್ಪ ಹೂತಿಟ್ಟ ನಿಧಿಯನ್ನು ಮರೆತು ಕಷ್ಟಪಟ್ಟು ದುಡಿಯುವ ರೈತರಾಗಿ ಸುಖವಾಗಿ ಬಾಳಿದರು.

ಅವರ್ಣನೀಯ ಬದುಕಿನ ಮನುಷ್ಯ

ಮೋಜುದ್ ಕಛೇರಿಯೊಂದರಲ್ಲಿ ಗುಮಾಸ್ತನಾಗಿದ್ದ. ಆತ ಒಂದು ದಿನ ಪುರಾತನ ಕಟ್ಟಡವೊಂದರ ಬಳಿ ಹೋಗುತ್ತಿದ್ದಾಗ ಸೂಫಿಗಳ ರಹಸ್ಯಮಯ ಮಾರ್ಗದರ್ಶಿ ಖಿದಿರ್ ತನ್ನ ಹೊಳಪಿನ ಹಸಿರು ಬಟ್ಟೆ ಧರಿಸಿ ಕಾಣಿಸಿಕೊಂಡು, ಮೋಜುದ್‌ನಿಗೆ 'ಉಜ್ವಲ ಭವಿಷ್ಯದ ಮನುಷ್ಯನೇ! ನಿನ್ನ ಕೆಲಸ ಬಿಟ್ಟು ಇನ್ನು ಮೂರು ದಿನಗಳಲ್ಲಿ ನದಿಯ ಬಳಿ ಬಂದು ನನ್ನನ್ನು ಭೇಟಿಯಾಗು' ಎಂದು ಹೇಳಿ ಮಾಯವಾದ. ಮೋಜುದ್ ಹೆದರಿಕೊಂಡು ಖಿದಿರ್ ಹೇಳಿದಂತೆ ಕೆಲಸಕ್ಕೆ ರಾಜೀನಾಮೆ ಕೊಡಲು ನಿರ್ಧರಿಸಿದ. ಮೋಜುದ್‌ನಿಗೆಲ್ಲೋ ತಲೆ ಕೆಟ್ಟಿದೆಯೆಂದುಕೊಂಡರು ಊರಿನ ಜನರೆಲ್ಲಾ.

ಮೂರು ದಿನಗಳ ನಂತರ ನದಿಯ ಬಳಿ ಖಿದಿರ್ ಭೇಟಿಯಾದ. 'ನಿನ್ನ ಬಟ್ಟೆ ಹರಿದುಕೊಂಡು ನದಿಗೆ ಹಾರು. ಬಹುಶಃ ಯಾರಾದರೂ ನಿನ್ನನ್ನು ಕಾಪಾಡ ಬಹುದು' ಎಂದು ಹೇಳಿದ ಖಿದಿರ್.

ಮೋಜುದ್ ಹಾಗೆಯೇ ಮಾಡಿದ, 'ಬಹುಶಃ ನನಗೆ ತಲೆ ಕೆಟ್ಟಿರುವುದು ನಿಜ' ಎಂದುಕೊಂಡು. ಆತನಿಗೆ ಈಜು ಬರುತ್ತಿದ್ದುದರಿಂದ ಆತ ಮುಳುಗಲಿಲ್ಲ. ನೀರಿನಲ್ಲಿ ಹಾಗೇ ಕೊಚ್ಚಿಕೊಂಡು ಹೋಗುತ್ತಿರುವಾಗ ಬೆಸ್ತನೊಬ್ಬ ಎಳೆದು ದೋಣಿಗೆ ಹಾಕಿಕೊಂಡು,

'ಮೂರ್ಖ ಮನುಷ್ಯ! ನೀರಿನ ರಭಸ ಎಷ್ಟು ಜೋರಾಗಿದೆ! ಸಾಯಬೇಕೆಂಬ ಆಸೆ ಇದೆಯೇನು?' ಎಂದು ಗದರಿಸಿ ಕೇಳಿದ.

'ನನಗೆ ಗೊತ್ತಿಲ್ಲ' ಮೋಜುದ್ ಹೇಳಿದ.

'ನೀನೊಬ್ಬ ಹುಚ್ಚ. ನಮ್ಮ ಮನೆಗೆ ಬಂದು ಮೊದಲು ವಿಶ್ರಮಿಸಿಕೊ, ನಂತರ ಏನು ಮಾಡಬಹುದೋ ನೋಡೋಣ' ಎಂದು ಹೇಳಿ ಬೆಸ್ತ ಮೋಜುದ್‌ನನ್ನು ಮನೆಗೆ ಕರೆದುಕೊಂಡು ಹೋದ. ಮೋಜುದ್‌ನಿಗೆ ಓದು ಬರಹ ಬರುತ್ತದೆ ಎಂದು ತಿಳಿದ ನಂತರ ಬೆಸ್ತ ಆತನಿಂದ ತಾನೂ ಓದು ಬರಹ ಕಲಿತ. ಬದಲಿಗೆ ಮೋಜುದ್‌ನಿಗೆ ಹೊತ್ತಿಗೆ ಸರಿಯಾಗಿ ಊಟ ಸಿಕ್ಕಿತು ಹಾಗೂ ಬೆಸ್ತನಿಗೆ ಆತನ ಕೆಲಸದಲ್ಲಿ ಸಹಾಯ ಮಾಡಿದ. ಕೆಲ ತಿಂಗಳುಗಳ ನಂತರ ಮೋಜುದ್ ಮಲಗಿದ್ದಾಗ ಆತನ ಕಾಲ ಬಳಿ ಖಿದಿರ್ ಕಾಣಿಸಿಕೊಂಡು, 'ಈಗಲೇ ಎದ್ದು ಇಲ್ಲಿಂದ ಹೊರಡು. ಎಲ್ಲಾ ವ್ಯವಸ್ಥೆ ಮಾಡಲಾಗಿದೆ' ಎಂದು ಹೇಳಿದ.

ಬೆಸ್ತನ ವೇಷದಲ್ಲಿದ್ದ ಮೋಜುದ್ ಕೂಡಲೆ ಎದ್ದು ಯಾರಿಗೂ ಹೇಳದೆ ಹೊರಟ. ಅಲ್ಲಿ ಇಲ್ಲಿ ಅಲೆದಾಡುತ್ತಿದ್ದಾಗ ರೈತನೊಬ್ಬ ತನ್ನ ಕತ್ತೆಯ ಮೇಲೆ ಧವಸಧಾನ್ಯ ಹೇರಿಕೊಂಡು ಸಂತೆಗೆ ಹೊರಟಿದ್ದ. ಮೋಜುದ್‌ನನ್ನು ಕಂಡು, 'ನನಗೊಬ್ಬ ಕೆಲಸಗಾರ ಬೇಕು. ನನ್ನ ಜೊತೆ ಬರುತ್ತೀಯ?' ಎಂದು ಕೇಳಿದ.

ಮೋಜುದ್ ರೈತನನ್ನು ಹಿಂಬಾಲಿಸಿದ. ರೈತನ ಮನೆಯಲ್ಲೇ ಎರಡು ವರ್ಷ ಕೆಲಸಕ್ಕಿದ್ದ. ವ್ಯವಸಾಯದ ಬಗ್ಗೆ ಸಾಕಷ್ಟು ಕಲಿತ. ಒಂದು ದಿನ ಮಧ್ಯಾಹ್ನ ಹೊಲ ಉಳುತ್ತಿದ್ದಾಗ ಖಿದಿರ್ ಕಾಣಿಸಿಕೊಂಡು, ಕೂಡಲೇ ಇಲ್ಲಿಂದ ಮೊಸುಲ್ ನಗರಕ್ಕೆ ಹೊರಡು ನಿನ್ನ ಉಳಿತಾಯದ ಹಣದಿಂದ ಅಲ್ಲಿ ಚರ್ಮದ ವ್ಯಾಪಾರ ಮಾಡು' ಎಂದ.

ಮೋಜುದ್ ಹಾಗೆಯೇ ಮಾಡಿದ.

ಮೊಸುಲು ನಗರದಲ್ಲಿ ದೊಡ್ಡ ಚರ್ಮದ ವ್ಯಾಪಾರಿಯಾದ. ಮೂರು ವರ್ಷಗಳು ಕಳೆದವು ಖಿದಿರ್ ಕಾಣಿಸಿಕೊಳ್ಳಲೇ ಇಲ್ಲ. ಸಾಕಷ್ಟು ಹಣವನ್ನು ಗಳಿಸಿದ್ದ ಹಾಗೂ ಒಂದು ಮನೆ ಕೊಳ್ಳಬೇಕೆಂಬ ಆಲೋಚನೆಯಿಲ್ಲಿದ್ದ. ಒಂದು ದಿನ ಇದ್ದಕ್ಕಿದ್ದಂತೆ ಖಿದಿರ್ ಕಾಣಿಸಿಕೊಂಡು, 'ನಿನ್ನ ಎಲ್ಲಾ ಹಣ ನನಗೆ ಕೊಡು, ಕೂಡಲೆ ಈ ನಗರ ಬಿಟ್ಟು ಸಮರಕಾಂಡ್‌ಗೆ ಹೊರಡು ಅಲ್ಲಿ ದಿನಸಿ ಅಂಗಡಿಯೊಂದರಲ್ಲಿ ಕೆಲಸಮಾಡು' ಎಂದು ಹೇಳಿದ.

ಮೋಜುದ್ ಖಿದಿರ್‌ನ ಮಾತನ್ನು ಪಾಲಿಸಿದ.

ಆದರೆ ಮೋಜುದ್‌ನಲ್ಲಿ ಹಲವಾರು ಬದಲಾವಣೆಗಳಾಗತೊಡಗಿತ್ತು. ಆತನಲ್ಲಿ ಎಂಥದೋ ಅವರ್ಣನೀಯ ವರ್ಚಸ್ಸು ಮೂಡತೊಡಗಿತ್ತು. ದಿನಸಿ ಅಂಗಡಿಯಲ್ಲಿ

ಕೆಲಸ ಮಾಡುವುದರ ಜೊತೆಗೆ ಕಾಯಿಲೆ ಕಸಾಲೆಗಳನ್ನು ವಾಸಿಮಾಡತೊಡಗಿದ. ವಿಶ್ವದ ರಹಸ್ಯಗಳ ಬಗೆಗೆ ಆತನ ಜ್ಞಾನ ಹೆಚ್ಚುತ್ತಾ ಹೋಯಿತು.

ಧಾರ್ಮಿಕ ಗುರುಗಳು, ತತ್ವಜ್ಞಾನಿಗಳು ಹಾಗೂ ಇತರರು ಆತನನ್ನು ಭೇಟಿಯಾಗಲು ಬರತೊಡಗಿದರು. 'ನೀವು ಯಾರಿಂದ ಕಲಿತಿರಿ? ನಿಮ್ಮ ಗುರುಗಳು ಯಾರು?' ಎಂದು ಕೇಳುತ್ತಿದ್ದರು.

'ಅದನ್ನು ಹೇಳಲು ಕಷ್ಟ' ಎಂದು ಮೋಜುದ್ ಹೇಳುತ್ತಿದ್ದ.

'ನಿಮ್ಮ ಈ ಬದುಕು ಹೇಗೆ ಆರಂಭವಾಯಿತು?'

'ಗುಮಾಸ್ತನಾಗಿ'.

'ಈ ಆತ್ಮ ದಂಡನೆ, ವಿರಕ್ತಿಗಾಗಿ ಆ ಉದ್ಯೋಗ ತ್ಯಜಿಸಿದಿರೇನು?'

'ಇಲ್ಲ, ಸುಮ್ಮನೆ ಹಾಗೆಯೇ ಬಿಟ್ಟೆ'.

ಆತನ ಮಾತು ಅವರ್‍ಯಾರಿಗೂ ಅರ್ಥವಾಗುತ್ತಿರಲಿಲ್ಲ. ಕೆಲವು ಬರಹಗಾರರು ಬಂದು ಆತನ ಬದುಕಿನ ಬಗ್ಗೆ ಬರೆಯುತ್ತೇವೆಂದು, 'ನಿಮ್ಮ ಬದುಕಿನ ಬಗ್ಗೆ ಹೇಳಿ' ಎಂದು ಕೇಳಿದರು.

'ನದಿಗೆ ಹಾರಿದೆ, ಬೆಸ್ತನಾದೆ. ಒಂದು ರಾತ್ರಿ ಬೆಸ್ತನ ಗುಡಿಸಲು ಬಿಟ್ಟು ಹೊರಟು ರೈತನ ಹೊಲದಲ್ಲಿ ಕೂಲಿಯಾದೆ. ಹೊಲ ಉಳುವುದನ್ನು ಬಿಟ್ಟು ಮೋಸುಲ್‌ಗೆ ಹೋಗಿ ಚರ್ಮದ ವ್ಯಾಪಾರಿಯಾದೆ. ಸ್ವಲ್ಪ ಹಣ ಉಳಿಸಿದೆ. ಆದರೆ ಅದನ್ನೆಲ್ಲಾ ಕೊಟ್ಟುಬಿಟ್ಟು ಸಮರಕಾಂಡ್‌ಗೆ ಬಂದು ಅಂದಿನಿಂದ ಈ ದಿನಸಿ ಅಂಗಡಿಯಲ್ಲೇ ದುಡಿಯುತ್ತಿದ್ದೇನೆ' ಎಂದು ಮೋಜುದ್ ತನ್ನ ಕತೆ ಹೇಳಿದ.

'ಆದರೆ ಈ ಅವರ್ಣನೀಯ ನಡವಳಿಕೆ ನಿಮ್ಮ ವರ್ಚಸ್ಸಿನ ಬಗ್ಗೆ, ನಿಮ್ಮ ಪವಾಡಗಳ ಬಗ್ಗೆ ಹಾಗೂ ನಿಮ್ಮ ಆದರ್ಶದ ಬಗ್ಗೆ ಏನೂ ಹೇಳುವುದಿಲ್ಲವಲ್ಲ? ಎಂದು ಕೇಳಿದರು ಏನೊಂದೂ ಅರ್ಥವಾಗದೆ.

'ಹೌದು, ಅದು ಹಾಗೆ' ಎಂದಷ್ಟೇ ಹೇಳಿದ ಮೋಜುದ್. ಸಂತರಿಗೆಲ್ಲಾ ಒಂದು ಕತೆ ಇರಲೇಬೇಕಲ್ಲ. ಆದುದರಿಂದ ಆ ಬರಹಗಾರರು ಮೋಜುದ್‌ನ ಬದುಕಿನ ಬಗ್ಗೆ ರಂಗು ರಂಗಾಗಿರುವಂತೆ, ಆದರೆ ಬದುಕಿನ ವಾಸ್ತವಗಳನ್ನು ಪರಿಗಣನೆಗೆ ತಂದುಕೊಳ್ಳದೆ ಬರೆದರು.

ಖಿದಿರ್‌ನ ಬಗ್ಗೆ ಯಾರೂ ನೇರವಾಗಿ ಮಾತನಾಡುವಂತಿಲ್ಲ. ಆದುದರಿಂದ ಈ ಕತೆ ಸತ್ಯವಲ್ಲ. ಅದು ಬದುಕನ್ನು ಒಂದು ರೀತಿಯಾಗಿ ಸಾಂಕೇತಿಕವಾಗಿ ತೋರಿಸುತ್ತದಷ್ಟೆ. ಆದರೆ ಒಬ್ಬ ಮಹಾನ್ ಸೂಫಿಯ ಸತ್ಯ ಕತೆ ಇದು.

ರಾಜಕುರುಬ

ಬಾಗ್ದಾದಿನಲ್ಲಿ ಒಬ್ಬ ಸಿರಿವಂತ ವರ್ತಕನಿದ್ದ. ಆತನಿಗೆ ಬಹಳಷ್ಟು ಆಸ್ತಿಪಾಸ್ತಿ ಇತ್ತು. ಅರಮನೆಯಂತಹ ಮನೆ ಹಾಗೂ ಹಡಗುಗಳಿದ್ದವು. ವರ್ತಕನ ಸಮಯ ಎಲ್ಲ ರೀತಿಯಿಂದಲೂ ಚೆನ್ನಾಗಿತ್ತು. ಸುಖ ಸಂತೋಷದ ಬದುಕು ಅವನದಾಗಿತ್ತು. ಸ್ಪೇನಿನ ಕೊರಡೋಬದ ಸುಲ್ತಾನ್ ಈತನ ಗೆಳೆಯನಾಗಿದ್ದ.

ಆದರೆ ವರ್ತಕನ ಬದುಕು ಒಂದು ದಿನ ಅಲ್ಲೋಲಕಲ್ಲೋಲವಾಯಿತು. ಪಕ್ಕದ ರಾಜ್ಯದ ರಾಜ ದಾಳಿ ಮಾಡಿದ. ಈತನ ಹಡುಗುಗಳು ಹಾಗೂ ಅವುಗಳಲ್ಲಿದ್ದ ಬೆಲೆಬಾಳುವ ವಸ್ತುಗಳೆಲ್ಲಾ ನಾಶವಾದುವು. ತನ್ನ ಕುಟುಂಬದ ಗೆಳೆಯರೆಲ್ಲಾ ದೂರವಾದರು. ಸ್ಪೇನ್‌ನಲ್ಲಿನ ತನ್ನ ಗೆಳೆಯ ಕೊರಡೋಬದ ಸುಲ್ತಾನ್‌ನಿಂದ ಸಹಾಯ, ಆಸರೆ ಪಡೆಯೋಣವೆಂದು ಮರಳುಗಾಡಿನ ಮೂಲಕ ಹೊರಟ. ದಾರಿಯಲ್ಲಿನ ಆತನ ಕತ್ತೆ ಸತ್ತುಹೋಯಿತು. ಢಕಾಯಿತರು ದಾಳಿ ಮಾಡಿ ಇದ್ದುದನ್ನೂ ಕಿತ್ತುಕೊಂಡು ವರ್ತಕನನ್ನು ಗುಲಾಮನನ್ನಾಗಿ ಮಾರಾಟ ಮಾಡಿದರು. ಗುಲಾಮನಾಗಿ ಬಹಳಷ್ಟು ದಿನ ದುಡಿದ ನಂತರ ಕಷ್ಟಪಟ್ಟು ಹೇಗೋ ತಪ್ಪಿಸಿಕೊಂಡ. ಬಿಸಿಲಿನಲ್ಲಿ ದುಡಿದು ಆತನ ಚರ್ಮವೆಲ್ಲಾ ರಟ್ಟಿನಂತಾಗಿತ್ತು. ಆತನ ನಡತೆ ನಯ ನಾಜೂಕು ಕಳೆದುಕೊಂಡು ಒರಟಾಗಿತ್ತು. ಆತನ ನಡತೆಯಿಂದಾಗಿ ಕಂಡಕಂಡಲ್ಲೆಲ್ಲಾ ಗ್ರಾಮಸ್ಥರು ಕಲ್ಲು ಹೊಡೆದು ಓಡಿಸುತ್ತಿದ್ದರು. ಅಲ್ಲೊಬ್ಬ ಇಲ್ಲೊಬ್ಬ ಯಾರಾದರೂ ದರ್ವೇಶಿ ಸಿಕ್ಕಲ್ಲಿ ಈತನಿಗೊಂದು ಚೂರು ರೊಟ್ಟಿ ಕೊಡುತ್ತಿದ್ದರು. ಹೇಗೋ ಬಹಳ ಕಷ್ಟಪಟ್ಟು ಕೊರಡೋಬದ ಸುಲ್ತಾನನ ಅರಮನೆ ತಲುಪಿದ.

ಅರಮನೆಯ ಭಟರು ಈತನ ರೂಪ ನೋಡಿ ಒಳಗೆ ಬಿಡಲೇ ಇಲ್ಲ. ತಾನು ಸುಲ್ತಾನನ ಗೆಳೆಯನೆಂದಾಗ ನಕ್ಕು ಲೇವಡಿ ಮಾಡಿದರು. ಅಲ್ಲೇ ಅದೂ ಇದೂ ಕೆಲಸ ಮಾಡಿ ಸ್ವಲ್ಪ ಹಣ ಸಂಪಾದಿಸಿ ಒಳ್ಳೆಯ ಬಟ್ಟೆ ಕೊಂಡ. ತೊಟ್ಟ ಬಟ್ಟೆ ಒಳ್ಳೆಯದಾಗಿದ್ದರೂ ಆತನ ನಡತೆ ಒರಟಾಗಿಯೇ ಇತ್ತು. ಪ್ರವೇಶ ಸಿಗಲಿಲ್ಲ. ಹಲವಾರು ತಿಂಗಳುಗಳ ಪ್ರಯತ್ನದ ನಂತರ ಅದನ್ನೂ ಸರಿಪಡಿಸಿಕೊಂಡ.

ಅಂತೂ ಬಾಗ್ದಾದ್ ಬಿಟ್ಟ ಮೂರು ವರ್ಷಗಳ ನಂತರ ಸುಲ್ತಾನನನ್ನು ಭೇಟಿಮಾಡುವ ಅವಕಾಶ ಸಿಕ್ಕಿತು. ಈತನನ್ನು ನೋಡಿದ ಕೂಡಲೇ ಸುಲ್ತಾನ ಗುರುತು ಹಿಡಿದು ಯೋಗಕ್ಷೇಮ ವಿಚಾರಿಸಿದ. ವರ್ತಕ ತನ್ನ ಎಲ್ಲಾ ಗೋಳು, ಕಷ್ಟಗಳ ಕತೆ ಹೇಳಿ ತನಗೆ ಸಹಾಯ ಮಾಡುವಂತೆ ಕೇಳಿಕೊಂಡ.

ಆತನ ಕತೆಯನ್ನೆಲ್ಲಾ ಕೇಳಿಸಿಕೊಂಡ ಸುಲ್ತಾನ ತನ್ನ ಮಂತ್ರಿಯ ಕಡೆಗೆ ತಿರುಗಿ, 'ನನ್ನ ಗೆಳೆಯನಿಗೆ ನೂರು ಕುರಿ ಕೊಟ್ಟು ಆತನನ್ನು ರಾಜಕುರುಬನನ್ನಾಗಿ ನೇಮಿಸಿ ಪರ್ವತಗಳಲ್ಲಿ ಕುರಿ ಮೇಯಿಸಿಕೊಳ್ಳಲು ಅವಕಾಶ ಮಾಡಿಕೊಡಿ' ಎಂದು ಆಜ್ಞೆ ಮಾಡಿದ.

ವರ್ತಕನಿಗೆ ಪಿಚ್ಚೆನಿಸಿತು. ರಾಜನ ಔದಾರ್ಯ ಗೊತ್ತಿದ್ದ ಈತನಿಗೆ 'ಇದೇನು ನೂರು ಕುರಿ ಕೊಟ್ಟು ಕುರಿ ಕಾಯಲು ಹೇಳುತ್ತಿದ್ದಾನಲ್ಲ' ಎಂದುಕೊಂಡ. ಸುಲ್ತಾನನಿಗೆ ಎದುರು ಹೇಳುವ ಹಾಗಿಲ್ಲವಲ್ಲ. ಆದುದರಿಂದ ಸುಲ್ತಾನನಿಗೆ ವಂದಿಸಿ ಕುರಿಗಳೊಂದಿಗೆ

ಪರ್ವತಕ್ಕೆ ತೆರಳಿದ. ಅಲ್ಲಿಗೆ ತಲುಪಿದ ಕೆಲವೇ ದಿನಗಳಲ್ಲಿ ಯಾವುದೋ ಭಯಂಕರ ಕಾಯಿಲೆಯಿಂದಾಗಿ ಕುರಿಗಳೆಲ್ಲಾ ಸತ್ತುಹೋದವು. ಸುಲ್ತಾನನ ಬಳಿ ವರ್ತಕ ಹಿಂದಿರುಗಿದ.

'ಹೇಗಿವೆ ನಿನ್ನ ಕುರಿಗಳು? ಸುಲ್ತಾನ ಕೇಳಿದ.

'ಪ್ರಭು ಕಾಯಿಲೆಯಿಂದ ಅವೆಲ್ಲ ಸತ್ತುಹೋದವು' ತಲೆ ತಗ್ಗಿಸಿ ವರ್ತಕ ಹೇಳಿದ.

ರಾಜ ತನ್ನ ಮಂತ್ರಿಗೆ, 'ಈತನಿಗೆ ಐವತ್ತು ಕುರಿ ಕೊಡಿ. ಮುಂದಿನದನ್ನು ನೋಡೋಣ' ಎಂದ.

ನಾಚಿಕೆ ಅವಮಾನದಿಂದ ಆತ ಐವತ್ತು ಕುರಿಗಳನ್ನು ಹೊಡೆದುಕೊಂಡು ಹೋದ. ಒಂದು ದಿನ ಕುರಿ ಮೇಯಿಸುತ್ತಿದ್ದಾಗ ಎಲ್ಲಿಂದಲೋ ಕಾಡು ನಾಯಿಗಳು ಬಂದು ಕುರಿಗಳನ್ನು ಅಟ್ಟಿಸಿಕೊಂಡು ಹೋದಾಗ ಅವು ಕೊರಕಲೊಂದರಲ್ಲಿ ಬಿದ್ದು ಎಲ್ಲಾ ಸತ್ತುಹೋದವು.

ಮತ್ತೆ ಪೆಚ್ಚುಮೋರೆ ಹಾಕಿಕೊಂಡು ವರ್ತಕ ಸುಲ್ತಾನನ ಬಳಿ ಹಿಂದಿರುಗಿ ನಡೆದ ಕತೆ ಎಲ್ಲಾ ವಿವರಿಸಿದ. ಎಲ್ಲಾ ಕೇಳಿದ ಸುಲ್ತಾನ, 'ಆಯಿತು, ಈ ಬಾರಿ ಇಪ್ಪತ್ತೈದು ಕುರಿ ತೆಗೆದುಕೊಂಡು ಹೋಗಿ ಅವುಗಳನ್ನು ಮೇಯಿಸು' ಎಂದು ಹೇಳಿದ.

ಭವಿಷ್ಯದ ಬಗ್ಗೆ ಭರವಸೆ ಕಳೆದುಕೊಂಡಿದ್ದ ವರ್ತಕ ಆದದ್ದಾಗಲಿ ಎಂದು ಇಪ್ಪತ್ತೈದು ಕುರಿ ಹೊಡೆದುಕೊಂಡು ಹೋದ. ಅವುಗಳನ್ನು ಎಚ್ಚರಿಕೆಯಿಂದ ಕಾಯ್ದು. ಅವನ ಅದೃಷ್ಟವೆಂಬಂತೆ ಕುರಿಗಳು ಅವಳಿ–ಜವಳಿ ಮರಿಗಳನ್ನು ಹೆತ್ತವು. ಕೆಲವೇ ದಿನಗಳಲ್ಲಿ ಕುರಿಗಳ ಸಂಖ್ಯೆ ಹೆಚ್ಚಿತು. ತನ್ನ ದಷ್ಟಪುಷ್ಟ ಕುರಿಗಳನ್ನು ಮಾರಿ ಸಾಕಷ್ಟು ಹಣ ಗಳಿಸಿದ. ಮೂರು ವರ್ಷಗಳಲ್ಲಿ ಚೆನ್ನಾಗಿ ಹಣ ಸಂಪಾದನೆ ಮಾಡಿ ಸಾಕಷ್ಟು ಕುರಿ ಸಾಕಿದ್ದ ವರ್ತಕ ಒಳ್ಳೆಯ ಒಡವೆ ವಸ್ತ್ರ ಧರಿಸಿ ಒಂದು ದಿನ ಸುಲ್ತಾನನ ಬಳಿ ಹೋದ.

'ಹೇಗಿವೆ ನಿನ್ನ ಕುರಿಗಳು?' ಕೇಳಿದ ಸುಲ್ತಾನ.

ನಡೆದದ್ದನ್ನೆಲ್ಲಾ ವಿವರಿಸಿ ತನ್ನ ಅದೃಷ್ಟ ಹಾಗೂ ಬದುಕು ಈಗ ಚೆನ್ನಾಗಿದೆಯೆಂದು ತಿಳಿಸಿದ ರಾಜಕುರುಬನಾಗಿದ್ದ ವರ್ತಕ.

'ಸಂತೋಷವಾಯಿತು ನಿನ್ನ ಕತೆ ಕೇಳಿ. ಪಕ್ಕದ ಸೆವಿಲ್ ರಾಜ್ಯಕ್ಕೆ ನಿನ್ನನ್ನು ರಾಜನನ್ನಾಗಿ ಮಾಡುತ್ತೇನೆ' ಎಂದು ಸುಲ್ತಾನ ಘೋಷಿಸಿದ.

ಇಷ್ಟುದಿನ ಅದುಮಿಟ್ಟಿದ್ದ ಮಾತುಗಳನ್ನು ಈಗ ವರ್ತಕನಿಂದ ತಡೆಯಲಾಗಲಿಲ್ಲ. 'ನಾನು ಮೊದಲಿಗೆ ಮೂರು ವರ್ಷಗಳ ಹಿಂದೆ ಬಂದಾಗಲೇ ನೀವೇಕೆ ನನ್ನನ್ನು ರಾಜನನ್ನಾಗಿ ಮಾಡಲಿಲ್ಲ. ನನ್ನ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದಿರೇನು? ಅಥವಾ ನನಗೇನಾದರೂ ಕಲಿಸುವ ಪ್ರಯತ್ನ ಮಾಡುತ್ತಿದ್ದಿರಾ? ಎಂದು ಕೇಳಿದ.

ಸುಲ್ತಾನ ಜೋರಾಗಿ ನಕ್ಕು ಹೇಳಿದ. 'ನೀನು ಮೊದಲಿಗೆ ಬಂದಾಗ ನಿನಗೆ ರಾಜ್ಯ ಕೊಟ್ಟಿದ್ದಲ್ಲಿ ನೀನು ಮೊದಲಿಗೆ ಕೊಂಡೊಯ್ದ ಕುರಿಗಳ ಪಾಡೇ ಅಲ್ಲಿನ ಪ್ರಜೆಗಳದಾಗುತ್ತಿತ್ತು. ನೂರು ಕುರಿ ಸಾಕಲಾರದವ ಒಂದು ರಾಜ್ಯ ಆಳಬಲ್ಲನೆ?'

ಮೂವರು ಗುರುಗಳು ಮತ್ತು ಹೇಸರಗತ್ತೆ ನಡೆಸುವವರು

ಅಬ್ದುಲ್ ಖಾದಿರ್ ಒಬ್ಬ ಮಹಾನ್ ಸೂಫಿ ಸಂತ. ಗುರುಗಳಿಗೇ ಗುರು ಆತ. ಆತನನ್ನು ಕಾಣಲು, ಭೇಟಿಯಾಗಲು ವಿಶ್ವದ ಎಲ್ಲೆಡೆಯಿಂದ ಸಂತ ಗುರುಗಳು ಬರುತ್ತಿದ್ದರು. ಅಲ್ಲಿಗೆ ಬರುವವರೆಲ್ಲ ಹೆಚ್ಚಿನ ಬುದ್ಧಿವಂತರಾಗಿದ್ದು ಅಲ್ಪಸ್ವಲ್ಪ ಜ್ಞಾನಿಗಳಿಗೆ ಅಲ್ಲಿ ಪ್ರವೇಶವೇ ದೊರಕುತ್ತಿರಲಿಲ್ಲ.

ಒಂದು ದಿನ ಖೊರಸಾನ್, ಇರಾಖ್ ಮತ್ತು ಈಜಿಪ್ಟಿನ ಮೂವರು ಶೇಖ್‌ಗಳು ಮೆಕ್ಕಾಗೆ ಯಾತ್ರೆ ಬಂದವರು ಅಬ್ದುಲ್ ಖಾದಿರ್‌ರವರನ್ನು ಭೇಟಿಯಾಗಲು ದರ್ಗಾಕ್ಕೆ ಬಂದರು. ಇವರಿಗೆ ದಾರಿ ತೋರಿಸಲು ಹಾಗೂ ಸಾಮಾನು ಸರಂಜಾಮು ಹೊತ್ತೊಯ್ಯುವ ಅನಕ್ಷರಸ್ಥ ಮತ್ತು ದಡ್ಡರಾದ ಮೂವರು ಹೇಸರಗತ್ತೆ ನಡೆಸುವವರೂ ಬಂದಿದ್ದರು. ಹಾದಿಯಲ್ಲೆಲ್ಲಾ ಇವರ ಹೆಡ್ಡತನ ಮಂಗಾಟಗಳಿಂದ ಈ ಬುದ್ಧಿವಂತ ಶೇಖ್‌ಗಳು ಬೇಸತ್ತಿದ್ದರು. ದರ್ಗಾ ತಲುಪಿ ಈ ದಡ್ಡರ ಸಹವಾಸದಿಂದ ದೂರಾದರೆ ಸಾಕೆಂದು ಪ್ರಾರ್ಥಿಸುತ್ತಿದ್ದರು. ಅಂತೂ ಮೂವತ್ತಾರು ದಿನಗಳ ಪ್ರಯಾಣದ ನಂತರ ದರ್ಗಾ ತಲುಪಿದರು.

ದರ್ಗಾದಲ್ಲಿ ಯಾರನ್ನೂ ಭೇಟಿಯಾಗಲು ಬರದ ಅಬ್ದುಲ್ ಖಾದಿರ್‌ರವರು ಆ ದಿನ ಈ ಶೇಖ್‌ರನ್ನು ಮಾಡನಾಡಿಸಲು ಬಂದರು. ಆದರೆ ಅವರ ಮತ್ತು ಹೇಸರಗತ್ತೆ ನಡೆಸುವವರ ಮಧ್ಯೆ ಯಾವುದೇ ಮಾತುಕತೆ ನಡೆಯಲಿಲ್ಲ. ಆದರೆ ಅಂದು ರಾತ್ರಿ ಹೇಸರಗತ್ತೆ ನಡೆಸುವವರ ಜೊತೆ ಗುರುಗಳ ಗುರು ಅಬ್ದುಲ್ ಖಾದಿರ್ ಮಾತನಾಡಿ ಅವರನ್ನು ಬೀಳ್ಕೊಡುವಾಗ ಗೌರವ ಪೂರ್ವಕವಾಗಿ ಅವರ ಕೈ ಚುಂಬಿಸಿದ್ದನ್ನು ಈ ಮೂವರು ಶೇಖ್‌ಗಳು ಕಂಡರು. ಶೇಖ್‌ಗಳಿಗೆ ದಿಗ್ಭ್ರಮೆಯಾಯಿತು ಹಾಗೂ ದರ್ವೇಶಿಗಳ ಸುಪ್ತ ಶೇಖ್‌ಗಳು ತಾವಲ್ಲ. ಬದಲಿಗೆ ಈ ಹೇಸರಗತ್ತೆ ನಡೆಸುವವರೆಂಬುದೂ ಅರಿವಾಯಿತು. ಹೇಸರಗತ್ತೆ ನಡೆಸುವವರನ್ನು ಹಿಂಬಾಲಿಸಿ ಅವರನ್ನು ಮಾತನಾಡಿಸಲು ಪ್ರಯತ್ನಿಸಿದರು. ಅದಕ್ಕೆ ಹೇಸರಗತ್ತೆ ನಡೆಸುವವರ ಮುಖಂಡ ಹೇಳಿದ, 'ಹೋಗಿ, ಹೋಗಿ. ನಿಮ್ಮೊಂದಿಗಿನ ಪ್ರಯಾಣದ ಮುವ್ವತ್ತಾರು ದಿನಗಳು ನಮ್ಮನ್ನು ಕಾಡಿ ಹಿಂಸೆ ಮಾಡಿದ ನಿಮ್ಮ ಸೂಫಿ ಪ್ರಾರ್ಥನೆ, ಗೋಣಗಾಟಕ್ಕೆ ಹಿಂದಿರುಗಿ. ನಮಗೆ ತೊಂದರೆ ಕೊಡಬೇಡಿ. ನಾವು ಹೇಸರಗತ್ತೆ ನಡೆಸುವ ಸಾಮಾನ್ಯರಷ್ಟೆ. ನಿಮ್ಮ ಧರ್ಮ–ಕರ್ಮಗಳು ನಮಗೆ ಬೇಕಿಲ್ಲ' ಎಂದರು.

ಸುಪ್ತ ಹಾಗೂ ತೋರ್ಪಡಿಕೆಯ ಸೂಫಿಗಳ ನಡುವಿನ ಅಂತರವಿದು.

ಸ್ವಾತಂತ್ರ್ಯದ ಸಂದೇಶ

ಒಬ್ಬ ವರ್ತಕ ಒಂದು ಸುಂದರ ಪಕ್ಷಿಯನ್ನು ಬಹಳ ಮುದ್ದಿನಿಂದ ಪಂಜರದಲ್ಲಿ ಸಾಕಿದ್ದ. ಒಮ್ಮೆ ಆತ ಭಾರತಕ್ಕೆ ವ್ಯಾಪಾರದ ನಿಮಿತ್ತ ಹೋಗಬೇಕಾಯಿತು. ಆ ಪಕ್ಷಿಯನ್ನು ಆತ ಕಳೆದ ಬಾರಿ ಭಾರತಕ್ಕೆ ಹೋಗಿದ್ದಾಗ ಅಲ್ಲಿಂದ ತಂದಿದ್ದ. ಆದುದರಿಂದ ಈ ಸಾರಿ ಭಾರತಕ್ಕೆ ಹೋದಾಗ ಆ ಪಕ್ಷಿಗೆ ಅದರ ಊರಿನಿಂದ ಏನಾದರೂ ತರಬೇಕೆ ಎಂದು ಕೇಳಿದ. ಆ ಪಕ್ಷಿ ತನಗೆ ಸ್ವಾತಂತ್ರ್ಯ ತಂದುಕೊಡುವಂತೆ ಕೇಳಿತು. ಅದು ಮಾತ್ರ ಸಾಧ್ಯವಿಲ್ಲವೆಂದ ವರ್ತಕ. ಅದಕ್ಕೆ ಪಕ್ಷಿ ತಾನು ಹುಟ್ಟಿ ಬೆಳೆದ ಕಾಡಿನ ವಿವರ ತಿಳಿಸಿ ಅಲ್ಲಿನ ಪಕ್ಷಿಗಳಿಗೆ ತಾನು ಬಂಧಿಯಾಗಿರುವ ವಿಷಯ ತಿಳಿಸುವಂತೆ ಕೋರಿ ಕೊಂಡಿತು. ಇದೆಂತಹ ವಿಚಿತ್ರ ಬೇಡಿಕೆ ಎಂದುಕೊಂಡ ವರ್ತಕ ಆಯಿತೆಂದು ಒಪ್ಪಿಕೊಂಡ.

ಭಾರತಕ್ಕೆ ಬಂದು ತನ್ನ ವ್ಯಾಪಾರ ವಹಿವಾಟು ಮುಗಿಸಿ ಹಿಂದಿರುಗುವ ಸಮಯ ಬಂದಾಗ ಆ ಪಕ್ಷಿಯ ಬೇಡಿಕೆ ನೆನಪಾಗಿ ಅದು ತಿಳಿಸಿದ ಕಾಡಿಗೆ ಹೋದ, ಅಲ್ಲಿ ಆ ಕಾಡಿಗೆ ಸೇರಿರುವ ಒಂದು ಪಕ್ಷಿ ತನ್ನ ಬಳಿ ಬಂಧಿಯಾಗಿರುವುದಾಗಿಯೂ, ಈ ವಿಷಯವನ್ನು ಅದರ ಕೋರಿಕೆಯಂತೆ ತಮಗೆ ತಿಳಿಸುತ್ತಿದ್ದೇನೆಂದೂ ಇತರ ಪಕ್ಷಿಗಳಿಗೆ ಕೇಳಿಸುವಂತೆ ಕೂಗಿ ಹೇಳಿದ. ಆ ಮಾತು ಕೇಳಿದ ತಕ್ಷಣ ಮರದ ಮೇಲಿದ್ದ ಒಂದು ಪಕ್ಷಿ ವಿಕಾರವಾಗಿ ಕೂಗಿ ಪಟಪಟನೆ ರೆಕ್ಕೆ ಬಡಿದು ಕೆಳಗೆ ಬಿದ್ದಿತು.

'ಅಯ್ಯೋ ಪಾಪ. ಆ ಪಕ್ಷಿಯ ಸಂಬಂಧಿ ಇರಬಹುದು ಇದು. ಅದು ಬಂಧಿಯಾಗಿರುವ ವಿಷಯ ತಿಳಿದು ದುಃಖ, ನೋವು ತಡೆಯಲಾರದೆ ಸತ್ತುಹೋಗಿರಬಹುದು' ಎಂದುಕೊಂಡು ತನ್ನ ಊರಿಗೆ ಹಿಂದಿರುಗಿದ.

ಪಂಜರದಲ್ಲಿದ್ದ ಪಕ್ಷಿ ವರ್ತಕನ್ನು ಕೇಳಿತು. 'ನಮ್ಮೂರಿನಿಂದ ಏನು ಸಮಾಚಾರ ತಂದಿದ್ದೀಯೆ?'

'ಏನು ಹೇಳಲಿ, ಹೇಗೆ ಹೇಳಲಿ? ಕೆಟ್ಟ ಸಮಾಚಾರವದು. ನೀನು ಬಂಧಿ

ಯಾಗಿರುವ ವಿಷಯ ತಿಳಿದು ನಿಮ್ಮ ಸಂಬಂಧಿ ಪಕ್ಷಿಯೊಂದು ನನ್ನ ಕಾಲಬಳಿ ಬಿದ್ದು ಸತ್ತುಹೋಯಿತು' ಎಂದ.

'ಅಯ್ಯೋ, ನನ್ನಿಂದಾಗಿ ಅದಕ್ಕೆ ಸಾವು ಬಂತೆ!' ಎಂದು ಚೀರಿದ ಪಂಜರದ ಪಕ್ಷಿ ಅಲ್ಲೇ ಕುಸಿದು ಕಣ್ಣುಮುಚ್ಚಿತು.

'ಛೆ! ಎಂತಹ ಕೆಲಸವಾಯಿತು. ನನ್ನ ಮುದ್ದಿನ ಪಕ್ಷಿಯೂ ಸತ್ತುಹೋಯಿತಲ್ಲ' ಎಂದು ದುಃಖದಿಂದ ವರ್ತಕ ಪಂಜರದ ಬಗಿಲು ತೆರೆದು ಮೃದುವಾಗಿ ಪಕ್ಷಿಯನ್ನು ತನ್ನ ಅಂಗೈಯಲ್ಲಿ ಇಟ್ಟುಕೊಂಡ. ಕೂಡಲೆ ರೆಕ್ಕೆಬಡಿದು ಮೇಲಕ್ಕೆ ಹಾರಿದ ಪಕ್ಷಿ, 'ನನಗೆ ಸ್ವಾತಂತ್ರ್ಯದ ಸಂದೇಶ ತಂದುಕೊಟ್ಟಿದ್ದಕ್ಕಾಗಿ ವಂದನೆಗಳು' ಎಂದು ಹೇಳಿ ಪುನ್ರನೆ ಸ್ವಚ್ಛಂದದ ಅಗಸಕ್ಕೆ ಹಾರಿಹೋಯಿತು.

ಬಾಗ್ದಾದಿಗೆ ಸಾವಿನದೂತ ಬಂದಾಗ

ಬಾಗ್ದಾದಿನ ಸೂಫಿ ಗುರುವಿನ ಶಿಷ್ಯನೊಬ್ಬ ಒಂದು ದಿನ ಉಪಾಹಾರಗೃಹದಲ್ಲಿ ಕೂತಿದ್ದಾಗ ಎರಡು ಆಕೃತಿಗಳು ತಮ್ಮಲ್ಲೇ ಮಾತನಾಡಿಕೊಳ್ಳುತ್ತಿರುವುದು ಕೇಳಿಸಿತು. ಅವುಗಳ ಮಾತುಕತೆಗಳಿಂದ ಆ ಆಕೃತಿಗಳಲ್ಲೊಂದು ಸಾವಿನದೂತನೆಂಬುದು ತಿಳಿಯಿತು.

'ಮುಂದಿನ ಮೂರು ವಾರಗಳಲ್ಲಿ ಈ ಊರಿನಿಂದ ಬಹಳಷ್ಟು ಜನರನ್ನು ಕರೆದೊಯ್ಯಬೇಕಿದೆ' ಎಂದ ಸಾವಿನದೂತ.

ಆ ಮಾತಿನಿಂದ ಹೆದರಿದ ಶಿಷ್ಯ, ಆ ಆಕೃತಿಗಳು ಹೊರಡುವವರೆಗೂ ಅವುಗಳ ಕಣ್ಣಿಗೆ ಬೀಳಬಾರದೆಂದು ಅಲ್ಲೇ ಅವಿತು ಕೂತ. ನಂತರ ಸ್ವಲ್ಪ ಬುದ್ಧಿ ಉಪಯೋಗಿಸಿ ಮೂರು ವಾರಗಳ ಕಾಲ ಬಾಗ್ದಾದ್ ಬಿಟ್ಟು ಹೋದರೆ ಸಾವಿನ ದೂತನ ಕಣ್ಣಿಗೆ ಬೀಳುವುದೇ ಇಲ್ಲ ಎಂದು ಯೋಚಿಸಿ ಕೂಡಲೆ ಅತ್ಯಂತ ವೇಗವಾಗಿ ಓಡುವ ಕುದುರೆಯೊಂದನ್ನು ಬಾಡಿಗೆಗೆ ಪಡೆದು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಸಮರಕಾಂಡ್‌ಗೆ ನಾಗಾಲೋಟದಿಂದ ಹೊರಟ.

ಇತ್ತ ಸಾವಿನದೂತ ಸೂಫಿ ಗುರುವನ್ನು ಭೇಟಿಯಾಗಿ ಲೋಕಾಭಿರಾಮವಾಗಿ ಮಾತನಾಡುತ್ತ ಕೊನೆಗೆ, 'ಎಲ್ಲಿ ನಿಮ್ಮ ಶಿಷ್ಯ ಕಾಣುತ್ತಿಲ್ಲವಲ್ಲ?' ಎಂದು ಕೇಳಿದ.

'ಇಲ್ಲೇ ಎಲ್ಲೋ ನಗರದಲ್ಲೇ ಪ್ರಾರ್ಥನೆ, ಧ್ಯಾನ ಮಾಡುತ್ತಾ ಇರಬಹುದು' ಎಂದರು ಗುರುಗಳು.

'ಹೌದೆ? ಆತ ನನ್ನ ಪಟ್ಟಿಯಲ್ಲಿದ್ದಾನೆ. ಅದರ ಪ್ರಕಾರ ನಾನು ಆತನನ್ನು ನಾಲ್ಕು ವಾರಗಳಲ್ಲಿ ಸಮರಕಾಂಡ್‌ನಿಂದ ಕೊಂಡೊಯ್ಯಬೇಕಾಗಿದೆ' ಎಂದ ಸಾವಿನದೂತ.

ವಿಧವೆಯ ಕೊಡುಗೆ

ಬಹಳ ಹಿಂದೆ ಪರ್ಷಿಯಾದಲ್ಲಿ ಶಾ ನಿಮಾತುಲ್ಲಾಹ್ ಎಂಬ ಕವಿ, ಸೂಫಿ ಗುರು ಒಬ್ಬರಿದ್ದರು. ಆತ ಒಬ್ಬ ಸಂತ ಹಾಗೂ ಸಜ್ಜನ. ಆಗ ಕುಂಟ ತೈಮೂರ್ ಅಲ್ಲಿನ ದೊರೆಯಾಗಿದ್ದ. ಆತ ಮಹಾ ಕ್ರೂರಿ. ಪ್ರಜೆಗಳೆಲ್ಲಾ ಆತನನ್ನು ದ್ವೇಷಿಸುತ್ತಿದ್ದರು. ಶಾ ನಿಮಾತುಲ್ಲಾಹ್‌ರಿಗೆ ತನ್ನ ಹಿರಿಯ ಅಧಿಕಾರಿ, ಮಂತ್ರಿಗಳನ್ನೊಳಗೊಂಡಂತೆ ಹಲವಾರು

ಜನ ಹಿಂಬಾಲಕರಿದ್ದಾರೆ ಹಾಗೂ ಆತನನ್ನು ಪ್ರೀತಿಸುತ್ತಾರೆಂದು ತಿಳಿದ ನಂತರ ತೈಮೂರ್ ಆತನನ್ನು ದ್ವೇಷಿಸತೊಡಗಿದ, ಆತನನ್ನು ಹೇಗಾದರೂ ಕೊಲ್ಲಬೇಕೆಂಬ ಆಲೋಚನೆ ಮಾಡಿದ.

ಕೊನೆಗೂ ತೈಮೂರ್‌ನಿಗೆ ಉಪಾಯವೊಂದು ಹೊಳೆಯಿತು. ಅದರಂತೆ ತಾನು ಎಲ್ಲರಿಗೂ ಶಾ ನಿಮಾತುಲ್ಲಾಹ್ ಒಬ್ಬ ಪವಿತ್ರ ವ್ಯಕ್ತಿ ಅಲ್ಲವೆಂದು ತೋರಿಸುವದಷ್ಟೇ ಅಲ್ಲ ಆತ ಒಬ್ಬ ಕೆಟ್ಟ ಮುಸಲ್ಮಾನ ಹಾಗೂ ಜನರನ್ನು ಮೋಸಗೊಳಿಸುತ್ತಿದ್ದಾನೆಂದು ಹೇಳಿ ಆತನನ್ನು ಕೊಲ್ಲುವ ಹುನ್ನಾರ ಹೂಡಿದ.

ತನ್ನ ಹಂಚಿಕೆಯಂತೆ ತೈಮೂರ್ ಶಾರವರ ಮನೆಗೆ ಭೇಟಿ ನೀಡಿದ. 'ನಿಮ್ಮ ಬಗ್ಗೆ ಬಹಳಷ್ಟು ಕೇಳಿದ್ದೆ. ತಮ್ಮನ್ನು ಭೇಟಿಯಾಗೋಣವೆಂದು ಸ್ವತಃ ಬಂದಿದ್ದೇನೆ' ಎಂದು ನಾಟಕೀಯವಾಗಿ ಹೇಳಿದ. ಸೂಫಿ ಸಂತ ಎಲ್ಲರನ್ನೂ ಸ್ವಾಗತಿಸುವಂತೆ ರಾಜನನ್ನೂ ಸ್ವಾಗತಿಸಿದರು. ಸೂಫಿ ಸಂತ ನೀಡಿದ ಎಲ್ಲಾ ಆಹಾರ ಪಾನೀಯಗಳನ್ನು ತಿರಸ್ಕರಿಸಿ ತನ್ನ ಊಟ ತಾನೇ ತಂದಿರುವುದಾಗಿ ತಿಳಿಸಿದ ಹಾಗೂ ತನ್ನೊಂದಿಗೆ ಊಟ ಮಾಡುವಂತೆ ಸೂಫಿ ಸಂತನನ್ನೂ ರಾಜ ಆಹ್ವಾನಿಸಿದ. ರಾಜನ ಸಹಚರರು ಅವರ ಮುಂದೆ ರೊಟ್ಟಿ, ಕುರಿಮಾಂಸ, ಹಣ್ಣು ಹಂಪಲು, ಖರ್ಜೂರ ಎಲ್ಲಾ ಜೋಡಿಸಿಟ್ಟರು. ಇಬ್ಬರೂ ಮೌನವಾಗಿ ಊಟ ಮಾಡಿದರು.

ಊಟದ ನಂತರ ರಾಜ ತೈಮೂರ್ ಶಾರವರನ್ನು ಕೇಳಿದ, 'ನೀವು ಸಚ್ಚಾರಿತ್ರ್ಯ ಉಳ್ಳ ಮುಸಲ್ಮಾನರೆಂದು ಕೇಳಿದ್ದೇನೆ. ನೀವು ಯಾವುದೇ ಹರಾಮ್ ಅಥವಾ ನಿಷೇಧಿತ ಆಹಾರ ತಿನ್ನುವುದಿಲ್ಲವಂತೆ ಹೌದೆ?'

'ಒಳ್ಳೆಯ ಮುಸಲ್ಮಾನ ಹೌದೋ ಅಲ್ಲವೋ ಎಂಬುದನ್ನು ದೇವರು ಮಾತ್ರ ನಿರ್ಧರಿಸಬಲ್ಲ. ಆದರೆ ನಾನು ಯಾವುದೇ ಹರಾಮ್ ಆಹಾರ ತಿನ್ನುವುದಿಲ್ಲವೆಂಬುದು ನಿಜ' ಎಂದರು ಶಾ.

'ಹಾಗಾದರೆ ನೀನೊಬ್ಬ ಸುಳ್ಳುಗಾರ. ಈಗ ನೀನು ತಿಂದ ಕುರಿಮಾಂಸ ಒಂದು ಹರಾಮ್ ಆಹಾರ' ಎಂದ ತೈಮೂರ್ ಕೂಡಲೆ. ಆತನ ಮುಖದಲ್ಲಿ ತನ್ನ ಯೋಜನೆ ಫಲಿಸಿತೆಂಬ ಸಂತೋಷವಿದ್ದಿತು.

'ನಿನ್ನ ದೋಷಾರೋಪಣೆಗೆ ಕಾರಣವೇನು?' ಶಾ ಶಾಂತವಾಗಿ ಕೇಳಿದರು.

ರಾಜ ತೈಮೂರ್ ತನ್ನ ಅಡಿಗೆಯವನನ್ನು ಕರೆದು ತಾವು ಈಗ ತಿಂದ ಕುರಿಮಾಂಸ ಎಲ್ಲಿ ಪಡೆದದ್ದು ತಿಳಿಸುವಂತೆ ಹೇಳಿದ.

'ರಾಜನ ಆಜ್ಞೆಯಂತೆ ನಾನು ಒಂದು ಕುರಿಯನ್ನು ಕದ್ದು ಅದರಿಂದ ಮಾಂಸದ ಅಡಿಗೆ ಮಾಡಿದೆ. ಆ ಕುರಿಯನ್ನು ಮುದುಕಿಯೊಬ್ಬಳಿಂದ ಕದ್ದೆ' ಎಂದು ಅಡಿಗೆಯವ ಹೇಳಿದ.

'ಈಗ ನೀನು ತಿಂದ ಆಹಾರ ಹರಾಮ್ ಅಲ್ಲವೆ? ನೀನು ಇತರರಿಗೆ ಸೇರಿದ್ದನ್ನು ತಿಂದಿದ್ದೀಯ. ಇದಕ್ಕಿಂತ ಸಾಕ್ಷಿ ಬೇಕೆ?' ತೈಮೂರ್ ಕೇಳಿದ ಕುಹಕ ನಗೆಯಿಂದ.

'ಆ ಮಾಂಸ ನೀನೂ ತಿಂದೆಯಲ್ಲವೆ?' ಶಾ ತೈಮೂರ್‌ನನ್ನು ಕೇಳಿದರು.

'ಹೌದು, ಆದರೆ ನಾನೇನೂ ಸೂಫಿ ಸಂತನಲ್ಲ ಹಾಗೂ ಪವಿತ್ರನೂ ಅಲ್ಲ. ನನಗೆ ಹರಾಮ್ ಆಗಲಿ ಹಲಾಲ್ ಆಗಲಿ ಎರಡೂ ಒಂದೇ. ನಿನಗೀಗ ಮರಣ ದಂಡನೆ ವಿಧಿಸಲೇಬೇಕು. ಜನರಿಗೆ ನೀನೊಂದು ಮಾದರಿಯಾಗಬೇಕು'. ತನ್ನ ಯೋಜನೆ ಫಲಿಸಿತೆಂಬ ಸಂತೋಷದಿಂದ ಹೇಳಿದ ತೈಮೂರ್.

'ಆಗಲಿ ನಾನದಕ್ಕೆ ಸಿದ್ಧ. ಅದಕ್ಕೆ ಮೊದಲು ಆ ಮುದುಕಿಯನ್ನು ಕರೆದು ನಡೆದದ್ದು ವಿಚಾರಿಸೋಣ' ಎಂದರು ಶಾ.

ಅಡಿಗೆಯವ ಯಾವ ಮುದುಕಿಯಿಂದ ಕುರಿ ಕದ್ದಿದ್ದನೋ ಆ ಮುದುಕಿಯನ್ನು ಕರೆತರುವಂತೆ ಭಟರಿಗೆ ಹೇಳಿ ಕಳುಹಿಸಿದರು. ಆ ಮುದುಕಿ ಶಾ ನಿಮಾತುಲ್ಲಾಹ್‌ರನ್ನು ನೋಡಿದ ಕೂಡಲೇ ಅಳತೊಡಗಿದಳು.

'ನನ್ನನ್ನು ಕ್ಷಮಿಸಿ ಸ್ವಾಮಿ. ನಾನು ನಿಮ್ಮ ಬಳೀ ಬರಿಗೈಲಿ ಬರುತ್ತಿದ್ದೇನೆ. ನಾನೊಬ್ಬ ಬಡ ವಿಧವೆ. ನನ್ನ ಮಗ ಕುರಿವ್ಯಾಪಾರ ಮಾಡುತ್ತಾನೆ. ಕೆಲದಿನಗಳ ಹಿಂದೆ ವ್ಯಾಪರಕ್ಕಾಗಿ ಬೇರೆ ಊರಿಗೆ ಹೋಗಿದ್ದ. ಅವನಿಗೇನೋ ಅನಾಹುತವಾಗಿದೆಯೆಂದು ತಿಳಿದುಬಂತು. ನಾನು ಹೆದರಿ ಕಂಗಾಲಾಗಿದ್ದೆ. ಆದರೆ ದೇವರ ದಯೆಯಿಂದ ಆತನಿಗೇನೂ ಆಗಿರಲಿಲ್ಲ. ಬದಲಿಗೆ ಅವನ ವ್ಯಾಪಾರ ಚೆನ್ನಾಗಿಯೇ ಆಗಿತ್ತು. ಅದರ ಸಂತೋಷದಿಂದ ಈ ದಿನ ಬೆಳಿಗ್ಗೆ ನಿಮ್ಮನ್ನು ಭೇಟಿಯಾಗಿ ಒಂದು ಕುರಿಯನ್ನು ನಿಮಗೆ ಕೊಡೋಣವೆಂದು ಬರುತ್ತಿದ್ದೆ. ಆದರೆ ಯಾರೋ ದುಷ್ಟನೊಬ್ಬ ಅದನ್ನು ಕಿತ್ತುಕೊಂಡು ಹೋದ. ಬರಿಗೈಲಿ ಬಂದ ನನ್ನನ್ನು ಕ್ಷಮಿಸಿ' ಎಂದು ಅತ್ತಳು.

ಶಾ ಆಕೆಯನ್ನು ಸಂತೈಸಿ, ಆ ಕುರಿ ಈಗಾಗಲೆ ತನ್ನನ್ನು ತಲುಪಿದೆಯೆಂದು ಹೇಳಿ ನಡೆದದ್ದನ್ನೆಲ್ಲಾ ವಿವರಿಸಿದರು. ಒಂದಲ್ಲ ಒಂದು ರೀತಿ ತನ್ನ ಆಸೆ ಈಡೇರಿದ್ದಕ್ಕೆ ಆಕೆ ಸಂತೋಷದಿಂದ ಹೊರಟಳು.

ಇದನ್ನೆಲ್ಲಾ ಅಚ್ಚರಿಯಿಂದ ನೋಡುತ್ತಿದ್ದ ರಾಜ ತೈಮೂರ್‌ನಿಗೆ ಸೂಫಿ ಸಂತ ನಿಜವಾಗಿ ಪವಿತ್ರನೆಂಬುದರಲ್ಲಿ ಸಂದೇಹವಿಲ್ಲದಂತಾಯಿತು. ಆದರೂ ತೈಮೂರ್, 'ಶಾ ಪದದ ಅರ್ಥ ರಾಜ ಎಂದು, ನಾನು ನಿಜವಾದ ರಾಜ ತೈಮೂರ್. ಒಂದು ರಾಜ್ಯಕ್ಕೆ ಇಬ್ಬರು ರಾಜರಿರುವಂತಿಲ್ಲ. ನನ್ನ ರಾಜ್ಯ ಬಿಟ್ಟು ಹೊರಟುಹೋಗು' ಎಂದು ಆಜ್ಞಾಪಿಸಿದ. ಶಾ ನಿಮಾತುಲ್ಲಾಹ್ ಪ್ರತಿಭಟಿಸದೆ ರಾಜ್ಯ ಬಿಟ್ಟು ಹೊರಟುಹೋದರು. ಕೆಲ ವರ್ಷಗಳ ಬಳಿಕ ತೈಮೂರ್ ಸತ್ತ. ನಂತರ ಆತನ ಮಗ ಶಾ ರುಖ್ ರಾಜನಾದ. ಆತನಿಗೆ ಶಾರವರ ಬಗ್ಗೆ ಗೌರವ ಪೂಜ್ಯ ಭಾವನೆಯಿತ್ತು. ಹಿಂದಿರುಗುವಂತೆ ಶಾರವರನ್ನು ಪ್ರಾರ್ಥಿಸಿ ತನ್ನ ರಾಜ್ಯಕ್ಕೆ ಮತ್ತೆ ಕರೆದುಕೊಂಡ.

ಯಾರೂ ಇಲ್ಲದ ಜಾಗ

ಬಾಗ್ದಾದಿನ ಹಜ್ರತ್ ಜುನೈದ್ ಎಂಬ ಸೂಫಿ ಗುರುಗಳಿಗೆ ಇಪ್ಪತ್ತು ಶಿಷ್ಯರಿದ್ದರು. ಅವರಲ್ಲಿ ಹತ್ತೊಂಬತ್ತು ಶಿಷ್ಯರು ಉಳಿದೊಬ್ಬನನ್ನು ದಡ್ಡನೆಂದು ಪರಿಗಣಿಸಿದ್ದರು. ಒಂದು ದಿನ ಹಜ್ರತ್‌ಗೆ ತಮ್ಮ ಶಿಷ್ಯರ ಗೊಣಗಾಟ ಕೇಳಿಸಿತು. 'ನಾವೆಲ್ಲ ಗುರುಗಳ ಮಾತು ಚಾಚೂ ತಪ್ಪದೆ ಪಾಲಿಸುತ್ತೇವೆ. ಆದರೂ ಅವರ ಎಲ್ಲಾ ಒಲವು ಆ ದಡ್ಡನ ಮೇಲೆ ಇರುತ್ತದೆ' ಎಂದುಕೊಳ್ಳುತ್ತಿದ್ದರು ಶಿಷ್ಯರು.

'ಈ ಹತ್ತೊಂಬತ್ತು ಶಿಷ್ಯರಿಗೆ ಅಹಂ ಹೆಚ್ಚಾಗಿದೆ. ಅವರಿಗೆ ಸರಿಯಾದ ಪಾಠ ಕಲಿಸಬೇಕು' ಎಂದು ನಿರ್ಧರಿಸಿದ ಹಜ್ರತ್ ತಮ್ಮ ಎಲ್ಲಾ ಶಿಷ್ಯರನ್ನು ಕರೆದು ಮಾರುಕಟ್ಟೆಗೆ ಹೋಗಿ ಒಂದೊಂದು ಕೋಳಿ ತರುವಂತೆ ಹೇಳಿದರು.

'ಏಕೆ ಕೋಳಿ ತರಲು ಹೇಳಿದ್ದಾರೆ? ನಮಗೇನು ಕೋಳಿ ಸಾಕಲು ಹೇಳುತ್ತಾರೋ?' ಎಂದ ಒಬ್ಬ ಶಿಷ್ಯ.

'ನಮ್ಮಂಥ ಶಿಷ್ಯರನ್ನು ಪಡೆದು ಸಂತೋಷಗೊಂಡಿರುವ ಅವರು ನಮಗೆಲ್ಲಾ ಕೋಳಿಯೂಟದ ಔತಣ ಏರ್ಪಡಿಸಬಹುದು' ಎಂದ ಮತ್ತೊಬ್ಬ.

'ನಮ್ಮ ವಿಧೇಯತೆ ಪರೀಕ್ಷಿಸಲು ಈ ಕೆಲಸ ಹೇಳಿದ್ದಾರೆ' ಎಂದ ಮಗುದೊಬ್ಬ.

ಆದರೆ ದಡ್ಡ ಶಿಷ್ಯ ಏನೂ ಮಾತನಾಡಲಿಲ್ಲ.

ಇಪ್ಪತ್ತು ಶಿಷ್ಯರೂ ಒಂದೊಂದು ಕೋಳಿ ಹಿಡಿದು ಬಂದರು. ಹಜ್ರತ್ ಅವರಿಗೆ, 'ನೀವೆಲ್ಲರೂ ಬೇರೆ ಬೇರೆ ದಿಕ್ಕಿನಲ್ಲಿ ಯಾರೂ ಇಲ್ಲದಿರುವ ಜಾಗಕ್ಕೆ ಹೋಗಿ ನಿಮ್ಮ ನಿಮ್ಮ ಕೋಳಿಯನ್ನು ಕೊಂದು ತನ್ನಿ' ಎಂದರು.

ಶಿಷ್ಯರು ತಕ್ಷಣವೇ ಹೊರಡಲನುವಾದರು. ಆದರೆ ದಡ್ಡ ಶಿಷ್ಯ ಅಲ್ಲೇ ಕೂತಿದ್ದ. ಸ್ವಲ್ಪ ಸಮಯದ ನಂತರ ಹತ್ತೊಂಬತ್ತು ಜನ ಶಿಷ್ಯರು ತಮ್ಮ ತಮ್ಮ ಸತ್ತ ಕೋಳಿ ಹಿಡಿದು ಬಂದರು. ದಡ್ಡ ಶಿಷ್ಯ ಅಲ್ಲೇ ಕೂತಿದ್ದ. ಅವನ ಕೋಳಿ ಜೀವಂತವಾಗಿಯೇ ಇತ್ತು. ಗುರುಗಳು ಬಂದು ಅವರ ಆದೇಶವನ್ನು ಪಾಲಿಸಿದ್ದಕ್ಕೆ ತಮ್ಮನ್ನು ಹೊಗಳಿ ಆ ದಡ್ಡನನ್ನು ಚೆನ್ನಾಗಿ ಬೈಯುತ್ತಾರೆಂದುಕೊಂಡರು.

ಹಜ್ರತ್ ಬಂದು 'ನಾನು ಹೇಳಿದ ಕೆಲಸ ಮಾಡಿದಿರಾ?' ಎಂದು ಶಿಷ್ಯರನ್ನು ಕೇಳಿದರು. ಎಲ್ಲರೂ 'ಹೌದು' ಎಂದರು. ದಡ್ಡ ಶಿಷ್ಯ ಮುಂದೆ ಬಂದು, 'ಹಜ್ರತ್, ಯಾರೂ ಇಲ್ಲದ ಜಾಗಕ್ಕೆ ಹೋಗಿ ಎಂದು ನೀವು ಹೇಳಿದಿರಿ. ದೇವರು ಎಲ್ಲೆಲ್ಲೂ ಇರುವುದರಿಂದ ಆತ ಇಲ್ಲದ ಜಾಗವೇ ಇಲ್ಲ. ಹಾಗಾಗಿ ನಾನು ಕೋಳಿಯನ್ನು ಕೊಲ್ಲಲಾಗಲಿಲ್ಲ' ಎಂದ. ಹಜ್ರತ್ ಇತರ ಶಿಷ್ಯರನ್ನು ನೋಡಿ ಮುಗುಳ್ನಕ್ಕರು. ಅವರು ಬೇರೇನೂ ಹೇಳಬೇಕಿರಲಿಲ್ಲ. ದಡ್ಡರ್‍ಯಾರೆಂಬುದು ಅವರಿಗೂ ಅರ್ಥವಾಗಿತ್ತು.

ನಾಯಿಗಿಂತ ಮೇಲು

ಖೊರಾಸಾನ್‌ನ ರಾಜಕುಮಾರ ಇಬ್ರಾಹಿಂ ಬಿನ್ ಅದಮ್ ತನ್ನ ಸಿರಿಸಂಪತ್ತು, ಅರಮನೆ ಎಲ್ಲಾ ತೊರೆದು ಹರಕಲು ಉಣ್ಣೆ ಬಟ್ಟೆ ತೊಟ್ಟು ಊರಿಂದ ಊರಿಗೆ ಅಲೆದಾಡುವ ಸೂಫಿಯಾಗಲು ನಿರ್ಧರಿಸಿದ. ಆತನಿಗೊಬ್ಬ ದಾರಿತೋರುವ ಗುರುವಿನ ಅವಶ್ಯಕತೆಯಿತ್ತು. ದೇವರನ್ನು ಅರಸಲು ಹಾಗೂ ಆತನ ಸೇವೆ ಮಾಡಲು ಉತ್ತಮ ದಾರಿ ಯಾವುದೆಂಬುದು ಆತನಿಗೆ ತಿಳಿದಿರಲಿಲ್ಲ. ತನ್ನ ಕತ್ತೆಯ ಮೇಲೆ ಕೂತು ಗುರುವಿನ ಅನ್ವೇಷಣೆಯಲ್ಲಿ ಊರೂರು ಅಲೆಯುತ್ತಿದ್ದ.

ಅವರಿವರನ್ನು ಕೇಳಿ ಬಾಲ್ಕ್‌ನ ಸೂಫಿ ಗುರು ಅಬು ಆಲಿ ಸಾಖಿಖ್‌ರ ಬಳಿ ಬಂದ, ಇಬ್ರಾಹಿಂ ಹರಕಲು ಬಟ್ಟೆಯಲ್ಲಿದ್ದರೂ ಆತ ಖೊರಸಾನ್‌ನ ರಾಜಕುಮಾರನೆಂದೂ ಹಾಗೂ ಆತ ಮುಂದೊಂದು ದಿನ ಮಹಾನ್ ಸೂಫಿ ಸಂತನಾಗುವನೆಂಬುದನ್ನು ಗುರು ಅಬು ಆಲಿ ಗುರುತಿಸಿದರು.

'ಹೇಳು ಯುವಕನೆ, ಬದುಕಲು ಏನು ಮಾಡುತ್ತಿದ್ದೀಯಾ?' ಗುರು ಕೇಳಿದರು. 'ಅಲ್ಲಲ್ಲಿ ಹುಡುಕಿ ಸಣ್ಣ ಪುಟ್ಟ ಕೆಲಸ ಮಾಡುತ್ತೇನೆ. ಏನೂ ಕೆಲಸ ಸಿಗದೇ ಇದ್ದಾಗ ಯಾರಾದರೂ ಊಟ, ಆಶ್ರಯ ಕೊಡುತ್ತಾರೆ. ಏನೂ ಸಿಗದಿದ್ದಾಗ ಕೆಲಸ ಹುಡುಕುವದನ್ನೇ ಮುಂದುವರಿಸುತ್ತೇನೆ. ಏನಾದರೂ ಸಿಕ್ಕಾಗ ದೇವರ ಕೃಪೆಯಿಂದ ಭಾವಿಸಿ, ದೇವರನ್ನು ವಂದಿಸುತ್ತೇನೆ. ಇಲ್ಲದಿದ್ದಾಗ ತಾಳ್ಮೆಯಿಂದ ಇಂದಲ್ಲ ನಾಳೆ ಏನಾದರೂ ಸಿಕ್ಕೇ ಸಿಗುತ್ತದೆಂಬ ಭರವಸೆಯಿಂದ ಹುಡುಕುವ ಕಾಯಕ ಮುಂದುವರಿಸುತ್ತೇನೆ' ಎಂದು ಇಬ್ರಾಹಿಂ ಹೇಳಿದ.

ಅಬು ಆಲಿಯ ಇತರ ಶಿಷ್ಯರೆಲ್ಲಾ ಈ ಉತ್ತರದಿಂದ ಸಂತುಷ್ಟರಾದಂತೆ ತಲೆದೂಗಿದರು. ಆದರೆ ಸೂಫಿ ಗುರುವಿಗೆ ಈ ಉತ್ತರ ಸರಿಕಾಣಲಿಲ್ಲ.

'ನಿನ್ನದು ನಾಯಿಯ ಬದುಕಲ್ಲವೆ? ಖೊರಸಾನ್‌ನ ಪ್ರತಿಯೊಂದು ನಾಯಿಯೂ ನಿನ್ನ ಹಾಗೇ ಬದುಕುತ್ತದೆ. ಅವಕ್ಕೇನಾದರೂ ಕೊಟ್ಟಲ್ಲಿ ಖುಷಿಯಿಂದ ಬಾಲ ಅಲ್ಲಾಡಿಸುತ್ತವೆ. ಏನೂ ಕೊಡದಿದ್ದಲ್ಲಿ ತಾಳ್ಮೆಯಿಂದ ಕಾಯುತ್ತಾ ಕೂಡುತ್ತವೆ. ನೀನೊಬ್ಬ ಮನುಷ್ಯ, ಮನುಷ್ಯನ ಹಾಗೆ ಬದುಕಬೇಕು' ಎಂದು ಗದರಿಸಿದರು ಗುರುಗಳು.

ಇತರ ಶಿಷ್ಯರಿಗೆ ಗಾಬರಿಯಾಯಿತು. 'ಯಾರೋ ಅಪರಿಚಿತ ಉಪದೇಶ ಕೇಳಲು ಬಂದಾಗ ಈ ರೀತಿ ಗುರುಗಳು ಗದರಿಸುತ್ತಿದ್ದಾರಲ್ಲ' ಎಂದುಕೊಂಡರು.

ಇಬ್ರಾಹಿಂ ಶಾಂತವಾಗಿ ನಮ್ರನಾಗಿಯೆ ಕೈಕಟ್ಟಿ ನಿಂತಿದ್ದ. 'ನೀವು ಹೇಳುವುದು ಸರಿ. ಮನುಷ್ಯನ ಹಾಗೆ ಬದುಕುವುದು ಹೇಗೆಂದು ತಿಳಿಸಿ' ಎಂದು ಕೇಳಿಕೊಂಡ.

'ನನಗೆ ಯಾರಾದರೂ ಕೊಡುಗೆಯಾಗಿಯೋ ಅಥವಾ ಸಂಬಳವಾಗಿಯೋ ಕೊಟ್ಟಲ್ಲಿ ನಾನವನ್ನು ಅದರ ಅವಶ್ಯಕತೆ ಇರುವವರಿಗೆ ಕೊಟ್ಟುಬಿಡುತ್ತೇನೆ. ನನಗೇನೂ ಸಿಗದಿದ್ದಲ್ಲಿ ದೇವರ ಕೃಪೆಯಿಂದ ದೇವರನ್ನು ವಂದಿಸುತ್ತೇನೆ' ಗುರುಗಳು ಹೇಳಿದರು.

ಆ ದಿನ ಕಲಿತ ಬಹುಮುಖ್ಯ ಪಾಠವನ್ನು ಇಬ್ರಾಹಿಂ ಎಂದೆಂದಿಗೂ ಮರೆಯಲಿಲ್ಲ. ಕೆಲದಿನಗಳು ಆತ ಗುರುವಿನ ಸಂಗದಲ್ಲೇ ಕಳೆದ. ಅಲ್ಲಿಂದ ಹೊರಟು ನಿಂತಾಗ ಗುರು ಅಬು ಆಲಿ ಹೇಳಿದರು. 'ದೇವರ ಸೇವೆ ಹೇಗೆ ಮಾಡಬೇಕೆಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ. ಮೊದಲಿಗೆ ಜನರ ಸೇವೆ ಹೇಗೆ ಮಾಡಬೇಕೆಂಬುದನ್ನು ಕಲಿ. ನಿನಗೆ ಹಾದಿ ತೋರಿಸುವ ಗುರುಗಳನ್ನು ಅರಸುತ್ತಾ ಹೋಗಬೇಡ. ಸಾಧಾರಣ ಮನುಷ್ಯರಿಂದಲೂ ನೀನು ಬಹಳಷ್ಟು ಕಲಿಯಬಹುದು. ಯಾರೂ ಮನುಷ್ಯರಿಲ್ಲದಿದ್ದಲ್ಲಿ ದೇವರೇ ಸ್ವತಃ ನಿನ್ನ ಮಾರ್ಗದರ್ಶನಕ್ಕೆ ದೇವತೆಗಳನ್ನು ಕಳುಹಿಸುತ್ತಾನೆ'.

ಕತ್ತೆ

ಖೊರಾಸಾನ್‌ನ ರಾಜಕುಮಾರ ಇಬ್ರಾಹಿಂ ಬಿನ್ ಅದಮ್ ಸೂಫಿಯಾಗಲು ಊರೂರು ಅಲೆಯುತ್ತಿದ್ದಾಗ ಹಾದಿಯೊಂದರಲ್ಲಿ ಸಾಲ್ ಅಬ್ದುಲ್ಲ ಎಂಬಾತ ಪರಿಚಯವಾದ. ಆತ ಸಹ ತನ್ನ ಕತ್ತೆಯ ಮೇಲೆ ಕೂತು ಪಕ್ಕದೂರಿಗೆ ಹೋಗುತ್ತಿದ್ದ. ತನ್ನೊಂದಿಗೆ ಬರುವೆಯಾ ಎಂದು ಇಬ್ರಾಹಿಂನನ್ನು ಕೇಳಿದ್ದಕ್ಕೆ ಆತ ಕೂಡಲೇ ಒಪ್ಪಿಕೊಂಡ. ಏಕೆಂದರೆ ಇಬ್ರಾಹಿಂನಿಗೆ ಇಂಥದೇ ಊರಿಗೆ ಹೋಗಬೇಕೆಂದೇನೂ ಇರಲಿಲ್ಲ.

ಅವರಿಬ್ಬರೂ ಗೆಳೆಯರಾಗಿ ತಮ್ಮಲ್ಲಿದ್ದ ಆಹಾರ ನೀರು ಹಂಚಿಕೊಂಡು ಪ್ರಯಾಣ ಮುಂದುವರೆಸಿದರು. ಒಂದು ದಿನ ಅಬ್ದುಲ್ಲಾ ಇದ್ದಕ್ಕಿದ್ದಂತೆ ಕಾಯಿಲೆ ಬಿದ್ದ. ಆತನಿಗೊಂದು ಕೋಣೆ ಬಾಡಿಗೆಗೆ ಪಡೆಯಲು ಹಾಗೂ ಔಷಧಿಗಳನ್ನು ಕೊಳ್ಳಲು ಇಬ್ರಾಹಿಂ ತನ್ನ ಕತ್ತೆ, ನೀರಿನ ಚೀಲ ಹಾಗೂ ತನ್ನ ಹೆಚ್ಚಿನ ಬಟ್ಟೆಗಳನ್ನು ಮಾರಾಟ ಮಾಡಿದ. ಕಾಯಿಲೆ ಬಿದ್ದ ಗೆಳೆಯನನ್ನು ಬಹಳ ಆಸ್ಥೆಯಿಂದ ಉಪಚರಿಸಿದ. ಅಬ್ದುಲ್ಲಾನಿಗೆ ಸುಡುವ ಜ್ವರವಿದ್ದುದರಿಂದ ಆತನಿಗೆ ತಾನೆಲ್ಲಿದ್ದೇನೆ, ತನ್ನನ್ನು ಆರೈಕೆ ಮಾಡುತ್ತಿರುವವರು ಯಾರು ಎಂಬುದರ ಬಗ್ಗೆ ಪರಿವೆಯೇ ಇರಲಿಲ್ಲ. ಕೊನೆಗೆ ಆತನಿಗೆ ಜ್ವರ ಕಡಮೆಯಾಗಿ ಕೊಂಚಕೊಂಚ ಎಚ್ಚರಬಂದಿತು.

'ನೀನು ಬಹಳ ನಿತ್ರಾಣವಾಗಿದ್ದೀಯ. ಏನಾದರೂ ಆಹಾರ ತಿನ್ನು' ಎಂದ ಇಬ್ರಾಹಿಂ.

ಆದರೆ ಜ್ವರದಿಂದ ಬಳಲಿದ್ದ ಅಬ್ದುಲ್ಲಾನಿಗೆ ಏನೂ ತಿನ್ನಬೇಕೆನ್ನಿಸಲಿಲ್ಲ. ಇಬ್ರಾಹಿಂ ಬಹಳ ಬಲವಂತ ಮಾಡಿದ ಮೇಲೆ ಯಾವುದೋ ಒಂದು ಹಣ್ಣನ್ನು ತಿನ್ನಬೇಕೆಂಬ ಇಚ್ಛೆ ವ್ಯಕ್ತಪಡಿಸಿದ. ಆದರೆ ಆ ಹಣ್ಣು ಬಹಳ ಬೆಲೆ ಬಾಳುವಂತಹದಾಗಿದ್ದು ಅದನ್ನು ಕೊಳ್ಳಲು ಬೇಕಾಗುವ ಹಣಕ್ಕಾಗಿ ಇಬ್ರಾಹಿಂ ಬಳಿ ಮಾರಾಟ ಮಾಡಲು ಏನೂ ಉಳಿದಿರಲಿಲ್ಲ. ಅಬ್ದುಲ್ಲಾನ ಕತ್ತೆ ಮಾತ್ರ ಇತ್ತು. ಇಬ್ರಾಹಿಂ ಅದನ್ನೇ ಮಾರಾಟ ಮಾಡಿ ಬಂದ ಹಣದಿಂದ ಅಬ್ದುಲ್ಲಾ ಹೇಳಿದ ಹಣ್ಣನ್ನು ಹಾಗೂ ಇತರ ಆಹಾರವನ್ನು ಸಹ ಕೊಂಡು ತಂದ.

ಅಬ್ದುಲ್ಲಾ ಕ್ರಮೇಣ ಚೇತರಿಸಿಕೊಂಡ. ಆದರೂ ಸಂಪೂರ್ಣ ತ್ರಾಣ ಬಂದಿರಲಿಲ್ಲ. 'ನಮ್ಮ ಪ್ರಯಾಣ ಮುದುವರೆಸೋಣ. ಈಗಾಗಲೇ ನನ್ನ ಕಾಯಿಲೆಯಿಂದ ಬಹಳಷ್ಟು ಸಮಯ ವ್ಯರ್ಥವಾಗಿದೆ' ಎಂದ ಅಬ್ದುಲ್ಲಾ. ತನ್ನ ಚಿಕಿತ್ಸೆ ಹಾಗೂ ಇತರ ವೆಚ್ಚಕ್ಕಾಗಿ ತಮ್ಮಿಬ್ಬರ ಕತ್ತೆಗಳನ್ನು ಇಬ್ರಾಹಿಂ ಮಾರಾಟ ಮಾಡಿರುವುದರ ಅರಿವಿಲ್ಲದ ಅಬ್ದುಲ್ಲಾ ಹೊರಬಂದು ತನ್ನ ಕತ್ತೆಯ ಹೆಸರು ಹೇಳುತ್ತಾ ಕೂಗಿದ.

'ಇಗೋ ಬಂದೆ. ನಾನೇ ನಿನ್ನ ಕತ್ತೆ. ನಿನ್ನನ್ನು ಹೊತ್ತೊಯ್ಯುತ್ತೇನೆ' ಎಂದು ಹೇಳುತ್ತಾ ಸಂತೋಷದಿಂದ ಮುಂದೆ ಬಂದ ಇಬ್ರಾಹಿಂ.

ಅಬ್ದುಲ್ಲಾನಿಗೆ ಎಲ್ಲವೂ ಅರ್ಥವಾಯಿತು. ಹಿಂಬ್ರಾಹಿಂ ಕತ್ತೆ ಹಾಗೂ ಬಟ್ಟೆಬರೆಗಳ ಚೀಲವೂ ಕಣ್ಮರೆಯಾಗಿರುವುದು ಕಂಡುಬಂತು. 'ಗೆಳೆಯಾ ನನಗೆ ಎಷ್ಟೊಂದು ಸೇವೆ ಮಾಡಿದ್ದೀಯ! ನನ್ನಿಂದಾಗಿ ನಿನ್ನ ಕತ್ತೆ, ಬಟ್ಟೆ ಹಾಗೂ ನೀರಿನ ಚೀಲವನ್ನೂ ಸಹ ಮಾರಾಟ ಮಾಡಿದ್ದೀಯೆ!' ಎಂದು ಅಬ್ದುಲ್ಲಾ ಕಣ್ಣೀರಿಟ್ಟ.

ಅವನನ್ನು ಸಂತೈಸುತ್ತಾ, ದೇವರು ಕರುಣಾಮಯಿ, ಆತನನ್ನು ಹೊತ್ತೊಯ್ಯುವಾಗ ಹೊರೆಯಾಗದಿರಲೆಂದು ತನ್ನ ಬಟ್ಟೆಯ ಚೀಲವನ್ನು ಮಾರಾಟಮಾಡುವಂತೆ ಮಾಡಿದ್ದಾನೆ ಎಂದು ಹೇಳಿ ಅಬ್ದುಲ್ಲಾ ನಿರಾಕರಿಸಿದರೂ ಸಹ ಬಿಡದೆ ಆತನನ್ನು ಹೊತ್ತು ಪ್ರಯಾಣ ಮುಂದುವರೆಸಿದ. ಪ್ರಯಾಣದ ಹಾದಿಯಲ್ಲಿ ಅಬ್ದುಲ್ಲಾ ಇಬ್ರಾಹಿಂನಿಂದ ಬಹಳಷ್ಟು ವಿಷಯ ಕಲಿತ. ಮುಂದೊಂದು ದಿನ ಆತ ಸಹ ಒಬ್ಬ ಸೂಫಿ ಸಂತನಾದ.

ಹುಳಿ ದಾಳಿಂಬೆ

ಇಬ್ರಾಹಿಂ ಬಿನ್ ಅದಮ್ ತೋಟವೊಂದರಲ್ಲಿ ಮಾಲಿಯಾಗಿ ಕೆಲಸ ಮಾಡುತ್ತಿದ್ದ. ಆ ತೋಟದಲ್ಲಿ ಹಲವಾರು ವಿಧದ ಹಣ್ಣಿನ ಮರಗಳಿದ್ದವು. ಕೆಲಸ ಕಷ್ಟದ್ದಾದರೂ ಪ್ರಕೃತಿಯ ಸಂಗದಲ್ಲಿರಲು ಅವಕಾಶವಿರುವುದರಿಂದ ಹಾಗೂ ಸುಂದರ ಹೂ, ಮರಗಿಡಗಳನ್ನು ಸೃಷ್ಟಿಸಿದಾತನನ್ನು ಏಕಾಂತದಲ್ಲಿ ಧ್ಯಾನ ಮಾಡಬಹುದಾದುದರಿಂದ ನಮ್ರತೆಯಿಂದ ಕೆಲಸ ಮಾಡುತ್ತಿದ.

ಒಂದು ದಿವಸ ಯಜಮಾನ, 'ಈಗ ಯಾವ ಹಣ್ಣು ಸಿಗುತ್ತದೆ?' ಎಂದು ಮಾಲಿ ಇಬ್ರಾಹಿಂನನ್ನು ಕೇಳಿದ.

'ಈಗ ದಾಳಿಂಬೆಯ ಕಾಲ. ಬೇಕಾದಷ್ಟು ದಾಳಿಂಬೆ ಬಿಟ್ಟಿವೆ' ಎಂದ ಇಬ್ರಾಹಿಂ. ಒಂದಷ್ಟು ಹಣ್ಣಾಗಿರುವ ದಾಳಿಂಬೆ ಕಿತ್ತು ತರುವಂತೆ ತೋಟದ ಯಜಮಾನ ಇಬ್ರಾಹಿಂಗೆ ತಿಳಿಸಿದ. ತಿಳಿಗೆಂಪಾಗಿ ಹಣ್ಣಾಗಿದ್ದಂತೆ ಕಾಣುವ ದಾಳಿಂಬೆಗಳನ್ನು ಕಿತ್ತು ಬುಟ್ಟಿಯಲ್ಲಿಟ್ಟು ಯಜಮಾನನಿಗೆ ತಲುಪಿಸಿದ. ಇಬ್ರಾಹಿಂ. ಅವುಗಳ ರುಚಿ ನೋಡಿದ ಯಜಮಾನ ಅವು ಹುಳಿಯಾಗಿದ್ದುದರಿಂದ, 'ಥೂ' ಎಂದು ಉಗಿದು, 'ನನಗೆ ಇಂಥ ಹಣ್ಣು ತರಲು ನಿನಗೆಷ್ಟು ಧೈರ್ಯ? ನನ್ನ ತೋಟದಲ್ಲಿ ಸಿಹಿ ಹಣ್ಣುಗಳೇ ಇಲ್ಲವೆ?' ಎಂದು ಕೂಗಾಡಿದ.

ಶಾಂತನಾಗಿಯೇ ಇದ್ದ ಇಬ್ರಾಹಿಂ ಯಜಮಾನನ ಕ್ಷಮೆ ಕೋರಿ, 'ಸ್ವಾಮಿ ಸತ್ಯವೇನೆಂದರೆ ಹೊರನೋಟ ನಮ್ಮನ್ನು ಮೋಸಗೊಳಿಸುತ್ತದೆ. ಚೆನ್ನಾಗಿ ಹಣ್ಣಾಗಿರುವಂತೆ ಕಾಣುತ್ತಿದ್ದ ಹಣ್ಣುಗಳನ್ನೇ ನಾನು ನಿಮಗಾಗಿ ಕಿತ್ತು ತಂದೆ. ಹಣ್ಣು ತಿಂದಲ್ಲಿ ಮಾತ್ರ ಅದರ ರುಚಿ ತಿಳಿಯುತ್ತದೆ. ನಾನು ಈ ತೋಟದ ಮಾಲಿ ಮಾತ್ರ. ನನ್ನ ಕೆಲಸ ತೋಟ ಚೆನ್ನಾಗಿರುವಂತೆ ನೋಡಿಕೊಳ್ಳುವುದು. ಆದರೆ ಎಷ್ಟು ಚೆನ್ನಾಗಿ ಸಾಧ್ಯವೋ ಅಷ್ಟು ಚೆನ್ನಾಗಿ ನಾನು ತೋಟ ನೋಡಿಕೊಳ್ಳುತ್ತಿದ್ದೇನೆ. ಅದರಲ್ಲಿ ಸಂಶಯ ಬೇಡ. ಆದರೆ ಹಣ್ಣು ನಾನು ತಿಂದಿಲ್ಲವಾದ್ದರಿಂದ ಅದರ ರುಚಿ ನನಗೆ ಗೊತ್ತಿಲ್ಲ' ಎಂದು ಹೇಳಿದ.

'ಏನು! ನೀನು ಈ ತೋಟದ ಮಾಲಿಯಾದರೂ ಹಣ್ಣು ತಿಂದಿಲ್ಲವೆ? ಎಲ್ಲ ಮಾಲಿಗಳೂ ಅವರು ನೋಡಿಕೊಳ್ಳುವ ತೋಟದ ಹಣ್ಣುಗಳನ್ನು ತಿಂದೇ ಇರುತ್ತಾರೆ. ಅಲ್ಲದೆ ದಾಳಿಂಬೆ ಬೇರೆ ಅಷ್ಟೊಂದು ಹುಲುಸಾಗಿ ಬಿಟ್ಟಿದೆ. ನೋಡಿದರೆ ತಿನ್ನಬೇಕೆನ್ನಿಸುತ್ತದೆ' ಎಂದ ಯಜಮಾನ.

ತನಗೆ ಸಾಕಷ್ಟು ಸಂಬಳ ಸಿಗುತ್ತಿರುವುದರಿಂದ ತನ್ನದಲ್ಲದ್ದನ್ನು ತಾನು ತಿನ್ನುವುದಿಲ್ಲವೆಂದು ಹೇಳಿದ ಮಾಲಿ ಇಬ್ರಾಹಿಂ.

ಆತನ ಪ್ರಾಮಾಣಿಕತೆಯಿಂದ ಯಜಮಾನನಿಗೆ ಅಚ್ಚರಿಯಾಯಿತು. ಆದರೂ ಅಪನಂಬಿಕೆಯಿಂದ ಆತನ ಮೇಲೆ ಕಣ್ಣಿಡುವಂತೆ ತನ್ನ ಇತರ ಕೆಲಸಗಾರರಿಗೆ ತಿಳಿಸಿದ. ಸ್ವಲ್ಪ ದಿನಗಳ ನಂತರ ಅವರು, ಇಬ್ರಾಹಿಂ ಬಹಳ ಕಷ್ಟಪಟ್ಟು ದುಡಿಯುತ್ತಾನೆಂದೂ ಉಳಿದ ಸಮಯಗಳಲ್ಲಿ ಧ್ಯಾನ, ಪ್ರಾರ್ಥನೆ ಮಾಡುತ್ತಿರುತ್ತಾನೆಂದೂ ಹಾಗೂ ಆತನ ಸಲಹೆ ಉಪದೇಶ ಕೇಳಲು ಹಲವಾರು ಜನ ಬರುತ್ತಿರುತ್ತಾರೆಂದೂ ಯಜಮಾನನಿಗೆ ತಿಳಿಸಿದರು. ಯಜಮಾನ ಕುತೂಹಲದಿಂದ ವಿಚಾರಿಸಲಾಗಿ ಇಬ್ರಾಹಿಂ ಮತ್ತಾರೂ ಅಲ್ಲ ಮಹಾ ಸೂಫಿ ಸಂತ ಇಬ್ರಾಹಿಂ ಬಿನ್ ಅದಮ್ ಎಂಬುದು ತಿಳಿಯಿತು. ತನ್ನ ನಡತೆಯಿಂದಲೇ ನಾಚಿಕೆಯಾಗಿ ಆತ ಇಬ್ರಾಹಿಂ ಬಳಿ ಕ್ಷಮೆ ಕೇಳಲು ಹೋದ. ದೂರದಿಂದಲೇ ಯಜಮಾನನನ್ನು ನೋಡಿದ ಇಬ್ರಾಹಿಂ ಓಡಿ ಬಂದು, 'ಸ್ವಾಮಿ, ತಾವು ಇಲ್ಲಿಗೇಕೆ ಬರುವ ಕಷ್ಟ ತೆಗೆದುಕೊಂಡಿರಿ. ಹೇಳಿ ಕಳುಹಿಸಿದ್ದರೆ ನಾನೇ ನಿಮ್ಮಲ್ಲಿಗೆ ಬರುತ್ತಿದ್ದೆ' ಎಂದ ಕೈ ಜೋಡಿಸಿ.

ಯಜಮಾನ ತಾನೇ ಸ್ವತಃ ಕೈ ಮುಗಿದು, 'ತಾವು ಮಹಾನ್ ಸೂಫಿ ಸಂತರೆಂಬ ಅರಿವಿಲ್ಲದೆ ಏನೇನೋ ಮಾತನಾಡಿದ್ದಕ್ಕಾಗಿ ನನ್ನನ್ನು ಕ್ಷಮಿಸಿ' ಎಂದು ಬೇಡಿಕೊಂಡ. ಆದರೆ ಇಬ್ರಾಹಿಂ ತಾನೊಬ್ಬ ತೋಟದ ಮಾಲಿಯೆಂದೂ ಯಜಮಾನನಿಗೆ ಮಾಲಿ ಸರಿಯಾಗಿ ಕೆಲಸ ಮಾಡದಿದ್ದಲ್ಲಿ ಆತನನ್ನು ಬಯ್ಯುವ ಹಕ್ಕಿದೆಯೆಂದು ಹೇಳಿದ.

'ಆದರೆ ತಾವು ಖೊರಸಾನ್‌ನ ರಾಜಕುಮಾರರು; ಅರಮನೆಯಲ್ಲಿದ್ದವರು. ಇಲ್ಲಿ ಇಂತಹ ಕೆಲಸ ಮಾಡುತ್ತಿದ್ದೀರಲ್ಲ?' ಎಂದು ಯಜಮಾನ ಕೇಳಿದ.

'ತನ್ನ ಸೃಷ್ಟಿಯ ಈ ಪ್ರಪಂಚವೆಂಬ ತೋಟಕ್ಕೆ ಸ್ವತಃ ದೇವರೇ ಮಾಲಿಯಲ್ಲವೆ? ನೀವಿಲ್ಲಿ ನನಗೆ ಉದ್ಯೋಗ ಕೊಟ್ಟಿದ್ದಕ್ಕಾಗಿ ನಾನು ಕೃತಜ್ಞ ಹಾಗೂ ನನಗೆ ಇಲ್ಲಿ ದುಡಿಯುತ್ತಿರುವುದಕ್ಕಾಗಿ ತುಂಬಾ ಸಂತೋಷವಿದೆ' ಎಂದ ಸೂಫಿ ಇಬ್ರಾಹಿಂ.

ಹುಚ್ಚ

ಈಜಿಪ್ಟಿನ ಸೂಫಿ ಸಂತ ಧುನ್ ನನ್ ನನ್ನ ಶಿಷ್ಯರಿಗೆ ಪಾಠ ಹೇಳಲು ಕೆಲವೊಮ್ಮೆ ವಿಚಿತ್ರದ ವಿಧಾನಗಳನ್ನು ಅನುಸರಿಸುತ್ತಿದ. ಅವು ವಿಚಿತ್ರವಾಗಿರಬಹುದು ಆದರೆ ಅವು ಖಂಡಿತವಾಗಿ ಕೆಲಸ ಮಾಡುತ್ತಿದ್ದವು.

ಒಂದು ದಿನ ಆತ ಹುಚ್ಚನಂತೆ ವರ್ತಿಸತೊಡಗಿದ. ಕೂದಲೆಲ್ಲಾ ಕೆದರಿಕೊಂಡು, ಬಟ್ಟೆಯೆಲ್ಲಾ ಹರಿದುಕೊಂಡು ಅಸಂಬದ್ಧ ಮಾತುಗಳನ್ನು ಬಡಬಡಿಸತೊಡಗಿದ. ಯಾರಾದರೂ ಮಾತನಾಡಿದರೆ ಕಿವುಡನೆಂಬಂತೆ ಕೂತಿರುತ್ತಿದ್ದ. ಆತನನ್ನು ನೋಡಿದವರೆಲ್ಲಾ 'ಧುನ್ ನನ್ ಹುಚ್ಚನಾಗಿದ್ದಾನೆ' ಎಂದುಕೊಂಡರು. ಸುದ್ದಿ ಹಬ್ಬಿತು ಅಕ್ಕಪಕ್ಕದವರು ಆತನನ್ನು ಹಿಡಿದು ಹುಚ್ಚರ ಮನೆಯಲ್ಲಿ ಕೂಡಿಹಾಕಿದರು. ಆತ ಅಪಾಯಕಾರಿ ವ್ಯಕ್ತಿ ಅನ್ನಿಸಿದ್ದರಿಂದ ಆತನ ಕಾಲುಗಳನ್ನು ಸರಪಳಿಗಳಿಂದ ಬಂಧಿಸಿದರು.

'ನಮ್ಮ ಗುರು ಹುಚ್ಚರಲ್ಲ. ಬೇಕೆಂತಲೇ ಈ ನಾಟಕವಾಡುತ್ತಿದ್ದಾರೆ' ಎಂದ ಅವರ ಶಿಷ್ಯನೊಬ್ಬ.

'ನಾವು ಸಹ ಎಲ್ಲರಂತೆ ಅವರನ್ನು ಹುಚ್ಚರೆಂದುಕೊಳ್ಳುತ್ತೇವೆಯೋ ಏನೋ ಎಂದು ನಮ್ಮನ್ನು ಪರೀಕ್ಷಿಸಲು ನಮ್ಮ ಗುರುಗಳು ಈ ರೀತಿ ಆಡುತ್ತಿದ್ದಾರೆ' ಊಹಿಸಿದ ಮತ್ತೊಬ್ಬ ಶಿಷ್ಯ.

'ನಮ್ಮ ಗುರುಗಳು ನನಗೆ ಚೆನ್ನಾಗಿ ಗೊತ್ತು. ಇಡೀ ಪ್ರಪಂಚವೇ ಅವರನ್ನು ಹುಚ್ಚರೆಂದು ಕರೆಯುವಾಗ ನಾವು ಇನ್ನೂ ನಿಷ್ಠೆ, ಶ್ರದ್ಧೆಯಿಂದ ಅವರ ಪಾಠ ಕೇಳಲು ಅವರನ್ನು ಭೇಟಿಯಾಗಲು ಹೋಗುತ್ತೇವೆಯೋ ಇಲ್ಲವೋ ಅಥವಾ ನಾವು ಸಹ ಅವರನ್ನು ಹುಚ್ಚರಮನೆಯಲ್ಲೇ ಬಿಟ್ಟು ಮರೆತು ಬಿಡುತ್ತೇವೆಯೋ ಎಂದು ಪರೀಕ್ಷಿಸಲು ಈ ರೀತಿ ಮಾಡುತ್ತಿದ್ದಾರೆ' ಎಂದ ಮೂರನೆಯ ಶಿಷ್ಯ.

ತಾವು ಇತರರಂತಲ್ಲ; ತಮ್ಮ ಗುರುಗಳು ತಮಗೆ ಚೆನ್ನಾಗಿ ತಿಳಿದಿರುವುದರಿಂದ ಅವರದು ನಟನೆಯೆಂಬುದು ತಮಗೆ ತಿಳಿದಿದೆ ಎಂದು ಅವರ ಶಿಷ್ಯರು ನಂಬಿದರು.

ಹುಚ್ಚರ ಮನೆಯಲ್ಲಿ ಗುರುವನ್ನು ಭೇಟಿಯಾಗಿ ತಾವು ನಂಬಿರುವದನ್ನೇ ತಿಳಿಸಲು ಎಲ್ಲ ಶಿಷ್ಯರೂ ನಿರ್ಧರಿಸಿ ಹೊರಟರು. ತಮ್ಮ ಶಿಷ್ಯರು ಬರುತ್ತಿರುವುದನ್ನು ದೂರದಿಂದಲೇ ನೋಡಿದ ಧುನ್ ನನ್ ಕೂಗಾಡಿ ಕುಣಿದಾಡತೊಡಗಿದರು, 'ಯಾರು ನೀವು?' ಎಂದು ಅರಚಿದರು.

'ಗುರುಗಳೇ, ನಾವು ನಿಮ್ಮ ಶಿಷ್ಯರು. ಹೇಗಿದ್ದೀರಾ? ಜನರು ನಿಮ್ಮನ್ನು ಇಲ್ಲಿ ಕೂಡಿಹಾಕಿ ದೊಡ್ಡ ತಪ್ಪು ಮಾಡಿದ್ದಾರೆ. ನೀವು ಹುಚ್ಚರಲ್ಲ. ನಿಮ್ಮದು ನಟನೆ ಯೆಂಬುದು ನಮಗೆ ಗೊತ್ತು. ನೀವು ಯಾರೆಂಬುದು ನಮಗೆ ತಿಳಿದಿಲ್ಲವೆ? ನಾವು ಎಂದಿನಂತೆ ನಿಮ್ಮ ಪಾಠ ಕೇಳಲು ಬಂದಿದ್ದೇವೆ' ಎಂದರು ಶಿಷ್ಯರು.

ಧುನ್ ನನ್ ಇನ್ನೂ ಜೋರಾಗಿ ಕೂಗಾಡಿ ಕುಣಿದಾಡಿದರು. 'ನಾನು ನಿಮಗೆ ಚೆನ್ನಾಗಿ ಗೊತ್ತೆ? ಸುಳ್ಳುಗಾರರು ನೀವು! ನಿಮಗೆ ನಮ್ಮ ಪಾಠ ಬೇಕೆ? ತಗೊಳ್ಳಿ ಪಾಠ' ಎಂದು ಹೇಳಿ ಅಲ್ಲಿದ್ದ ಕಲ್ಲುಗಳನ್ನು ಶಿಷ್ಯರ ಕಡೆಗೆ ಎಸೆದರು. ಗಾಬರಿಯಾದ ಶಿಷ್ಯರು, 'ನಮ್ಮ ಗುರುವಿಗೆ ನಿಜವಾಗಿ ಹುಚ್ಚು ಹಿಡಿದಿದೆ. ನಡೆಯಿರಿ ಹೋಗೋಣ. ಇನ್ನು ಇವರಿಂದ ಕಲಿಯುವುದಾದರೂ ಏನು! ಬೇರೆ ಯಾರಾದರೂ ಗುರುವನ್ನು ಹುಡುಕೋಣ' ಎಂದು ಅಲ್ಲಿಂದ ಓಡಿದರು. ಧುನ್ ನನ್ ನಗುತ್ತಾ ಅಲ್ಲೇ ಕೂತರು. ಇದನ್ನೆಲ್ಲಾ ನೋಡುತ್ತಿದ್ದ ಅಲ್ಲಿನ ಮೇಲ್ವಿಚಾರಕ, 'ಒಂದಷ್ಟು ಕಲ್ಲುಗಳನ್ನು ಕೊಡಿ ಎಂದು ನೀವು ಕೇಳಿದ್ದು ಏಕೆಂದು ಈಗ ತಿಳಿಯಿತು. ಅದಿರಲಿ, ನಿಮ್ಮ ಬಡಪಾಯಿ ಶಿಷ್ಯರನ್ನು ಏಕೆ ಹಾಗೆ ಓಡಿಸಿದಿರಿ? ಎಂದು ಕೇಳಿದ.

'ಆ ಮೂರ್ಖರಿಗೆ ನಾನು ಚೆನ್ನಾಗಿ ಅರ್ಥವಾಗಿದ್ದೇನಂತೆ! ನನ್ನದು ನಟನೆಯೆಂದು ಅವರಿಗೆ ಗೊತ್ತಂತೆ! ಒಬ್ಬ ಹುಚ್ಚನ ನಡತೆ ಹೇಗಿರಬಹುದೆಂಬುದರ ಒಂದು ಚಿಕ್ಕ ನಟನೆಯಿಂದ ಅವರು ನಾನು ನಿಜವಾಗಿಯೂ ಹುಚ್ಚನೆಂದು ನಂಬಿ ಓಡಿಹೋದರು! ಬಹುಶಃ ಸ್ವಲ್ಪ ಸಮಯದ ನಂತರ ಈ ಪಾಠ ಕೆಲವರಿಗಾದರೂ ಅರ್ಥವಾಗಬಹುದು. ಅಹಂ ಬಿಟ್ಟು ನಮ್ರರಾಗಿ, ಹೊರನೋಟವೇ ಸತ್ಯವಲ್ಲ ಎಂದು ನಂಬಿದವರು ಖಂಡಿತವಾಗಿ ವಾಪಸ್ಸು ಬರುತ್ತಾರೆ' ಎಂದರು ಸೂಫಿ ಗುರು ಧುನ್ ನನ್.

ಗ್ರಂಥ ಋಣ

ಡಾ. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು.

ಮ.ಸು.ಕೃಷ್ಣಮೂರ್ತಿ, ಸೂಫಿ ಪ್ರೇಮಕಾವ್ಯ

Desmond Stewart, **A History of World Culture-Early Islam.**

Debjani Chatterjee, **Sufi Stories From Around the Wrold**

Encyclopedia Brittancia, Vol.2.

Encyclopedia Britanica, **Multimedia Edition.**

Encyclopedia of Religion and Ethics, Ed; James Hastings,Vol.12.

Idries Shah, **The Sufis.**

Idries Shah, **Tales of Dervishes.**

Javad Nurbakhsh, Master of the Nimatullaahi Order, Speech at Sorbonne, Paris.

Jay Einhom, **The use of stories in Sufi Psychological Teaching, 'Conscious choice'**, Sept/oct, 1995.

Jonah Winters, **Themes of 'The Erotic' in Sufi Mysticism.**

Lelwelly Vaughan-Lee, **Sufism- The transformation of the Heart.**

Molana-al-Moazan Salaheddin Ali Nader shah Angha, **Sufism and Wisdom.**

Will Durant, **The Story of Civilization- The Age of Faith**.

The Encyclopedia of Philosophy, Ed; Paul Edwards. Vol. 5.

Yawwar Baig, **Sufi and other stories.**

ಡಾ. ಜೆ.ಬಾಲಕೃಷ್ಣರವರ ಇತರ ಕೃತಿಗಳು

1. ಕನಸೆಂಬ ಮಾಯಾಲೋಕ
2. ಮಿಥುನ– ಲೈಂಗಿಕ ಮನೋವಿಜ್ಞಾನದ ಬರಹಗಳು
3. ಮಾತಾಹರಿ
4. ಮಳೆಬಿಲ್ಲ ನೆರಳು – ವಿಜ್ಞಾನ ಲೇಖನಗಳು (2012ರ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅತ್ಯುತ್ತಮ ವಿಜ್ಞಾನ ಪುಸ್ತಕ ಪ್ರಶಸ್ತಿ ವಿಜೇತ ಕೃತಿ)

4\. ನೆನಪುಗಳಿಗೇಕೆ ಸಾವಿಲ್ಲ? (ಕಥಾ ಸಂಕಲನ)

5\. ಕೃಷಿ ವಿಜ್ಞಾನ ಸಾಹಿತ್ಯ ನಡೆದುಬಂದ ಹಾದಿ

6\. ಜೀವತಂತ್ರಜ್ಞಾನ ಅರ್ಥವಿವರಣಾ ಕೋಶ

7\. ಕೃಷಿ ಮತ್ತು ಪಶುವೈದ್ಯಕೀಯ ಪಾರಿಭಾಷಿಕ ಪದಕೋಶ (ಸಹಲೇಖಕರೊಂದಿಗೆ)

8\. ಕೃಷಿ ಪದಕೋಶ (ಸಹಲೇಖಕರೊಂದಿಗೆ)

ಅನುವಾದ

1. ನೀನೆಂಬ ನಾನು– ಸೂಫಿ ಎಂಬ ಮಾನಸಿಕ ಅವಸ್ಥೆ ಮತ್ತು ಸೂಫಿ ಕತೆಗಳು
2. ಬೊಕಾಷಿಯೋನ ರಸಿಕತೆಗಳು
3. ಮಾಂಟೋ ಕತೆಗಳು
4. ಪುಟ್ಟ ರಾಜಕುಮಾರ
5. ನಮ್ಮ ನಿಮ್ಮೊಳಗೊಬ್ಬ ನಸ್ರುದ್ದೀನ್
6. ಬೌದ್ಧಿಕ ಆಸ್ತಿ ಹಕ್ಕು ಮತ್ತು ಸಾಂಪ್ರದಾಯಕ ಜ್ಞಾನ
7. ಗ್ರಾಮ್ಯ ಧ್ವನಿಗಳು

ನಾಟಕ

ಪುಟ್ಟರಾಜಕುಮಾರ (ಫ್ರೆಂಚ್ ಲೇಖಕ ಆಂತ್ವಾನ್ ದ ಸೇಂತ್ ಎಕ್ಸೂಪರಿಯ ಕಿರು ಕಾದಂಬರಿ 'ಲಿಟ್ಲ್ ಪ್ರಿನ್ಸ್'ನ ನಾಟಕ ರೂಪಾಂತರ

ಬ್ಲಾಗ್

ಅಂತರಗಂಗೆ (http://antaragange.blogspot.com)